ಸಂಪುಟ ೧೦
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ

೧೯೭೭

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ   ೪. ಅಕ್ಷಯತೃತಿಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೯-೦೦ (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ಹಣವನ್ನು ಡಿಮಾಂಡ್‌ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩ ಇವರಿಗೆ ಕಳುಹಿಸಿಕೊಡಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೦ ಸಂಚಿಕೆ : ೧

ಪ್ರಧಾನ ಸಂಪಾದಕರು
ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೦   ಸಂಚಿಕೆ : ೧

ಅಗಸ್ಟ ೧೯೭೭

ಸ್ವಾತಂತ್ರ್ಯೋತ್ಸವ ಸಂಚಿಕೆ

ಪ್ರಕಾಶಕರು :
ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು, ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಮುದ್ರಕರು :
ಜಿ. ಬಿ. ಮನ್ವಾಚಾರ್,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ.



ನಮ್ಮ ನೂತನ ಕುಲಾಧಿಪತಿಗಳಾದ

ಮಾನ್ಯ ಶ್ರೀ ಗೋವಿಂದನಾರಾಯಣ ಅವರು

ಪರಿವಿಡಿ

ಆವರ್ತನ

● ಮಳಲಿ ವಸಂತಕುಮಾರ್

ಅಯ್ಯಾ
ನೀನು ಸೂರ್ಯನೂ ಅಲ್ಲ
ನಾನು ಗ್ರಹವೂ ಅಲ್ಲ.
ನೀನು ಪರಿಭಾವಿಸಿದಂತೆ
ನಾನು ನಿನ್ನ ಸುತ್ತಲೇ ಸುತ್ತುವ
ಪರಿಭ್ರಮಣ ಚಲನೆಯವನಲ್ಲ.
ನೀನು ಸತ್ವದಲಿ ನೆಲೆ ನಿಂತವನೂ ಅಲ್ಲ
ಬೇಕೆಂದಾಗ ನಾನು ನನ್ನ ಸುತ್ತಲೇ ಸುತ್ತುವ
ಆವರ್ತನ ಚಲನೆಯವನು,
ಸ್ವನಿಯಂತ್ರಣದವನು;
ನೀನು ಅಮಲಿನಲಿ ಭ್ರಮಿಸಿರುವ
ನಿನ್ನ ಸೌರವ್ಯೂಹದ ಉಲ್ಕೆ ಧೂಮಕೇತುಗಳ
ಗ್ರಹೋಪಗ್ರಹಗಳ ಮಂಡಲದೊಳಗೆ
ಬುರ್ನಾಸಾಗದೆ ಬಹುದೂರ ನಡೆದವನು.

● ●

ಆಯುಧಜೀವಿಗಳ ಸಂಘಗಳು

● ಆರ್. ಎನ್. ಗುರವ

೧. ಲೆಂಕಸಾಸಿರ್ವರು

ಸೈನಿಕಶಿಕ್ಷಣವನ್ನು ಪಡೆದು ತಮ್ಮತಮ್ಮ ಊರುಗಳಲ್ಲಿ ವಾಸಿಸಿಕೊಂಡಿದ್ದು ಯುದ್ಧದ ಸಮಯದಲ್ಲಿ ತಮ್ಮ ಆಳರಸರ ಸೇವೆಯಲ್ಲಿ ಸೇರಿಕೊಂಡು ಯುದ್ಧದಲ್ಲಿ ಕಾದಾಡುವ ಶೂರಯೋಧರಿಗೆ ಲೆಂಕರೆನ್ನುವರು. ಚಾಳುಕ್ಯಚಕ್ರವರ್ತಿ ಸತ್ಯಾಶ್ರಯದೇವನು ಅಪ್ಪಣೆ ಮಾಡಲು ಲೆಂಕ ಕೇತನು ಉಣಕಲ್ಲಕೋಟೆಯಲ್ಲಿ ನೂಂಕಿ ಶತ್ರುಗಳೊಡನೆ ಹೋರಾಡಿ ದೇವಲೋಕಕ್ಕೆ ಹೋದನೆಂದು ಗದಗ ತಾಲೂಕಿನ ಎಲಿಶಿರೂರಗ್ರಾಮದ ಶಾಸನದಲ್ಲಿ[೧] ಹೇಳಿದೆ. ಹಿರೇಕೆರೂರ ತಾಲೂಕಿನ ಸಾತೇನಹಳ್ಳಿಯ ವೀರಗಲ್ಲೊಂದರಲ್ಲಿ[೨] ಮಹಾಮಂಡಳೇಶ್ವರ ಕಾವದೇವರಸನು ಕಲ್ಲಿಗೊಡ್ಡೆಗೆ ಎತ್ತಿ ಬಂದು ಕಾದುತ್ತಿರುವಾಗ ಲೆಂಕ ಕಬ್ಬಿಲ ಚಟ್ಟನು ಹಲವರನ್ನು ಕೊಂದು ಸ್ವರ್ಗಕ್ಕೆ ಹೋದನೆಂದು ಹೇಳಲಾಗಿದೆ.

ಲೆಂಕರು ಅತಿ ಸ್ವಾಮಿನಿಷ್ಠರು. ಸ್ವಾಮಿಗೆ ಅತಿಪ್ರಿಯರು. ತಮ್ಮ ಸ್ವಾಮಿಯ ಹೆಸರನ್ನು ಹೇಳಿಕೊಳ್ಳುವುದು ಅವರಿಗೆ ಹೆಮ್ಮೆಯ ವಿಷಯ. ಕಲಘಟಗಿ ತಾಲೂಕಿನ ಸಂಗಮೇಶ್ವರಗ್ರಾಮದ ಶಾಸನದಲ್ಲಿ ಅಲ್ಲಿಯ ಗೌಡ ಮನೆತನದ ಚಟ್ಟಗಾವುಂಡನು ತಾನು 'ಜಯಕೇಸಿದೇವರ ಲೆಂಕ' ಎಂದು ಹೇಳಿಕೊಂಡಿದ್ದಾನೆ.[೩] ಅದೇ ತಾಲೂಕಿನ ಕಾಮಧೇನುಗ್ರಾಮದ ಶಾಸನದಲ್ಲಿ[೪] ಮಲ್ಲಿಸೆಟ್ಟಿಯನ್ನು 'ಶಿವಲೆಂಕ' ಎಂದು ಕರೆದು ಆತನ ಶಿವಭಕ್ತಿಯನ್ನು ವ್ಯಕ್ತ ಮಾಡಲಾಗಿದೆ. ಸ್ವಾಮಿ ಯುದ್ಧದಲ್ಲಿ ಮಡಿದರೆ ಆತನ ಜೊತೆಯಲ್ಲಿ ಸ್ವಾಮಿ ನಿಷ್ಠ

---

೧. South Indian Inscriptions, Vol. XI, P. 1; No. 51, P. 39; A.D. 1006

೨. Karnatak Inscriptions, Vol. IV; No.4, P. 18; A. D. 1203

೩. Quoting from Ink- Impressions with me. A. D. 1081

೪. Ibid; A. D. 1129

ಲೆಂಕರು ತಾವೂ ಪ್ರಾಣತ್ಯಾಗವನ್ನು ಮಾಡುತ್ತಿದ್ದರು. ಹೊಯ್ಸಳ ದೊರೆಗಳು ಮಡಿದಾಗ ಅವರೊಡನೆ ಅನೇಕ ಲೆಂಕರು ಮಡಿದರೆಂದು ಕ್ರಿ. ಶ. ೧೨೫೭ರ ಶಾಸನದಲ್ಲಿ ಹಾಗೂ ಕ್ರಿ. ಶ. ೧೨೯೨ರ ಶಾಸನದಲ್ಲಿ ಹೇಳಲಾಗಿದೆ.[೫]

ಮುಂಡರಗಿತಾಲೂಕಿನ ಆಲೂರಗ್ರಾಮದ ಶಾಸನದಲ್ಲಿ[೬] ಲೆಂಕ ಮಾದಿಯಣ್ಣ ಮಾಡಿಸಿದ ತ್ರೈಪುರುಷ ದೇವಾಲಯಕ್ಕೆ ಲೆಂಕ ಮಹಾದೇವಯ್ಯ ನಾಯಕನು ಭೂಮಿಯನ್ನು ದಾನಮಾಡಿ ಕೊಟ್ಟನೆಂದು ಹೇಳಲಾಗಿದೆ. ಈ ಲೆಂಕ ಮಹಾದೇವಯ್ಯನಿಗೆ 'ಲೆಂಕ ಪ್ರಧಾನ, ಲೆಂಕ ಮಾಣಿಕ್ಯ, ಬುಧಜನಸರೋಜಿನೀ ರಾಜಹಂಸ, ಸರಸ್ವತೀಕರ್ಣಾವತಂಸ, ವಸಿಷ್ಠಗೋತ್ರಸಮುದ್ಧರಣ, ತ್ರಿಭುವನ ಮಲ್ಲದೇವರ ಲೆಂಕ' ಎಂದು ಕರೆಯಲಾಗಿದೆ. ಇವನು ಜಾತಿಯಿಂದ ದ್ವಿಜನಾಗಿದ್ದ ಸಂಗತಿ ಗಮನಾರ್ಹವಿದೆ. ಲೆಂಕ ಚಟ್ಟನು ಜಾತಿಯಿಂದ ಕಬ್ಬಿಲ ಎಂದರೆ ಬೇಡನಾಗಿದ್ದುದನ್ನು ನಾವು ಮೇಲೆ ನೋಡಿದ್ದೇವೆ.

ಇಂತಹ ಲೆಂಕರು ತಮ್ಮದೇ ಆದ ಒಂದು ಸಂಘವನ್ನು ನಿರ್ಮಿಸಿಕೊಂಡು ಸುಸಂಘಟಿತರಾಗಿದ್ದ ವಿಷಯವನ್ನು ನಾವು ಬಳ್ಳಾರಿಜಿಲ್ಲೆಯ ಹಡಗಲಿತಾಲೂಕಿನ ಮೋರಿಗೆರೆಗ್ರಾಮದ ಶಾಸನದಲ್ಲಿ[೭] ಕಾಣುತ್ತೇವೆ. ಈ ಸಂಘಕ್ಕೆ ಲೆಂಕಸಾಸಿರ್ವರು ಎಂದು ಹೆಸರು. 'ನುಡಿವುದು ನನ್ನಿ, ಮಾಡುವುದು ಕೀರ್ತನಂ, ಈವುದೇ ಸದ್ವಿನೋದಂ, ಒಯ್ಯನೆ ಮೊರೆವೊಕ್ಕರನ್ನು ಕಾವಗುಣಂ ಬ್ಯಸನಂ ಮತ್ತು ಯುದ್ಧದಲ್ಲಿ ಮುಮುಕ್ಷುಪಿಕೆ' ಇವು ಲೆಂಕರ ಸಹಜಗುಣಗಳೆಂದು ಈ ಶಾಸನ ಲೆಂಕಸಾಸಿರ್ವರನ್ನು ವರ್ಣಿಸುತ್ತದೆ. ಈ ಲೆಂಕಸಾಸಿರ್ವರು ಅಮ್ಮೆಲ್, ನೆಲ್ಲಿಕುದಿರು, ಸೊನ್ನ, ಪೊಳಲ್ಗುಂದೆ, ಸೂಗೂರು ಹಾಗು ಮೋರಿಗೆರೆ ಈ ಆರು ಗ್ರಾಮಗಳನ್ನು ಅಣುಗಜೀವಿತಮಾಗಿ[೮] ತ್ರಿಘೋಗಾಭ್ಯಂತರಸಿದ್ಧಿಯಿಂದ[೯] ಆಳುತ್ತಿದ್ದರು. ದಂಡನಾಯಕ ತೀಕಣ್ಣನು ಅವರ ಪ್ರಮುಖನಾಗಿದ್ದನು. ಶಾಸನದಲ್ಲಿ ಈ ಲೆಂಕಸಾಸಿರ್ವರ ಪ್ರಶಸ್ತಿ ಹೀಗೆ ಬಂದಿದೆ: 'ಸಮಧಿಗತಪಂಚ ಮಹಾಶಬ್ದ ಮಹಾಮಂಡಳೇಶ್ವರ ನೊಳಂಬಾಧಿರಾಜ ಶ್ರೀಪಾದಪದ್ಮೋಪಾಸಕ್ತಮಧುಕರರ್ । ವೈರಿಬಳಭೀಕರರ್ । ಪಲ್ಲವಾನ್ವಯಮಹಾರಾಜರಾಜ್ಯ ಮೂಳಸ್ತಂಭಾತ್ಮಕರ್। ಚಮರೀಧ್ವಜವಿರಾಜಿತರ್। ಆನೆವರೆ ಘೋಷಣರ್।

೫. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ 309

೬. S. I. I., Vol. XI, P. II; No. 136, P. 164; A. D. 1091

೭. S. I. I., Vol. IX. P. I; No, 101, PP. 71-74; A. D. 1045

೮. ಅರಸರ ಪ್ರೀತಿಯಿಂದ ತಮ್ಮ ಜೀವಿತಕ್ಕಾಗಿ ಪಡೆದದ್ದು.

೯. ಪ್ರಭುತ್ವದ ಒಂದು ಪ್ರಕಾರ.

ಸತ್ಯಮಣಿ ಭೂಷಣರ್। ಧರ್ಮಾನುಕೂಳರ್। ಜಯುವಧೂಲೋಲರ್। ಕಣ್ಡಳೀ ಮೂಳಭವೋದ್ಭವವೀರಾವತಾರರ್। ಏಕೈಕವೀರರ್। ದೀನಾನಾಥಚಿಂತಾ ಮಣಿಗಳ್। ಆಶ್ರಿತಜನಕಲ್ಪವೃಕ್ಷರ್। ಶರಣಾಗತವಜ್ರಪಂಜರರ್। ನಾಮಾದಿ ಸಮಸ್ತಪ್ರಶಸ್ತಿಸಹಿತಂ ಶ್ರೀಮದ್ದಂಡನಾಯಕ ಶೀಕಣ್ಣಪ್ರಮುಖ ಲೆಂಕ ಸಾಸಿರ್ವರ್।'

ಲೆಂಕಸಾಸಿರ್ವರು ತಮ್ಮ ಸಂಘದ ವತಿಯಿಂದ ಕಟ್ಟಿಸಿದ ಶಿವಾಲಯಕ್ಕೆ ಲೆಂಕೇಶ್ವರ ದೇವಾಲಯವೆಂದು ಹೆಸರು. ಲೆಂಕಸಾಸಿರ್ವರು ಮೋರಿಗೆರೆ ಅಗ್ರಹಾರದಲ್ಲಿ ನೊಳಂಬಪಲ್ಲವ ಉದಯಾದಿತ್ಯದೇವನಿಗೆ ಪರೋಕ್ಷ ಪುಣ್ಯಾರ್ಥವಾಗಿ ನೊಣಬೇಶ್ವರ ದೇವಾಲಯವನ್ನು ಮಾಡಿಸಿ ದೇವಾಲಯಕ್ಕೆ ತಮ್ಮ ಹೆಸರು ಲೆಂಕೇಶ್ವರನೆಂದಿಟ್ಟು ಅರಸರಿಂದ ಸವಂಟಿಯಪಾಳವೆಂಬ ಸ್ಥಳವನ್ನು ಪಡೆದು, ಅದನ್ನು ದೇವರ ಉಪಭೋಗಕ್ಕೆ, ಪಾದಮೂಲ ಪರಿವಾರಕ್ಕೆ[೧೦] ಹಾಗು ಮಠದ ವಿದ್ಯಾದಾನಕ್ಕೆ ಬಿಟ್ಟರು. ಅದೇ ಪ್ರಕಾರ ಲೆಂಕರ ಸೇನಬೋವ ಗೋವಿಂದ ಮಯ್ಯನು ನೊಣಬೇಶ್ವರ ದೇವಾಲಯಕ್ಕೆ ಪ್ರತಿಬದ್ಧವಾಗಿ ಗೋವಿಂದೇಶ್ವರ ದೇವಾಲಯವನ್ನು ಮಾಡಿಸಿ ಅದಕ್ಕೆ ಭೂಮಿಯನ್ನು ದಾನ ಮಾಡಿಕೊಟ್ಟನು. ಲೆಂಕ ಸಾಸಿರ್ವರು ತಮ್ಮ ಸಂಘದ ಕಾರ್ಯಕ್ಕಾಗಿ ಮತ್ತು ತಮಗೆ ಕೊಟ್ಟ ಗ್ರಾಮಗಳ ಆಡಳಿತದ ಅನುಕೂಲಕ್ಕಾಗಿ ಸೇನಬೋವಾದಿ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದರೆಂಬುದು ಈ ಶಾಸನದಿಂದ ವಿದಿತವಾಗುತ್ತದೆ.

ಕೊಡಗುಜಿಲ್ಲೆಯ ಶಾಸನವೊಂದರಲ್ಲಿ[೧೧] 'ಪದಿನಯ್ದು ಕುದುರೆಯುಂ, ಅಯ್ವತ್ತು ಲೆಂಕರುಂ, ಇನ್ನೂರಯ್ವತ್ತು ಎಕ್ಕಟಿಗರುಂ' ಎಂದು ಉಲ್ಲೇಖ ಬರುತ್ತದೆ. ರೋಣತಾಲೂಕಿನ ಕಳಕಪ್ಪನಗುಡ್ಡದ ಶಾಸನದಲ್ಲಿ[೧೨] ಕಾರಗಿತ್ತಿಯ ಅಱುವರು ಗಾವುಣ್ಡರು ಹಾಗು ಲೆಂಕರು ಮುಖ್ಯವಾಗಿ ಶ್ರೀ ಸ್ವಯಂಭು ಕಳಕಳೇಶ್ವರದೇವರ ಅಂಗಭೋಗಕ್ಕೆ ಮತ್ತು ಸತ್ರಕ್ಕೆ ನಾಲ್ಕು ಮತ್ತರು ಭೂಮಿಯನ್ನು ಕೊಟ್ಟರೆಂದು ಹೇಳಲಾಗಿದೆ.

ಲೆಂಕರಿಗೆ ಅವರ ಜೀವಿತಕ್ಕಾಗಿ ಗ್ರಾಮದಾದಾಯದಿಂದ ಕೆಲವು ಹಣ ಸಲ್ಲಿಸಲಾಗುತ್ತಿತ್ತು. ಹಾವೇರಿತಾಲೂಕಿನ ಕಳ್ಳೀಹಾಳಗ್ರಾಮದ ಶಾಸನದಲ್ಲಿ[೧೩]

---

೧೦. ದೇವರ ಪರಿಚಾರಕರಿಗೆ

೧೧. E. C. I., No. 62 (47), P. 41; A. D. 1095

೧೨. S. I. I. XV, No 165, P. 211; A.D. 1220

೧೩. Quoting from Ink- Impressions. A. D. 1019.

ಮಹಾಮಂಡಳೇಶ್ವರ ಕುಂದರಾಜನ ಮಹಾದೇವಿ ಜೋಗಬ್ಬರಸಿಯು ಧರ್ಮಕ್ಕೆ ಲೆಂಕ ಮುಂಜನು ತನ್ನ ತೆಱೆಯಂ ಬಿಟ್ಟನೆಂದು ಹೇಳಲಾಗಿದೆ. ಲೆಂಕ ಮುಂಜನಿಗೆ ಗ್ರಾಮದಿಂದ ತೆರೆಯ ಅಂಶವು ಸಲ್ಲುತ್ತಿತ್ತೆಂದು ಈ ಶಾಸನದಿಂದ ತಿಳಿದು ಬರುತ್ತದೆ.

೨. ಬಂಟಸಾಸಿರ್ವರು

ಆಯುಧಜೀವಿಯಾದ ಮತ್ತೊಂದು ಸಂಘ ಬಂಟರದು. ಬಂಟರೆಂದರೆ ವೀರರು, ಯೋಧರು. ಬಂಟ ಶಬ್ದವು ಸಂಸ್ಕೃತ ಭಟ ಶಬ್ದದ ತದ್ಭವರೂಪ. ಬಂಟರ ಸಂಘಕ್ಕೆ ಬಂಟಸಾಸಿರ್ವರು ಎಂದು ಹೆಸರು. ಚಕ್ರವರ್ತಿ, ಮಂಡಳೇಶ್ವರ, ಸಾಮಂತ ಮೊದಲಾದ ಆಳರಸರ ಸೈನ್ಯದಲ್ಲಿ ಸೇರಿಕೊಂಡು ಲೆಂಕಸಾಸಿರ್ವರು ಸೇವೆ ಸಲ್ಲಿಸಿದಂತೆ ಬಂಟಸಾಸಿರ್ವರೂ ದೇಶಸಂರಕ್ಷಣೆಯಲ್ಲದೆ ಊರ ಸಂರಕ್ಷಣೆಯ ಹೊಣೆಯನ್ನು ಹೊತ್ತಿದ್ದರು. ತಾವು ನೆಲೆಸಿದ ಗ್ರಾಮದ ಮೇಲೆ ದಾಳಿ ನಡೆದಾಗ ಶತ್ರುಗಳನ್ನು ಎದುರಿಸಿ ಅವರನ್ನು ಹಿಮ್ಮೆಟ್ಟಿಸಿ, ಗ್ರಾಮದಲ್ಲಿಯ ಸ್ತ್ರೀ, ಧನ ಮತ್ತು ಗೋವುಗಳನ್ನು ರಕ್ಷಿಸುವುದು ಇವರ ಕರ್ತವ್ಯವಾಗಿತ್ತು. ವೃತ್ತಿ ವ್ಯವಸಾಯ ಮತ್ತು ಸಂಘದ ವೆಚ್ಚಕ್ಕಾಗಿ ಗ್ರಾಮನಿವಾಸಿಗಳಿಂದ ಗ್ರಾಮಾಧಿಕಾರಿಗಳು ಬಂಟಸಾಸಿರ್ವರ ಸಲುವಾಗಿ ಎತ್ತಿದ ವಂತಿಗೆಗೆ ಬಂಟವಣವೆಂದು ಹೆಸರು. ತಮ್ಮ ಸಂಘದಲ್ಲಿಯ ಎಲ್ಲ ಸದಸ್ಯರಿಗೆ ಅವರವರ ಯೋಗ್ಯತೆಯ ಪ್ರಕಾರ ಹಣವನ್ನು ಮುಟ್ಟಿಸುವುದು, ದಾಳಿಯಲ್ಲಿ ಮೃತಪಟ್ಟವರ ವಾರಸದಾರರಿಗೆ ಜೀವಿತಕ್ಕಾಗಿ ಸಂಘದ ಹಣದಿಂದ ಭೂಮಿಯನ್ನು ಕೊಂಡುಕೊಡುವುದು ಈ ಸಂಘದ ಕಾರ್ಯಗಳಲ್ಲಿ ಕೆಲವು ಆಗಿದ್ದವು.

ಇನ್ನು, ಶಾಸನಗಳಲ್ಲಿಯ ಕೆಲವು ಉಲ್ಲೇಖಗಳನ್ನು ನೋಡುವಾ. ಗದಗ ತಾಲೂಕಿನ ಸೊರಟೂರಗ್ರಾಮದ ಶಾಸನದಲ್ಲಿ[೧೪] ಬಂಟಸಾಸಿರ್ವರು ಗ್ರಾಮೇಶ್ವರ ದೇವರಿಗೆ ತಮ್ಮ ಬಂಟವಣಮಂ ಬಿಟ್ಟರೆಂದು ಹೇಳಲಾಗಿದೆ. ಹಾನಗಲ್ಲ ತಾಲೂಕಿನ ತಿಳವಳ್ಳಿಗ್ರಾಮದ ವೀರಗಲ್ಲಿನಲ್ಲಿ[೧೫] ಮೊಸಳೆಯ ಬಮ್ಮನೆಂಬ ಬಂಟನೊಬ್ಬನು ತುರುಗಾಳಗದಲ್ಲಿ ತೀರಿಕೊಂಡು ಸುರಲೋಕಪ್ರಾಪ್ತನಾದನೆಂದು ಮತ್ತು ಆತನ ಮಕ್ಕಳಿಗೆ ಬಂಟಸಾಸಿರ್ವರು ಗದ್ದೆಯನ್ನು ಕೊಂಡು ಕೊಟ್ಟರೆಂದು ಉಲ್ಲೇಖ ಬರುತ್ತದೆ.

---

೧೪. S. I. I. XI; P. II, No. 145, P. 176, l. b; A. D. 1098-99.
೧೫. K. I. V; No. 22; P. 84, l. 4 ff; A. D. 1126.

ಬಂಟಸಾಸಿರ್ವರು ತಮ್ಮ ಸಮಾಜದ ವತಿಯಿಂದ ಕಟ್ಟಿಸಿದ ದೇವಾಲಯಕ್ಕೆ ಬಂಟೇಶ್ವರ ದೇವಾಲಯವೆಂದು ಹೆಸರು. ತಿಳವಳ್ಳಿಯ ಮತ್ತೊಂದು ಶಾಸನ ದಲ್ಲಿ[೧೬] ಕೋಣವತ್ತೆಯ ಕೇತವ್ವೆಯ ಮಗ ಬೊಪ್ಪ ಸೂರ್ಯಗ್ರಹಣ ಸಮಯದಲ್ಲಿ ಅಗ್ನಿಪ್ರವೇಶ ಮಾಡಿ ಸೂರ್ಯಲೋಕಕ್ಕೆ ಹೋದನೆಂದು ಹಾಗೂ ಆತನ ಸ್ಮರಣಾರ್ಥವಾಗಿ ಬಂಟಸಾಸಿರ್ವರು ಶಿಲೆಯನ್ನು ತಯಾರಿಸಿ ಬಂಟೇಶ್ವರದೇವರ ಗುಡಿಯ ಮುಂದೆ ನಿಲ್ಲಿಸಿದರೆಂದು ಉಲ್ಲೇಖ ಬರುತ್ತದೆ. ಶಾಸನವನ್ನು ಈ ಶಿಲೆಯ ಮೇಲೆ ಕಂಡರಿಸಿದ್ದು ಅದರಲ್ಲಿ ರಾಹು ಸೂರ್ಯನನ್ನು ನುಂಗುತ್ತಿರುವ ಹಾಗೂ ಬೊಪ್ಪನು ಅಗ್ನಿಯಲ್ಲಿ ಹಾರಿಕೊಂಡು ಸೂರ್ಯಲೋಕಕ್ಕೆ ಹೋಗುತ್ತಿರುವ ಚಿತ್ರಗಳನ್ನು ಕೆತ್ತಲಾಗಿದೆ. ತಿಳವಳ್ಳಿಯ ಇನ್ನೊಂದು ಶಾಸನದಲ್ಲಿ[೧೭] ಬಂಟೇಶ್ವರದೇವರಿಗೆ ಭೂಮಿಯನ್ನು ದಾನವಾಗಿ ಬಿಟ್ಟದ್ದು ಮತ್ತು ಬಂಟ ಸಾಸಿರ್ವರು ಆ ದಾನಗಳ ಒಡೆಯರಾಗಿ ದೇವರ ಪೂಜೆಪುನಸ್ಕಾರಗಳನ್ನು ನಡೆಸುವರೆಂದು ಹೇಳಲಾಗಿದೆ.

೩. ಬಿಲ್ಲಮೂನೂರ್ವರು

ಬಿಲ್ಲು ವಿದ್ಯೆಯಲ್ಲಿ ನೈಪುಣ್ಯವನ್ನು ಹೊಂದಿ ಬಿಲ್ಲು ಬಾಣಗಳಿಂದ ಯುದ್ಧದಲ್ಲಿ ಕಾದಾಡುವ ಬಿಲ್ಲಾಳುಗಳ ಸಂಘವಿದು. ಇವರು ಗ್ರಾಮಪರಿಸರದಲ್ಲಿ ಇಲ್ಲವೆ ಸಮೀಪದ ಅರಣ್ಯಗಳಲ್ಲಿ ವಾಸಮಾಡುವ ಜನರಾಗಿರಬಹುದು.

'ಜಗತೀತಳವಿಖ್ಯಾತ ಭುವನಪರಾಕ್ರಮೋನ್ನತರು, ಕಾಡಾನೆಮಲ್ಲರು, ಅಡವಿಕಂದರ್ಪರು, ದೋಂಟಿವಿಳಾಸರು, ಮರೆವುಗೆಕಾವರು, ಚಲದಂಕರಾಮರು, ಸಾಹಸಶೌರ್ಯರು, ರಣರಂಗಭೀಮರು, ನುಡಿದಂತೆ ಗಂಡರು, ಕದನಪ್ರಚಂಡರು, ಏಕಾಂಗವೀರರು, ಶರಣಾಗತ ವಜ್ರಪಂಜರರು, ಬಿಲ್ಲೇಶ್ವರದೇವರ ಪಾದಾರಾಧಕರುಮಪ್ಪ ಹಲ್ಲಕೇತಬೋವ ಮುಖ್ಯವಾಗಿ ಬಿಲ್ಲಮೂನೂರ್ವರು ಬಿಲ್ಲೇಶ್ವರ ದೇವರ ಅಂಗಭೋಗಕ್ಕೆ ಪೊಕ್ಕಲಲು ಹಾಗವೊಂದು, ಮದಿವೆಯಾದಡೆ ಕೊಂಡಲ್ಲಿ ಹಾಗ, ಕೊಟ್ಟಲ್ಲಿ ಹಾಗ, ಆಡು ಆವು ಎಮ್ಮೆ ಏನು ಮಾರಿದಡಂ ಹೋಂಗೆ ಹಾಗ, ಮೊಳಪಿನ ಕಲ್ಲಿಗೆ ವೀಸವೊಂದು, ಉಪ್ಪಿನ ಹೆಡೆಗೆಗೆ ಪೊಮ್ಮನುಪ್ಪು ಎಂದು ಮುಂಡರಗಿ ತಾಲೂಕಿನ ಮೇವುಂಡಿ ಗ್ರಾಮದ ಶಾಸನದಲ್ಲಿ[೧೮] ಬಿಲ್ಲಮೂನೂರ್ವರ ಬಗ್ಗೆ ಹೇಳಲಾಗಿದೆ.

---

೧೬. Ibid; No.97; P. 296, ll. 8-9; A. D. 1141.
೧೭. K. I. II; No. 20; P 78, ll. 18-19; A. D. 1154
೧೮. S I. I. XV; No. 211, P. 253, ll. 39-47; A D. 1196.

ಗದಗತಾಲೂಕಿನ ಹೊಸೂರಗ್ರಾಮದ ಶಾಸನದಲ್ಲಿ[೧೯] ಬಿಲ್ಲಮೂನೂರ್ವರನ್ನು ಹೀಗೆ ವರ್ಣಿಸಲಾಗಿದೆ: 'ಸೆಣಸುವವಂಗೆ, ಕೊಂಡಿಡುವವಂಗೆ, ಉರದಂಗೆ, ಪೆರಂಗೆ ಸಂಗರಾಂಗಣದೊಳೆ ತೋರುವರ್ ಸೊಸಲಕಣ್ ...... ಕಟ್ಟಿ ಸಂವಣಿಸಿದ ರುಂಡಮಾಲೆಗಳಿನಟ್ಟುತ ಭೈರವರೂಪನಿಂತು ಬಲ್ಕಣಿಗಳ...... ಪತಾಕೆಯು ಬಿಲ್ಲಮಹಾಭಟರ್ಕ್ಕರೊಳ್' ಹಾಗು :

ಪಣೆಕಟ್ಟಂ ತಲೆಯಾಂತು ತಾಳ್ದಿ ಶರಣೆಂದಾತಂಗೆ ಮಾಱಾಂತರಾ
ವಣನಂದಂಗೆವಿದಿರ್ಚ್ಚುವರ್ಗ್ಗಿರಿಸರಿದ್ವಿಂಧ್ಯಾಟವೀದೇಶಭೂ
ಷಣರುದ್ದಂಡ ವಿರೋಧಿದರ್ಪ್ಪದಳನಸ್ಸ್ವರ್ವಮಾನ್ಯಮೇ ಸಂಗರಾಂ
ಗಣದೊಳ್ ತಾಗಿ ತರುಂಬಲಾರ್ಪ್ಪದಟರಾರೀ ಬಿಲ್ಲಮೂನೂರ್ವ್ವರೊಳ್||

ಧಾರವಾಡತಾಲೂಕಿನ ಮುನಗುಂಡಿಗ್ರಾಮದ ಶಾಸನವೊಂದರಲ್ಲಿ[೨೦] 'ಶರಣಾಗತರಕ್ಷಕರು, ಹರಿಹರಪಾದಾಬ್ಜಭೃಂಗರು, ಸೆರಗಿಲ್ಲದ ಬಲ್ಲಾಳ್ಗಳು' ಎಂದು ಬಿಲ್ಲಮೂನೂರ್ವರನ್ನು ವರ್ಣಿಸಿ ಅವರು ತ್ರಿಭುವನವೀರ ಜಯಕೇಸಿ ದೇವರ ದೇವಾಲಯಕ್ಕೆ ಚೈತ್ರದ ಪರ್ವಕ್ಕೆ ಹಾಗ, ಪವಿತ್ರದ ಪರ್ವಕ್ಕೆ ಹಾಗ, ಮತ್ತು ಪ್ರತಿ ಒಕ್ಕಲಿಂಗೆ ಹಾಗ ಕೊಟ್ಟರೆಂದು ಹೇಳಲಾಗಿದೆ.

ಬಿಲ್ಲಮೂನೂರ್ವರು ತಮ್ಮ ಸಮಾಜದ ವತಿಯಿಂದ ಕಟ್ಟಿಸಿದ ದೇವಾಲಯಕ್ಕೆ ಬಿಲ್ಲೇಶ್ವರ ದೇವಾಲಯವೆಂದು ಹೆಸರು. ಮೇವುಂಡಿ ಗ್ರಾಮದಲ್ಲಿ ಬಿಲ್ಲೇಶ್ವರ ದೇವಾಲಯವಿದ್ದದ್ದು ನಾವು ಮೇಲೆ ನೋಡಿದ್ದೇವೆ. ಬದಾಮಿ ತಾಲೂಕಿನ ಎಂಡಿಗೇರಿಗ್ರಾಮದ ಶಾಸನದಲ್ಲಿ[೨೧] ಸೋಮಯ್ಯ ಸಾವಂತನು ಬಿಲ್ಲೇಶ್ವರದೇವರಿಗೆ ಭೂಮಿಯನ್ನು ಸರ್ವಮಾನ್ಯಮಾಡಿ ದಾನ ನೀಡಿದನೆಂದು ಹೇಳಲಾಗಿದೆ. ಕಾಲ ಸುಮಾರು ಹದಿಮೂರನೆಯ ಶತಮಾನ. ಹಾನಗಲ್ಲಿನಲ್ಲಿ ಬಿಲ್ಲೇಶ್ವರ ದೇವಾಲಯವಿದ್ದದ್ದು ಅಲ್ಲಿಯ ಶಾಸನವೊಂದರಿಂದ[೨೨] ತಿಳಿದು ಬರುತ್ತದೆ. ಅದೇ ಪ್ರಕಾರ, ಸಾಗರ ತಾಲೂಕಿನ ನಾಡಮಂಚಸಾಲೆ ಗ್ರಾಮದ ವೀರಗಲ್ಲಿನಲ್ಲಿ[೨೩] ಹೊಂಬುಳ್ಚದ ಆದಿಬಿಲ್ಲೇಶ್ವರದೇವರ ಉಲ್ಲೇಖ ಬರುತ್ತದೆ. ಅದೇ ತಾಲೂಕಿನ ಮಲಾಬಿಂಕಟಪಳ್ಳಿ ಗ್ರಾಮದ ಶಾಸನದಲ್ಲಿ[೨೪] ಮಹಾಮಂಡ

---

೧೯. Ibid.; No. 36, P. 46, ll. 48–51; A. D. 1148.
೨೦. Ink-Impressions with me; U. 62-63; A. D. 1203.
೨೧. S. I. I. XV; No. 633, P. 407.
೨೨. K. I. V; No. 18, P. 64; A. D. 1119.
೨೩. E. C. VIII; Sagar 125; A. D. 1216.
೨೪. Ibid; Sagar 67; A. D. 1102

ಳೇಶ್ವರ ಬೊಮ್ಮರಸನಿಗೆ 'ಬಿಲ್ಲೇಶ್ವರ ದಿಬ್ಯಶ್ರೀಪಾದಪದ್ಮಾರಾಧಕನುಂ' ಎಂದು ವರ್ಣಿಸಲಾಗಿದೆ.

ಯುದ್ಧ ವ್ಯವಸಾಯವಲ್ಲದೆ ಬಿಲ್ಲಮೂನೂರ್ವರು ಅಡವಿಯಲ್ಲಿ ಹುಟ್ಟುವ ಹಣ್ಣುಹಂಪಲಗಳನ್ನು ತಂದು ಇಲ್ಲವೆ ತೋಟಗಳನ್ನು ಸಾಗುವಾಡಿ ಬಾಡುಕಾಯಿಗಳನ್ನು ತಂದು ಪೇಟೆಯಲ್ಲಿ ಮಾರಾಟವಮಾಡುತ್ತಿದ್ದಂತೆ ಕಾಣುತ್ತದೆ. ಪಶುಪಾಲನದ ವ್ಯವಸಾಯವನ್ನೂ ಮಾಡುತ್ತಿದ್ದಂತೆ ಕಾಣುತ್ತದೆ. ಬಾಗೇವಾಡಿ ತಾಲೂಕಿನ ಮನಗೋಳಿಗ್ರಾಮದ ಶಾಸನದಲ್ಲಿ[೨೪] ಬಿಲ್ಲಮೂನೂರ್ವರು ಮಾರುವ ಹೆಡಿಗೆಯ ಹಣ್ಣುಹಂಪಲ ಬಾಡುಕಾಯ್ಗೆ 'ಹಿಡಿ ಬಾಡು ಹಿಡಿ ಹಣ್ಣಂ ಕೊಟ್ಟರ್' ಎಂದು ಹೇಳಲಾಗಿದೆ. ದೇವರಿಗೆ ಬಿಟ್ಟ ದಾನಗಳನ್ನು ಪ್ರತಿಪಾಳಿಸುವ ಹೊಣೆಯನ್ನೂ ಬಿಲ್ಲಮೂನೂರ್ವರಿಗೆ ಒಪ್ಪಿಸಲಾಗಿದೆ. ಅದೇ ತಾಲೂಕಿನ ಕೋಲಾರ ಗ್ರಾಮದ ಶಾಸನದಲ್ಲಿ[೨೫] 'ಬಿಲ್ಲಮೂನೂರ್ವರು ಮಲ್ಲಿಕಾರ್ಜುನದೇವರಿಗೆ ಕೊಟ್ಟ ಆಯ ಮದುವೆಗೆ ಹಾಗ, ಹಿಡಿ ಬಾಡು, ಮೊಳವಿನ ಕಲಿಗೆ . . . ೧೦, ಕಾಯಿ ಕಲಿಗೆ ಹೆಡಿಗೆಗೆ ಮಾನವೊಂದು' ಎಂಬ ಉಲ್ಲೇಖ ಬರುತ್ತದೆ.

● ●

೨೪. E. I. V; P. 20; ll. 69-72; A. D 1160

೨೫. S. I. I. XV; No. 169, P. 215; ll. 24-25; A. D. 1223.

ಕನ್ನಡ ಗಾದೆಗಳು : ಮಾನವಶಾಸ್ತ್ರೀಯ ಅಧ್ಯಯನ

● ಕೆ. ಜಿ. ಗುರುಮೂರ್ತಿ

ಯಾವುದೇ ಸಂಸ್ಕೃತಿಗೆ ಜಾನಪದಸಂಸ್ಕೃತಿಯ ಕೊಡುಗೆ ಅಪಾರ. ಅಲಿಖಿತ ರೂಪದಲ್ಲಿರುವ ಜನಪದ ನಾಟಕ, ಹಾಡು, ಒಗಟು, ಕತೆ, ಗಾದೆ ಮಾತುಗಳು ಅಪಾರ ಜ್ಞಾನ, ನೀತಿ ಮುಂತಾದುವನ್ನು ತುಂಬಿಕೊಂಡಿವೆ. ಇವು ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ ಹೀಗೆ ಒಂದು ತಲೆಮಾರಿನಿಂದ ಮತ್ತೊಂದಕ್ಕೆ ಪ್ರಸಾರವಾಗುತ್ತ ಬಂದಿವೆ. ಇಂದು ಆಧುನಿಕತೆಯ ಪ್ರಭಾವದಿಂದ ಕೆಲವೊಂದು ಜಾನಪದ ವಿಷಯಗಳು ನಶಿಸಿ ಹೋಗಿರಬಹುದು ಇಲ್ಲವೆ ಬದಲಾಗಿರಬಹುದು. ಆದರೆ ಜಾನಪದ ಸಂಸ್ಕೃತಿಯು ಎಲ್ಲಾ ಸಮಾಜಗಳಲ್ಲಿಯೂ ಜನ ಜೀವನದ ಮೇಲೆ ತನ್ನ ಪ್ರಭಾವ ಬೀರಿರುವುದನ್ನು ಕಾಣಬಹುದು.

ಕಾಲಕ್ಕೆ ತಕ್ಕಂತೆ ಬದಲಾಗುವುದು ಸಮಾಜಗಳ ಗುಣಧರ್ಮ. ಬದಲಾವಣೆಯ ದಾಳಿಗೆ ಸಿಕ್ಕಿ ಜಾನಪದ ಸಂಸ್ಕೃತಿಯ ವಿವಿಧ ಪ್ರಭೇದಗಳು ತಮ್ಮ ನಿಜಾರ್ಥವನ್ನು ಕಳೆದುಕೊಂಡಿರಬಹುದು. ಇಂತಹ ವಿಷಯಗಳನ್ನು ಬಿಡಿಸಿ, ವಿಚಾರಿಸಿ, ಅರ್ಥಮಾಡಿಕೊಳ್ಳುವಷ್ಟು ಕಾಲ ಮತ್ತು ಸಂಯಮ ಇಲ್ಲದ ಆಧುನಿಕ ಪೀಳಿಗೆ ಇವನ್ನು ಮೂಢವಿಷಯಗಳೆಂದು ಹೀಯಾಳಿಸಿರುವುದು ಕಂಡುಬರುತ್ತದೆ. ಆದರೆ ಈ ಸಂಸ್ಕೃತಿಭಂಡಾರದ ಬಾಗಿಲನ್ನು ಭೇದಿಸಿದರೆ ಅವುಗಳ ನಿಜಾರ್ಥ ಸಿಗುತ್ತದೆ. ಈ ದೆಸೆಯಲ್ಲಿ ಕೈಕೊಂಡಿರುವ ನಮ್ಮ ಸಂಶೋಧನೆಯಲ್ಲಿ ಗಾದೆ ಮಾತುಗಳ ಸಾಮಾಜಿಕ ಹಾಗು ಸಾಂಸ್ಕೃತಿಕ ಅಭ್ಯಾಸವೂ ಒಂದು.

ಜಾನಪದ ಸಾಹಿತ್ಯದಲ್ಲಿ ಗಾದೆಗಳಿಗೆ ಒಂದು ವಿಶೇಷವಾದ ಸ್ಥಾನವಿದೆ. ಗಾದೆಗಳನ್ನು ಎಲ್ಲಾ ಸಮಾಜ ಮತ್ತು ಸಂಸ್ಕೃತಿಗಳಲ್ಲಿಯೂ ಕಾಣಬಹುದು. ಬಹು ಹಿಂದಿನಿಂದಲೂ ಅವುಗಳ ಅಭ್ಯಾಸವನ್ನು ಜಾನಪದ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು ಮುಂತಾದವರು ಮಾಡುತ್ತಾ ಬಂದಿದ್ದಾರೆ. ಈಗಾಗಲೇ ಆಗಿರುವ ಕೆಲಸದ ಬಗೆಗೆ ಎಲ್ಲರೂ ತಮ್ಮ ಮೆಚ್ಚಿಗೆಯನ್ನು ತೋರಿರುವರಾದರೂ ಅಲ್ಲಲ್ಲಿ ಅನೇಕ ನ್ಯೂನತೆಗಳೂ ಕಂದಕಗಳೂ ಇರುವುದು ಕಂಡುಬರುತ್ತದೆ.

ಅಲ್ಲದೆ ಗಾದೆಗಳನ್ನು ಅಭ್ಯಾಸಮಾಡಿದವರು ತಮ್ಮ ಮೂಲ ಶಾಸ್ತ್ರೀಯ ರೀತಿಯಲ್ಲಿ ಅಥವಾ ತಮ್ಮ ಅಭ್ಯಾಸದ ಉದ್ದೇಶದ ರೀತಿಯಲ್ಲಿ ಮಾಡಿರುವುದರಿಂದ ಗಾದೆಗಳ ಅಭ್ಯಾಸವು ಅಷ್ಟು ಸಮಂಜಸವಾಗಿಲ್ಲವೆಂದು ಕೆಲವರ ಅಭಿಪ್ರಾಯ. ಆದರೆ ಯಾರೂ ಗಾದೆಗಳನ್ನು ಏಕೆ, ಹೇಗೆ ಅಭ್ಯಾಸಮಾಡಬೇಕೆಂಬುದನ್ನು ವಿವರವಾಗಿ ತಿಳಿಸಿಲ್ಲ.

ಜನಪದ ಸಮಾಜ-ಸಂಸ್ಕೃತಿಯನ್ನು ಮೊದಲಿಗೆ ಅಭ್ಯಾಸಮಾಡಿರುವವರು ಪಾಶ್ಚಿಮಾತ್ಯರು. ಇವರು ಮುಖ್ಯವಾಗಿ ಆಡಳಿತಗಾರರಾಗಿ, ಕ್ರೈಸ್ತಧರ್ಮ ಪ್ರಚಾರಕರಾಗಿ, ಸೈನಿಕರಾಗಿ ಜಗತ್ತಿನ ಬೇರೆ ಬೇರೆ ಕಡೆ, ಮುಖ್ಯವಾಗಿ ಆದಿವಾಸಿಗಳಲ್ಲಿ, ಗ್ರಾಮೀಣ ಸಮಾಜಗಳಲ್ಲಿ ಕೆಲಸಮಾಡುತ್ತಿದ್ದಾಗ ತಮ್ಮ ವಿರಾಮವನ್ನು ಕಳೆಯಲು ಅಥವಾ ಕುತೂಹಲವನ್ನು ನಿವಾರಿಸಿಕೊಳ್ಳಲು, ಅಲ್ಲಿಯ ಜಾನಪದವನ್ನು ಅಭ್ಯಾಸಮಾಡಲು ಪ್ರಾರಂಭಿಸಿದರು. ಅವರ ಈ ಪ್ರಯತ್ನದಿಂದಾಗಿ ಇಂದು ಅಳಿದುಹೋಗಿರುವ ಅನೇಕ ಜಾನಪದರ ಜನಪದ ಸಂಸ್ಕೃತಿಗಳು ಉಳಿದಿರುವುದಾದರೂ ಅವರು ಮಾಡಿರುವ ಕೆಲಸ ಅಷ್ಟಾಗಿ ಸಮಂಜಸವಾಗಿಲ್ಲವೆನ್ನಬಹುದು. ಇದಕ್ಕೆ ಅವರಿಗೆ ಜನರ ಭಾಷೆ ಬಾರದ್ದು, ವೇಳೆಯ ಅಭಾವ, ಆಧುನಿಕತೆಯ ದಾಳಿಗೆ ಸಿಕ್ಕಿ ಗಾದೆಗಳು ಬದಲಾಗಿರುವುದು ಅಥವಾ ಕಳೆದುಹೋಗಿರುವುದು– ಹೀಗೆ ಅನೇಕ ಕಾರಣಗಳಿದ್ದವು. ಅನ್ಯದೇಶ, ಭಾಷೆ, ಸಂಸ್ಕೃತಿ ಮತ್ತು ಬಂಡ ಕಟ್ಟಿಗೆ ಸೇರಿದ ಇವರು ತಮ್ಮ ಜಾನಪದದಲ್ಲಿಯ ಅಭ್ಯಾಸದ ಎಲ್ಲಾ ಹಂತಗಳಲ್ಲಿಯೂ ತೊಂದರೆಗಳನ್ನು ಎದುರಿಸಬೇಕಾಗಿತ್ತು. ತಮ್ಮ ದಿನನಿತ್ಯದ ವ್ಯವಹಾರಕ್ಕೆ ಕಲಿತ ಅಷ್ಟಿಷ್ಟು ಭಾಷಾಜ್ಞಾನವನ್ನು ಬಳಸಿಕೊಂಡು, ಕೆಲವೊಂದು ಸಂದರ್ಭದಲ್ಲಿ ದುಭಾಷಿಯನ್ನು ಉಪಯೋಗಿಸಿಕೊಂಡು, ತಮ್ಮ ಅಭ್ಯಾಸ ಮಾಡಿದ್ದಾರೆ. ತಾವು ಅಭ್ಯಾಸಮಾಡುವ ಜನರ ಭಾಷೆಯನ್ನು ಮತ್ತು ಸಂಸ್ಕೃತಿಯನ್ನು ಆಳವಾಗಿ ತಿಳಿಯದ ಅವರಿಗೆ ಜಾನಪದದ ಅಭ್ಯಾಸ ಸುಲಭಸಾಧ್ಯವಾಗಲಾರದು. ಮೇಲಾಗಿ ನೌಕರಿಯಲ್ಲಿದ್ದ ಇವರು ಒಂದು ಪ್ರದೇಶದಿಂದ ಮತ್ತೊಂದಕ್ಕೆ ಆಗಾಗ ವರ್ಗವಾಗಿ ಹೋದುದರಿಂದ, ಇವರಿಗೆ ಕಾಲದ ಅಭಾವವು ಇದ್ದಿತು. ಮೇಲಾಗಿ ಜಾನಪದದ ಅಭ್ಯಾಸವೇ ಇವರ ಮುಖ್ಯ ವೃತ್ತಿಯಾಗಿರಲಿಲ್ಲ. ತಮ್ಮ ಮೂಲ ವೃತ್ತಿಯ ಕೆಲಸವನ್ನು ಮುಗಿಸಿ ಉಳಿದ ಕಾಲದ ಉಪಯೋಗಕ್ಕೆ ಕಾಲಹರಣಕ್ಕೆ, ಮನರಂಜನೆಗೆ ಜಾನಪದವನ್ನು ಅಭ್ಯಾಸಮಾಡಿದ ಉದ್ದೇಶಗಳೂ ಶಾಸ್ತ್ರೀಯವಲ್ಲವೆನ್ನಬಹುದು. ಹೀಗಿದ್ದರೂ ಹೊರಗಿನಿಂದ ಬಂದವರು ಭಾರತದ ಜಾನಪದದ ಅಭ್ಯಾಸಕ್ಕೆ ಸುಭದ್ರ ಬುನಾದಿ ಹಾಕಿ, ಸಾಕಷ್ಟು ಸಂಗ್ರಹಣೆಯ ಕೆಲಸ ಮಾಡಿದ್ದಾರೆನ್ನುವುದು ಗಮನಾರ್ಹ. ಇವರ ನಂತರ ಅನೇಕ ಭಾರತೀಯರೂ ಸಾಕಷ್ಟು ಸಾಧನೆ ಮಾಡಿದ್ದಾರೆನ್ನಬಹುದು. ಹೊಸ ಪೀಳಿಗೆಗೆ ಸೇರಿದ ಕೆಲವರು ಜಾನಪದದ ಅಭ್ಯಾಸವನ್ನೇ ತಮ್ಮ ಮುಖ್ಯ ಅಧ್ಯಯನವಿಷಯವನ್ನಾಗಿ ಮಾಡಿಕೊಂಡಿರುವುದು ಸಂತೋಷ ತರುವ ವಿಷಯ.

ಗಾದೆಮಾತುಗಳು ಜಾನಪದದ ಅಭ್ಯಾಸದಲ್ಲಿ ತಮ್ಮದೇ ಆದ ವಿಶೇಷ ಸ್ಥಾನ ಪಡೆದಿವೆ. ಇವುಗಳಿಂದ ಜನಪದಸಮಾಜದಲ್ಲಿರಬಹುದಾದ ಸಾಮಾಜಿಕ ಮತ್ತು ಸಂಸ್ಕೃತಿಕ ಮೌಲ್ಯಗಳನ್ನು ತಿಳಿಯಲು ಸಹಾಯವಾಗುತ್ತದೆ. ಆದರೆ ಇಲ್ಲಿಯ ವರೆಗೆ ನಡೆದಿರುವ ಕನ್ನಡ ಗಾದೆಮಾತುಗಳ ಬಗೆಗಿನ ಅಭ್ಯಾಸವೆಂದರೆ ಅವುಗಳನ್ನು ಕಲೆಹಾಕುವುದು, ಅವನ್ನು ತಮ್ಮ ನಿಜಾರ್ಥದಲ್ಲಿ ಅಥವಾ ರಚನೆಯ ಆಧಾರದ ಮೇಲೆ ವಿಭಾಗ ಮಾಡಿರುವುದು ಆಗಿದೆಯೇ ವಿನಾ ಅವುಗಳ ಅರ್ಥ, ಹಿನ್ನೆಲೆ, ಉದ್ದೇಶ ಮುಂತಾದವನ್ನು ತಿಳಿಯುವುದಾಗಿಲ್ಲ. ಕೆಲವರು ಗಾದೆ ಮಾತುಗಳ ಅರ್ಥ ಮತ್ತು ಉದ್ದೇಶಗಳ ಬಗೆಗೆ ಹೇಳಲು ಪ್ರಯತ್ನಿಸಿರುವುದಾದರೂ ಗಾದೆಗಳನ್ನು ಯಾರಿಂದ ಕೇಳಿ ತಿಳಿದುಕೊಂಡರೋ ಆ ಜನರ ವೃತ್ತಿ, ವಿದ್ಯಾಮಟ್ಟ, ಜಾತಿ, ಕುಲ, ಆರ್ಥಿಕಮಟ್ಟ ಮುಂತಾದವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಆದರೆ ಮಾನವಶಾಸ್ತ್ರೀಯವಾಗಿ ಅಭ್ಯಾಸಮಾಡುವುದಕ್ಕೆ ಗಾದೆಮಾತುಗಳನ್ನು ಶಾಸ್ತ್ರೀಯ ರೀತಿಯಲ್ಲಿ ಕಲೆಹಾಕಬೇಕಾಗುತ್ತದೆ. ಗಾದೆಮಾತುಗಳಿಗಿಂತ ಹೆಚ್ಚಾಗಿ ಅವುಗಳನ್ನು ಹೊಂದಿರುವ ಜನರ ಅಥವಾ ಗುಂಪಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಜನಜೀವನ, ಅವರು ವಾಸಮಾಡುವ ತಾಣ, ಅವರು ಆಡುವ ಭಾಷೆ, ಅವರು ತಿನ್ನುವ ಅನ್ನ, ಮಾಡುವ ಕಸಬು, ಅವರ ಸುತ್ತಲಿರುವ ಇತರ ಗುಂಪುಗಳು ಮುಂತಾದವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ವೇಳೆ ಈ ಬಗ್ಗೆ ಮಾಹಿತಿ ಇಲ್ಲದೆ ಗಾದೆಗಳ ಬಗೆಗೆ ಮಾಡುವ ನಮ್ಮ ಅಭ್ಯಾಸವು ಶಾಸ್ತ್ರೀಯವಾಗುವುದಿಲ್ಲ. ಉದಾಹರಣೆಗೆ, ಗಾದೆಮಾತುಗಳಲ್ಲಿ ಬರುವ ಶಬ್ದಗಳ ಆಧಾರದಿಂದ ಇದು ಯಾವ ಪ್ರದೇಶಕ್ಕೆ, ಜಾತಿಗೆ ಸೇರಿದವರಿಗೆ ಸಂಬಂಧಪಟ್ಟದ್ದೆಂದು ತಿಳಿಯಬಹುದು. ಒಂದೇ ಊರಲ್ಲಿ ವಾಸವಾಗಿರುವ ಎರಡು ಜಾತಿಗೆ ಸೇರಿದವರು ತಮ್ಮ ಜಾತಿ ಸಂಸ್ಕೃತಿಗೆ ಅನುಗುಣವಾಗಿ ಬೇರೆ ಬೇರೆ ಶಬ್ದಗಳನ್ನು ಉಪಯೋಗಿಸುವುದರ ಮೂಲಕ ತಮ್ಮ ಸಂಸ್ಕೃತಿ ಮತ್ತು ಸಾಮಾಜಿಕ ಹಿನ್ನೆಲೆಯನ್ನು ತೋರಿಸುತ್ತಾರೆ. ಉದಾಹರಣೆಗೆ, ಕೆಲವೊಂದು ಅಶ್ಲೀಲ ಗಾದೆಗಳನ್ನು ಕೆಲವೇ ಜಾತಿಗೆ ಸೇರಿದವರು ಉಪಯೋಗಿಸುತ್ತಾರೆ. ಅಥವಾ ಕೆಲವೊಂದು ಚಟುವಟಿಕೆ, ಪದ್ಧತಿಗಳಿಗೆ ಸಂಬಂಧಿಸಿದ ಗಾದೆ ಮಾತುಗಳು ವಿಶಿಷ್ಟ ಗುಂಪಿನವರಲ್ಲಿ ಮಾತ್ರ ಕಂಡುಬರುತ್ತವೆ. ಉದಾ: "ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ" ಎನ್ನುವುದನ್ನು ಶಿವಭಕ್ತರು, "ಸಂಕಟ ಬಂದಾಗ ವೆಂಕಟರಮಣ" ಎನ್ನುವುದನ್ನು ವೈಷ್ಣವರು ಮಾತ್ರ ಸಾಮಾನ್ಯವಾಗಿ ಉಪಯೋಗಿಸುತ್ತಾರೆ.

ಜಾನಪದದ ಎಲ್ಲಾ ಪ್ರಭೇದಗಳನ್ನು ತೆಗೆದುಕೊಂಡು ಅಭ್ಯಾಸ ಮಾಡುವುದು ದುಸ್ಸಾಹಸ. ಅದರಲ್ಲೂ ತುಲನಾತ್ಮಕ ಅಭ್ಯಾಸಮಾಡಬೇಕೆಂದಿರು

ವವರು ಯಾವುದಾದರೂ ಒಂದು ಪ್ರದೇಶಕ್ಕೆ ಸೇರಿದ ಒಂದು ಪ್ರಕಾರವನ್ನು ತೆಗೆದುಕೊಂಡರೆ ಮಾತ್ರ ಆಳಕ್ಕೆ ಹೋಗಬಹುದು. ಆದರೆ ಅನೇಕ ಕಾರಣ ಗಳಿಂದಾಗಿ ಜಾನಪದ ರಂಗದಲ್ಲಿ ಈಗಾಗಲೇ ಆಗಿರುವ ಕೆಲಸ ಈ ರೀತಿ ಯಾಗಿರದೆ ಬೇರೆಯೇ ಆದ ರೀತಿಯಲ್ಲಿದೆ. ಇಂದು ಜಾನಪದವನ್ನು ಅಭ್ಯಾಸ ಮಾಡುವವರು ಭಾರತೀಯರೇ ಇದ್ದು, ಅನೇಕ ವೇಳೆ ಜನಪದ ಸಮಾಜಕ್ಕೇ ಸೇರಿರುತ್ತಾರೆ. ಆದ್ದರಿಂದ ಸಧ್ಯ ಹೊರಬರುತ್ತಿರುವ ಜಾನಪದ ಅಭ್ಯಾಸದ ಕೆಲವಾದರೂ ಫಲಿತಾಂಶಗಳು ಉತ್ತಮವಾಗಿವೆ ಎನ್ನಬಹುದು.

ಮಾರ್ಕ್ ಟ್ವೈನ್ (Mark Twain) ಹೇಳುವಂತೆ ಗಾದೆಗಳ ಬಗೆಗೆ ಎಲ್ಲರೂ ಮಾತಾಡುವವರೇ. ಆದರೆ ಯಾರೂ ಗಾದೆ ಎಂದರೇನು ? ಅವುಗಳ ವ್ಯಾಖ್ಯೆ ಏನು ? ಎಂಬುದರ ಬಗೆಗೆ ನಿಕೃಷ್ಟವಾಗಿ ತಿಳಿಸಿಲ್ಲ. ಇಲ್ಲಿಯ ವರೆಗೂ ಲಭ್ಯವಿರುವ ವ್ಯಾಖ್ಯೆಗಳನ್ನು ನೋಡಿದರೆ ಇವು ಗಾದೆಗಳ ಬಗೆಗೆ ತೀರ ಸಂಕುಚಿತ ಅಥವಾ ತೀರ ವಿಶಾಲವಾದ, ಎಲ್ಲೆಗಳಿಲ್ಲದ, ಅರ್ಥವಿಲ್ಲದ ವ್ಯಾಖ್ಯೆ ಗಳು ಎನಿಸುತ್ತದೆ. ಲಭ್ಯವಿರುವ ವ್ಯಾಖ್ಯೆಗಳಲ್ಲಿ ಅಮೇರಿಕೆಯ ಟೈಲರ್ ಮತ್ತು ವೈಲಿಂಗ್ ಎನ್ನುವವರು ನೀಡಿರುವುದೇ ಉತ್ತಮವಾದುದೆಂದು ಪರಿ ಗಣಿಸಲಾಗಿದೆ. ಅವರು ಗಾದೆಗಳನ್ನು "ಇವು ಒಂದುಬಗೆಯ ಮಾತುಗಳು, ಇವು ಯಾವುದಾದರೊಂದು ಸಂದರ್ಭ ಅಥವಾ ಸನ್ನಿವೇಶವನ್ನು ತಮ್ಮದೇ ಆದ ಅನುಕರಣೀಯವಲ್ಲದ ರೀತಿಯಲ್ಲಿ ಪರಾಂಬರಿಸಿ ಮತ್ತು ತಮ್ಮದೇ ಆದ ರೀತಿ ಯಲ್ಲಿ ತಾತ್ಪರ್ಯ ಮಾಡಿ ಹೇಳುವ ಮಾತುಗಳು"- ಎಂದಿದ್ದಾರೆ. ಅನೇಕ ವಿದ್ವಾಂಸರು ಗಾದೆ, ಗಾದೆಯಂತಹ ಮಾತುಗಳು ಮತ್ತು ಸರ್ವಸಾಮಾನ್ಯ ಆಣಿಮುತ್ತುಗಳು ಇವುಗಳಿಗಿರುವ ವೈಪರಿತ್ಯವನ್ನು ಗಮನಿಸದೆ ತಮ್ಮ ವ್ಯಾಖ್ಯೆ ಯನ್ನು ನೀಡಿದ್ದಾರೆ. ಇಂತಹ ವ್ಯಾಖ್ಯಕಾರರು ಗಾದೆಗಳ ಬಗ್ಗೆ ಮಾಡಿರುವಷ್ಟು ಅನ್ಯಾಯ ಮತ್ತಾರೂ ಮಾಡಿರಲಿಕ್ಕಿಲ್ಲ. ಏಕೆಂದರೆ ಗಾದೆಗಳಿಗೆ ತಮ್ಮದೇ ಆದ ಗಾಂಭೀರ್ಯ, ತನ್ನತನ, ಆಳ ಮತ್ತು ವಿಶೇಷವಾದ ಅರ್ಥವಿರುತ್ತವೆ. ಗಾದೆ ಗಳನ್ನು ಸಂಭಾಷಣೆಯಲ್ಲಿ ಉಪಯೋಗಿಸುವವರಿಗೂ ಜನಜೀವನ, ಸಂಸ್ಕೃತಿ ಮತ್ತು ಭಾಷೆಯ ಮೇಲೆ ಸೂಕ್ತ ಸ್ವಾಮಿತ್ವ ಬೇಕಾಗುತ್ತದೆ. ಕೆಲವರು ವಿದ್ಯಾ-ಬುದ್ಧಿಯಿಂದ ಗಾದೆಗಳನ್ನು ಕರಗತ ಮಾಡಿಕೊಂಡು, ಮಾತುಗಳ ನಡುವೆ ಜಾಣತನದಿಂದ ಉಪಯೋಗಿಸಿ ತಮ್ಮ ಘನತೆ-ಗೌರವವನ್ನು ಹೆಚ್ಚಿಸಿಕೊಳ್ಳ ಬಹುದು. ಆದರೆ ಗಾದೆಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲು ಜಾಣತನದ ಜೊತೆಗೆ ಜೀವನದಲ್ಲಿ, ಭಾಷೆಯಲ್ಲಿ ಅನುಭವವೂ ಬೇಕಾಗುತ್ತದೆ. ಈ ಕಲೆ ಜೀವನದಲ್ಲಿ ಪಡೆಯುವ ನಿಜವಾದ ಅನುಭವದಿಂದ ಬರುತ್ತದೆಯಲ್ಲದೆ ವಿದ್ಯೆ ಯಿಂದಲ್ಲ.

ಇತ್ತೀಚೆಗೆ ಸಾಮಾನ್ಯವಾಗಿ, ಗಾದೆಗಳನ್ನು ಲಿಖಿತ ಮತ್ತು ಅಲಿಖಿತ ಅಥವಾ ಸಾಂಪ್ರದಾಯಿಕ ಎಂದು ಎರಡು ವಿಭಗಳಾಗಿ ವಿಂಗಡಿಸಲಾಗಿದೆ. ಮೊದಲನೆಯವು ಬೈಬಲ್, ವೇದ, ಪುರಾಣ ಮುಂತಾದವುಗಳಲ್ಲಿ ಬರುವ ಆಣಿಮುತ್ತುಗಳಿದ್ದು, ಜನರ ಜೀವನವನ್ನು ರೂಪಿಸುವಲ್ಲಿ ಆಗಾಗ ಉಪಯೋಗಿಸಲಾಗುತ್ತದೆ. ಸಾಂಪ್ರದಾಯಿಕವಾಗಿ ಬರುವ ಇವು ಜನರ ನಡೆ ನುಡಿಯ ಮೂಲಕ ಪ್ರಚಾರ ದಲ್ಲಿರುತ್ತವೆ. ಒಂದು ವಿಧದಲ್ಲಿ ಹೇಳುವುದಾದರೆ ಸಂಪ್ರದಾಯಿಕವಾಗಿ ಬಂದ ಅಥವಾ ಜನರ ಬಾಯಿಯಲ್ಲಿದ್ದ ಗಾದೆಗಳು ಸ್ವಲ್ಪ ಆಧುನಿಕತೆಯನ್ನು ಹೊಂದಿ ಲಿಖಿತವಾಗಿರುತ್ತವೆ. ಏಕೆಂದರೆ ಇವನ್ನು ಬರೆದವನು ಆ ಸಮಾಜದಲ್ಲಿ ಹುಟ್ಟಿ, ತನ್ನ ಸಂಸ್ಕೃತಿಯ ಕೂಸಾಗಿ ಬೆಳೆದಿರುತ್ತಾನೆ. ಈ ರೀತಿಯಲ್ಲಿ ಅಲಿಖಿತ ಸಂಸ್ಕೃತಿಯಿಂದ ಲಿಖಿತ ಸಂಸ್ಕೃತಿಗೆ ಬರುತ್ತವೆ.

ಗಾದೆಗಳ ಮೂಲಗಳೇನು? ಅವು ಹೇಗೆ ಹುಟ್ಟುತ್ತವೆ? ಎಂಬಿವು ಮುಖ್ಯ ವಾದ ಅಂಶಗಳು. ಗಾದೆಗಳು ಮುಖ್ಯವಾಗಿ ಅನುಭವದಿಂದ, ದೊಡ್ಡವರ ಮಾತಿ ನಿಂದ, ಆಣಿಮುತ್ತುಗಳಿಂದ, ಹೊಸದನ್ನು ಹುಡುಕಬೇಕೆನ್ನುವ ಮನುಷ್ಯನ ಆವಿಷ್ಕಾರ ಬುದ್ಧಿಯಿಂದ, ಅಕ್ಕಪಕ್ಕದ ಭಾಷೆಗಳಿಂದ, ಧರ್ಮಗ್ರಂಥಗಳಿಂದ, ಪ್ರಚಾರವಲ್ಲಿರುವ ಗಾದೆಗಳು ಸ್ವಲ್ಪ ಬದಲಾವಣೆ ಹೊಂದುವುದರಿಂದ, ಮನುಷ್ಯ ರಲ್ಲಿ ದೆವ್ವ, ಪೀಡೆ ಮುಂತಾದ ದುಷ್ಟಶಕ್ತಿಗಳಲ್ಲಿನ ಹೆದರಿಕೆಯಿಂದ, ಉತ್ತಮ ಆರೋಗ್ಯ, ಸಂಬಂಧ, ನಡವಳಿಕೆ ಮುಂತಾದವುಗಳನ್ನು ಬೆಳೆಸಿಕೊಳ್ಳಲು ಹಿರಿಯರು, ಬುದ್ಧಿವಂತರು ನೀಡಿರುವ ಮಾತುಗಳಿಂದ ಹುಟ್ಟಿಬಂದಿರು ವುದು ಕಂಡುಬರುತ್ತದೆ. ಉದಾಹರಣೆಗೆ, "ಅಡವಿಯಲ್ಲಿ ಅಡಕಿ ಒಡೆಯ ಬಾರದು, ತೌರಿನಲ್ಲಿ ಹೆಂಡತಿಯನ್ನು ಹೊಡೆಯಬಾರದು", "ಕೆಸರಿನಲ್ಲಿ ಕಲ್ಲು ಹಾಕಬಾರದು", "ಅರೇ ಮೇಲೆ ಕುಳಿತು ಮರ ಕಡಿಯಬಾರದು", "ಈಚಲ ಮರದಡಿ ಮಜ್ಜಿಗೆ ಕುಡಿಯಬಾರದು" ಹೀಗೆ ಅನೇಕ ಅನುಭವದ ಮಾತುಗಳನ್ನು ತೆಗೆದುಕೊಳ್ಳಬಹುದು. ಇದೇ ರೀತಿ ದೊಡ್ಡವರು ಆಡಿದ ಮಾತುಗಳೂ ಗಾದೆ ಗಳಾಗುತ್ತವೆ ಎನ್ನುವುದಕ್ಕೆ ಬಸವಣ್ಣನವರ "ಪರ ಚಿಂತೆ ನಮಗೇಕೆ", ಟೀಪು ಸುಲ್ತಾನನ "ಇಲಿಯಂತೆ ನೂರು ವರ್ಷ ಬಾಳುವುದಕ್ಕಿಂತ ಹುಲಿಯಂತೆ ಒಂದು ವರ್ಷ ಬಾಳುವುದು ಮೇಲು"– ಮುಂತಾದವುಗಳನ್ನು ಉದಾಹರಣೆಗಳನ್ನಾಗಿ ತೆಗೆದುಕೊಳ್ಳಬಹುದು.

ಕೆಲವೊಮ್ಮೆ ಪ್ರಚಾರದಲ್ಲಿರುವ ಗಾದೆಗಳು ಅಚಾತುರ್ಯದಿಂದ ಅಥವಾ ಉದ್ದೇಶಪೂರ್ವಕ ಬದಲಾಗುವುದರಿಂದಲೂ ಹೊಸಗಾದೆಗಳು ಹುಟ್ಟಿಕೊಳ್ಳು ತ್ತವೆ. ಉದಾಹರಣೆಗೆ "ದೂರದ ಗುಡ್ಡ ಕಣ್ಣಿಗೆ ನುಣ್ಣಗೆ" ಎನ್ನುವುದನ್ನು

ಬರೆಯುವಲ್ಲಿ ತಪ್ಪಾಗಿ "ದೂರದ ಗುಡ್ಡ ಕಣ್ಣಿಗೆ ನುಣ್ಣಗೆ" ಎಂದೂ, "ಎದೆ ನೋಡಿ ಎತ್ತು ತರಬೇಕು, ಕಾಲು ನೋಡಿ ಕುದುರೆ ತರಬೇಕು, ಎಲ್ಲಾ ನೋಡಿ ಹೆಣ್ಣು ತರಬೇಕು" ಎಂಬ ಗಾದೆಯ ಅರ್ಥ ಅಪಾರ್ಥವಾಗಬಾರದೆಂಬ ದೃಷ್ಟಿಯಿಂದ, ಸುಸಂಸ್ಕೃತರು "ಲಕ್ಷಣ ನೋಡಿ ಹೆಣ್ಣು ತರಬೇಕು" ಎಂದೂ ಬದಲಾಗಿರುವುದನ್ನು ಕಾಣಬಹುದು. ಹೊಸವುಗಳ ಜೊತೆಗೆ ಹಳೆಯವೂ ಉಳಿದುಕೊಳ್ಳುವುದರಿಂದ ಗಾದೆಗಳ ಸಂಖ್ಯೆ ಬೆಳೆಯುತ್ತಾಹೋಗುತ್ತದೆ. ದೇವರು ಮತ್ತು ದೆವ್ವಗಳ ಬಗೆಗೆ ಹೆದರಿಕೆ ಹುಟ್ಟಿಸಲು ಬಂದಿರುವ ಗಾದೆಗಳಲ್ಲಿ "ಅಡವಿ ದೆವ್ವ ಬಂದು ಊರ ದೆವ್ವವನ್ನು ಓಡಿಸಿತು", "ಕಾಣದ ದೇವರಿಗಿಂತ ಕಂಡ ದೆವ್ವ ಮೇಲು", "ಕಾಯೋ ದೇವರೇ ಕಾಡುವಾಗ ಯಾರೇನು ಮಾಡುವರು?", "ದೆವ್ವಕ್ಕೆ ಎಡೆ ಹಾಕಿದಂತೆ"- ಮುಂತಾದವು ಸೂಕ್ತ ಉದಾಹರಣೆಗಳು. ಇದೇರೀತಿ ಜನರಲ್ಲಿ ತಮ್ಮ ಜೀವನ, ಬದುಕು, ಆರೋಗ್ಯ ಮುಂತಾದವುಗಳ ಬಗೆಗೆ ಗಾದೆ ಮಾತುಗಳು ಹುಟ್ಟಿಬರುವುದು ಕಂಡುಬರುತ್ತವೆ. ಉದಾಹರಣೆಗೆ, "ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ", "ಒಪ್ಪತ್ತು ಉಣ್ಣುವವ ಯೋಗಿ, ಎರಡೊತ್ತು ಉಣ್ಣುವವ ಭೋಗಿ, ಮೂರೊತ್ತು ಉಣ್ಣುವವ ರೋಗಿ", "ಹಸಿದು ಹಣ್ಣು ತಿನ್ನು, ಉಂಡು ಕಬ್ಬು ತಿನ್ನು", "ಮೆತ್ತಗೆ ಮಾಡಿ ಮಲಗು, ರುಚಿಮಾಡಿ ಉಣ್ಣು", "ಎಡಗಡೆ ಮಗ್ಗುಲಾಗಿ ಮಲಗಬೇಕು, ಬಲಗಡೆ ಮಗ್ಗುಲಾಗಿ ಏಳಬೇಕು" ಮುಂತಾದವುಗಳನ್ನು ತೆಗೆದುಕೊಳ್ಳಬಹುದು. ಇದೇ ರೀತಿ ಯಾರ ಕೂಡ ಗೆಳೆತನ ಮಾಡಬೇಕು, ಸಂಗ ಮಾಡಬೇಕು ಎನ್ನುವುದರ ಬಗೆಗೂ ಅನುಭವದಿಂದ ಆಡಿದ ಮಾತುಗಳು ಗಾದೆ ಮಾತುಗಳಾಗಿ ಉಳಿದುಕೊಂಡು ಬಂದಿವೆ. ಉದಾಹರಣೆಗೆ, "ಎಮ್ಮೆ ಕರದ ಕೂಡ ಆಡಿ ಆಕಳಕರ ಹೊಲಸು ತಿನ್ನುವುದನ್ನು ಕಲಿಯಿತು" "ಇದ್ದಲಿ ಮಾರುವವರ ಸ್ನೇಹಕ್ಕಿಂತ ಕಸ್ತೂರಿ ಮಾರುವವರ ಕೂಡ ಜಗಳ ಲೇಸು", ಹೀಗೆ. ಯಾರನ್ನಾದರೂ ಅಥವಾ ಯಾವುದಾದರೂ ವೃತ್ತಿಯನ್ನು ಹೀಯಾಳಿಸಲು ಕೆಲವೊಂದು ಗಾದೆ ಮಾತುಗಳು ಹುಟ್ಟಿಬರುತ್ತವೆ. ಉದಾಹರಣೆಗೆ, "ಸ್ಕೂಲ್ ಮಾಸ್ತರನಿಗೆ ಬುದ್ಧಿ ಇಲ್ಲ, ಸ್ಟೇಷನ್ ಮಾಸ್ತರನಿಗೆ ನಿದ್ದೆ ಇಲ್ಲ", "ಧಾರವಾಡದ ಮಳೆ, ಬೆಳಗಾಂ ಹುಡುಗಿಯರು ಹತ್ತಿಕೊಂಡರೆ ಬಿಡಲ್ಲ", "ಧಾರವಾಡದ ಮಳೆ ನಂಬಬಾರದು, ಬೆಳಗಾವಿ ಹೆಣ್ಣು ನಂಬಬಾರದು", "ಪತ್ತಾರನ ಗುಣ ಅವನ ಬಡಿತದಲ್ಲೇ ತಿಳಿಯುತ್ತವೆ" (ಅವನು ಕುಟ್ಟುವ ಶಬ್ದದಿಂದ ಅವನನ್ನು ಗೇಲಿಮಾಡಲು ಅದು 'ಕೊಟ್ಟಂ ಕೆಟ್ಟಂ' ಎಂದು ಸೂಚಿಸುವುದೆಂದು ಹೇಳುತ್ತಾರೆ), "ಸಾಹೇಬರ ಸಹವಾಸ ಇರುಳೆಲ್ಲಾ ವನವಾಸ", "ಬ್ರಾಹ್ಮಣರ ಸಹವಾಸ ದಿನವೆಲ್ಲಾ ಉಪವಾಸ"- ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು.

ಗಾದೆಯಂತಿರುವ ಮಾತುಗಳು ಗಾದೆ ಮಾತುಗಳಲ್ಲ. ಇವನ್ನು "ಗಾದೆಯಂತಹ ಮಾತುಗಳು" ಎನ್ನಬಹುದು. ಇವುಗಳ ಉಪಯೋಗ ಗಾದೆಯ ಮಾತಿನಂತೆಯೇ ಇರುತ್ತದೆಯಾದ್ದರಿಂದ ಮುಂದೆ ಇವು ಗಾದೆಗಳಾಗಬಹುದು. ಉದಾಹರಣೆಗೆ, "ಎತ್ತಿನಲ್ಲಿ ಹೋದರೂ ಮೇಯುತ್ತೇನೆ, ಎಮ್ಮೆಯಲ್ಲಿ ಹೋದರೂ ಮೇಯುತ್ತೇನೆ", "ಉಂಡದ್ದರ ಗುರುತು ಹೊಟ್ಟೆ ತುಂಬಿದ್ದರಲ್ಲ", "ನಡೆವವರು ಎಡಹುದೆ ಕೂತವರು ಎಡಹುವರೆ?" ಹೀಗೆ ಅನೇಕ ಮಾತುಗಳು ಪ್ರಚಾರದಲ್ಲಿವೆ. ಇನ್ನೂ ಅನೇಕ ಮಾತುಗಳು ಹಿಂದೆ ನಡೆದಿರಬಹುದಾದ ಅಥವಾ ಒಂದು ಕತೆಯ ನೀತಿಸಾರವಾಗಿದ್ದು, ಈಗ ಗಾದೆಮಾತಿನಂತೆ ಉಳಿದುಕೊಂಡಿವೆ. ಉದಾಹರಣೆಗೆ ಚಿತ್ರದುರ್ಗಜಿಲ್ಲೆಯಲ್ಲಿ- "ಅದೇ, ಸಿದ್ದ ಊರಿಗೆ ಹೋಗಿ ಬಂದಂತೆ" ಎಂದು ಉಪಯೋಗಿಸುವ ಒಂದು ವಾಕ್ಯವನ್ನು ತೆಗೆದುಕೊಳ್ಳಬಹುದು. ಇದನ್ನು ಸಂಭಾಷಣೆಯ ಸಮಯಾನ್ವಯದಲ್ಲಿ ಕಂಡುಕೇಳಿದರೂ ಈ ಮಾತಿನ ಅರ್ಥ ತಿಳಿಯುವುದಿಲ್ಲ. ಈ ಮಾತಿಗೆ ಸಂಬಂಧಿಸಿದ ಕತೆ ಹೀಗಿದೆ: "ಸಿದ್ದ ಹತ್ತು-ಹನ್ನೆರಡು ವರ್ಷದ ದೊಡ್ಡ ಹುಡುಗ. ಒಂದು ರಾತ್ರಿ ಅವನ ತಂದೆ-ತಾಯಿಗಳು ಅವನನ್ನು ಮರುದಿನ ಹೊತ್ತಿಗೆ ಮುಂಚೆ, ಯಾವುದೋ ಕೆಲಸದಮೇಲೆ ಬೇರೊಂದು ಊರಿಗೆ ಕಳುಹಿಸುವ ಬಗ್ಗೆ ಮಾತಾಡುತ್ತಿರುವುದನ್ನು ಕೇಳಿಸಿಕೊಳ್ಳುತ್ತಾನೆ. ಮರುದಿನ ಬೆಳಗ್ಗೆ ತನಗೆ ಎಚ್ಚರವಾದಕೂಡಲೇ ಎದ್ದು ಸಿದ್ದ ಆ ಊರಿಗೆ ಹೋಗಿ ತಿರುಗಿ ಬಂದುಬಿಡುತ್ತಾನೆ. ಅವನಿಗಾಗಿ ಹುಡುಕಾಡಿದ ತಂದೆ-ತಾಯಿಗಳು ಅವನು ಹಿಂತಿರುಗಿ ಬಂದನಂತರ ಅವನು ಊರಿಗೆ ಹೋಗಿ ಬಂದನೆಂದು ತಿಳಿದು, "ಏಕೆ ಹೋಗಿ ಬಂದೆ?" ಎಂದು ಕೇಳಿದ್ದಕ್ಕೆ "ನೀವು ರಾತ್ರಿ ಮಾತಾಡುತ್ತಿದ್ದಿರಲ್ಲಾ, ಅದಕ್ಕೆ" ಎನ್ನುತ್ತಾನೆ. ಹೀಗೆ ಬುದ್ಧಿ ಇಲ್ಲದೆ ಕೆಲಸ ಮಾಡುವವರನ್ನು ಹೀಯಾಳಿಸಲು, ಇಂದು ಜನರು "ಸಿದ್ದ ಮಾಡಿದಂತೆ ಕೆಲಸ ಮಾಡಬೇಡ" ಎಂದು ಹೇಳಿ, ತಿದ್ದಲು ಪ್ರಯತ್ನಿಸುತ್ತಾರೆ. ಇಂತಹ ಮಾತುಗಳೂ ಗಾದೆಯಂತಹ ಮಾತುಗಳಾಗಿ ಉಳಿದುಕೊಂಡುಬಂದಿವೆ.

ಗಾದೆಗಳನ್ನು ಅಭ್ಯಾಸಮಾಡುವುದರಿಂದ ವಿವಿಧ ಜಾತಿಗಳಲ್ಲಿರುವ ವೈಷಮ್ಯ ಮತ್ತು ಆಯಾ ಜಾತಿಗಳಿಗೆ ಸಮಾಜದಲ್ಲಿ ಇರುವ ಸ್ಥಾನಮಾನವನ್ನು ಗುರುತಿಸಬಹುದು. ಉದಾಹರಣೆಗೆ, "ಅಕ್ಕಸಾಲಿಗ ಅಕ್ಕನ ಚಿನ್ನವನ್ನು ಕದಿಯದೆ ಬಿಡ"- ಎಂಬುದರಲ್ಲಿ ಅವನು ನಂಬಿಕೆಗೆ ಅರ್ಹನಲ್ಲವೆಂಬುದನ್ನು, "ಉದ್ಯೋಗವಿಲ್ಲದ ಬಡಿಗ ಮಗನ ಮುಕುಳಿ ಕೆತ್ತಿದ" ಎಂಬುದು ಅವನ ಚೇಷ್ಟೆಗಳನ್ನು, "ಬಣಜಿಗ ನೊಣ ಹಿಸುಕಿಕೊಂಡು ತಿಂಬ" ಎನ್ನುವುದು ಅವನು ಜಿಪುಣನೆನ್ನುವುದನ್ನು, "ಮಾದಿಗ ಮಾಡುವುದು ಹೆಂಡಕ್ಕೆ, ಒಕ್ಕಲಿಗ ಮಾಡುವುದು ಬಂಡಕ್ಕೆ" ಎಂಬುದು ಈ ಜಾತಿಗಳಲ್ಲಿರುವ ಕೆಟ್ಟಚಟ ಮತ್ತು ದಡ್ಡತನವನ್ನು ತೋರಿಸುತ್ತದೆ. ಇದೇ

ರೀತಿ "ಕುರುಬಗೆ ಹೂ ಕೊಟ್ರೆ ಕುಂಡ್ಯಾಗ ಇಟ್ಕೊಂಡ" ಎನ್ನುವುದು ಅವನ ಅಸಂಸ್ಕೃತಿಯನ್ನು ತೋರಿಸುತ್ತದೆ; "ಸೆಟ್ಟಿ ಬಿದ್ದರೂ ಬಾಯಲ್ಲಿ ಬಂಗಾರ ಕಚ್ಚಿಕೊಂಡೇ ಎದ್ದ" ಮತ್ತು "ಸೆಟ್ಟಿ ಸಾಲ ಅವನು ಸತ್ತಮೇಲೆ ಗೊತ್ತು" ಎಂಬವು ಅವನ ವ್ಯಾವಹಾರಿಕ ಕುಶಲತೆಯನ್ನು; "ಹಾವು ಕಡಿದರೆ ಒಬ್ಬ ಸಾಯುತ್ತಾನೆ, ಹಾರುವ ಕಡಿದರೆ ವಂಶವೇ ಸಾಯುತ್ತದೆ"- ಎಂಬುದು ಅವನ ಅಧಿಕಾರ ಪ್ರಯೋಗವನ್ನು ತೋರಿಸುತ್ತದೆ.

ಅನೇಕ ಗಾದೆಮಾತುಗಳು ಸಮಾಜದಲ್ಲಿರಬೇಕಾದ ಮೌಲ್ಯಗಳನ್ನು ಎತ್ತಿ ತೋರಿಸುತ್ತವೆ. ಉದಾಹರಣೆಗೆ "ತಾಯಿಯಂತೆ ಮಗಳು, ನೂಲಿನಂತೆ ಸೀರೆ"-ಎಂಬುದು ನಡವಳಿಕೆಯನ್ನು, "ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ"- ಎನ್ನುವುದು ಹಿರಿಯರು ಸರಿಯಾಗಿ ನಡೆದುಕೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಕೆಲವೊಂದು ಗಾದೆಗಳು ಸಮಾಜದಲ್ಲಿ ಯಾವ ವಯಸ್ಸಿನವರು ಯಾವ ಕೆಲಸ ಮಾಡಬೇಕು, ಎಂಬುದನ್ನು ತೋರಿಸುತ್ತವೆ. ಉದಾಹರಣೆಗೆ "ಮೊಮ್ಮಗ ಅಜ್ಜನಿಗೆ ಕೆಮ್ಮುವುದು ಕಲಿಸಿದ", "ಆರು ಹಡೆದವಳ ಮುಂದೆ ಮೂರು ಹಡೆದವಳು ಮುರುಕು ಮಾಡಿದಳು", "ಮೀನಿನ ಮರಿಗೆ ಈಜು ಕಲಿಸಿದಂತೆ" ಮುಂತಾದವುಗಳಲ್ಲಿ ಕಾಣಬಹುದು. ಇವು ಸ್ವಲ್ಪ ಸುಸಂಸ್ಕೃತರಲ್ಲಿ ಬಳಕೆಯಲ್ಲಿರುವ ಗಾದೆಗಳಾದರೆ ಅಸಂಸ್ಕೃತರು, "ಇಪ್ಪತ್ತು ವರ್ಷದವನಿಗೆ ಹಿರೇತನ ಬರಬಾರದು, ಎಪ್ಪತ್ತು ವರ್ಷದವನಿಗೆ ಹೇಲಾಟ ಹತ್ತಬಾರದು", "ಅಜ್ಜಿಗೆ ಅರಿವೆ ಕಾಟ, ಮೊಮ್ಮಗಳಿಗೆ ಮಿಂಡರ ಕಾಟ"- ಎಂಬುವು ವಯೋಗುಣಕ್ಕೆ ಅನುಗುಣವಾಗಿ ಮನುಷ್ಯನಿಗೆ ಸ್ಥಾನ-ಮಾನಗಳು ಬರಬೇಕು, ಹೀಗಿಲ್ಲದಿದ್ದರೆ ಅವನು ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಾರನು ಎಂಬುದನ್ನು ತಿಳಿಸುತ್ತವೆ. ಜನಪದ ಸಮಾಜದಲ್ಲಿ ವಯಸ್ಸಿಗೆ, ಅನುಭವಕ್ಕೆ ಹೆಚ್ಚಿನ ಸ್ಥಾನ-ಮಾನವಿದೆ. ಹಿರಿಯರು, ಜ್ಞಾನಿಗಳು, ಅನುಭವಿಗಳು ಎನ್ನುವುದರ ಜೊತೆಗೆ ಅವರು ಜೀವನದಲ್ಲಿ ಕಷ್ಟ-ಸುಖಗಳನ್ನು ಅನುಭವಿಸಿದ, ಕಾದು-ಆರಿದ ಜನರು ಎಂಬುದನ್ನು ತೋರಿಸುತ್ತದೆ. ಅಂಥವರು ಕುಟುಂಬದ ಯಜಮಾನರಾದರೆ ಕುಟುಂಬದ ಆಗುಹೋಗುಗಳನ್ನು, ಹಣಕಾಸಿನ ವಿಷಯಗಳನ್ನು ಸೂಕ್ತವಾಗಿ ತೂಗಿಸಿಕೊಂಡು ಹೋಗಬಲ್ಲರು. ಅವರು ಅನನುಭವಿಗಳಾಗಿದ್ದರೆ ಇವು ಸೂಕ್ತವಾಗಿ ಸಾಗದೆ ತೊಂದರೆಯಾಗಬಹುದು. ಇಳಿವಯಸ್ಸಿನಲ್ಲಿ ತಮ್ಮ ದೇಹಾರೋಗ್ಯ, ಪಚನಶಕ್ತಿ ಮುಂತಾದವನ್ನು ಕಳೆದುಕೊಂಡ ಮುದುಕರಿಗೆ ಭೇದಿಯಾಗಲು ಪ್ರಾರಂಭವಾದರೆ, ಈ ತೊಂದರೆಯು ಎಷ್ಟು ಘೋರವಾಗುತ್ತದೆ ಎಂದರೆ ಅವರು ಇದರಿಂದ ಹೇಗೆ ಚೇತರಿಸಿಕೊಳ್ಳ

ಲಾರರೋ ಹಾಗೆ ಅನನುಭವಿಯ ಕೈಗೆ ಸಿಕ್ಕ ಮನೆತನವು ಸರಿಯಾಗಿ ನಡೆಯ ಲಾರದು.

ಗಾದೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಅವುಗಳನ್ನು ಹೊಂದಿರುವ ಜನರ ಸಂಸ್ಕೃತಿಯನ್ನು ಸರಿಯಾಗಿ ತಿಳಿದವರಿಗೆ ಮಾತ್ರ ಸಾಧ್ಯ. ಇವನ್ನು ಉಪ ಯೋಗಿಸುವವರಿಗೆ ಇವುಗಳ ಅರ್ಥ ತಿಳಿದಿರುವುದರಿಂದ ತಮ್ಮ ಮಾತುಗಳ ನಡುವೆ, ಬಾಯಿಬಿಟ್ಟು ಆಡದಂತಹ ಕೆಲವೊಂದು ಮಾತುಗಳನ್ನು ಹೇಳಲು ಅಥವಾ ಅನೇಕ ನೂರು ಅಥವಾ ಸಾವಿರ ಶಬ್ದಗಳಲ್ಲಿ ಹೇಳುವುದನ್ನು ಕೇವಲ ಒಂದು ಗಾದೆಮಾತಿನಲ್ಲಿ ಹೇಳಿಬಿಡುತ್ತಾರೆ. ಆದರೆ ಈ ಸಾವಿರ ಶಬ್ದಗಳ ಅರ್ಥ ವನ್ನು ತಿಳಿಯಲು ಆ ಸಂಸ್ಕೃತಿಗೆ ಸೇರಿದ ಜನರಿಗೆ ಮಾತ್ರ ಸಾಧ್ಯ. ಉದಾಹರಣೆಗೆ, "ಕುಲಸ್ಥರನ್ನು ಕೂಡಿದರೆ ಕೂಲಿ ಮಾಡುವುದು ತಪ್ಪದು"—ಎಂಬ ಗಾದೆಯನ್ನು ತೆಗೆದುಕೊಳ್ಳೋಣ. ಇಲ್ಲಿ ಕುಲಸ್ಥರೆಂದರೆ ತಮ್ಮ ಜಾತಿಗೇ ಸೇರಿದವರು. ಕೂಡಿ ದರೆ ಎಂದರೆ ಕೂಡವಳಿ ಮಾಡಿಕೊಂಡರೆ ಎಂದು ಅರ್ಥ. ಈ ಅರ್ಥದಲ್ಲಿ ನೋಡಿ ದರೆ ಈ ಗಾದೆಗೆ ಯಾವ ವಿಶೇಷ ಅರ್ಥವು ಇರುವುದಿಲ್ಲ. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು, ಈ ಗಾದೆಯನ್ನು ಉಪಯೋಗಿಸುವ ಸಂದರ್ಭ, ವ್ಯಕ್ತಿ, ಯಾರನ್ನು ಉದ್ದೇಶಿಸಿ ಆಡಿದ್ದು ಎಂದು ತಿಳಿದರೆ ಮಾತ್ರ ಸಾಧ್ಯವಾಗುತ್ತದೆ. ಇದು ಸಾಮಾನ್ಯವಾಗಿ ಒಬ್ಬ ಹೆಂಗಸು ವಿವಾಹವಾಗದೇ "ಇಟ್ಟುಕೊಂಡ ಹೆಣ್ಣಾಗಿ" ಬಾಳುತ್ತಿರುವ ಸಂದರ್ಭದಲ್ಲಿ ಬರುತ್ತದೆ. ಇಂತಹ ಹೆಂಗಸರು ಸುಖವಾಗಿ ಜೀವನ ಮಾಡುವ ಉದ್ದೇಶದಿಂದಲೇ ಬೇರೆ ಕುಲಕ್ಕೆ ಅಂದರೆ ಉಚ್ಚ ಕುಲಕ್ಕೆ ಸೇರಿದವರೊಡನೆ, ದೇಹಸಂಬಂಧವನ್ನಿಟ್ಟುಕೊಳ್ಳಬಯಸುತ್ತಾರೆ. ಏಕೆಂದರೆ ಈ ಉಚ್ಚ ಕುಲಸ್ಥರು ಆಸ್ತಿವಂತರು, ಹಣಸ್ಥರು ಮತ್ತು ರಸಿಕರು. ಇವರು ತಾವು ಇಟ್ಟುಕೊಂಡವಳನ್ನು ಉತ್ತಮವಾಗಿ ನೋಡಿಕೊಳ್ಳುತ್ತಾರೆ ಮಾತ್ರವಲ್ಲ ಇವಳಿಗೆ ಒಡವೆ-ವಸ್ತ್ರಗಳನ್ನು ನೀಡುವ ಶಕ್ತಿ ಕೂಡ ಇರುತ್ತದೆ. ಇದನ್ನು ಬಿಟ್ಟು ಈ ಹೆಣ್ಣು ತನ್ನಂತೆ ಬಡವರಾದ ತನ್ನ ಕುಲಸ್ಥನೊಬ್ಬನನ್ನು ಇಟ್ಟುಕೊಂಡರೆ ಅವನಂತೆ ಈಕೆಯೂ ಕೂಲಿಮಾಡಿ ಜೀವನ ಸಾಗಿಸಬೇಕಾಗುತ್ತದೆ. ಆದ್ದರಿಂದ ತಮ್ಮಲ್ಲಿ ಯಾರಾದರೂ ಹೆಂಗಸರು ಕುಲಸ್ಥನಲ್ಲಿ ಅನುರಕ್ತಳಾಗಿದ್ದರೆ ಈ ಆಧಾ ರದ ಮೇಲೆ ತೆಗಳಿ ಈ ವಿಷಯವನ್ನು ಆಕೆ ಕೈಬಿಡುವಂತೆ ಮಾಡುತ್ತಾರೆ. ಈ ಗಾದೆಯಿಂದ ಜನರಲ್ಲಿಯ ಅಭಿಪ್ರಾಯಗಳೂ ಮಾತ್ರವಲ್ಲದೆ ಜಾತಿಗಳ ಆರ್ಥಿಕ ಸ್ಥಾನ, ಸಮಾಜದಲ್ಲಿ ಇರಬಹುದಾದ ಬಸವಿ ಮುಂತಾದ ಪದ್ಧತಿಗಳು, ಬಡವರ ಶೋಷಣೆ, ಶ್ರೀಮಂತರ ದಬ್ಬಾಳಿಕೆ ಮುಂತಾದವನ್ನು ತೋರಿಸುತ್ತವೆ. ಹೀಗೆ ಅನೇಕ ರೀತಿಯಲ್ಲಿ ಅನೇಕ ಅರ್ಥವನ್ನೀಯುವ ಗಾದೆಯ ಅರ್ಥವನ್ನು ಪೂರ್ಣ ವಾಗಿ ತಿಳಿದು ಉಪಯೋಗಿಸಬೇಕಾಗುತ್ತದೆ. ಇಲ್ಲದಿದ್ದರೆ ಕುರುಬರ ಬಗ್ಗೆ

ಇರುವ "ಕುರುಬನಿಗೆ ಹೂ ಕೊಟ್ಟರೆ ಕುಂಡ್ಯಾಗಿಟ್ಟುಕೊಂಡ"– ಎನ್ನುವ ಗಾದೆ
ಮಾತಿನಂತೆ ತಪ್ಪು ಅಭಿಪ್ರಾಯ ತರುತ್ತದೆ. ಡಾ. ಹಂಡಿಯವರು ಹೇಳುವಂತೆ
ಕುರುಬರು ಕುರಿಮರಿಗಳನ್ನು ತಮ್ಮ ಬೆನ್ನಹಿಂದೆ ಕಟ್ಟಿಕೊಂಡು ಸಾಕುತ್ತಾರೆ.
ಅವರಿಗೆ ಕುರಿಗಳೇ ಭಾಗ್ಯ. ಆದ್ದರಿಂದ ತಮಗೆ ಏನಾದರೂ ಪವಿತ್ರವಾದದ್ದು
ಸಿಕ್ಕಾಗ ಅದನ್ನು ತಮ್ಮ ದೈವಸಮಾನವಾದ ಕುರಿಮರಿಗೆ ನೀಡುತ್ತಾರೆ. ಇದನ್ನು
ತಿಳಿಯದ ಜನರು ಅವನು ಅಸಂಸ್ಕೃತ, ಹೂವಿನ ಬೆಲೆ ತಿಳಿಯದವ – ಎಂದು
ಹೀಯಾಳಿಸುತ್ತಾರೆ. ಹೀಗೆ ಅನೇಕ ಗಾದೆಗಳ ಬಳಕೆ ಸಮಯೋಚಿತ ಅಥವಾ
ಸೂಕ್ತವಾಗಿರದಿರಬಹುದು. ಆದರೂ ಮಾತಿನ ನಡುವೆ ರೂಢಿಗತವಾದ ರೀತಿ
ಯಲ್ಲಿ ಬಳಸುತ್ತಾರೆ.

ಕೆಲವು ಗಾದೆಗಳು ಮನುಷ್ಯನ ಸ್ವಭಾವವನ್ನು ತಿಳಿಸುತ್ತವೆ. ಉದಾಹರಣೆಗೆ
"ಕೊಟ್ಟರೆ ವೆಂಕಣ್ಣ, ಕೊಡದಿದ್ದರೆ ಡೊಂಕಣ್ಣ", "ಒತ್ತಿದರೆ ಸರಿಯಣ್ಣ, ಸರಿ
ದರೆ ಒತ್ತಣ್ಣ" ಇತ್ಯಾದಿ. ಕೆಲವರು ತಮಗೆ ಬೇಕಾದಂತೆ ಅಥವಾ ತಮ್ಮ ನೇರಕ್ಕೆ
ವಿಷಯ ಬರದಿದ್ದರೆ ಮುನಿಸಿಕೊಳ್ಳುತ್ತಾರೆ. ಇವರು ಸ್ವಾರ್ಥಿಗಳು, ಅಲ್ಪರು,
ಯಾವುದೇ ಧ್ಯೇಯ–ಧೋರಣೆಯನ್ನು ಹೊಂದದವರು. ಇದೇ ರೀತಿ ಕೆಲವರು
ನಾವು ಬಗ್ಗಿದರೆ ನಮ್ಮ ಮೇಲೆ ಸವಾರಿಗೆ ಬರುತ್ತಾರೆ; ನಾವು ಎದ್ದರೆ ಅವರೇ ತಗ್ಗಿ
ಬರುತ್ತಾರೆ. ಇವರು ದೃಢಮನಸ್ಸಿನ ವ್ಯಕ್ತಿಗಳಲ್ಲ, ಸಜ್ಜನರೂ ಅಲ್ಲ. ಈ
ರೀತಿಯ ವ್ಯಕ್ತಿತ್ವ ಉಳ್ಳವರ ಬಗೆಗೆ ಹೇಳುವಾಗ ಈ ಗಾದೆಗಳನ್ನು ಬಳಸಲಾಗು
ವುದು. ಮತ್ತೊಂದು ಗಾದೆ "ಹೊತ್ತು ಬಂದಂತೆ ಕೊಡೆ ಹಿಡಿಯುವುದು"
ಎನ್ನುವುದು ಬುದ್ಧಿವಂತಿಕೆಯನ್ನು ತೋರಿಸುತ್ತದೆ. ಬಿಸಿಲಿನಿಂದ ತಪ್ಪಿಸಿಕೊಳ್ಳಲು
ಕೊಡೆ ಹಿಡಿಯುವುದು ಸ್ವಾಭಾವಿಕ. ಆದರೆ ಸೂರ್ಯನ ಚಲನೆಯಂತೆ ಅವನ್ನು
ಬದಲಾಯಿಸಿಕೊಂಡು ಹಿಡಿಯಬೇಕಾದದ್ದು ಬುದ್ಧಿವಂತಿಕೆಯ ಲಕ್ಷಣ. ಹೀಗೆ
ಮಾಡದಿದ್ದರೆ ಬಿಸಿಲಿನ ಝಳದಿಂದ ತಾಪಪಡಬೇಕಾಗುತ್ತದೆ. ಆದರೆ ಈ ಗಾದೆ
ಯನ್ನು ಇಷ್ಟು ಲಘುವಾದ ಅರ್ಥದಲ್ಲಿ ಉಪಯೋಗಿಸಿಲ್ಲ. ಜೀವನದಲ್ಲಿ ಅನೇಕ
ತೊಂದರೆ–ತೊಡಕುಗಳು ಬರುತ್ತವೆ. ಅನೇಕ ಗಣ್ಯರ ಸಹವಾಸದಲ್ಲಿರಬೇಕಾಗು
ತ್ತದೆ. ಆಗ ತಮಗೆ ಬೇಕಾದಾಗ ಬೇಕಾದವರ ತಾಳಕ್ಕೆ ತಕ್ಕಂತೆ ಕುಣಿಯದಿದ್ದರೆ
ನಮ್ಮ ಕೆಲಸವಾಗುವುದಿಲ್ಲ. ಇದನ್ನೇ ಬದಲಾವಣೆಗೆ ಹೊಂದಿಕೊಂಡು ಹೋಗು
ವುದು, ಬುದ್ಧಿವಂತಿಕೆ ಎನ್ನುತ್ತಾರೆ. ಆದರೆ ಈ ಮೇಲೆ ಹೇಳಿರುವ ಕೊಡೆ
ಹಿಡಿಯುವ ಗಾದೆಯು ವ್ಯಕ್ತಿಯ ಬುದ್ಧಿವಂತಿಕೆಗಿಂತ ಅವನು ತನ್ನ
ಅನುಕೂಲಕ್ಕೆ ತಕ್ಕಂತೆ, ಇತರರ ಕಷ್ಟಸುಖಗಳನ್ನು ನೋಡದೆ, ತನ್ನ ಅನುಕೂಲ
ಗಳನ್ನು ಮಾತ್ರ ಗಮನಿಸಿ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವುದನ್ನು
ತೋರಿಸುತ್ತದೆ. ಹೀಗೆ ಸ್ವಾರ್ಥಕ್ಕೆ ಹೆಣಗಾಡುವ ವ್ಯಕ್ತಿಯನ್ನು ಹೀಯಾಳಿ

ಸಲು ಈ ಗಾದೆಯನ್ನು ಬಳಸಲಾಗುವುದು. ಇದೇ ಅರ್ಥಬರುವ "ನಡು ನೀರಲ್ಲಿ ಕೈ ಬಿಟ್ಟಂತೆ" ಎನ್ನುವಂತಹ ಮಾತೂ ಬಳಕೆಯಲ್ಲಿದೆ.

ಈ ಅರ್ಥವಲ್ಲಿಯೇ ಬರುವ ಮತ್ತೊಂದು ಗಾದೆ ಎಂದರೆ "ಗಾಳಿ ಬಂದಾಗ ತೂರಿಕೊಳ್ಳಬೇಕು" ಎನ್ನುವುದು. ಗಾಳಿ ಬಂದಾಗ ತೂರಿಕೊಳ್ಳುವುದರ ನಿಜಾರ್ಥ ವ್ಯವಸಾಯಕ್ಕೆ ಸಂಬಂಧಿಸಿದ್ದು. ಇಲ್ಲಿ ರೈತನೊಬ್ಬ ಕಣಸುಗ್ಗಿ ಮಾಡಿ ಧಾನ್ಯ ಗಳನ್ನು ಹೊಟ್ಟಿನಿಂದ ಬೇರ್ಪಡಿಸಲು ಬೀಸುವ ಗಾಳಿಯ ಸಹಾಯ ತೆಗೆದು ಕೊಳ್ಳುತ್ತಾನೆ. ನಮಗೆ ಗೊತ್ತಿರುವಂತೆ ಗಾಳಿ ಬೀಸುವಾಗ ಕಣದಲ್ಲಿ ಹೊಟ್ಟು ಮಿಶ್ರಿತ ಧಾನ್ಯವನ್ನು ಮೊರ ಅಥವಾ ಪುಟ್ಟಿಗಳಲ್ಲಿ ತುಂಬಿ, ಭಂಟದಮೇಲೆ ನಿಂತು, ಗಾಳಿಗೆ ತೂರಿ ಬೇರ್ಪಡಿಸುತ್ತಾರೆ. ಕಣದಲ್ಲಿ ಈ ಕೆಲಸ ಪ್ರಾರಂಭವಾಗುವುದು ಬೇಸಿಗೆಯಲ್ಲಿ. ಆಗ ಗಾಳಿ ಬೀಸುವುದೇ ಕಡಿಮೆ. ಇಂತಹ ಸಂದರ್ಭದಲ್ಲಿ ರೈತರು ಗಾಳಿ ಬೀಸುವುದನ್ನೇ ಕಾದುಕೊಂಡು ಕೂಡಬೇಕಾಗುತ್ತದೆ. ಗಾಳಿ ಬಂದಾಗ ಬರಲಿ ಎಂದು ಬೇಜವಾಬ್ದಾರಿಯಿಂದ ಕಣ ಬಿಟ್ಟು ಹೋಗದೆ ಕಾದುಕೂಡಬೇಕು; ಗಾಳಿ ಬಂದಕೂಡಲೇ ತೂರಿಕೊಳ್ಳಬೇಕು. ಇದನ್ನು ಬಿಟ್ಟುಕೊಟ್ಟರೆ ತೊಂದರೆ ಯಾಗುತ್ತದೆ; ಕಾಲದ ಮತ್ತು ಶ್ರಮದ ವ್ಯರ್ಥವಾಗುತ್ತದೆ. ಅಲ್ಲದೆ ಗಾಳಿ ಮತ್ತು ಅದು ಬೀಸುವುದು ಕೂಡ ಸೃಷ್ಟಿಯ ನಿಯಮದಂತೆ ಎಂಬ ನಂಬಿಕೆ ಇದೆ. ಇಲ್ಲಿ ಮನುಷ್ಯನ ಶ್ರಮ ಬೇಕಿಲ್ಲ. ಕೃತಕವಾಗಿ ಗಾಳಿ ಬೀಸು ವಂತೆ ಮಾಡುವುದು ಸಾಧ್ಯವಾದರೂ ಇದು ಹೆಚ್ಚಿನ ತೊಂದರೆ ತರುವಂತಹದ್ದು. ಈ ಬುದ್ಧಿವಂತಿಕೆಯನ್ನೇ ಉಪಯೋಗಿಸಿಕೊಂಡು ಯಾರಾದರೊಬ್ಬ ವ್ಯಕ್ತಿ ತನಗೆ ಜೀವನದಲ್ಲಿ ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು. ಇಲ್ಲದಿದ್ದರೆ ಅವನು ಮೂರ್ಖನಾಗುತ್ತಾನೆ. ನಮಗೆ ಯಾವುದಾದರೂ ಒಂದು ಕೆಲಸವಾಗ ಬೇಕಾದರೆ ಎಲ್ಲಾ ರೀತಿಯಿಂದಲೂ ಇದು ಕೂಡಿಬರಬೇಕು. ಕೆಲವೊಂದು ವೇಳೆ ಅವಕಾಶಗಳಿದ್ದರೂ ನಾವು ಇವನ್ನು ಉಪಯೋಗಿಸಿಕೊಳ್ಳಲು ಸಿದ್ಧರಾಗಿರುವುದಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ನಾವು ಸಿದ್ಧರಿರುತ್ತೇವೆ, ಅವಕಾಶಗಳೇ ಇರುವು ದಿಲ್ಲ. ಆದ್ದರಿಂದ ರೈತರಂತೆ ನಮ್ಮ ಸಿದ್ಧತೆಯನ್ನು ಮಾಡಿಕೊಂಡು ಗಾಳಿ ಬರುವುದನ್ನೇ ಕಾಯುತ್ತಾ ಕೂಡುವುದು ಒಳ್ಳೆಯದು. ಇಲ್ಲದಿದ್ದರೆ ತೊಂದರೆ ಅನುಭವಿಸಬೇಕಾಗುತ್ತದೆ. ಇದೇ ಅರ್ಥದಲ್ಲಿ ಉಪಯೋಗಿಸುವ ಮತ್ತೊಂದು ಗಾದೆ ಎಂದರೆ "ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡಂತೆ" ಎನ್ನುವುದು.

ಜೀವನದಲ್ಲಿ ಎಲ್ಲರಿಗೂ ಎಲ್ಲಾ ಅನುಕೂಲತೆಗಳೂ ಇರುವುದಿಲ್ಲ. ಕೆಲವರಿಗೆ ಒಂದು ದೃಷ್ಟಿಯಲ್ಲಿ ಅನುಕೂಲತೆ ಇದ್ದರೆ ಮತ್ತೊಂದಿರುವುದಿಲ್ಲ. ಈ ಅರ್ಥದಲ್ಲಿ ಬರುವ ಗಾದೆ ಎಂದರೆ "ಹಲ್ಲಿದ್ದವರಿಗೆ ಕಡಲೆ ಇಲ್ಲ, ಕಡಲೆ ಇದ್ದವರಿಗೆ ಹಲ್ಲಿಲ್ಲ"

ಎಂಬುದು. ಇಲ್ಲಿ ಕೆಲವರಿಗೆ ಅವಕಾಶ, ಧನ, ಸೌಕರ್ಯ ಮುಂತಾದವುಗಳಿರುತ್ತವೆ. ಆದರೆ ಅವುಗಳನ್ನು ಪಡೆಯಲು ಅವರಿಗೆ ಸಾಧ್ಯವಾಗುವುದಿಲ್ಲ. ಇನ್ನುಳಿದವರಿಗೆ ಎಲ್ಲಾ ಸಲಕರಣೆಗಳೂ ಇರುತ್ತವೆ, ಆದರೆ ಅವಕಾಶಗಳಿರುವುದಿಲ್ಲ. ಗಾದೆಯ ನಿಜಾರ್ಥದಂತೆ ಕಡಲೆ ಗಟ್ಟಿಧಾನ್ಯ. ಇದನ್ನು ತಿನ್ನಲು ಗಟ್ಟಿ ಹಲ್ಲು ಬೇಕು. ಆದರೆ ಹಲ್ಲಿದ್ದವರಿಗೆ ಬಡತನ ಅಥವಾ ಮತ್ತಾವುದೇ ಕಾರಣದಿಂದ ಕಡಲೆ ತಿನ್ನಲು ಸಿಗುವುದಿಲ್ಲ. ಆದರೆ ಮುದುಕನೊಬ್ಬನ ಬಳಿ ಬೇಕಾದಷ್ಟು ಕಡಲೆ ಇರುತ್ತದೆ. ಆದರೆ ಅವನಿಗೆ ತಿನ್ನಲು ಸಾಧ್ಯವಿಲ್ಲ. ಹೀಗೆ ಅನೇಕರಿಗೆ ಅನೇಕ ಅನುಕೂಲತೆಗಳಿರುತ್ತವೆ. ಆದರೆ ಅವುಗಳನ್ನು ಉಪಯೋಗಿಸಲು ಬೇಕಾದ ಸಾಧನಗಳಿರುವುದಿಲ್ಲ. ಉದಾಹರಣೆಗೆ ಆರೋಗ್ಯವಿರುತ್ತದೆ ಉಣ್ಣಲು-ತಿನ್ನಲು ಇರುವುದಿಲ್ಲ. ಕೆಲವರಿಗೆ ತಿನ್ನಲು ಬೇಕಾದಷ್ಟಿರುತ್ತದೆ ಆದರೆ ತಿಂದು ಅರಗಿಸಿಕೊಳ್ಳಲು ಆರೋಗ್ಯವಿರುವುದಿಲ್ಲ. ಕೆಲವರಿಗೆ ಬೇಕಾದಷ್ಟು ಆಸ್ತಿ ಇರುತ್ತದೆ ಮಕ್ಕಳಿರುವುದಿಲ್ಲ, ರೂಪವಿರುತ್ತದೆ ಬುದ್ಧಿ ಇರುವುದಿಲ್ಲ, ಹೀಗೆ. ಇದನ್ನು ಜನಪದ ಸಮಾಜದಲ್ಲಿ ದುರದೃಷ್ಟವೆಂದೇ ತಿಳಿಯುತ್ತಾರೆ.

ಕೆಲವೊಂದು ಸಾಮಾಜಿಕ ಸನ್ನಿವೇಶಗಳಿಂದಾಗಿ ವ್ಯಕ್ತಿಯ ಸಂಬಂಧಗಳು ಮತ್ತು ನಡೆವಳಿಕೆಗಳು ಹೇಗೆ ಬೇರೆಯೇ ಆಗಿರುತ್ತವೆಂಬುದನ್ನು ತಿಳಿಸುವ ಕೆಲವು ಗಾದೆಗಳಿವೆ. ಉದಾಹರಣಾರ್ಥವಾಗಿ, "ಒಂದು ಹೆಣ್ಣಿದ್ದ ಮನೆಯಲ್ಲಿ ಮದುವೆಯಾಗಬಾರದು, ನೂರೇ ಹೊನ್ನಿದ್ದವನ ಹತ್ತಿರ ಸಾಲ ತರಬಾರದು" ಎಂಬ ಗಾದೆಯನ್ನು ತೆಗೆದುಕೊಳ್ಳಬಹುದು. ಯಾರಾದರೊಬ್ಬ ವ್ಯಕ್ತಿ ಮದುವೆಯಾಗುವುದು ಕೇವಲ ದೈಹಿಕಸಂತೋಷ ಪಡೆಯಲು ಮಾತ್ರವಲ್ಲ. ಇದೇ ರೀತಿ ಮದುವೆಯಾಗಿ ಬಂದವಳು ತನ್ನ ತವರನ್ನು ತಾತ್ಕಾಲಿಕವಾಗಿಯಾದರೂ ಮರೆತು, ತನ್ನ ಗಂಡನ ಮನೆಯಲ್ಲಿನ ಕಷ್ಟಸುಖಗಳಲ್ಲಿ ಭಾಗಿಯಾಗಬೇಕಾಗುತ್ತದೆ. ಇದನ್ನು ಮರೆತು ಆಗಾಗ ತನ್ನ ತವರಿಗೆ ಹೋಗಿ ಸಮಯ, ಶಕ್ತಿ ಮತ್ತು ಉಳಿಕೆಗಳನ್ನು ತವರಿನ ಮೇಲೆ ವ್ಯಯಮಾಡಬಾರದು. ಆಕೆಯ ಈ ನಡತೆಯಲ್ಲಿ ತವರಿನವರೂ ಅನೇಕ ವಿಧದಲ್ಲಿ ಸಹಕರಿಸಬೇಕಾಗುತ್ತದೆ. ಆದರೆ ಒಬ್ಬಳೇ ಮಗಳು ಎಂದು ಮೋಹದಿಂದ, ಅಂಕೆ ಇಲ್ಲದೆ ಬೆಳೆಸಿರುತ್ತಾರೆ. ಆಕೆಗೆ ಯಾವ ಗೃಹಕೆಲಸದಲ್ಲೂ ಪರಿಣತಿ ಇರುವುದಿಲ್ಲ. ಇಂತಹ ಸ್ತ್ರೀ ತವರಿನಲ್ಲಿ ಮಾತ್ರ ಪ್ರೀತಿಯ ಮಗಳು. ತನ್ನ ಅತ್ತೆಯ ಮನೆಯಲ್ಲಿಯ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳಲು ತೊಂದರೆಯಾಗುತ್ತದೆ. ಆಗ ಅಲ್ಲಿ ಬರುವ ಅಲ್ಪಸ್ವಲ್ಪ ತೊಂದರೆಗಳೇ ಆಕೆಗೆ ದೊಡ್ಡವಾಗುತ್ತವೆ ಮತ್ತು ಅವನ್ನು ತನ್ನ ತವರಿನೊಡನೆ ದೊಡ್ಡದಾಗಿ ಮಾಡಿ ಹೇಳಿಕೊಳ್ಳುತ್ತಾಳೆ. ತಮ್ಮ ಪ್ರೀತಿಯ ಮಗಳಿಗೆ ಬಂದ ಕಷ್ಟಗಳು ಅವರಿಗೆ ದೊಡ್ಡವಾಗಿ ಕಾಣುತ್ತವೆ. ಅಲ್ಲದೆ ಸಣ್ಣಪುಟ್ಟ ಕಾರಣಕ್ಕೆ ಮಗಳನ್ನು ತವರಿಗೆ

ಕರೆಯಲು ಬರುತ್ತಾರೆ. ಆದರೆ ಅನೇಕ ಹೆಣ್ಣುಮಕ್ಕಳನ್ನು ಹೊಂದಿದ ಕುಟುಂಬ ದಲ್ಲಿ ಇದಕ್ಕೆ ಅವಕಾಶವಿರುವುದಿಲ್ಲ. ಒಬ್ಬರನ್ನು ಒಂದೊಂದು ಹಬ್ಬಕ್ಕೆ, ಹೆರಿಗೆಗೆ ಕರೆತರುವುದೇ ಅವರಿಗೆ ಭಾರವಾಗುತ್ತದೆ. ಅಲ್ಲದೆ ಒಬ್ಬಳನ್ನೇ ಮೇಲಿಂದ ಮೇಲೆ ಕರೆತಂದರೆ ಉಳಿದ ಮಕ್ಕಳು ಸಿಟ್ಟಾಗುತ್ತಾರೆ. ಆಗ ತವರು ಹೆಣ್ಣುಮಕ್ಕಳಿಗೆ ಅಷ್ಟು ಪ್ರೀತಿಯದಾಗುವುದಿಲ್ಲ. ಅಲ್ಲದೆ ತವರಿಗೂ ಹೆಚ್ಚಿನ ಖರ್ಚಿಗೆ ದಾರಿಯಾಗುವು ದಿಲ್ಲ. ಈ ಎಲ್ಲಾ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಹಿರಿಯರು ತಮ್ಮ ಅನುಭವದಿಂದ ಇಂತಹ ಮನೆಯಿಂದ ಹೆಣ್ಣನ್ನು ತರಲು ಹಿಂಜರಿಯುತ್ತಾರೆ.

ಇದೇ ರೀತಿಯಲ್ಲಿ ಯಾರಾದರೂ ಸಾಲತೆಗೆದುಕೊಳ್ಳುವುದು ತಮ್ಮ ತೊಂದರೆ ಗಾಗಿ ಮತ್ತು ಇದನ್ನು ಹಿಂತಿರುಗಿಸುವುದು ತಮ್ಮ ತೊಂದರೆ ನೀಗಿದಮೇಲೆ. ಆದ್ದ ರಿಂದ ಸಾಲತರುವವರು ದೊಡ್ಡ ಶ್ರೀಮಂತರಿಂದ ತರುತ್ತಾರೆಯೇ ವಿನಾ ಸಣ್ಣವ ರಿಂದಲ್ಲ. ಏಕೆಂದರೆ, ಅಲ್ಪ ಹಣಸ್ಥನಾದ ಇವನಿಗೇ ಹಣದ ಅಡಚಣೆ ಬಂದರೆ ತಂದ ಸಾಲದ ಹಣ ಹಿಂದಕ್ಕೆ ಕೊಡಿ ಎಂದು ತಗಾದೆ ಮಾಡುತ್ತಾನೆ. ಆಗ ನಾವು ಸಾಲ ತಂದದ್ದು ಅನುಕೂಲವಾಗದೆ ಅನಾನುಕೂಲವಾಗುತ್ತದೆ. ಹೀಗೆ ಗಾದೆ ಗಳಲ್ಲಿ ವ್ಯಕ್ತಿಯ ನಡವಳಿಕೆಯ ಬಗ್ಗೆಯೂ ಒಳಅರ್ಥವಿರುತ್ತದೆ ಮತ್ತು ಇಂತಹ ಕೆಲಸಗಳಲ್ಲಿ ತೊಡಗುವುದಕ್ಕೆ ಮುಂಚೆ ಸೂಕ್ಷ್ಮವಾಗಿ ವಿಚಾರಮಾಡುತ್ತಾರೆ.

ಗಾದೆಗಳು ಅನುಭವದ ಆಧಾರದ ಮೇಲೆ ಹುಟ್ಟಿಬಂದವೆನ್ನುವುದಕ್ಕೆ ವ್ಯವ ಸಾಯಕ್ಕೆ ಸಂಬಂಧಪಟ್ಟ ಗಾದೆಗಳನ್ನೇ ತೆಗೆದುಕೊಳ್ಳಬಹುದು. ನಮ್ಮ ಹಳ್ಳಿ ಗಾಡಿನಲ್ಲಿ ವ್ಯವಸಾಯ ಬದುಕಿಗೆ ಸಂಬಂಧಪಟ್ಟ ಅನೇಕ ಗಾದೆಗಳಿವೆ. ಇವೆಲ್ಲವೂ ಅವರಿಗೆ ಮಾರ್ಗದರ್ಶನ ನೀಡುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಉದಾಹರಣೆಗೆ, "ರೋಹಿಣಿ ಬಂದರೆ ಓಣಿತುಂಬ ಜೋಳ", "ಮಿರಗ ಗುಡುಗ ಬಾರದು, ಸಾತಿ ಬರಬಾರದು", "ಸ್ವಾತಿ, ಪಿಶಾತಿ", "ಹುಬ್ಬಿ ಮಳೆ ಬಂದರೆ ಗುಬ್ಬಿಪುಕ್ಕ ತೋಯಲ್ಲ", "ಜಬರು ಮಳೆ ಮಳೆಯಲ್ಲ, ಒಬ್ಬ ಮಗ ಮಗನಲ್ಲ", "ಸಂಜೆ ಬಂದ ಮಳೆ ಮತ್ತು ನೆಂಟ ಹೋಗಲ್ಲ"— ಹೀಗೆ ಅನೇಕ ಗಾದೆಗಳಿವೆ. ಮೊದಲೇ ಹೇಳಿದಂತೆ ಇವು ಅನುಭವದಿಂದ ಬಂದ ಮಾತುಗಳು. ಇವುಗಳ ನಿಜಾಂಶವನ್ನು ತಿಳಿಯಬೇಕಾದರೆ ಋತುಮಾನಗಳು, ವ್ಯವಸಾಯ ಕೆಲಸ, ಅಲ್ಲಿ ಬೆಳೆಯುವ ಬೆಳೆ, ಜನರ ಸಂಸ್ಕೃತಿ ಇವುಗಳ ಬಗೆಗೆ ಸೂಕ್ಷ್ಮವಾಗಿ ಅಭ್ಯಾಸ ಮಾಡಿರಬೇಕು. ಉದಾಹರಣೆಗೆ, "ಕಾರಹಬ್ಬ ಮಾಡದೆ ಕೂರಿಗೆ ಹೊರತೆಗೆಯ ಬಾರದು" ಮತ್ತು "ಕಾರಬ್ಬ ಆದ ಮೇಲೆ ಕತ್ತೆ ಕೂಡ ಕಾರ್ಯಮಾಡಲ್ಲ" ಎಂಬ ಗಾದೆಗಳನ್ನು ತೆಗೆದುಕೊಳ್ಳೋಣ. ಚಿತ್ರದುರ್ಗ ಮತ್ತು ಅದರ ನೆರೆಯ ಜಿಲ್ಲೆ ಗಳಲ್ಲಿ ಪ್ರಚಾರದಲ್ಲಿರುವ ಈ ಗಾದೆಗಳು ವ್ಯವಸಾಯಕ್ಕೆ ಸಂಬಂಧಿಸಿದವು. ಕಾರ

ಹಬ್ಬ ಬರುವುದು ಮೇ ತಿಂಗಳಲ್ಲಿ. ಈ ನಾಡಿನಲ್ಲಿ ಮುಂಗಾರು ಮಳೆಗಳು ಭರಣಿಯಿಂದ ಪ್ರಾರಂಭವಾಗುತ್ತವೆ. ಇವರು ಬಿತ್ತುವ ಧಾನ್ಯಗಳಾದ ಜೋಳ, ರಾಗಿ, ಸೇಂಗಾ, ಹತ್ತಿ ಮುಂತಾದವು ಸುಮಾರು ಐದುತಿಂಗಳ ಬೆಳೆಗಳು. ಇವನ್ನು ಬಿತ್ತಲು, ಕಳೆ ಕೀಳಲು, ಎಡೆಕುಂಟೆ ಹೊಡೆಯಲು, ಕೊಯ್ಯಲು ಸೂಕ್ತಕಾಲ ಬೇಕಾಗುತ್ತದೆ. ಒಂದು ವಿಧದ ಪೈರಿನ ವ್ಯವಸಾಯ, ಕೆಲಸಗಳು ಮತ್ತೊಂದರೊಡನೆ ಬೆರೆಯುವಂತಿಲ್ಲ ಅಲ್ಲದೆ ಅನುಭವದ ಮೇಲೆ ರೈತರಿಗೆ ಗೊತ್ತಿರುತ್ತದೆ - ಯಾವ ದಿನ ಬಿತ್ತಿದರೆ ಪೈರು ಕೆಡಬಹ ದು ಅಥವಾ ಉತ್ತಮ ವಾಗಬಹುದೆಂದು. ಆದ್ದರಿಂದ ತಮ್ಮ ಅನುಭವವನ್ನು ಗಾದೆಗಳ ಮೂಲಕ ತಿಳಿಸುತ್ತಾರೆ.

ವ್ಯಕ್ತಿಯ ನಡವಳಿಕೆಯನ್ನು ಹೀಯಾಳಿಸಿ ತಿದ್ದಲೂ ಗಾದೆಗಳಿವೆ. ಉದಾ ಹರಣೆಗೆ "ಎತ್ತು ಏರಿಗೆ ಎಳೆಯಿತು, ಕೋಣ ನೀರಿಗೆ ಎಳೆಯಿತು"- ಎಂಬು ದನ್ನು ತೆಗೆದುಕೊಂಡರೆ ಇಲ್ಲಿ ಈ ಎರಡು ಪ್ರಾಣಿಗಳ ಸ್ವಭಾವ, ಜಾತಿ, ವಿಶೇಷ ಗುಣ, ಬೇಕುಬೇಡಗಳು ತಿಳಿಯುತ್ತವೆ. ಎತ್ತು ಕೋಣನಿಗಿಂತ ಸೂಕ್ಷ್ಮವಾದ ಪ್ರಾಣಿ. ಎರಡು ಎತ್ತುಗಳ ಬೇಸಾಯ ಹೂಡಿದರೆ ಉಳುವ ಕೆಲಸ ಸುಸೂತ್ರ ವಾಗಿ ನಡೆಯುತ್ತದೆ. ಕೆಲವು ಜನ ರೈತರು ತಮ್ಮ ಬಡತನ ಅಥವಾ ಮೂರ್ಖ ತನದಿಂದ ಒಂದು ಎತ್ತು ಮತ್ತು ಒಂದು ಕೋಣವನ್ನು ಬೇಸಾಯಕ್ಕೆ ಹೂಡಿದರೆ ಅವನ ಕೆಲಸ ಸರಿಯಾಗಿ ನಡೆಯಲಾರದು. ಎತ್ತು ಕೆಸರಿನಿಂದ ದೂರವಿರ ಬೇಕೆಂದರೆ ಕೋಣ ನೀರಲ್ಲಿ, ಕೆಸರಿನಲ್ಲಿ ಹಾಯಾಗಿ ಮಲಗಬೇಕೆನ್ನುತ್ತದೆ. ಆಗ ಈ ಎರಡೂ ತಮಗೆ ಬೇಕಾದ ದಿಕ್ಕಿನತ್ತ ಎಳೆಯುತ್ತವೆ ಮತ್ತು ಇವನ್ನು ಉಪ ಯೋಗಿಸುವ ರೈತನಿಗೆ ತೊಂದರೆ. ಈ ಗಾದೆಯನ್ನು ಸಾಮಾನ್ಯವಾಗಿ ಯಾವು ದಾದರೊಂದು ಕುಟುಂಬದವರು ಅಥವಾ ಗುಂಪಿನವರು ತಮ್ಮ ವೈಯುಕ್ತಿಕ ಮತ್ತು ಪ್ರತ್ಯೇಕ ಅಭಿಪ್ರಾಯಗಳನ್ನು ಮತ್ತು ಆಸೆ-ಆಕಾಂಕ್ಷೆಗಳನ್ನು ಬದಿಗಿರಿಸಿ, ಒಗ್ಗಟ್ಟಿನಿಂದ, ತಮ್ಮತಮ್ಮಲ್ಲಿ ಸಹಕಾರದಿಂದ ಹೋದರೆ ಅವರ ಜೀವನ ಸುಸೂತ್ರವಾಗುತ್ತದೆ; ಇದನ್ನು ಬಿಟ್ಟು ಅವರು ತಮಗೆ ಇಷ್ಟವಾದ ಕಡೆ ಎಳೆದರೆ ಅವರ ಬಾಳು ಕೂಡ ಎತ್ತು ಮತ್ತು ಕೋಣನ ಬೇಸಾಯ ಮಾಡುವವನ ಬದುಕಿನಂತೆ ತೊಂದರೆಯದಾಗುತ್ತದೆ. ಇದೇ ಅರ್ಥಬರುವಂತೆ ಉಪಯೋಗಿ ಸುವ ಮತ್ತೊಂದು ಗಾದೆಯಂತಹ ಮಾತಿದೆ "ಗಂಧದಕೊರಡಿಗೆ ಮತ್ತು ಜಾಲಿಕೊರಡಿಗೆ ಹೊಂದುತ್ತದೆಯೇ?"- ಎಂಬುದು. ಈ ಎರಡೂ ಬೇರೆಬೇರೆ ಜಾತಿಗೆ ಸೇರಿದ ಮತ್ತು ಬೇರೆ ಬೇರೆ ಕೆಲಸಗಳಲ್ಲಿ ತಮ್ಮದೇ ಆದ ಪ್ರಾಮುಖ್ಯತೆ ಯನ್ನು ಉಳ್ಳಂತಹ ಮರಗಳು. ಆದ್ದರಿಂದ ಜಾತಿಗೆ ಜಾತಿಯನ್ನೇ ಕೂಡಿಸಬೇಕೇ ಹೊರತು ಬೇರೆಯದನ್ನಲ್ಲ.

ನಾವು ಮೇಲೆ ತಿಳಿಸಿದಂತೆ ಗಾದೆಗಳು ಜೀವನದಲ್ಲಿ ಮುಟ್ಟದ ಕ್ಷೇತ್ರವಿಲ್ಲ, ಮಾಡದ ಕೆಲಸವಿಲ್ಲ, ನೀಡದ ನೀತಿ ಇಲ್ಲ, ಕೊಡದ ಜ್ಞಾನವಿಲ್ಲ ಎನ್ನಬಹುದು. ಆದರೆ ಗಾದೆಗಳನ್ನು ಎಲ್ಲರೂ ಸೂಕ್ತವಾಗಿ ಉಪಯೋಗಿಸಲಾರರು. ಇವು ಎಲ್ಲರ ಸೊತ್ತಾದರೂ ಕೇವಲ ಜಾಣರ ಅಸ್ತ್ರಗಳು. ಇವನ್ನು ಯಾವಾಗ, ಹೇಗೆ, ಯಾವ ಧ್ವನಿಯಲ್ಲಿ, ಯಾವ ರೀತಿಯಲ್ಲಿ (ಪೂರ್ತಿಯಾಗಿ ಅಥವಾ ಮೊಟಕಾಗಿ) ಉಪಯೋಗಿಸಬೇಕು ಎಂಬುದನ್ನು ತಿಳಿದವರು ಮಾತ್ರ ಸರಿಯಾಗಿ ಉಪಯೋಗಿಸುತ್ತಾರೆ. ಇವನ್ನು ನಗೆಹನಿಗಳಾಗಿ ಬಳಸಿಕೊಂಡು ಗುಂಪನ್ನು ನಗಿಸಲೂಬಹುದು. ಆದರೆ ಗಾದೆಗಳನ್ನು ಸರಿಯಾಗಿ ಉಪಯೋಗಿಸದಿದ್ದರೆ ತಾವೇ ನಗೆಪಾಟಲಿಗೆ ಗುರಿಯಾಗಬೇಕಾಗುತ್ತದೆ. ಒಂದೇ ಗಾದೆಯನ್ನು ಬುದ್ಧಿವಂತ ಮತ್ತು ದಡ್ಡ ಹೇಗೆ ಉಪಯೋಗಿಸಿ ತಮ್ಮ ಬುದ್ಧಿವಂತಿಕೆಯನ್ನು ತೋರಿಸಿಕೊಳ್ಳುತ್ತಾರೆಂಬುದನ್ನು ಈ ಕೆಳಗಿನ ಗಾದೆಯಲ್ಲಿ ಕಾಣಬಹುದು: "ಹೊಡೆದ ಹೊಲ ನೋಡು, ಕೊಟ್ಟ ಹೆಣ್ಣು ನೋಡು" ಎನ್ನುವ ಗಾದೆಯನ್ನು ತೆಗೆದುಕೊಂಡರೆ ಬಿತ್ತಲು ಹದವಾಗುವಂತೆ ಹೊಡೆದ ಹೊಲವು ಕಸ-ಕಡ್ಡಿಗಳಿಲ್ಲದೆ, ಹಳ್ಳ-ದಿಣ್ಣೆಗಳಿಲ್ಲದೆ, ಹೆಂಟೆ-ಕಲ್ಲುಗಳಿಲ್ಲದೆ, ನೋಡಲು ಅಂದವಾಗಿರುತ್ತದೆ. ಇದೇ ರೀತಿ ಕೊಟ್ಟ (ಮದುವೆ ನಿಶ್ಚಯವಾದ) ಹೆಣ್ಣು ಮೈಮೇಲೆ ಒಡವೆ-ವಸ್ತುಗಳನ್ನು ಹಾಕಿಕೊಂಡು, ಸಂತೋಷದಿಂದ ಮೈತುಂಬಿಕೊಂಡು, ಆನಂದದಿಂದಿರುತ್ತಾಳೆ. ಅಂಥ ಹೆಣ್ಣು ನೋಡಲು ಚಂದ ಎಂಬ ಅರ್ಥದಲ್ಲಿ ಸಾಮಾನ್ಯವಾಗಿ ಈ ಗಾದೆಯನ್ನು ಉಪಯೋಗಿಸುತ್ತಾರೆ. ಇದನ್ನೇ ಸ್ವಲ್ಪ ಬದಲಾಯಿಸಿ ಬುದ್ಧಿವಂತನೊಬ್ಬ "ಹೊಡೆದ ಹೆಣ್ಣು, ಕೊಟ್ಟ ಹೊಲ ತಿರುಗಿನೋಡಬಾರದು"– ಎಂದು ಹೇಳಿ ಎಲ್ಲರನ್ನು ನಗಿಸಬಹುದು. ಇದನ್ನೇ ಒಬ್ಬ ದಡ್ಡ– 'ಹೊಡೆದ ಹೆಣ್ಣು ನೋಡು, ಕೊಟ್ಟ ಹೊಲ ನೋಡು' ಅಥವಾ "ಹೆಣ್ಣು ಹೊಡೆದು ನೋಡು, ಹೊಲ ಕೊಟ್ಟು ನೋಡು" ಎಂದು ಹೇಳಿ ತಾನೇ ನಗೆಪಾಟಲಿಗೆ ಗುರಿಯಾಗಬಹುದು. ಹೀಗೆ ಜನಪದ ಸಮಾಜದಲ್ಲಿ ಗಾದೆಗಳಿಗೆ ತನ್ನದೇ ಆದ ಸ್ಥಾನ, ಅರ್ಥ, ಗಾಂಭೀರ್ಯ ಮುಂತಾದವುಗಳಿವೆ. ಅವುಗಳಿಂದ ಸಮಾಜಕ್ಕೆ ಅನೇಕ ಉಪಯೋಗಗಳಿವೆ. ಇತ್ತೀಚೆಗೆ ಇವುಗಳ ಬಳಕೆ ಕಡಿಮೆಯಾಗಿದ್ದರೂ ಅವು ತಮ್ಮ ಸ್ಥಾನ, ಅರ್ಥ ಮತ್ತು ಕಾರ್ಯವನ್ನು ಮಾತ್ರ ಕಳೆದುಕೊಂಡಿಲ್ಲ. ಸುಸಂಸ್ಕೃತರು ಇವುಗಳನ್ನು ತಮ್ಮ ಮಾತಿನಲ್ಲಿ ಉಪಯೋಗಿಸುವುದನ್ನು ಬಿಟ್ಟಿರುವರಾದರೂ ತಮ್ಮದೇ ಆದ ಹೊಸ ಅಥವಾ ಬದಲಾವಣೆಹೊಂದಿದ ಗಾದೆಗಳನ್ನು ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಗಾದೆಗಳ ಸಂಪತ್ತು ಬೆಳೆಯುತ್ತಿದೆ ಎನ್ನಬಹುದು.

ಕೊನೆಯದಾಗಿ ಗಾದೆಗಳ ಅಭ್ಯಾಸದ ಬಗೆಗೆ ಒಂದು ಮಾತು. ಈಗಾಗಲೇ ಹೇಳಿರುವಂತೆ ಜಾನಪದದ ಎಲ್ಲಾ ಪ್ರಭೇದಗಳಂತೆ ಗಾದೆಗಳನ್ನು ಅನೇಕರು

ಅನೇಕ ರೀತಿಯಲ್ಲಿ ಸಂಗ್ರಹಿಸಿದ್ದಾರೆ, ಅಭ್ಯಾಸಮಾಡಿದ್ದಾರೆ. ಕೆಲವರು ಗಾದೆಗಳನ್ನು ಅತ್ಯಂತ ಆಸ್ಥೆಯಿಂದ ಕಲೆಹಾಕುವ ಕೆಲಸ ಮಾತ್ರಮಾಡಿ ಉಪಕಾರ ಮಾಡಿದ್ದಾರೆ. ಕೆಲವರು ಗಾದೆಗಳನ್ನು ಆಳವಾಗಿ ಅಭ್ಯಾಸಮಾಡಲು ಹೋಗಿ ಅವುಗಳ ಅರ್ಥವನ್ನು ಕುಲಗೆಡಿಸಿದ್ದಾರೆ. ಹೀಗೆ ಜಾನಪದಭಂಡಾರವನ್ನು ಕುಲಗೆಡಿಸುವುದಕ್ಕಿಂತ ಸುಮ್ಮನೆ ಬಿಟ್ಟರೆ ಅವರಿಂದ ಜಾನಪದ ಸಾಹಿತ್ಯಕ್ಕೆ, ಜನಪದ ಸಮಾಜ-ಸಂಸ್ಕೃತಿಗೆ ಹೆಚ್ಚಿನ ಸೇವೆಯಾದಂತಾಗುತ್ತದೆ ಎನ್ನಬಹುದು. ಇಲ್ಲಿಯ ವರೆಗೂ ಜಾನಪದದ ಮೇಲೆ ನಡೆದಿರುವ ಅಭ್ಯಾಸಗಳು ಬಹುಮಟ್ಟಿಗೆ ಸಾಹಿತ್ಯ ಮತ್ತು ಅವುಗಳನ್ನು ಕಲೆಹಾಕುವ ದೃಷ್ಟಿಯಿಂದ ಮಾಡಿದವು. ಈವರೆಗೆ ಯಾವ ಸಾಮಾಜಿಕ ಶಾಸ್ತ್ರಜ್ಞನೂ ತಮ್ಮ ದೃಷ್ಟಿಯಿಂದ ಅಭ್ಯಾಸಮಾಡಿಲ್ಲವೆಂಬುದು ಮನಸ್ಸಿಗೆ ನೋವುತರುವಂತಹ ಅಂಶ. ಸದ್ಯಕ್ಕೆ ಅಲ್ಲಲ್ಲಿ ಇಂತಹ ಅಭ್ಯಾಸಗಳು ಪ್ರಾರಂಭವಾಗಿವೆ. ಪ್ರಿ. ಜಿ. ಬಿ. ಚೌಕೀಮಠರು "ಗಾದೆಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭ್ಯಾಸವನ್ನು ತಮ್ಮ ಪಿಎಚ್. ಡಿ., ಮಹಾಪ್ರಬಂಧದ ವಿಷಯವನ್ನಾಗಿ ತೆಗೆದುಕೊಂಡಿದ್ದಾರೆ. ಇಷ್ಟರಿಂದ ಜಾನಪದಸಾಹಿತ್ಯದ ಸಾಮಾಜಿಕ ಅಭ್ಯಾಸವಾದಂತಾಗುವುದಿಲ್ಲ. ಇನ್ನೂ ಹೆಚ್ಚು ಜನ, ಅನೇಕ ವಿಶ್ವವಿದ್ಯಾಲಯಗಳಲ್ಲಿ, ವಿವಿಧಶಾಸ್ತ್ರಗಳ ರೀತಿಯಲ್ಲಿ, ಜಾನಪದದಲ್ಲಿ ಅಭ್ಯಾಸಗಳನ್ನು ಪ್ರಾರಂಭಿಸಬೇಕು. ಆಗ ಮಾತ್ರ ಜನಪದ ಸಾಹಿತ್ಯಶ್ರೀಯ ನಿಜವಾದ ಅಭ್ಯಾಸ ಪ್ರಾರಂಭವಾದಂತಾಗುತ್ತದೆ.

ತಿಬ್ಬಳಿ

● ಹರಿನಾರಾಯಣ ಮಾಡಾವು

ಎಳವೆಯಲ್ಲಿ ತಿಳಿದದ್ದು–
ತಲೆಯೊಳಗೆ ಸುಳಿದದ್ದು
ಬಹಳ ಬಲ್ಲವನೆಂಬ ಬಲವು.
ಪಡೆದೆನೆನಿಸಿದ್ದೆಲ್ಲ
ತಡೆಯಿರದೆ ಮಾತಾಡಿ
ಹೊರಗೆಡಹುವಾನಂದ, ಗೆಲವು.
ಬಳೆಯುತ್ತ ಬಂದಂತೆ
ಅಮಿತ ಜ್ಞಾನದ ಒರತೆ
ಹೊಂದಲಾಗದ ಕೊರತೆ
ಅರಿತೆ… …
ಸ್ವಂತ ಸಾಧನೆ ಇನಿತೆ ?
ಮೌನ ಮೂಡಿತು, ಮತ್ತೆ
ಬದಲಾದ ನಿಲುವು :
ಗಳಿಕೆಗಳು ಸಾಲವೆಂಬ ತಿಳಿವು.

● ●

ಖಾಜಾ ಬಂದೇನವಾಜ

● ವಸಂತ ಕುಷ್ಟಗಿ

ಕಲಬುರ್ಗಿ ಪಟ್ಟಣವು ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಗಳಿಸಿದಂತೆ ಧಾರ್ಮಿಕವಾಗಿಯೂ ಘನತೆಯನ್ನು ಪಡೆದಿದೆ. ಈ ಘನತೆಗೆ ಕಾರಣರಾದವರಲ್ಲಿ ಹಜರತ್ ಖಾಜಾ ಬಂದೇನವಾಜರೂ ಒಬ್ಬರು.

ಹಜರತ್ ಖಾಜಾ ಬಂದೇನವಾಜರ ತಂದೆ ಸೈಯದ್ ಯೂಸುಫ್ ಹುಸೇನಿ ಉರ್ಫ ಷಾಹರಾಜೂ ಖತ್ತಾಲ್. ಹಜರತ್ ಮುಹಮ್ಮದ ಪೈಗಂಬರ ಅವರ ಅಳಿಯ ಹಜರತ್ ಅಲಿಯಿಂದ ೨೧ ನೆಯ (ಇಪ್ಪತ್ತೊಂದನೆಯ) ತಲೆಯವರು. ದಿಲ್ಲಿಯಲ್ಲಿಯ ಷೇಖಪುರಾದ ನಿವಾಸಿಗಳು. ಅಲ್ಲಿ ೪ ರಜಬ್ ಸನ್ ೭೨೧ ಹಿಜರಿಯ ಶುಭದಿವಸದಂದು, ಹಜರತ್ ಬಂದೇನವಾಜರು ಜನ್ಮವೆತ್ತಿದರು. ಇವರಿಗೆ ಹಿರಿಯರು 'ಸೈಯದ್ ಮೊಹಮ್ಮದ' ಎಂದು ನಾಮಕರಣ ಮಾಡಿದರು. ಈ ಮಗು ಬೆಳೆದು ಖ್ಯಾತಿ ಪಡೆಯುತ್ತ ಹೋದಂತೆ ಅವರನ್ನು "ಹಜರತ್ ಖಾಜಾ ಸದರೋದ್ದೀನ್ ವಲೀಯುಲ್ ಅಕಬರುಸ್ಸಾದಿಕ್ ಅಬುಲ್ ಫತೆ, ಸೈಯುದ್ ಮೊಹಮ್ಮದ ಹುಸೇನೀ ಗೇಸೂದರಾಜ ಷಹಾಬಾಜ ಬಂದೇನವಾಜ" ಎಂದು ಕರೆಯತೊಡಗಿದರು. ಅನಂತರ ಭಕ್ತರ ನಾಲಿಗೆಯ ಮೇಲೆ "ಬಂದೇನವಾಜ" ಎಂಬ ರೂಪ ನೆಲೆನಿಂತಿತು.

'ಬಂದಾನವಾಜ' ಈ ಹೆಸರಿನಲ್ಲಿಯ 'ಬಂದಾ' ಎಂದರೆ ಕೇಳುವವ ಅರ್ಥಾತ್ ಭಕ್ತ 'ನವಾಜ' ಎಂದರೆ ಕೊಡುವದ ದೊರೆ ಅರ್ಥಾತ್ ದೇವರು. ಅವರಿಗೆ ಈ ಔಚಿತ್ಯಪೂರ್ಣ ಹೆಸರು ಬರಲು ಒಂದು ಮಹಿಮಾಪೂರ್ಣ ಘಟನೆಯು ನಡೆಯಿತೆಂದು ಕೆಲವರು ಹೇಳುತ್ತಾರೆ. ಅದು: ಅವರ ಜೀವಿತ ಕಾಲದಲ್ಲಿ 'ಷೇಖ್ ಅಲ್ಲಾವುದ್ದೀನ ಜುನೇದಿ' ಎಂಬವನ ಸಂಬಂಧಿಕನೊಬ್ಬನಿಗೆ ಕಣ್ಣುಗಳು ಹೋಗಿದ್ದುವಂತೆ. ಇವರ ಕರುಣೆಯಿಂದ ಅವನಿಗೆ ಪುನಃ ಕಣ್ಣುಗಳು ಬಂದಾಗ ಆತನು ಭಕ್ತಿಪರವಶನಾಗಿ ಇವರನ್ನು 'ಬಂದೇನವಾಜ' ಎಂದು ಪ್ರಥಮ ಬಾರಿಗೆ ಕರೆದನಂತೆ. ಅಂದಿನಿಂದ ಇವರು ಎಲ್ಲರ ನಾಲಿಗೆಗಳ ಮೇಲೆ 'ಬಂದೇನವಾಜ'

ರಾದರಂತೆ. ಈ ಹೆಸರಲ್ಲದೆ ಇವರಿಗೆ 'ಅಬುಲ್‌ಫತಾ' ಎಂದೂ ಅವರ ಅತಿ ಸಮೀಪವರ್ತಿಗಳು ಸಲಿಗೆಯಿಂದ ಕರೆಯುತ್ತಿದ್ದರು.

ಹಜರತ್ ಬಂದೇ ನವಾಜರು ನಾಲ್ಕೈದು ವರ್ಷಗಳ ಬಾಲಕರಾಗಿದ್ದಾಗ ತಮ್ಮ ತಂದೆಯೊಡನೆ ದಿಲ್ಲಿಯಿಂದ ದೌಲತಾಬಾದಿಗೆ ಬಂದು ಕೆಲವುಕಾಲ ನೆಲೆಸಿದರು. ಅಲ್ಲಿ ತಮ್ಮ ಏಳೆಂಟರ ವಯಸ್ಸಿನಲ್ಲಿ ಅವರು ಖುರಾನ ಷರೀಫದ ಸಂಪೂರ್ಣ ೩೦ ಪಾಠಗಳನ್ನು (ಅಧ್ಯಾಯ) ಮುಖೋದ್ಗತ ಮಾಡಿ 'ಹಾಫೀಜ್' ಪದವಿಗೆ ಪಾತ್ರರಾದರು. ಹಾಫೀಜ್ ಎಂದರೆ ಖುರಾನ ಷರೀಫನ್ನು ಪೂರ್ಣ ಮುಖೋದ್ಗತ ಮಾಡಿಕೊಂಡವರಿಗೆ ಕೊಡುವ ಗೌರವದ ಬಿರುದು.

ತಂದೆಯ ಮರಣದ ನಂತರ ಬಂದೇನವಾಜರು ದಿಲ್ಲಿಗೆ ಮರಳಿ ಅಲ್ಲಿ ತಮ್ಮ ಅಜ್ಜನ (ತಾಯಿಯತಂದೆ) ಹತ್ತಿರ ಶಿಕ್ಷಣವನ್ನು ಮುಂದುವರೆಸಿದರು. ಅನಂತರ ಮೌಲಾನಾ ಅಷರ್ ಘುದ್ದೀನ ಕತೇಲಿ, ಮೌಲಾನಾ ತಾಜೋದ್ದೀನ್ ಬಹಾದ್ದೂರ್ ಮತ್ತು ಮೌಲಾನಾ ಖಾಜಿ ಅಬ್ದುಲ್ ಮುಖ್ತದರ್‌ಥಾನೇಶ್ರೀ ಎಂಬ ಗುರುಗಳ ಆಶ್ರಯದಲ್ಲಿ ಜಗತ್ತಿನ ಪರಿಚಯ ಮಾಡಿಕೊಂಡು ಲೌಕಿಕ ಜ್ಞಾನವನ್ನು ಸಂಪಾದನೆ ಮಾಡಿದರು. ಈ ಸಮಯಕ್ಕಾಗಲೇ ಅವರಿಗೆ ಸುಮಾರು ಹದಿನೈದು ವರ್ಷ.

ಹದಿನಾರನೆಯ ವಯಸ್ಸಿನ ಸುಮಾರಿಗೆ ಬಂದೇನವಾಜರ ಒಲವು ಆಧ್ಯಾತ್ಮದತ್ತ ಒಲಿಯಿತು. ಆಗ ಅವರು 'ಚಿರಾಗೇದೆಹಲಿ" (ದಿಲ್ಲಿಯ ಬೆಳಕು) ಎಂದು ಹೆಸರು ಪಡೆದಿದ್ದ ಹಜರತ್ ಪೀರ ನಾಸೀರುದ್ದೀನ್‌ರನ್ನು ತಮ್ಮ ಆತ್ಮಜ್ಞಾನ ಸಾಧನೆಯ ಗುರುವೆಂದು ಸ್ವೀಕರಿಸಿ ಬಹುಬೇಗನೇ ಪ್ರಗತಿಯನ್ನು ಸಾಧಿಸಿದರು. ಗುರುವಿನ ಅನುಗ್ರಹಕ್ಕೆ ಪಾತ್ರರಾಗಿ ಭಕ್ತಿ ಹಾಗೂ ಅಲ್ಲಾಹ್‌ನ ಜ್ಞಾನ ಸಂಪಾದನೆ ಮಾಡಿದರು. ಈ ತರಹದ ಜ್ಞಾನಸಂಪಾದನೆಗೆ "ತರಿಕತ್" ಎಂದು ಕರೆಯುತ್ತಾರೆ. ಇಂತಹ ಜ್ಞಾನಸಾಧನೆಯಿಂದ ಆತ್ಮನೈರ್ಮಲ್ಯವನ್ನು, ಪ್ರಾರ್ಥನಾ ಸಿದ್ಧಿಯನ್ನು ಹೊಂದಿ ಪವಿತ್ರಾತ್ಮರೆನಿಸಿಕೊಂಡರು. ಇದರಿಂದ ಗುರುವಿಗೆ ಈ ಶಿಷ್ಯನ ಮೇಲೆ ಅಪಾರವಾದ ಪ್ರೀತಿ ವಿಶ್ವಾಸಗಳು ಬೆಳೆದವು. ಅಂತೆಯೇ ಹಜರತ್ ಪೀರ್‌ನಾಸೀರುದ್ದೀನ್ ಚಿರಾಗೇ ದೆಹಲಿ ಪೈಗಂಬರವಾಸಿಯಾಗುವ ಮುನ್ನಾದಿನ ತಮ್ಮ ಪರಂಪರೆಗೆ ಇವರನ್ನು ಉತ್ತರಾಧಿಕಾರಿಯೆಂದು ಸಾರಿ 'ಖಲೀಫಾ' ರನ್ನಾಗಿ ಮಾಡಿದರು 'ಖಲೀಫಾ' ಎಂದರೆ ಮುರುಷದನ (ಗುರುವಿನ) ಅನುಗ್ರಹದ ಮೇರೆಗೆ ಬೇರೆಯವರನ್ನು ತಮ್ಮ ಮಾರ್ಗದತ್ತ ಆಕರ್ಷಿಸುವವರು ಮತ್ತು ಶಿಷ್ಯತ್ವ ಪ್ರದಾನ ಮಾಡುವ ಶಕ್ತಿಯನ್ನು ಹೊಂದಿದವರು ಎಂದು ಅರ್ಥ. ಇದು ನಡೆದದ್ದು ಬಂದೇನವಾಜರ ಮೂವತ್ತಾರನೆಯ ವಯಸ್ಸಿನಲ್ಲಿ. ಈ ವರೆಗೆ ಬೇಕಾದಷ್ಟು ಒಳ್ಳೆಯ ಸಂಸ್ಕಾರಗಳನ್ನು ಹೊಂದಿದ ಅವರು ತಮ್ಮ

ಗುರುವಿನ ನಿಧನದಿಂದ ಹತಾಶರಾಗಲಿಲ್ಲ. ತಮ್ಮ ಮುರುಷದರು ತಿಳಿಸಿಕೊಟ್ಟ ತತ್ತ್ವೋಪದೇಶಗಳನ್ನು ಗುರು ತೀರಿಕೊಂಡ ಮೂರನೆಯ ದಿವಸದಿಂದಲೇ ನಿರರ್ಗಳವಾಗಿ ಬೋಧಿಸತೊಡಗಿದರು. ಹೃದಯವನ್ನು ಗೆಲ್ಲುವ ನಿರ್ಮಲಾಂತಃ ಕರುಣೆಯ ಇವರ ತಪೋವಾಣಿಯು ಅಸಂಖ್ಯಾತಜನ ಶಿಷ್ಯರನ್ನು ಗೆದ್ದು ಕೊಂಡಿತು. ಅಂತಹರಲ್ಲಿ ಪ್ರಮುಖರೆಂದರೆ ಆಳಂದದ ಹಜರತ್ ಲಾಡಲೀಮ ಷಾಖ್ (ಬಂದೇನವಾಜರ ಚಿಕ್ಕಮ್ಮನ ಮಗ) ಮತ್ತು ಖುಬುಲುಲ್ಲಾ ಹುಸೇನಿ ಕಲಬುರಗಿ (ಬಂದೇ ನವಾಜರ ಮೊಮ್ಮಗ). ಇವರಿಬ್ಬರೂ ಈ ಪರಂಪರೆಯಲ್ಲಿ ಹಿರಿಯ ಸಂತರೆಂದೂ, ಖಲೀಫಾರೆಂದೂ ಘನತೆಯನ್ನು ಪಡೆದಿದ್ದಾರೆ.

ಹಜರತ್ ಖಾಜಾ ಬಂದೇನವಾಜರು ತಾಯಿಯ ಅಪೇಕ್ಷೆಯಂತೆ ತಮ್ಮ ನಲವತ್ತನೆಯ ವಯಸ್ಸಿನಲ್ಲಿ ಮದುವೆಯಾದರು. ಅವರ ಧರ್ಮಪತ್ನಿಯ ಹೆಸರು 'ಬೀಬೀ ರಜಾಖಾತೂನ'. ಇವಳು ಮೌಲಾನಾ ಮೊಹಮ್ಮದ ಜಮಾಲುದ್ದೀನ್ ಹುಸೇನಿ ಮಗರಬಿಯವರ ಪುತ್ರಿ. ಈ ಆದರ್ಶ ದಂಪತಿಗಳಿಗೆ ಬೀಬಿ ಫಾತಿಮಾ, ಬೀಬಿ ಖೋಂಜಾ ಬತೂಲ ಮತ್ತು ಬೀಬಿ ಖೋಂಜಾ ಇಮಾಮುದ್ದೀನ್ ಎಂಬ ಮೂವರು ಹೆಣ್ಣುಮಕ್ಕಳು. ಹಜರತ್ ಸೈಯದ್ ಮೊಹಮ್ಮದ್-ಅಕಬರ್ ಹುಸೇನಿ ಹಾಗೂ ಹಜರತ್ ಸೈಯದ್ ಮೊಹಮ್ಮದ್-ಅಸಗರ ಹುಸೇನಿ ಎಂಬ ಇಬ್ಬರು ಗಂಡು ಮಕ್ಕಳು. ಈ ಮಕ್ಕಳೆಲ್ಲ ತಂದೆಯಂತೆ ಸುಶೀಲರು.

ಸನ್ ೮೦೧ ಹಿಜರಿಯಲ್ಲಿ ಅಮೀರ ತೈಮೂರಲಂಗನ ನಿಮಿತ್ತವಾಗಿ ದಿಲ್ಲಿ ಯನ್ನು ಬಿಟ್ಟು ಹಜರತರು ದಕ್ಷಿಣಕ್ಕೆ ಬರಬೇಕಾಯಿತು. ದಾರಿಯಲ್ಲಿ ಅನೇಕರು ಇವರ ಪ್ರಭಾವಕ್ಕೊಳಗಾಗಿ ಶಿಷ್ಯರಾದರು. ಒಂದು ವರ್ಷದ ನಂತರ ಗುಜರಾತ ಪ್ರಾಂತದಲ್ಲಿ ಸಂಚಾರಮಾಡಿ ಅಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳ ಬಗ್ಗೆ ತಮ್ಮ ಪರಂಪರೆಯ ನೀತಿ-ನಿಲವುಗಳನ್ನು ಪ್ರಸಾರ ಮಾಡಿದರು. ಜೀವನಮೌಲ್ಯಗಳನ್ನು ತಿಳಿಸಿದರು. ಶಾಂತಿ-ಸಮಾಧಾನಗಳನ್ನು ಅನುಷ್ಠಾನಕ್ಕೆ ತಂದರು. ತಮ್ಮ ೮೩ನೆಯ ವಯಸ್ಸಿನಲ್ಲಿ ಪುನಃ ದೌಲತಾಬಾದಿಗೆ ಬಂದುನಿಂತರು.

ಆಗ ದಕ್ಷಿಣದಲ್ಲಿ ಫಿರೋಜಷಹಾ ಬಹಮನಿಯು ರಾಜ್ಯವಾಳುತ್ತಿದ್ದನು. ಖಾಜಾಬಂದೇನವಾಜರ ಖ್ಯಾತಿಯನ್ನು ಕೇಳಿದ್ದ ಅವನು ಅವರನ್ನು ಕಲಬುರ್ಗಿಗೆ ಆಹ್ವಾನಿಸಲು ಅವರು ಹಿಜರಿಸನ್ ೮೦೫ರಲ್ಲಿ ಕಲಬುರ್ಗಿಗೆ ಆಲಂದ ಮಾರ್ಗವಾಗಿ ಆಗಮಿಸಿದರು. ಆರಸರ ಬಿನ್ನಹದಂತೆ ಅಲ್ಲಿಯೇ ನೆಲೆನಿಂತರು. ಮುಂದೆ ಈ ಅರಸನು ಸೂಫಿ ಭಕ್ತಿಮಾರ್ಗವನ್ನು ಅಷ್ಟು ಒಪ್ಪಲಿಲ್ಲವೆಂದು ತೋರುತ್ತದೆ. ಅಂತೆಯೇ ಆ ಸಂತರ ಸಾಮೀಪ್ಯದಿಂದ ದೂರವಾಗತೊಡಗಿದನು. ಆದರೆ ಈ ದೊರೆಯ ತಮ್ಮ ಅಹಮ್ಮದ್‌ಷಹಾ ಮಾತ್ರ ನಿರ್ಮಲ ಮನಸ್ಸಿನಿಂದ ಇವರ

ಮಾರ್ಗವನ್ನು ಅನುಸರಿಸಿ ನಿಷ್ಠಾವಂತ ಭಕ್ತನಾದನು. ಗುರುವಿನ ಮೆಚ್ಚಿಕೆ ಪಡೆದು ಮುರೀದನಾದನು. ಗುರುವಿಗಾಗಿ 'ಖಾನಖಾಹಾ' ಕಟ್ಟಿಸಿದನು. ಭಕ್ತರಿಗಾಗಿ ಪ್ರಾರ್ಥನಾಮಂದಿರಗಳನ್ನು, ವಸತಿಗೃಹಗಳನ್ನು ನಿರ್ಮಾಣಮಾಡಿಸಿದನು. ಈ ಸೇವಾಫಲದಿಂದಲೋ ಏನೋ ಮುಂದೆ ಫಿರೋಜಷಾಹನ ನಂತರ ಹಸನನ ಬದಲಾಗಿ ಅಹಮ್ಮದಷಾಹನೇ ರಾಜ್ಯದ ಉತ್ತರಾಧಿಕಾರಿಯಾದನು. ಈ ಘಟನೆಯಿಂದ ಈಗಾಗಲೇ ಇದ್ದ ಅವನ ಗೌರವ, ವಿಶ್ವಾಸ, ಶ್ರದ್ಧೆಗಳು ಇಮ್ಮಡಿ ಮುಮ್ಮಡಿಯಾದುವು.

ಸಾಧನಾ ಜೀವಿಗಳಾದ ಬಂದೇನವಾಜರು ಇಸ್ಲಾಂ ಧರ್ಮದಲ್ಲಿ ಚಿಷ್ತಿಯಾ ಭಕ್ತಿಮಾರ್ಗಕ್ಕೆ ಸೇರಿದ ಮಹಾನುಭಾವರು. ಈ ಮಾರ್ಗದ ಮೂಲಪುರುಷ ಹಜರತ್ ಮೊಯಿನುದ್ದೀನ ಚಿಷ್ತಿ ಉರ್ಫ್ ಗರಿಬನ್‌ನವಾಜ ಅಜಮೀರಿ ಎಂಬವರು. 'ಚಿಷ್ತಿಯಾ' ಎಂಬುದನ್ನುಳಿದು ಈ ಧರ್ಮದಲ್ಲಿ ನಕ್ಸಬಂದಿಯಾ, ಸುಹರ್‌ವರ್ದಿಯಾ, ಖಾದರಿಯಾ ಎಂಬ ಇನ್ನೂ ಮೂರು ಭಕ್ತಿಮಾರ್ಗಗಳಿವೆ.

'ಚಿಷ್ತಿಯಾ' ಸಂಪ್ರದಾಯಕ್ಕೆ ಸೇರಿದ ಮುರುಷದ್ ತಮ್ಮ ಎಳೆತನದಿಂದಲೂ ಶುದ್ಧ ಆಚರಣೆಗೆ ಬಹಳ ಮಹತ್ವಕೊಡುತ್ತಿದ್ದರು. ತಪ್ಪದೆ ಪ್ರತಿದಿವಸ ಐದುಸಲ ನಮಾಜು ಮಾಡುತ್ತಿದ್ದರು. ಪ್ರತಿವರ್ಷ ರಜಬ್, ಷಾಬಾನ್, ರಮಜಾನ್ ಈ ತಿಂಗಳುಗಳಲ್ಲಿ ರೋಜಾ (ಉಪವಾಸ) ಇರಲು ಮರೆಯುತ್ತಿರಲಿಲ್ಲ. ಅದರಂತೆ ನಡೆನುಡಿಗಳನ್ನು ಒಂದಾಗಿಸಿಕೊಂಡು ಲೋಕಗುರುವಾಗಿ ಘನತೆಯಿಂದ ಬಾಳಿದರು.

ಬಂಜೆಯರಿಗೆ ಮಕ್ಕಳನ್ನು ಕರುಣಿಸಿ ತಾಯ್ತನ ಕಲ್ಪಿಸಿಕೊಟ್ಟ, ಸತ್ತ ಪ್ರಾಣಿಗಳನ್ನು ಮರಳಿಬದುಕಿಸಿದ ಅನೇಕ ಪವಾಡಗಳು ಇವರ ವಿಷಯವಾಗಿ ಕೇಳಿಬರುತ್ತವೆ. ಇವರು ಕಲಬುರ್ಗಿಯಲ್ಲಿಯೇ ಇರುತ್ತಿದ್ದು ಆತ್ಮಶಕ್ತಿಯ ಸೂಕ್ಷ್ಮಬಲದಿಂದ ಮಕ್ಕಾಕ್ಕೆ ಹೋಗಿ ಕಾಬಾದಲ್ಲಿ ಅದೆಷ್ಟೋ ಸಲ ನಮಾಜಿನ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರಂತೆ.

ಈ ದೈವಾಂಶಸಂಭೂತ ಸೂಫಿಸಂತ ಬಂದೇನವಾಜರು ನೀಡಿದ ಉಪದೇಶಗಳು ಅಮೂಲ್ಯವಾಗಿವೆ. ಅವು ತ್ರಿಕಾಲಕ್ಕೂ ಪರಮಪೂಜ್ಯ ವೇದವಾಕ್ಯಗಳು:

ದೇವನೊಬ್ಬ. ಆತನನ್ನು ಸೇರಲು ಮುಹಮ್ಮದ ಪೈಗಂಬರರು ತೋರಿದ ದಾರಿಯಲ್ಲಿ ಸಾಗುತ್ತ ಪ್ರಾರ್ಥನೆ ಸಲ್ಲಿಸುತ್ತಿರಬೇಕು. ಕುರಾನ ಪವಿತ್ರ ಪಠನೆಯಿಂದ ಪರಮಾತ್ಮನ ಜ್ಞಾನವು ಲಭಿಸುತ್ತದೆ.

ಜೀವನದಲ್ಲಿ ಎಲ್ಲದರಲ್ಲಿಯೂ ಮಿತಿಯಿರಬೇಕು. ಎಂದರೆ ಮಿತ ಆಹಾರ, ಮಿತವಚನ, ಮಿತ ನಿದ್ರೆಯಿಂದ ಆರೋಗ್ಯ ರಕ್ಷಣೆ ಹಾಗೂ ಅದರ ಮೂಲಕ ಪರಮಾತ್ಮನ ಜ್ಞಾನ, ಜೀವನಾಸಕ್ತಿಯನ್ನು ಇಟ್ಟುಕೊಂಡು ಸದಾ ಒಳಗಣ್ಣಿನಿಂದ ಪರಮಾತ್ಮನನ್ನು ಕಾಣುವ ಶಕ್ತಿಯನ್ನು ಪಡೆಯಬೇಕು. ಸದಾ ಭಗವಂತನ ಉಪಕಾರವನ್ನು ಸ್ಮರಿಸುತ್ತ ಮರಣಕ್ಕಾಗಿ ಹೆದರದೆ ನಸುನಗುತ್ತ ಸಿದ್ಧರಾಗಿರಬೇಕು.

'ಸ್ವಾಭಿಮಾನ' ಎಲ್ಲರಿಗೂ ಬೇಕಾದ ಶ್ರೇಷ್ಠಗುಣ. ಆದ್ದರಿಂದ ಯಾರ ಮುಂದೆಯೂ ತಲೆಬಾಗುವದು ಬೇಡ. ಇದನ್ನು ಕಾಪಾಡಿಕೊಳ್ಳಲು ಶ್ರೀಮಂತರಿಂದ ದೂರವಿರಬೇಕು. ಅದರಂತೆ ಅರಸರ ಬಳಿ ಸುಳಿಯಬಾರದು.

ಭಕ್ತರನ್ನು ಪರಮಾತ್ಮನಿಂದ ದೂರಗೊಳಿಸುವ ವಿದ್ಯೆಗಳಿಂದ ಬಹುದೂರವಿರಬೇಕು. ಜೀವನವು ಸರಳ ಸುಂದರವಾಗಿದ್ದು ಹೃದಯದಲ್ಲಿ ದೈತ್ಯಸಂಚಾರವಾಗದಂತೆ ನೋಡಿಕೊಳ್ಳಬೇಕು. ಬುದ್ಧಿ, ಮನಸ್ಸುಗಳನ್ನು ಪರಿಶುದ್ಧವಾಗಿಟ್ಟುಕೊಂಡರೆ ಪರಮಾತ್ಮನು ಒಳಗಣ್ಣಿಗೆ ಕಾಣುತ್ತಾನೆ.

ಲೋಕವ್ಯವಹಾರದ ಗಲಾಟೆಯಲ್ಲಿ ಪರಮಾತ್ಮನನ್ನು ಮರೆಯಕೂಡದು. ನಮ್ಮ ಪ್ರತಿಯೊಂದು ಚಲನವಲನದ ಮೇಲೆ ನಮ್ಮದೊಂದು ಕಣ್ಣು ಸದಾ ಕಾವಲಿರಬೇಕು. ಪಾಪ-ಪುಣ್ಯಗಳ ಬಗೆಗೆ ಚಿಕಿತ್ಸಕ ಬುದ್ಧಿಯಿರಬೇಕು. ಅನಾವಶ್ಯಕವಾದ ಹರಟೆಗಳಲ್ಲಿ ಅಮೂಲ್ಯವಾದ ಆಯುಷ್ಯವನ್ನು ಕಳೆಯಬಾರದು. ಯಾರನ್ನೂ ಅವರ ಹಿಂದೆಯಾಗಲಿ, ಮುಂದೆಯಾಗಲಿ ಹಳಿಯಬಾರದು. ಏಕೆಂದರೆ ನಡೆನುಡಿ ಪರಿಶುದ್ಧವಾಗಿದ್ದರೆ ಮಾತ್ರ 'ಅಲ್ಲಾಹ' ನಮಗೆ ಸನ್ನಿಹಿತನಾಗುತ್ತಾನೆ.

ಮನುಷ್ಯನು ತನ್ನನ್ನು ತಾನು ಗೌರವಿಸಿಕೊಂಡಂತೆ ತನ್ನ ತಂದೆ-ತಾಯಿಗಳನ್ನು, ಗುರುಗಳನ್ನು ಆದರ ಗೌರವಗಳಿಂದ ಕಾಣಬೇಕು. ಬಂಧು ಬಾಂಧವರ ಸೇವೆಯಲ್ಲಿ ಸವಿಯನ್ನು ಕಾಣಬೇಕು. ದಾನಧರ್ಮಗಳ ಹೊರತಾಗಿ ಬೇರೆ ಯಾವುದೂ ಬೆನ್ನಿಗೆ ಬಾರದು. ಒಂದುವೇಳೆ ಯಾರಾದರೂ ನಮ್ಮ ವಸ್ತುಗಳನ್ನು ಕಸಿದುಕೊಂಡರೆ ಅವುಗಳನ್ನು ಅವರಿಗೇನೇ ಮುಕ್ತ ಮನಸ್ಸಿನಿಂದ ಅರ್ಪಿಸಿಬಿಡಬೇಕು.

ದೇವರ ಕಣ್ಣಿಗೆ ಎಲ್ಲ ಜೀವಿಗಳೂ ಸಮ. ಅವರೆಲ್ಲ ಅವನ ಸಂತಾನ. ಅದಕ್ಕಾಗಿ ಲೋಕದಲ್ಲಿ ಜಾತಿ ಮತ ಪಂಥಗಳನ್ನು ಅಳಿಸಬೇಕು. ವಿಶ್ವಬಾಂಧವ್ಯ

ಸಾಧಿಸಲು ಸದಾ ಸೌಹಾರ್ದಮಯ ವಾತಾವರಣದಲ್ಲಿ ಬಾಳಬೇಕು. ಜೀವನದ ಕೊನೆಯ ಉಸಿರಿನವರೆಗೂ ದೇವರನ್ನು ಮರೆಯದೆ ನೆನೆಯುತ್ತಿರಬೇಕು".

ಹಜರತ್ ಬಂದೇನವಾಜರು ಮಾನವಕಲ್ಯಾಣಕ್ಕಾಗಿ ಮೈವೆತ್ತ ಭಕ್ತಿಭಂಡಾರಿಯಾಗಿದ್ದಂತೆ, ಸಾಹಿತ್ಯ ಭಂಡಾರಿಯೂ ಆಗಿದ್ದಾರೆ. ಅವರು ಬಾಳದ ಪವಿತ್ರದಾರಿಯ ಅನುಭವದ ತಳಹದಿಯ ಮೇಲೆ ಚೇತೋಹಾರಿಯಾದ ಭಕ್ತಿಸಾಹಿತ್ಯವು ಅವರಿಂದ ಸೃಷ್ಟಿಯಾಯಿತು. ಮೇಲೆ ವಿವರಿಸಿದ ಉಪದೇಶಗಳೂ, ಜೀವನ ತತ್ತ್ವಗಳೂ ಇಡಿಯಾಗಿ ಸುಮಾರು ೧೦೪ ಗ್ರಂಥಗಳಲ್ಲಿ ಮೂಡಿನಿಂತಿವೆ. ಇವರಿಗೆ ಫಾರ್ಸಿ, ಅರಬ್ಬೀ, ಉರ್ದು, ಸಂಸ್ಕೃತ ಮತ್ತು ಹಿಂದೀ ಭಾಷೆಗಳು ಕರತಲಾಮಲಕವಾಗಿದ್ದುವು. ಅವರು ಮೊದಮೊದಲು ಗ್ರಂಥಗಳನ್ನು ಫಾರ್ಸಿಭಾಷೆಯಲ್ಲಿಯೇ ಬರೆದು ಸತ್ವಯುತ ಲೇಖಕರೆನ್ನಿಸಿಕೊಂಡರು. ಆದರೆ ದಕ್ಷಿಣದಲ್ಲಿ ತತ್ತ್ವಪ್ರಸಾರಮಾಡುವಾಗ ಉರ್ದು ಭಾಷೆಯನ್ನು ತಮ್ಮ ಮಾಧ್ಯಮವನ್ನಾಗಿ ಸ್ವೀಕರಿಸಿ ಅನೇಕ ಶ್ರೇಷ್ಠ ಕೃತಿಗಳನ್ನು ರಚಿಸಿದರು. ಈ ಎಲ್ಲ ೧೦೪ ಗ್ರಂಥಗಳನ್ನು ಒಂದೇ ಸ್ಥಳದಲ್ಲಿದ್ದು ಬರೆಯಲಿಲ್ಲ. ದಿಲ್ಲಿಯಲ್ಲಿ ಕೆಲವು, ಪ್ರವಾಸದಲ್ಲಿದ್ದಾಗ ಕೆಲವು, ಗುಜರಾತದಲ್ಲಿದ್ದಾಗ ಕೆಲವು, ಕಲಬುರ್ಗಿಯಲ್ಲಿದ್ದಾಗ ಮತ್ತೆ ಕೆಲವು ಬರೆದವುಗಳಾಗಿವೆ. ಈ ಬಗ್ಗೆ ಇತಿಹಾಸದಲ್ಲಿಯೂ ಅನಂತರ ಬಂದ ಸಾಹಿತ್ಯಕೃತಿಗಳಲ್ಲಿಯೂ ಪ್ರಮಾಣಗಳು ದೊರೆಯುತ್ತವೆ.

ಇವರ ಸಾಹಿತ್ಯಕೃತಿಗಳಲ್ಲಿ "ಮೇರಾಜುಲ್ ಆಷಖೀನ್", "ಜವಾಮೇ ಉಲ್‌ಕಲಮ್", "ಆದಾಬುಲ್ ಮುರೀದಿಯೀನ್", "ಮುಷಾರಿಖುಲ್ ಅನ್ವಾರ್", "ಅಸ್ಮಾ ಉಲ್ ಇಸ್ರಾರ್", "ಖಲಿಫತ್ ನಾಮಾ", "ಖಾತಿಮಾ", "ಚಕ್ಕೀನಾಮು", "ತಿಲಾವತುಲ್ ವಜೂದ್" "ಷಿಕಾರ ನಾಮಾ" ಮೊದಲಾದುವು ಪ್ರಮುಖವಾದುವು.

"ಮೇರಾಜುಲ್ ಆಷಖೀನ್" ಎಂಬುದು ಉರ್ದು ಭಾಷೆಯಲ್ಲಿ ಇವರ ಚೊಚ್ಚಲ ಕೃತಿ. ಹಾಗೆಯೇ ಇದು ದಖ್ಖನೀ ಭಾಷೆಯ ಗದ್ಯಸಾಹಿತ್ಯದ ಚೊಚ್ಚಲ ಕೃತಿ. ಈ ಗದ್ಯಗ್ರಂಥವನ್ನು ಸುಮಾರು ಮೂವತ್ತೈದು ವರ್ಷಗಳ ಹಿಂದೆ ಬಾಬಾ–ಏ–ಉರ್ದು ಎಂಬವರು ಸಂಪಾದಿಸಿ ಬೆಲೆಬಾಳುವ ಉಪೋದ್ಘಾತದೊಡನೆ ಪ್ರಕಟಿಸಿದ್ದಾರೆ. ಈ ಗ್ರಂಥವು ಸೂಫಿ ತತ್ತ್ವನಿರೂಪಣೆ ಹಾಗೂ ಮಾನವತೆಯ ಮೌಲ್ಯಗಳನ್ನು ನಿರೂಪಿಸುತ್ತದೆ. ಷಬೆ ಮೇರಾಜದ ಆಧಾರದ ಮೇಲೆ ನಿಂತಿರುವ ಈ ಗ್ರಂಥದ ಶೈಲಿಯು ಗುರು ತನ್ನ ಶಿಷ್ಯನಿಗೆ ಬೋಧಿಸುವ ಸುಂದರ ಕ್ರಮವನ್ನು ಅವಲಂಬಿಸಿದೆ. ಇದನ್ನು ಹಿಂದಿನ ಶತಮಾನಗಳಲ್ಲಿ ಪ್ರಮಾಣಗ್ರಂಥವೆಂದು ಪರಿಗಣಿಸುತ್ತಿದ್ದರು. ಇವರ ಗದ್ಯ ಐನೂರು ವರ್ಷಗಳ ಹಿಂದಿನ ಭಾಷಾ ಸತ್ತ್ವ

ವನ್ನು ಎತ್ತಿತೋರಿಸುತ್ತದೆ. ಆದರಲ್ಲಿಯು ಕೆಲವು ಶಬ್ದಗಳು ಇಂದು ವ್ಯವಹಾರ ದಲ್ಲಿ ಸವಕಳಿಯನ್ನು ಕಂಡಿವೆ. ಅವುಗಳನ್ನು ಬಳಕೆಯಲ್ಲಿ ಉಳಿಸಿಕೊಳ್ಳುವ ಕೆಲಸ ನಮ್ಮದಾಗಿದೆ.

ಈ ಗ್ರಂಥದ ಮೊದಲನೆಯ ಅಧ್ಯಾಯದ ಕೆಲವು ವಾಕ್ಯಗಳನ್ನು ಮಾದರಿ ಗಾಗಿ ನೋಡಬಹುದು.

"ಖಾಲಾನಬೀ ಅಲೈಹಿಸ್ ಸಲಾಮು ! ಕಹೇ ಇನ್ಸಾನ್ಕೆ ಬೂಜನೇ ಕೂ ! ಪಾಂಜಾತನ್ ಹರ್ ಏಕ್ ತನ್ಕೊ ಪಾಂಚದರ್ವಾಜೇ ಹೈ! ಹೌರ ಪಾಂಚ ದರ್ಬಾನ್ ಹೈ ! ಪೈಲಾತನ್ ವಾಜಿಬುಲ್ ವಜೂದ, ಮುಖಾಂ ಉಸ್ಕಾ ಪೈತಾನಿ ! ನಫ್ಸ್ ಉಸ್ಕಾ ಅಮ್ಮಾರಾ ಯಾನೇ ವಾಜಿಬ್‌ಕೆ ಆಂ ಕಸೂಗೈರ್ ನ ದೇಖನಾಸು ! ಹಿರ್ಸಕೇ ಕಾನ್‌ಸೂಗೈರ್ ನಸುನ್ನಾಸು ! ಹಸದ್ ನಕ್ಸೂ ಬದ್‌ಬೋಯಿ ನಲೇ ನಾಸೂ ! ಕಿನಾಕೆ ಷಹವತ್ಕುಗೈರ್‌ಜಾಕಾ ಖರಚನಾಸೂ ! ಫೀರೇ ತಬೀಬ ಶಾಮಿಲ್ ಹೋನಾ ! ನಬ್ಜ ಪಛಾನಕೊ ದವಾದೇನಾ !"

— ಈ ಮಾತುಗಳ ಸಾಮಾನ್ಯ ಅರ್ಥ : 'ಪಂಚೇಂದ್ರಿಯಗಳ ಮೂಲಕ ಒಳ್ಳೆಯದನ್ನೇ ಆಡಿ ಕೇಳಿ, ಕಂಡು, ರುಚಿಸಿ, ಸ್ಪರ್ಶಿಸಿ, ಆಘ್ರಾಣಿಸಿ, ಸುಶೀಲ ರಾಗಿ ಸದ್ಗತಿಯನ್ನು ಹೊಂದಬೇಕೆಂಬುದೇ ಆಗಿದೆ. ಈ ಶರೀರಕ್ಕೆ ಐದು ಬಾಗಿಲು ಗಳಿವೆ. ಅವುಗಳನ್ನು ಕಾಯಲು ದ್ವಾರಪಾಲಕರಿದ್ದಾರೆ ಎಂದು ಹೇಳುವ ಈ ಮಾತುಗಳು ಅರ್ಥಪೂರ್ಣವಾಗಿವೆ. ಅಲ್ಲದೆ ಇಲ್ಲಿಯ ಗದ್ಯವು ಸಶಕ್ತವಾದುದು, ಸಾಮಾನ್ಯರ ಮನಸ್ಸನ್ನು ಸೆಳೆಯುವಂಥಹದು.

ಬಂದೇನವಾಜರು ಶಕ್ತಿಯುತ ಗದ್ಯಲೇಖಕರಿದ್ದಂತೆ, ಸತ್ವಯುತ ಪದ್ಯ ಗಳನ್ನು ರಚಿಸುವ ಶ್ರೇಷ್ಠಕವಿಗಳೂ ಅಹುದು. ಅವರ ಪದ್ಯಗಳು ಎಂತಹ ದೀನನ ಅಜ್ಞಾನಾಂಧಕಾರವನ್ನೂ ಹೊಡೆದೋಡಿಸುತ್ತವೆ.

ಪ್ರಮಾಣಕ್ಕೆಂದು ಸಧ್ಯ ಎರಡು ಪದ್ಯಗಳನ್ನು ನೋಡಬಹುದು :

"ಪಾನೀ ಮೇ ನಮುಕ್ ಡಾಲಬಸಾ ದೇಖನಾ ಕಿಸೆ
ಜಬ್ ಘುಲ್ ಗಯಾ ನಮುಕ್ ತೋ ನಮುಕ್ ಬೋಲನಾ ಕಿಸೆ"
"ಯು ಘೋಲೆ (घोले) ಖುದೀ ಅಪನೀ ಖುದಾ ಸಾಥ ಮುಸ್ತಫಾ
ಜಬ್ ಘುಲ್‌ಗಯೀ ಖುದೀ ತೋ ಖುದೀ ಬೋಲನಾ ಕಿಸೆ"

— ನೀರಿನಲಿ ಉಪ್ಪು ಬೆರೆಯಲು ಉಪ್ಪನ್ನು ಪ್ರತ್ಯೇಕ ಕಾಣಬಹುದೇ ? ಅಂತೆಯೇ ಭಕ್ತನು ಪರಮಾತ್ಮನಲ್ಲಿ ಒಂದಾದಮೇಲೆ ವ್ಯಕ್ತಿಗೆ ಪ್ರತ್ಯೇಕ ವ್ಯಕ್ತಿತ್ವ

ಬಾರದು, ಕಾಣದು; ಎಂಬ ಮಾತುಗಳಲ್ಲಿ ಪರಮಾತ್ಮನೊಡನೆ ಸಾಮರಸ್ಯ ಹೊಂದುವ ಬಗೆಗಿನ ಚಿತ್ರವು ರಮ್ಯವಾಗಿ ವರ್ಣಿತವಾಗಿದೆ. ಇಂತಹ ಭಾವ ಚಿಂತಾರತ್ನಗಳನ್ನು ಆಯ್ದುಕೊಂಡು ಎಲ್ಲ ಭಾಷೆಗಳಲ್ಲಿಯೂ ಅವುಗಳ ಬೆಳಕನ್ನು ಮೂಡಿಸುವಂತೆ ಮಾಡಿದರೆ ಬಹಳಷ್ಟು ಉಪಕಾರವಾಗುತ್ತದೆ.

ಹೀಗೆ ಹಜರತ್ ಬಂದೇನವಾಜರ ಗದ್ಯಪದ್ಯಗಳೆಲ್ಲ ಮಾನವತೆಯ ಮೌಲ್ಯವನ್ನು ತಿಳಿಸಿಕೊಡುವಲ್ಲಿ ಸಹಾಯಕಾರಿಯಾಗಿವೆ.

ವಿವಿಧ ಕ್ಷೇತ್ರಗಳಲ್ಲಿ ಹಜರತ್ ಬಂದೇನವಾಜರು ೧೩೨೧ ರಿಂದ ೧೪೨೨ ರ ವರೆಗೆ ತಮ್ಮ ಸಾಧನೆಗಳಿಂದ ಜನತೆಗೆ ಸುಮಾರ್ಗವನ್ನು ತೋರಿಸಿ ೧೬ ಝಿಕಾ, ಸನ್ ೮೨೫ ಹಿಜರಿಯಂದು ಪೈಗಂಬರವಾಸಿಗಳಾದರು. ಮುಂದೆ ಪ್ರತಿವರ್ಷ ಈ ದಿನವನ್ನು "ಉರೂಸ್" ಎಂದು ಭಕ್ತಾದಿಗಳು ಆಚರಿಸುತ್ತ ಬಂದಿದ್ದಾರೆ. "ಉರೂಸ್" ಎಂದರೆ ಭಕ್ತನು ಪರಮಾತ್ಮನಲ್ಲಿ ಸಾಮರಸ್ಯವಾದ ಅಥವಾ ಸದ್ಗತಿಯನ್ನು ಹೊಂದಿದ ಪುಣ್ಯದಿನ, ಪುಣ್ಯತಿಥಿ. ಅಷ್ಟೇ ಅಲ್ಲ ಈ ಶಬ್ದಕ್ಕೆ ಇನ್ನೂ ವಿಶಿಷ್ಟವಾದ ಅರ್ಥವೊಂದಿದೆ. ಮದುಮಗಳು ಮದುಮಗನನ್ನು ಸೇರುವ ಪ್ರಥಮ ಸಮಾಗಮದ ಗೌರವಯುತ ಶುಭಮುಹೂರ್ತವೆಂದು. ಇಲ್ಲಿ ಮದುಮಗಳು ಭಕ್ತ. ಮದುಮಗ ಅಲ್ಲಾಹ್–ಪರಮಾತ್ಮ. ಹೀಗೆ ಹಜರತ್ ಬಂದೇನವಾಜರು ಭಕ್ತಸತಿಯಾಗಿ, ಪರಮಾತ್ಮ ಪತಿಯನ್ನು ಸೇರಿದ ಉರೂಸಿಗೆ ಹಿಂದೂ, ಮುಸ್ಲಿಂ, ಶಿಖ್, ಇಸಾಯಿಗಳೆಂಬ ಪರಿಭೇದವಿಲ್ಲವೆ ಲಕ್ಷಾಂತರ ಜನರು ಪ್ರತಿವರ್ಷ ದಿಕ್ಕುದೇಶಗಳಿಂದ ಬಂದು ದರ್ಶನ ತೆಗೆದುಕೊಂಡು ಪಾವನರಾಗಿ ಹೋಗುತ್ತಾರೆ.

ಕಲಬುರ್ಗಿಜಿಲ್ಲೆಯ ಗೆಜೆಟಿಯರ್ ಪ್ರಕಾರ ಹಜರತ್ ಖಾಜಾ ಬಂದೇನವಾಜರು ೧೩೨೧–೧೪೨೨ರ ವರೆಗೆ ಅಂದರೆ ೧೦೧ ವರ್ಷಗಳ ಕಾಲ ಜೀವಿಸಿದ್ದರೆಂದು ತಿಳಿದುಬರುತ್ತದೆ. ಆದರೆ ಇನ್ನಿತರ ಕೆಲವು ಪುಸ್ತಕಗಳಲ್ಲಿ ಅವರು ೧೦೫ ವರ್ಷಗಳ ಕಾಲ ಬಾಳಿ ಬದುಕಿದರೆಂದು ಉಲ್ಲೇಖಿಸಲಾಗಿದೆ.

ಇವರ ಮಹಾಜೀವನದ ಪ್ರಮುಖಸಂಗತಿಯೆಂದರೆ ಅವರ ಸಮನ್ವಯ ದೃಷ್ಟಿ. ಅವರು ತಮ್ಮ ಸಮೃದ್ಧಜೀವನದಲ್ಲಿ ಪಂಥದವರನ್ನಷ್ಟೇ ಅಲ್ಲ, ಎಲ್ಲರನ್ನೂ ತಮ್ಮವರೆಂದೇ ಬಗೆದರು. ಇದಕ್ಕೆ ನಿದರ್ಶನವೆಂಬಂತೆ ಮೊದಲನೆಯ ಉರೂಸಿನಿಂದ ಇಂದಿನವರೆಗೂ ಇವರ ಪುಣ್ಯತಿಥಿಯ ಸಂದರ್ಭದಲ್ಲಿ ಗುಮ್ಮಜದ ಮೇಲೆ"ಝೋಲಾ" (ಪುಷ್ಪಗುಚ್ಛ) ಏರಿಸುವ, ಸಂದಲವನ್ನು (ಶ್ರೀಗಂಧವನ್ನು) ದರ್ಗಾಕ್ಕೆ ವೈಭವದಿಂದ ತೆಗೆದುಕೊಂಡು ಹೋಗುವಾಗ ಮಷಾಲ್ (ದೀವಟಿಗೆ) ಹಿಡಿದು ಬೆಳಕುಬೀರುವಭಾಗ್ಯ ಹಿಂದೂಭಕ್ತರಿಗೆ ಮೀಸಲಾಗಿದೆ. ಇಂತಹ ನೂರಾರು ಸತ್‌ಸಂಪ್ರದಾಯಗಳನ್ನು ಗುರುತಿಸಬಹುದು.

ಒಟ್ಟಾರೆ "ಹಜರತ್ ಖಾಜಾ ಸದರೋದ್ದೀನ್ ವಲೀಯುಲ್ ಅಕಬರುಸ್ಸಾದಿಕ್ ಅಬುಲ್‌ಫತೆ, ಸಯ್ಯದ್ ಮುಹಮ್ಮದ ಹುಸೇನೀ, ಗೇಸೂದರಾಜ, ಷಾಹಬಾಜ ಬಂದೇನವಾಜ"ರು ದಾರ್ಶನಿಕರಾಗಿ, ಋಷಿಗಳಾಗಿ, ಸಮನ್ವಯಶೀಲರಾಗಿ, ಸಮಾಜೋದ್ಧಾರಕರಾಗಿ, ಶ್ರೇಷ್ಠ ಗದ್ಯಲೇಖಕರಾಗಿ, ಪ್ರತಿಭಾನ್ವಿತ ಕವಿಗಳಾಗಿ, ಬಹುಭಾಷಾವಿಶಾರದರಾಗಿ, ಕರುಣಾಳುಗಳಾಗಿ 'ಸುಲ್ತಾನೇ ದಖನ್' 'ಖಾಜಾಯೋ ದಖನ್' ಎನ್ನಿಸಿಕೊಂಡು ಸರ್ವಕಾಲಗಳಿಗೂ ಬೇಕಾಗಿರುವ ಮಹಾವ್ಯಕ್ತಿ, ಮಹಾಶಕ್ತಿಯೆನಿಸಿದ್ದಾರೆ.

[ಆಕಾಶವಾಣಿ ಕೃಪೆಯಿಂದ]

ಆಧಾರ ಗ್ರಂಥಗಳು, ಪತ್ರಿಕೆಗಳು

೧. Gulbarga District Gazetteer—Govt. of India Publication.

೨. ಶರಣ ಸರೋಜ—ಕಲಬುರ್ಗಿ ಜಿಲ್ಲಾ ಕನ್ನಡಸಾಹಿತ್ಯ ಸಮ್ಮೇಲನ ಸ್ಮರಣ ಸಂಚಿಕೆ ೧೯೭೪.

೩. ಗುಲ್ಬರ್ಗಾ ಜಿಲ್ಲೆ—ಪ್ರೊ. ತವಗ. ಭೀಮಸೇನರಾವ್.

೪. ಮೇರಾಜುಲ್ ಆಷಖಿಯಿನ್—ಹಜರತ್ ಬಂದೇನವಾಜ.

೫. ರೂಹೇ ತಸವ್ವುಫ್.

೬. ಹಾಲಾತೇ ಖಾಜಾ ಬಂದೇನವಾಜ—ಸೈಯದ್‌ಷಾಹಾ ಮುಹಮ್ಮದ್‌ಹುಸೇನಿ ಸಜ್ಜಾದಾನಶೀನೀ ಬಂದೇನವಾಜ.

೭. ಸುಲ್ತಾನುಲ್ ಹಿಂದ್ (ಅಜಮೀರಿನ ಪತ್ರಿಕೆಗಳು).

೮. ರಾಬಿತಾ (ಉರ್ದು ವಾರಪತ್ರಿಕೆಗಳು).

ದ್ರಾವಿಡ ಭಾಷಾವಿಜ್ಞಾನ : ಒಂದು ವಿವೇಚನೆ

● ಚೆ. ರಾಮಸ್ವಾಮಿ

ಈ ಲೇಖನವ ಆದಿಯಲ್ಲೇ ಒಂದು ವಿಷಯವನ್ನು ವಿಶದಗೊಳಿಸಬೇಕಾಗುತ್ತದೆ. ಈ ಲೇಖನ ಪ್ರಸ್ತುತಗ್ರಂಥವ ಶುದ್ಧವಿಮರ್ಶೆಯೆಂದು ತಿಳಿಯಬಾರದು. ಗ್ರಂಥ ಪ್ರಕಟವಾದದ್ದು ೧೯೬೬ ರಲ್ಲಿ. ಈಗ ಮತ್ತೆ "ಪರಿಷ್ಕೃತ" ಗೊಂಡು ೧೯೭೧ ರಲ್ಲಿ ಪುನಃ ಮುದ್ರಣಗೊಂಡಿದೆ. ೧೯೬೬ ರ ಪ್ರತಿಯನ್ನು ಕಾಣುವ ಯೋಗ ಸಿಗಲಿಲ್ಲ. ಆದುದರಿಂದ ಇದು ಯಾವರೀತಿ ಪರಿಷ್ಕೃತವಾಗಿದೆಯೆಂದು ಹೇಳಲಾಗದು. ಆದರೂ ಈ ಗ್ರಂಥವನ್ನು ಓದಿದಾಗ ಈ ಲೇಖನವನ್ನು ಬರೆಯಲೇಬೇಕಾದ ಒತ್ತಾಯದಿಂದ, ಅನಿವಾರ್ಯವಾಗಿ ಬರೆಯಲಾಗಿದೆ. ಇಂಥ ಕೃತಿ ಕನ್ನಡದಲ್ಲಿ ಮೊದಲಬಾರಿಗೆ ಪ್ರಕಟವಾಗಿದೆ. ಇದರ ಆವಶ್ಯಕತೆಯೂ ವಿದ್ಯಾರ್ಥಿಲೋಕದಲ್ಲಿ ಹೆಚ್ಚಿದೆ. ಹೀಗಿರುವಾಗ ಈ ಕೃತಿ ಮತ್ತೊಂದು ಮುದ್ರಣ ಕಾಣುವುದು ತೀರ ಸಹಜ. ಆಗಲಾದರೂ ನಿಜವಾಗಿಯೂ "ಪರಿಷ್ಕೃತ" ಹೊಂದಿ ಹೊರಬರಲಿ ಎಂಬ ಆಸೆ.

ದ್ರಾವಿಡ ಭಾಷಾವಿಜ್ಞಾನ ಕ್ರಮವಾಗಿ ಕಾಲ್ಡ್ವೆಲ್ ಅವರಿಂದ ಪ್ರಾರಂಭವಾಗಿ ಗುಂಡರ್ಟ್, ಕಿಟ್ಟೆಲ್, ಎಲ್. ವಿ. ರಾಮಸ್ವಾಮಿ ಅಯ್ಯರ್, ಬರ್ರೋ, ಬ್ಲಾಖ್, ಮೀನಾಕ್ಷಿ ಸುಂದರಂ, ಮರಿಯಪ್ಪ ಭಟ್, ಭ. ಕಷ್ಣಮೂರ್ತಿ, ಭಟ್ಟಾಚಾರ್ಯ ಮುಂತಾದವರಿಂದ ಸುಪುಷ್ಟವಾಗಿ ಬೆಳೆದಿದೆ ನಿಜ. ಕನ್ನಡದಲ್ಲಿ ಈ ದಿಶೆಯಲ್ಲಿ ಕೆಲಸ ನಡೆದು ಅಲ್ಲಲ್ಲಿ ಹಲವಾರು ಲೇಖನಗಳು ಬಿಡಿಬಿಡಿಯಾಗಿ ಪ್ರಕಟಗೊಂಡಿದ್ದರೂ ಇಡಿಯಾಗಿ ಒಂದು ಗ್ರಂಥ ಪ್ರಕಟವಾಗಿರುವುದು ಬಹುಶಃ ಇದೇ ಮೊದಲಿರಬೇಕು. ಪ್ರಸ್ತುತ ಗ್ರಂಥದಲ್ಲಿ ಸ್ವಂತಿಕೆ ಏನೂ ಇಲ್ಲದಿದ್ದರೂ ವಿಷಯ ಸಂಗ್ರಹಣೆ ಸ್ವಲ್ಪ ಮೆಚ್ಚುವಂತಹುದೇ; ಆದರೆ ನಿರೂಪಣೆಯಲ್ಲಿ ಮಾತ್ರ ಸಾಕಷ್ಟು ತೂತುಗಳು ಉಳಿದು ಹೋಗಿದೆ. ನಿರೂಪಣೆ ತಾರ್ಕಿಕವಾಗಿಲ್ಲದೆ ಏರುಪೇರಾಗಿದೆ.

ಪ್ರಸ್ತುತ ಗ್ರಂಥದಲ್ಲಿ ಮೂರು ಭಾಗಗಳಿವೆ. ಮೊದಲ ಭಾಗ– ದ್ರಾವಿಡ ಭಾಷಾವಿಜ್ಞಾನದ ಹಿನ್ನೆಲೆ, ದ್ರಾವಿಡರು, ದ್ರಾವಿಡ ಭಾಷೆಗಳಿಗೂ ಬೇರೆ ಕುಟುಂಬದ

ಭಾಷೆಗಳಿಗೂ ಇರುವ ಸಂಬಂಧ ಹಾಗೂ ಪ್ರತಿದ್ರಾವಿಡ ಭಾಷೆಯ ಪರಿಚಯ ಇವುಗಳ ಬಗೆಗೆ ಇದೆ. ಎರಡನೆಯ ಭಾಗ– ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ. ಮೂರನೆಯ ಭಾಗ– ಮೂಲದ್ರಾವಿಡ ಭಾಷೆಯಧ್ವನಿವ್ಯವಸ್ಥೆ – ಇವುಗಳ ಬಗೆಗೂ, ಗ್ರಂಥದ ಕೊನೆಯ ಅಧ್ಯಾಯ (ಕನ್ನಡ) ಉಪಭಾಷಾ ಪರಿವೀಕ್ಷಣೆಯ ಬಗ್ಗೆಯೂ ಇವೆ.

ಮೊದಲ ಭಾಗದ ಅಧ್ಯಾಯಗಳಲ್ಲಿ ಮೊದಲ ಆರು ಅಧ್ಯಾಯಗಳು ದ್ರಾವಿಡ ಭಾಷೆಗಳ ಬಗೆಗೆ ಸಾಕಷ್ಟು ಪರಿಚಯ ನೀಡಿ ಸಾರ್ಥಕವಾಗಿವೆ. ಆದರೆ ಮುಂದೆ ಪ್ರತಿ ಭಾಷೆಯ ಬಗೆಗಿನ ಅಧ್ಯಾಯಗಳು (೬, ೭, ೮) 'ಕನ್ನಡ, ತಮಿಳು, ಮಲೆಯಾಳ' ಈ ಶಬ್ದಗಳ ಕೇವಲ ನಿಷ್ಪತ್ತಿಯನ್ನು ಹೇಳಿ ವಿರಮಿಸಿಬಿಡುತ್ತವೆ. ಇನ್ನು, ಶ್ರಾವಣ ಭಾಷೆಗಳ ವಿವರಗಳು ಕೇವಲ ಟಿಪ್ಪಣಿಗಳಾಗಿವೆ.

ಎರಡನೆಯ ಭಾಗವನ್ನು ದ್ರಾವಿಡಬಾಷೆಗಳ ತೌಲನಿಕ ವ್ಯಾಕರಣವೆಂದು ಕರೆದಿದ್ದರೂ ಅದು ಬರೀ ಕನ್ನಡ ವ್ಯಾಕರಣವಾಗಷ್ಟೇ ಉಳಿದಿದೆ. ಇಲ್ಲಿ ಯಾವ ತೌಲನಿಕ ಅಭ್ಯಾಸವನ್ನು ಕಾಣಲಾಗುವುದಿಲ್ಲ. ಈ ಗ್ರಂಥದಲ್ಲಿ ಉತ್ಕೃಷ್ಟ ಭಾಗ ವೆಂದರೆ ಮೂರನೆಯ ಭಾಗವಾದ "ಮೂಲ ದ್ರಾವಿಡ ಭಾಷೆಯ ಧ್ವನಿ ವ್ಯವಸ್ಥೆ". ಕೊನೆಯ ಅಧ್ಯಾಯವಾದ "ಉಪಭಾಷಾ ಪರಿವೀಕ್ಷಣೆ" ಲೇಖಕರ ತೀರ ಸ್ವಂತ ಅಭ್ಯಾಸವಿಲ್ಲಿದೆ. ಇದರಲ್ಲಿ, ಸೇಡಬಾಳ, ಮೈಸೂರು, ಧಾರವಾಡ, ಗೌರಿಬಿದನೂರು, ಕೋಲಾರ, ಮಂಡ್ಯ, ಅಂಕೋಲೆ ಮುಂತಾದ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಹಲವು ಶಬ್ದಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಭಾಷಾ ಪ್ರಭೇದಗಳ ತೌಲನಿಕ ಅಭ್ಯಾಸಕ್ಕೆ ಇದು ನಿಜಕ್ಕೂ ಉಪಕಾರಿ.

ಗ್ರಂಥಾಂತ್ಯದ ಪರಿಶಿಷ್ಟ: ೧, ಇಂಗ್ಲಿಷ್ ಗ್ರಂಥಸೂಚಿ ಸರಿ. ಆದರೆ ಪರಿಶಿಷ್ಟ: ೨ರ ತಲೆಬರಹ ಕನ್ನಡ ಗ್ರಂಥಸೂಚಿ ಎಂದಿದ್ದರೂ ಇದರಲ್ಲಿ ಅಡಕವಾಗಿರುವುದು ಕೇವಲ ನಾಲ್ಕು ಗ್ರಂಥಗಳಷ್ಟೆ. ಮಿಕ್ಕವೆಲ್ಲ ಲೇಖನಗಳೇ. ಇವುಗಳಲ್ಲೂ ಬಹಳಷ್ಟು ಲೇಖನಗಳಿಗೆ ಅವು ಪ್ರಕಟವಾದ ಇಸವಿಯನ್ನು ಕೊಟ್ಟಿಲ್ಲ. 'ಕನ್ನಡ ಲೇಖನ ಸೂಚಿ' ಎಂದು ಶೀರ್ಷಿಕೆ ಇದ್ದಿದ್ದರೆ ಒಪ್ಪುತ್ತಿತ್ತು.

ಗ್ರಂಥದಲ್ಲಿ ಕಂಡುಬರುವ ನ್ಯೂನತೆಗಳನ್ನು ಈ ಕೆಳಗೆ ಕೊಟ್ಟಿರುವ ಶೀರ್ಷಿಕೆಗಳ ಅಡಿಯಲ್ಲಿ ತರಬಹುದು.

೧. ವಿಷಯದ ಅಸ್ಪಷ್ಟತೆ
೨. ಅನಿಯತ ರೀತಿಯ ಸಂಕೇತ ಬಳಕೆ
೩. ತಪ್ಪುಗಳು

೪. ಹೆಸರುಗಳ ವಿಷಯದಲ್ಲಿ ದ್ವಂದ್ವ

೫. ವಿಚಿತ್ರ ವಾಕ್ಯಗಳು

೧ ವಿಷಯದ ಅಸ್ಪಷ್ಟತೆ

೧. ೦. ಗ್ರಂಥಾದಿಯಲ್ಲಿರುವ 'ಹಿನ್ನೆಲೆ' ಎಂಬ ಅಧ್ಯಾಯದಲ್ಲಿ "ತುಳು ಮತ್ತು ಕೊಡಗು ಭಾಷೆಗಳನ್ನು, ಅವು ಆದಿವಾಸಿ ಭಾಷೆಗಳಲ್ಲದ್ದರಿಂದ ಚಾಕ್ಷುಷ ಭಾಷೆಗಳ ಗುಂಪಿಗೆ ಸೇರಿಸಬಹುದು" (ಪು. ೫) ಎಂದು ಕೊಟ್ಟಿರುವ ವಿವರಣೆ ತಪ್ಪು. ಕಾರಣ ಚಾಕ್ಷುಷ ಮತ್ತು ಶ್ರಾವಣ ಭಾಷೆಗಳೆಂಬ ವರ್ಗೀಕರಣಕ್ಕೆ ಆದಿವಾಸಿ ಭಾಷೆ, ಅನಾದಿವಾಸಿ ಭಾಷೆಗಳೆಂಬುದು ಪ್ರಮಾಣವಲ್ಲ. ಹಾಗೆ ಲೇಖಕರೇ ಮುಂದೆ ಹೇಳುವಂತೆ 'ಬಡಗ'ರೂ ಕೂಡ ಕರ್ನಾಟಕದಲ್ಲಿ ನಾಗರಿಕರಾಗಿದ್ದು ಕಾರಣಾಂತರದಿಂದ ನೀಲಗಿರಿಗೆ ಹೋಗಿ ವಾಸಿಸುವ ಜನಾಂಗವಾದ್ದರಿಂದ ಬಡಗ ಕೂಡ ಆದಿವಾಸಿ ಭಾಷೆಯಲ್ಲ ಹಾಗೂ ಇದನ್ನೂ ಕೂಡ ಚಾಕ್ಷುಷ ಭಾಷೆಗಳ ಗುಂಪಿಗೆ ಸೇರಿಸಬೇಕಾಗುತ್ತದೆ. ಆದ್ದರಿಂದ ಈ ವರ್ಗೀಕರಣಕ್ಕೆ ಪ್ರಮಾಣ ಲಿಪಿಯುಳ್ಳ ಭಾಷೆ, ಲಿಪಿರಹಿತ ಭಾಷೆ ಎಂದೇ ತೆಗೆದುಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಚಾಕ್ಷುಷ, ಶ್ರಾವಣ ಎಂಬ ವರ್ಗೀಕರಣಕ್ಕೆ ಲೇಖಕರು ಕೊಡುವ ಆಧಾರಗಳು ಅಸಂಬದ್ಧ ಹಾಗೂ ತಪ್ಪುದಾರಿಗೆಳೆಯುವಂತಹವು.

೧.೧. ದ್ರಾವಿಡರು ಎಂಬ ಲೇಖನ ದ್ರಾವಿಡರ ಬಗೆಗೆ ಹೆಚ್ಚೇನನ್ನೂ ಹೇಳದೆ, ದ್ರಾವಿಡರು ಆರ್ಯರಿಗಿಂತ ಮೊದಲೇ ಭಾರತಕ್ಕೆ ಬಂದವರೆಂದು ಹೇಳಿ ವಿಶ್ರಮಿಸಿಬಿಡುತ್ತದೆ. ದ್ರಾವಿಡರೂ ಸಹ ಹೊರಗಡೆಯಿಂದ ಬಂದವರೆಂದ ಪಕ್ಷದಲ್ಲಿ ಭಾರತದಲ್ಲಿ ಯಾವ ಜನಾಂಗವೂ ಇರಲಿಲ್ಲವೇ ? ಹಾಗೆ ಹೊರಗಡೆಯಿಂದ ಬಂದ ಪಕ್ಷದಲ್ಲಿ ಎಲ್ಲಿಂದ ಬಂದರು ? ಯಾವ ಕಾಲದಲ್ಲಿ ಬಂದರು ? ಮುಂತಾದ ಪ್ರಶ್ನೆಗಳಿಗೆ ಇಲ್ಲಿ ಉತ್ತರವಿಲ್ಲ ಈ ವಿಷಯದಲ್ಲಿ ಇನ್ನೂ ಬಲವಾದ ಭಿನ್ನಾಭಿಪ್ರಾಯಗಳಿರುವಾಗ, ಈ ತೆರನಾದ ನಿರ್ಣಾಯಕ ವಾಕ್ಯಗಳು ಅರ್ಥಹೀನ.

೧.೨. 'ಕರ್ನಾಟಕ' ಶಬ್ದದ ವ್ಯುತ್ಪತ್ತಿಯ ವಿಷಯದಲ್ಲಿ ಲೇಖಕರ ವಿವರಣೆ ವೈಜ್ಞಾನಿಕವಾಗಿಲ್ಲ(ಪು. ೬೨). ಕರು + ನಾಡ + ಅ → ಕರ್ನಾಟ ಆಗುತ್ತದೆಯೇ ವಿನಾ ಕರ್ನಾಟ ಆಗುವುದಿಲ್ಲ. ಕರು + ನಾಡು + ಅಕ (?) → ಕರ್ನಾಡಕ ಆಗುತ್ತದೆಯೇ ಹೊರತು ಕರ್ನಾಟಕ ಅಲ್ಲ. ಈ 'ಅಕ' ಪ್ರತ್ಯಯದ ಅರ್ಥವನ್ನೂ ಹೇಳಿಲ್ಲ. ಜೊತೆಗೆ ಲೇಖಕರೇ ಹೇಳುವಂತೆ -ಡ > -ಟ ಆಗುವುದು. ಡ ಕಾರಾಂತ ಧಾತುಗಳು ಕೃದಂತ ಭಾವನಾಮವಾಗುವಾಗಲೇ ಹೊರತು ಡ ಕಾರಾಂತ ನಾಮ ಪ್ರಕೃತಿಗೆ -ಅ ಅಥವಾ -ಅಕ ಪ್ರತ್ಯಯ ಹತ್ತುವಾಗ ಅಲ್ಲ. ಈ ತೆರನಾದ ಬದ

ಲಾವಣಿಗೆ ಯಾವ ಆಧಾರವೂ ಇದ್ದಂತಿಲ್ಲ. ಒಟ್ಟಿನಲ್ಲಿ ಇಲ್ಲಿ ಕೊಟ್ಟಿರುವ ವಿವರಣೆ ಸಮಂಜಸವಾಗಿಲ್ಲ.

೧.೩. ೯೮ನೆಯ ಪುಟದಲ್ಲಿ ತಮಿಳು ಮತ್ತು ಆಂಗ್ಲಭಾಷೆಗಳ ವರ್ಣಮಾಲೆಯ ಅಶಕ್ತತೆ ಬಗ್ಗೆ ಹೇಳುತ್ತಾ "ಕನ್ನಡ ವರ್ಣಮಾಲೆಯಲ್ಲಿ ಈ ಗೊಂದಲ, ಗಾಬರಿಗಳು ಉಂಟೆ ?" ಎಂದು ಪ್ರಶ್ನಿಸಿದ್ದಾರೆ. ಭಾಷಾವಿಜ್ಞಾನ ವಿದ್ವಾಂಸರಾಗಿ ಹಂಪ.ನಾ ಅವರು ತಿಳಿಯಬೇಕಾದ್ದು ಇಷ್ಟು. ಭಾಷೆಗಳಲ್ಲಿ ಮೇಲು ಕೀಳು ಇಲ್ಲ. ತಮಿಳಿಗಿಂತ ಕನ್ನಡ ಯಾವ ವಿಧದಲ್ಲೂ ಮೇಲಲ್ಲ; ಆಂಗ್ಲ ಭಾಷೆಗಿಂತ ಕೀಳಲ್ಲ. ಯಾವುದೇ ಭಾಷೆ ಆ ಭಾಷೆಯ ಮಟ್ಟಕ್ಕೆ ಉತ್ತಮವೇ. ಯಾವುದೇ ಭಾಷೆಯ ವರ್ಣಮಾಲೆ ಆ ಭಾಷೆಯ ಒಂದು ಶಿಷ್ಟಭಾಷೆಯನ್ನು ಪ್ರತಿನಿಧಿಸಬಲ್ಲುದೇ ಹೊರತು, ಅದು ಜಗತ್ತಿನ ಎಲ್ಲ ಭಾಷೆಗಳನ್ನೂ ಪ್ರತಿನಿಧಿಸಬೇಕೆಂಬ ನಿಯಮವೇನೂ ಇಲ್ಲ. ಹಾಗೆ ನೋಡಿದರೆ ಕನ್ನಡವರ್ಣಮಾಲೆ ಕನ್ನಡದ ಉಪಭಾಷೆಗಳಾದ ಹವ್ಯಕ ಮತ್ತು ಗೌಡ ಕನ್ನಡಗಳನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತದೆಯೆ ? ಕನ್ನಡ ವರ್ಣ ಮಾಲೆಯ ಅಕ್ಷರಗಳಾದ 'ಪ', 'ಮ' ಗಳು ಮುದ್ರಣದಲ್ಲಿ ಒಂದು ತೆರನಾಗಿ, ಬರವಣಿಗೆಯಲ್ಲಿ ಒಂದು ತೆರನಾಗಿ ಬಳಕೆಯಲ್ಲಿವೆ. 'ಫ' ಅಕ್ಷರದ ಉಚ್ಚಾರಣೆ ವರ್ಣಮಾಲೆಯಲ್ಲಿ ಒಂದು ತರಹ, ಬಳಕೆಯಲ್ಲಿ ಒಂದು ತರಹ (ಉದಾ: ಕಾಫಿ). ಬಿಂದುವಿನ ಉಚ್ಚಾರಣೆ ಒಂದೊಂದು ವರ್ಗದ ವ್ಯಂಜನದ ಹಿಂದೆ ಒಂದೊಂದು ರೀತಿ. 'ವರ್ಣ' ಎಂಬ ಪದದಲ್ಲಿರುವ 'ರ್' ಅಕ್ಷರಕ್ಕೆ ಬರೆವಣಿಗೆಯ ಸ್ಥಾನ ಒಂದು ಕಡೆ, ಉಚ್ಚಾರಣೆಯ ಸ್ಥಾನ ಮತ್ತೊಂದು ಕಡೆ. ಇವೆಲ್ಲ ಕನ್ನಡವನ್ನು ಕಲಿ ಯುವ ವಿದ್ಯಾರ್ಥಿಗೆ ಗೊಂದಲವೇರ್ಪಡಿಸುವುದಿಲ್ಲವೆ ? ಇವೆಲ್ಲ ತಮಿಳು, ಮಲೆ ಯಾಳ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವಾಗ ನನ್ನ ಅನುಭವಕ್ಕೆ ಬಂದವು.

೧.೪. ೮೨ನೆಯ ಪುಟದಲ್ಲಿ ತಮಿಳು ವರ್ಣಮಾಲೆಯನ್ನು ಕೊಡಲಾಗಿದೆ. ಇಂದಿನ ತಮಿಳು ವರ್ಣಮಾಲೆಯ ಜ, ಸ, ಷ, ಹ, ಕ್ಷ ಇವಕ್ಕೆ ಸಂವಾದಿಯಾಗಿ ಲೇಖಕರು ಕೊಟ್ಟಿರುವ ಅಕ್ಷರಗಳನ್ನು ವರ್ಜಿಸಲಾಗಿದೆ. ಇವುಗಳನ್ನು 'ಗ್ರಂಥ' ಅಥವಾ 'ವಡ ಮೊೞಿ' ಎೞುತ್ತು ಎಂದು ಕರೆಯುತ್ತಾರೆ. ಇವು ಹೆಚ್ಚು ಮಣಿ ಪ್ರವಾಳ ಶೈಲಿಯಲ್ಲಿ ಬಳಕೈಯಲ್ಲಿದ್ದು ಇತ್ತೀಚಿನ ಚೆಂದಮಿೞ್‌ನಲ್ಲಿ ಪೂರ್ಣವಾಗಿ ಕೈ ಬಿಡಲಾಗಿದೆ. ಜೊತೆಗೆ ಲೇಖಕರು 'ಶ' ಕ್ಕೆ ಸಂವಾದಿಯಾಗಿ ಕೊಟ್ಟಿರುವ ಅಕ್ಷರ 'ಷ' ವೇ ಹೊರತು 'ಶ' ಅಲ್ಲ 'ಶ' ಧ್ವನಿ ತಮಿಳಿನಲ್ಲಿ ಇಲ್ಲ. ಸಂಸ್ಕೃತ ಶಬ್ದಗಳಲ್ಲಿ ಬರುವ 'ಶ' ಕ್ಕೆ 'ಚ' ಅಕ್ಷರವನ್ನೇ ಬಳಸುತ್ತಾರೆ.

೧.೫. ಮಲೆಯಾಳದಲ್ಲಿ ಪೂರ್ಣ ಕ್ರಿಯಾಪದದಲ್ಲಿ ಆಖ್ಯಾತ ಪ್ರತ್ಯಯಗಳು ೧೩, ೧೪ ನೇ ಶತಮಾನಗಳಲ್ಲಿ ಬಳಕೆಯಲ್ಲಿತ್ತೆಂದೂ, (ಲೀಲಾ ತಿಲಕಂ, ೯೭೭೪),

(ವಿ. ಆರ್. ಪಿ. ನಾಯರ್, ೧೯೬೨), ಮೂಲದ್ರಾವಿಡಭಾಷೆಯ ಕ್ರಿಯಾಪದಗಳಲ್ಲಿಯೂ ಸರ್ವನಾಮುವನ್ನು ಸೂಚಿಸುವ ಒಂದುತೆರನಾದ ಪ್ರತ್ಯಯವಿತ್ತೆಂದೂ (ಸುಬ್ರಹ್ಮಣ್ಯಂ, ೧೯೭೧) ಇತ್ತೀಚಿನ ವಿದ್ವಾಂಸರು ಸಾಧಾರವಾಗಿ ವಿವರಿಸಿದ್ದಾಗ್ಯೂ ಲೇಖಕರು ಈ ವಿಚಾರವಾಗಿ ಹೋದ ಶತಮಾನದ ವಾದವಿವಾದಗಳಲ್ಲೇ ಸಂತೃಪ್ತಿಹೊಂದಿರುವುದು ಶೋಚನೀಯ (ಪು. ೯೬).

೧.೬. ತೆಲುಗು ಭಾಷೆಯ ಬಗೆಗೆ ಹೇಳುತ್ತಾ (ಪು. ೧೦೪) "ಪದದ ಆದಿಯಲ್ಲಿ ಕ ಕಾರವಿದ್ದು ಅದರ ಮುಂದೆ ಏ ಎಂಬ ಸ್ವರವಿದ್ದು ಕೊನೆಯಲ್ಲಿ ಇ ಕಾರಾಂತ ವ್ಯಂಜನವಿದ್ದರೆ ಆಗ ಆದಿಯ ಕ>ಚ ಆಗುವಂತೆ ತೋರುತ್ತದೆ" ಎಂದಿದ್ದಾರೆ. ಮುಂದಿನ ಸಾಲಲ್ಲೇ "ಚೆಱುವು" ಎಂಬ ತೆಲುಗು ಪದ "ಕೆಱುವು" ಎಂಬ ಪದದಿಂದ ಬಂದಿದೆಯೆನ್ನುತ್ತಾರೆ. ಇಲ್ಲಿ ಇ ಕಾರಾಂತ ವ್ಯಂಜನವೆಲ್ಲಿದೆ? ಕೊಟ್ಟಿರುವ ನಿಬಂಧನೆಗಳಿಗೂ, ಉದಾಹರಣೆಗೂ ಸಂಬಂಧವಿಲ್ಲ.

೧.೭. "ತುಳು ಭಾಷೆಯ ಸಾಕಷ್ಟು ಸಂಖ್ಯೆಯ ಪದಗಳು ಕನ್ನಡದಿಂದಲೇ ಬಂದಿರುವುದು ಕಾಣುತ್ತದೆಯಲ್ಲದೆ ಕನ್ನಡದ ಬೆಳವಣಿಗೆಯ ಯಾವುದೋ ಒಂದು ಘಟ್ಟದಲ್ಲಿ ಪ್ರತ್ಯೇಕವಾದ ತುಳು ಭಾಷೆಯಾಗಿ ಬೆಳೆಯಿತೆಂದು ತೋರುತ್ತದೆ" (ಪು. ೧೧೯). ಆಧಾರ ರಹಿತವಾದ ಈ ಹೇಳಿಕೆಯಲ್ಲಿ ಏನೂ ಹುರುಳಿಲ್ಲ. "ತುಳು" ಪಂಚ ದ್ರಾವಿಡದ ಒಂದು ಭಾಷೆ. ಮೂಲದ್ರಾವಿಡದಿಂದ ಒಡೆದು ಬಂದ ಭಾಷೆಗಳಲ್ಲಿ ಕನ್ನಡಕ್ಕಿಂತಲೂ ಹೆಚ್ಚು ಪ್ರಾಚೀನತೆಯ ಕೆಲವೊಂದು ಅಂಶಗಳನ್ನು ತುಳು ಕಾಯ್ದಿರಿಸಿಕೊಂಡಿದೆ. ಮೂಲದ್ರಾವಿಡದ ಪುನರ್ರಚನೆಯ ಮೇಲೆ ಎಷ್ಟೋ ಬೆಳಕು ಬೀರಿದೆ. ಜೊತೆಗೆ ಇದು ಮಧ್ಯದ್ರಾವಿಡದ ಕೆಲವು ಅಂಶಗಳನ್ನು ಹೊಂದಿದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನೆರೆ ಭಾಷೆಯಾದ ಕನ್ನಡದ ಪ್ರಭಾವ ಅದರ ಮೇಲೆ ಆಗಿರುವುದು ಸಹಜ. ಕನ್ನಡಾಭಿಮಾನದಲ್ಲಿ ತುಳು ಒಂದು ಕಾಲದಲ್ಲಿ ಕನ್ನಡದ ಉಪಭಾಷೆಯಾಗಿತ್ತೆನ್ನುವುದು ಅವೈಜ್ಞಾನಿಕ.

೧.೮. ೧೧ನೇ ಪುಟದ ರೇಖಾ ಚಿತ್ರದಲ್ಲಿ ನಾಯ್ಕಿಯನ್ನು ಎರಡು ವರ್ಗಗಳಲ್ಲಿ (ಕೋಲಾಮಿ – ಪಾರ್ಜಿ ವರ್ಗ, ಗೋಂಡಿ – ಕೊಂಡವರ್ಗ) ಸೇರಿಸಲಾಗಿದೆ. ಇದು ನಿಜಕ್ಕೂ ಕೋಲಾಮಿ – ಪಾರ್ಜಿ ವರ್ಗಕ್ಕೆ ಸೇರಿದ್ದು.

೧.೯. "(೨) – (ಅ) ಅವರಿಂದ – ಅವರ್ – ಬಹುವಚನ ಪ್ರತ್ಯಯ. ಇಂದ – ತೃತೀಯಾ ವಿಭಕ್ತಿ ಪ್ರತ್ಯಯ" (ಪು. ೧೮೮).

ಇಲ್ಲಿ ಅವರ್ ಎಂಬುದು 'ಅವನ್' ಎಂಬ ಸರ್ವನಾಮದ ಬಹುವಚನ ರೂಪ -ಆರ್ ಎಂಬುದೇ ಬಹುವಚನ ಪ್ರತ್ಯಯ. ಅಲ್ಲಿಯೇ ಕೆಳಗೆ (೨)-(ಆ) ಸಂಖ್ಯೆಯ ಮುಂದೆ ವಿಷಯವೇನೂ ಇಲ್ಲ.

೧.೧೦."....ನಾವು ಈಗ ಅಕಾರಾಂತವೆಂದು ಭಾವಿಸಿರುವ ಶಬ್ದಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ಶಬ್ದಗಳೆಲ್ಲವೂ ಹಿಂದೆ ವ್ಯಂಜನಾಂತ ಪದಗಳಾಗಿದ್ದ ವೆಂದು ಕಾಣುತ್ತದೆ." (ಪು. ೧೯೧)

ಅಮ್ಮ < ಅಮ್ಮನ್
ಅಕ್ಕ < ಅಕ್ಕನ್
ಅಣ < ಅಣ್ಣನ್
ಕೊಳ < ಕೊಳನ್
ಮಗ < ಮಗನ್

ಆದುದರಿಂದ ವ್ಯಂಜನಾಂತ ಪದಗಳು ದ್ವಿತ್ವಗಳಾಗಿ ಅನಂತರ ಉಕಾರ ವನ್ನು ಪಡೆದುವೆನ್ನಬಹುದು. ಮೇಲಿನ ಯಾವ ಪದದಲ್ಲೂ ಕೊನೆಯ ವ್ಯಂಜನ ದ್ವಿತ್ವವಾಗಿಲ್ಲ. ಬದಲಾಗಿ ಕೊನೆಯ ವ್ಯಂಜನ ಬಿಟ್ಟುಹೋಗಿದೆ. ಲೇಖಕರ ವಿವರಣೆಯಂತಲ್ಲದೆ ನಿಜಕ್ಕೂ ಏಕಾಕ್ಷರ ವ್ಯಂಜನಾಂತ ಪದಗಳು ಮಾತ್ರ ದ್ವಿತ್ವ ವನ್ನು ಹೊಂದಿದೆ. (ಆದ್ಯಕ್ಷರದ ಸ್ವರ ಹ್ರಸ್ವವಾಗಿರಬೇಕು).

೧.೧೧. "ಅಕಾರಾಂತ ಪದಗಳಿಗೆ -ಮ್, -ನ್ ಅಷ್ಟೇಅಲ್ಲದೆ -ಅಳ್ ಕೂಡ ಸೇರುತ್ತದೆ:

ಅಕ್ಕಳ್
ಮಗಳ್ (ಪು. ೧೯೩).

ಮೇಲೆ ಹೇಳಿರುವಂತೆ 'ಅಕ್ಕ' ಎಂಬ ಅಕಾರಾಂತ ಪದಕ್ಕೆ ಅಳ್ ಪ್ರತ್ಯಯ ಸೇರಿದಂತೆ ಕಾಣುವುದಿಲ್ಲ. ಇಲ್ಲಿ ಅಕ್‌ಕ್- ಎಂಬುದಕ್ಕೆ -ಅಳ್ ಪ್ರತ್ಯಯ ಸೇರಿ ದಂತೆ ಕಾಣುತ್ತದೆ. ಉದಾ:

ಮಗಳ್ < ಮಗ್ + ಅಳ್
ಮಗನ್ < ಮಗ್ + ಅನ್
ಮಗು < ಮಗ್ + ಉ
ಮಕ್ಕಳ್ < ಮಗ್ + ಕಳ್

೧.೧೨. "ಕನ್ನಡದಲ್ಲಿ ಪಂಚಮೀ ವಿಭಕ್ತಿಯ ಪ್ರತ್ಯಯವಾಗಲಿ, ಪಂಚಮೀ ವಿಭಕ್ತಿಯೇ ಆಗಲಿ ಇಲ್ಲ". ಈ ವಾಕ್ಯದ ಉತ್ತರಾರ್ಧದಲ್ಲಿ ಹುರುಳಿಲ್ಲ.

ಲೇಖಕರೇ ಹೇಳುವಂತೆ "ಪುರಿಗೆಱಿಯುವ" ಎಂಬಲ್ಲಿ ತೃತೀಯಾ ವಿಭಕ್ತಿಯ ಪ್ರತ್ಯಯವನ್ನೇ ಪಂಚಮೀವಿಭಕ್ತಿಯ ಅರ್ಥದಲ್ಲಿ ಬಳಸಿದೆ". ಅಂದಮೇಲೆ ಕನ್ನಡದಲ್ಲಿ ಪಂಚಮೀವಿಭಕ್ತ್ಯರ್ಥವಿದೆಯೆಂದಾಯಿತು. ಒಂದೇ ಧ್ವನಿಮಾ ರೂಪದ ಪ್ರತ್ಯಯಗಳು ತೃತೀಯಾ ಹಾಗೂ ಪಂಚಮೀಗೆ ಬಳಕೆಯಲ್ಲಿದೆಯಷ್ಟೆ. ಮತ್ತೆ ಮುಂದಿನ ವಾಕ್ಯದ "ಆದುದರಿಂದ ವಾಸ್ತವವಾಗಿ ಕನ್ನಡದಲ್ಲಿ ಗ್ರಂಥದಲ್ಲಿಯಾಗಲಿ, ಜನರ ಆಡುಮಾತಿನಲ್ಲಾಗಲೀ ಪಂಚಮೀವಿಭಕ್ತಿಯ ಪ್ರಯೋಗ ಇಲ್ಲವಾದರೂ..." ಎಂಬ ಮಾತುಗಳು ಒಪ್ಪುವಂತಹವಲ್ಲ.

ಉದಾ : ಮರದಿಂದ ಮೇಜ ಮಾಡಿದನು.
ಮರದಿಂದ ರಾಮನು ಇಳಿದನು.

ಇವೆರಡು ವಾಕ್ಯಗಳಲ್ಲಿ – ಇಂದ ಪ್ರತ್ಯಯದ ಕ್ರಿಯೆ ಬೇರೆಬೇರೆಯೇ ಹೊರತು ಒಂದಲ್ಲ. ಅಂದರೆ ಇವೆರಡೂ – ಇಂದ ಪ್ರತ್ಯಯಗಳು ಬೇರೆಬೇರೆ ವಿಭಕ್ತ್ಯರ್ಥವನ್ನು ಕೊಡುತ್ತವೆ. ಎರಡನೆಯ ವಾಕ್ಯದಲ್ಲಿರುವುದು ಪಂಚಮೀ ಪ್ರಯೋಗವೇ ಹೊರತು ತೃತೀಯೆಯಲ್ಲ (ನೋಡಿ : ಕೆ. ಕುಶಾಲಪ್ಪಗೌಡ, ೭೪; ೧೯೭೨). ಲೇಖಕರು ಮುಂದಿನ ಪ್ಯಾರಾದಲ್ಲಿ ಕೊಟ್ಟಿರುವ ವಿವರಣೆ ಸರಿಯಲ್ಲ.

ಮತ್ತು ಮರದತ್ತಣಿಂ ಎಂಬ ಪದದಲ್ಲಿ – ಅತ್ತಣಿಂ ಎಂಬ ಪಂಚಮೀ ವಿಭಕ್ತಿ ಪ್ರತ್ಯಯವನ್ನು ತೆಗೆದುಹಾಕಿದರೆ ಮರದ – ಎಂಬ ಷಷ್ಠಿಯ ರೂಪ ಉಳಿಯುತ್ತದೆನ್ನುತ್ತಾರೆ. ನಿಜಕ್ಕೂ ಇಲ್ಲಿ ಉಳಿಯುವ ರೂಪ ಮರದ – ಅಲ್ಲ ಮರದ್ – ಅಷ್ಟೆ. ಮರ ಎಂಬ ನಾಮಪ್ರಕೃತಿಗೆ – ಅತ್ತಣಿಂ ಎಂಬ ಪ್ರತ್ಯಯ ಹತ್ತುವಾಗ – ದ್ – ಆಗಮವಾಗುತ್ತದೆಯೆಂದು ಹೇಳಬಹುದು. ತೃತೀಯೆ ಹಾಗೂ ಸಪ್ತಮಿಯಲ್ಲೂ ಹೀಗೆ ಆಗುತ್ತದೆ. ಉದಾ : ಮರದಿಂದ, ಮರದಲ್ಲಿ. ಎರಡು ವಿಭಕ್ತಿ ಪ್ರತ್ಯಯಗಳು ಒಂದೇ ಪದಕ್ಕೆ ಹತ್ತುವುದು ಕನ್ನಡಕ್ಕೆ ಸಹಜವಲ್ಲ.

"ಹುಲಿಯ ದೆಸೆಯಿಂದ ಭಯ" ಎನ್ನುವುದನ್ನು ಹುಲಿಯ ಭಯ ಎಂದು ಸುಲಭವಾಗಿಸಬಹುದು ಎನ್ನುತ್ತಾರೆ. ಹೀಗೆ ಮಾಡಿದರೆ ಅರ್ಥಸಂದಿಗ್ಧತೆಯೊದಗುತ್ತದೆ.

ಉದಾ : ಹುಲಿಯ ಭಯದಿಂದ ಸತ್ತನು.
ಹುಲಿಯ ಭಯವನ್ನು ಹೋಗಲಾಡಿಸಿದರು.

ಮೊದಲ ವಾಕ್ಯದಲ್ಲಿ ತಿಳಿಯುವುದು, ಅವನು ಸತ್ತದ್ದು ಹುಲಿಯಿಂದ ಉಂಟಾದ ಭಯದಿಂದ. ಎರಡನೆಯದು, ಅವರು ಹುಲಿಗಿದ್ದ ಭಯವನ್ನು ಹೋಗ

ಲಾಡಿಸಿದರು ಎಂಬುದನ್ನು ತಿಳಿಸುತ್ತದೆ. 'ಮನೆಯಿಂದ ಬಂದನು' ಎನ್ನುವುದನ್ನು "*ಮನೆಯು ಬಂದನು" ಎಂದೋ "*ಮನೆ ಬಂದನು" ಎಂದೋ ಹೇಳಲಾಗುವುದಿಲ್ಲ. ಜೊತೆಗೆ 'ಮನೆಯಿಂದ ಬಂದನು' ಎನ್ನುವುದು ತೃತೀಯಾ ವಿಭಕ್ತಿಯಾಗುವುದಿಲ್ಲ.

೧.೧೩. ತಮಿಳುಭಾಷೆಯಲ್ಲಿ ಷಷ್ಠೀವಿಭಕ್ತಿಯ ಪ್ರತ್ಯಯವಾಗಿ -ಅ ಮಾತ್ರವಲ್ಲ -ಅದು ಎಂಬುದೂ ಮೊದಲಿಂದಲೇ ರೂಢಿಯಲ್ಲಿವೆ. ತೊಲ್ಕಾಪ್ಪಿಯದಲ್ಲಿ -ಅದು ಪ್ರತ್ಯಯವನ್ನು ಮಾತ್ರ ಹೇಳಿದೆ "......ಪುರನಾನ್ನೂರ್ ವರೆಗೆ -ಅ ಎಂಬುದೇ ಷಷ್ಠಿಯ ರೂಪವಾಗಿ ಪ್ರಯೋಗವಾಗಿದೆ" (ಪು. ೨೦೭) ಎಂಬ ಮಾತು ಅರ್ಥಹೀನ (ಎಸ್. ವಿ. ಷಣ್ಮುಗಂ, ೧೯೭೧; ೨೭೦).

೧.೧೪. ತಮಿಳಿಗೆ ಷಷ್ಠೀವಿಭಕ್ತಿಪ್ರತ್ಯಯವಾಗಿ -ಅ ಮಾತ್ರವನ್ನು ಕೊಟ್ಟಿದೆ (ಪು. ೨೦೯). ಇದೇ ಪುಟದಲ್ಲಿ "ಷಷ್ಠೀವಿಭಕ್ತಿಯ ಮತ್ತೊಂದು ವೈಶಿಷ್ಟ್ಯವೆಂದರೆ ಉಳಿವ ಎಲ್ಲ ವಿಭಕ್ತಿಗಳೂ ಅದರ ಮೇಲೆ ಹತ್ತುವುದು" ಎಂದಿದೆ. ಈ ಅಭಿಪ್ರಾಯವನ್ನು ಪ್ರಥಮಾ, ದ್ವಿತೀಯಾವಿಭಕ್ತಿಗಳಿಗೆ ಅನ್ವಯಿಸಲಾಗುವುದಿಲ್ಲ (ನೋಡಿ: ೧.೧೨).

೧.೧೫. "ಇಂದೂ ಆಡುನುಡಿಯಲ್ಲಿ ಈ ದೀರ್ಘ -ಅಲಿ ಪ್ರತ್ಯಯ ಬಳಕೆಯಲ್ಲಿದೆ:

ಉದಾ: ಮನೇಲಿ ಯಾರೂ ಇಲ್ಲ.
ಬೀದೀಲಿ ಹೋಗುವವರು ಯಾರು?" (ಪು. ೨೧೧).

- ಅಲಿ ಪ್ರತ್ಯಯ ಕನ್ನಡದಲ್ಲಿದೆ. ಆದರೆ, ಲೇಖಕರು ಕೊಟ್ಟಿರುವ ಉದಾಹರಣೆಗಳಲ್ಲಿ ಇರುವುದು ಮಾತ್ರ ಬರೀ -ಲಿ ಪ್ರತ್ಯಯ ಮಾತ್ರ. ಲೇಖಕರೇ ಹೇಳುವಂತೆ, ಮನೆ ಎಂಬ ನಾಮಪದದ ಷಷ್ಠೀ ರೂಪವಾದ 'ಮನೇ'ಗೆ -ಲಿ ಪ್ರತ್ಯಯ ಹತ್ತಿದೆಯೆನ್ನಬಹುದಾದರೂ ನಿಜಕ್ಕೂ, ಮನೆಯ+ಅಲ್ಲಿ ಎಂಬ ಈ ರಚನೆಯಲ್ಲಿ ಮನೆಯ್- ಎನ್ನುವುದು ಮನೇ ಆಗಿ, -ಅಲ್ಲಿ ಪ್ರತ್ಯಯದ -ಅ ಲೋಪವಾಗಿದೆ. ಕೊನೆಗೆ ಮನೇ- ಎಂಬಲ್ಲಿಯ ಅಂತ್ಯದ ದೀರ್ಘಸ್ವರದ ನಂತರದಲ್ಲಿ ಬರುವುದರಿಂದ ದ್ವಿತ್ವವನ್ನು ಕಳೆದುಕೊಂಡಿದೆ.

'-ಅಲಿ' ಪ್ರತ್ಯಯವನ್ನು ಹೆಚ್ಚಾಗಿ ಹಾಡುಗಳಲ್ಲಿ ಕಾಣಬಹುದು.

ಉದಾ: ೧. "......ಪಟ ಗಾಳಿಯಲಿ ತೇಲಿ".
೨. "ರಸದೇವಗಂಗೆಯಲಿ ಮೀನಾಗುವ".

ಆದರೆ ಆಡುನುಡಿಯಲ್ಲಿ ಈ -ಅಲಿ ರೂಪದ ಅ ಲೋಪವಾಗುತ್ತದೆ ಹಾಗೂ -ಅಲಿ ರೂಪದ ವಿಕಾಸವನ್ನು ಹೀಗೆ ಕೊಡಬಹುದು:

— ಅಲ್ > < -ಅಲ್ಲಿ > -ಅಲಿ > -ಲಿ
-ಅಲು

ಈ -ಲಿ ಪ್ರತ್ಯಯ ಎ ಕಾರ ಇಕಾರಾಂತ ಪದಗಳಲ್ಲಿ ಮಾತ್ರ ಕಾಣುತ್ತದೆ. ತಮಿಳಿನಲ್ಲಿ -ವಣ್ ಎಂದು ಯಾವ ಪ್ರತ್ಯಯವೂ ಸಪ್ತಮಿಗೆ ಇಲ್ಲ. -ಆನ್, -ಇನ್ ಮತ್ತು -ಇಲ್ ಎಂಬಿವು ತಮಿಳಿಗೆ ಪ್ರತ್ಯಯಗಳು. ಜೊತೆಗೆ ಕಣ್, ಕಾಲ್, ಅಕಂ, ಉಳ್ ಮುಂತಾದ ಇಪ್ಪತ್ತಾರು ಉತ್ತರ ಪ್ರತ್ಯಯ [ಅಥವಾ ಉತ್ತರಪದ, (Post Position)] ಗಳು ಬಳಕೆಯಲ್ಲಿವೆ (ಷಣ್ಮುಗಂ, ೧೯೭೧, ಪು. ೨೭೨).

೧.೧೬. ಗ್ರಂಥದಲ್ಲಿ ಯಾವುದೇ ಭಾಷೆಗಾಗಲಿ ಒಟ್ಟು ಚಿತ್ರವನ್ನು ನೀಡುವ ಪ್ರಯತ್ನ ಮಾಡಿಲ್ಲ. ಉದಾ: ತಮಿಳಿಗೆ ಬಹುವಚನ ಪ್ರತ್ಯಯಗಳು ಆರನ್ನು ಕೊಟ್ಟಿದ್ದಾರೆ. ಮಾಲಿಯೊಳಕ್ಕೆ ಒಂದೇ ಒಂದನ್ನು ಕೊಟ್ಟಿದ್ದಾರೆ (ಪು.೨೨೭). ಆದರೆ ನಿಜಸ್ಥಿತಿ ಹೀಗಿಲ್ಲ. ತಮಿಳಿನಲ್ಲಿ, -ಅರ್, -ಇರ್, -ವರ್, -ನರ್, -ಞರ್,-ಅವರ್,- ಇಯರ್, -ಆರ್, -ಓರ್, -ಮಾರ್, -ಅನರ್ ಮತ್ತು -ಕಳ್ ಹೀಗೆ ಹನ್ನೆರಡು ಪ್ರತ್ಯಯಗಳೂ ಮಲೆಯಾಳದಲ್ಲಿ, - ಅರ್, -ಆರ್, -ವರ್, ಓರ್, ಅವರ್, -ಮಾರ್ ಮತ್ತು -ಕಳ್ ಹೀಗೆ ಏಳು ಪ್ರತ್ಯಯಗಳೂ ಇದ್ದಿವೆ (ಷಣ್ಮುಗಂ, ೧೯೭೧, ಪು. ೪೯).

೧.೧೭. 'ಮಗು' ಪುಲ್ಲಿಂಗವಲ್ಲ, 'ಮಗ' ಪುಲ್ಲಿಂಗ (ಪು. ೨೩೬).

೧.೧೮. ಡಾ. ಎಸ್. ವಿ. ಷಣ್ಮುಗಂ ಅವರು ಮೂಲದ್ರಾವಿಡ ವಚನ ಪ್ರತ್ಯಯಗಳನ್ನು ಪುನರ್‌ರಚಿಸಿಕೊಟ್ಟು ವಿವರಿಸಿದ್ದಾರೆ (ಷಣ್ಮುಗಂ, ೧೯೭೧, ಪು. ೧೨೪). ಪ್ರಸ್ತುತ ಗ್ರಂಥದ ಲೇಖಕರು -ಕ್, ಕಳ್, -ರ್, -ಚಿಲ್, -ಮ್ ಮುಂತಾದವನ್ನು ಮೂಲದ್ರಾವಿಡ ಭಾಷೆಗೆ ಬಹುವಚನ ಪ್ರತ್ಯಯಗಳನ್ನಾಗಿ "ಇಟ್ಟುಕೊಳ್ಳಬೇಕೆಂದು ತೋರುತ್ತದೆ" ಎನ್ನುತ್ತಾರೆ. ಪರ್ಜಿಯಲ್ಲಿ ಮಾತ್ರ ಕಂಡುಬರುವ -ಚಿಲ್ ಪ್ರತ್ಯಯವನ್ನು, ಯಾವ ಭಾಷೆಯಲ್ಲೂ ಗುರುತಿಸದ -ಮ್ ಪ್ರತ್ಯಯವನ್ನೂ ರಚಿಸಲು ಹೇಗೆ ಸಾಧ್ಯ ? -ಚಿಲ್ ಎಂಬುದನ್ನು ಮೂಲ ದ್ರಾವಿಡ ಪ್ರತ್ಯಯವಾಗಿ ತೆಗೆದುಕೊಳ್ಳಲಾಗುವುದಿಲ್ಲ (ನೋಡಿ, ಷಣ್ಮುಗಂ, ೧೯೭೧; ಪು. ೧೩೫, ೧೨೭).

೧.೧೯. "ಇವು ಮುಂದೆ ಸ್ವವಸ್ತ್ವ ವ ಸವಸ ಮಾದರಿಯ ಧಾತುಗಳಾದುವು" ಇವುಗಳಲ್ಲಿ ಯಾವುದು ಮಾದರಿ? ಘಟಕಗಳನ್ನು ಸರಿಯಾಗಿ ಬೇರೆ ಬೇರೆ ಮುದ್ರಿಸಿಲ್ಲ (ಪು. ೨೬೭).

೧.೨೦ "ಆದರೆ ವಾಸ್ತವವಾಗಿ ಆದಿ ಸ್ವರ ದೀರ್ಘವಾದ ಉಕಾರಾಂತ ಧಾತುಗಳಿಗೆ -ದ (ಭೂತಕಾಲಪ್ರತ್ಯಯ) ಸೇರಿದಾಗ 'ಇ', 'ತ', 'ಪ', 'ನ' ಆಗಮವಾಗಬಹುದು: ಮಾಡಿದಾನ್ (ಇತ್ಯಾದಿ)" (ಪು. ೨೬೮). ಈ ವಿವರಣೆ ಸಮಂಜಸವಾಗಿಲ್ಲ. ನಿಜಕ್ಕೂ ಉಕಾರಾಂತ ಧಾತುಗಳಿಗೆ ಹತ್ತುವುದು 'ದ' ಪ್ರತ್ಯಯವಲ್ಲ, –ಇದ್ ಪ್ರತ್ಯಯ. ಆದ್ದರಿಂದ ಇಕಾರಾಗಮ ಎಂಬ ಮಾತು ಅರ್ಥಹೀನ. ಉದಾ : ಮಾಡು + ಇದ್ + ಅನು = ಮಾಡಿದನು. ಕಟ್ಟು + ಇದ್ + ಅನು = ಕಟ್ಟಿದನು ಇತ್ಯಾದಿ. –ದ– ಪ್ರತ್ಯಯ ಹತ್ತುವುದು ವ್ಯಂಜನಾಂತ ಎಕಾರಾಂತ, ಇಕಾರಾಂತ ಧಾತುಗಳಿಗೆ ಮಾತ್ರ (ನೋಡಿ: ಸುಬ್ರಹ್ಮಣ್ಯಂ, ೧೯೭೧ : ೧೩೨).

ಸೋತು, ಸತ್ತರ್ ಮುಂತಾದವು ಲೇಖಕರು ಹೇಳುವಂತೆ ಸಯ್ + ದ + ಅರ್ = ಸತ್ತರು ಅಲ್ಲ. ಇದನ್ನು ವಿವರಿಸಲೂ ಇಲ್ಲ. ಅದನ್ನು ಹೀಗೆ ವಿವರಿಸಬಹುದು :

ಸಾಯ್ಯು + ತ್ + ಅರ್
↓
ಸಯ್ಯು + ತ್ + ಅರ್
↓
ಸಯು + ತ್ + ಅರ್
↓
ಸತ್ + ತ್ + ಅರ್
↓
ಸತ್ತರ್ (ಉ).

(ನೋಡಿ: ಷಿಫ್‌ಮನ್)

೧.೨೧. "/–ಗುಟ್ಟು/ ಎಂಬುದು ಪ್ರತ್ಯಯವಾಗಿ ಸೇರಿ ಕೆಲವು ಅನುಕರಣ ಕ್ರಿಯಾಪದಗಳು ರೂಪಗೊಂಡಿವೆ: ಕಿರುಗುಟ್ಟು, ಗೊಣಗುಟ್ಟು, ಇತ್ಯಾದಿ" (ಪು. ೨೭೦).

ಇಲ್ಲಿ ಗುಟ್ಟು ಎಂಬುದನ್ನು ಪ್ರತ್ಯಯವೆಂದು ಹೇಳಲು ಸಾಧ್ಯವಿಲ್ಲ. ಸ್ವತಂತ್ರ ಕ್ರಿಯಾಪದವಿರಬೇಕು. ಏಕೆಂದರೆ ಈ –ಗುಟ್ಟು ಎಂಬುದು –ಗುಡು

ಎಂಬುದರ ಭೂತರೂಪ. ಕಿರುಗುಡು–ಕಿರುಗುಟ್ಟು, ಗೊಣಗುಡು–ಗೊಣಗುಟ್ಟು ಇವುಗಳಲ್ಲಿ ಗುಟ್ಟು ಎಂಬುದೇ ಕಾಲಾನುಕ್ರಮದಲ್ಲಿ (ಈ ರಚನೆಯಲ್ಲಿ) ಧಾತುವಾಗಿ ಬಳಕೆಗೆ ಬಂದಿರಬೇಕು. ಉದಾ : ಗೊಣಗುಟ್ಟಿದನು, ಗೊಣಗುಟ್ಟುತ್ತಾನೆ, ಗೊಣಗುಟ್ಟುವನು (ಗೊಣಗುಡುತ್ತಾನೆ, ಗೊಣಗುಡುವನು ರೂಪಗಳು ಸಾಧ್ಯ ಆದರೆ ಗೊಣಗುಡಿದನು ಸಾಧ್ಯವಿಲ್ಲ).

ಕಿಟೆಲ್‌ಸಾಹೇಬರು ಇದು –ಕುಟ್ಟು ಪ್ರತ್ಯಯವೆಂದು ಹೇಳಿದ್ದಾರೆ. ನಿಜಕ್ಕೂ ಇವು ಕುಡು ಧಾತುವಿನ ವಿವಿಧರೂಪಗಳು. ಸಂಧಿರಚನೆಯಲ್ಲಿ ರಕಾರ ಗಕಾರವಾಗುತ್ತದೆ.

೧.೨೨. "ಅಘೋಷ : ಬ್, ದ್, ಡ್, ಗ್ಲಿ, ಗ್" (ಪು. ೨೮೬) ಇದು ಮುದ್ರಣ ತಪ್ಪೆಂದು ತಿಳಿಯೋಣವೇ ? (ಮೇಲಿನವು ಘೋಷಧ್ವನಿಗಳು).

೧.೨೩. "—ಅರ್ಧಸ್ವರಗಳಾದ ಯ, ರ, ಲ, ವ, ಳ......" ಇವು ಇಡ್ಕೆ?ಯಿನಂ ನಿಜ. ಆದರೆ ಲ, ಳ, ರ ಗಳು ಅರ್ಧಸ್ವರಗಳೇ? ಹೀಗೆ ಯಾವ ತಮಿಳು ವ್ಯಾಕರಣದಲ್ಲೂ ಹೇಳಿಲ್ಲ.

೧.೨೪. "...ಓದನಂ ಚೋರ ಪದವಾಕ್ಯಂ ಕಲ್ಪಯಂತಿ" ಕುಮಾರಿಲ ಭಟ್ಟನ ಈ ಸಾಲುಗಳಿಗೆ ಮತ್ತೊಂದು ಪಾಠವೂ ಇದೆ (ಪು. ೩೨೭). "ಓದನಂ ಚೋರ್ ಇತ್ಯುಕ್ತೆ ಚೋರ ಪದವಾಚ್ಯಂ ಕಲ್ಪಯನ್ತಿ" (ಲೀಲಾತಿಲಕಂ; ೬೦; ೧೯೭೪). ಇಲ್ಲಿ ಬರುವ 'ಚೋರ್' ದ್ರಾವಿಡ ಪದ.? 'ಚೋರು' ತಮಿಳು, ಮಲಿ ಯಾಳಂ; ಅನ್ನ.

೧.೨೫. ೩೨೮ನೆಯ ಪುಟದಲ್ಲಿ ಲೇಖಕರು ದ್ರಾವಿಡಪದದಲ್ಲಿ ಪದಮಧ್ಯ ದಲ್ಲಿ 'ಪ' ಕಾರ ಇತ್ತೆಂದೂ ವಾದಿಸಿ ಅದಕ್ಕೆ ಕುಮಾರಿಲಭಟ್ಟನ 'ಪಾಪ್' ಶಬ್ದದ ಉದಾಹರಣೆ ಕೊಟ್ಟಿದ್ದಾರೆ. ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕು. ತಮಿಳಿನಲ್ಲಿ ಪದಾದಿಯಲ್ಲಿ ಅಘೋಷವೇ ಇದೆ. ಕುಮಾರಿಲಭಟ್ಟನು 'ಪಾಂಪ್' (ಪಾಂಬು) ಶಬ್ದವನ್ನು ಯಾರ ಬಾಯಲ್ಲೂ ಕೇಳಲು (ಬಹುಶಃ) ಸಾಧ್ಯವಿಲ್ಲದೆ, ಬರವಣಿಗೆಯಲ್ಲಿ ಮಾತ್ರ ಕಂಡು ಎರಡೂ ಕಡೆಯೂ ಒಂದೇ ಅಕ್ಷರ ಪ್ರಯೋಗ ವಿರುವುದರಿಂದ ಎರಡನೆಯ ಅಕ್ಷರವನ್ನೂ 'ಪ' ಎಂದೇ ತಿಳಿದಿರಬಹುದು.

ಎರಡನೆಯದಾಗಿ ಅವನು ಕೊಟ್ಟಿರುವುದು, "ಪಾಪ್ ಶಬ್ದಂ ಪಕಾರಾಂತಂ ಸರ್ಪ ವಚನಂ ಅಕಾರಾಂತಂ ಕಲ್ಪಯಿತ್ವಾ, ಸತ್ವ ಪಾಪ ಏವಾಸೌ ಇತಿ ವದಂತಿ" —ತಂತ್ರವಾರ್ತಿಕ. ಹೀಗೆ 'ಪಾಪ್' ಎಂದು ಪ್ರಯೋಗಿಸಿದ್ದಾನೆ. ಅಂದರೆ ಪದ

ಮಧ್ಯದ ಅನುನಾಸಿಕವನ್ನೇ ಗಮನಿಸದ ಕುಮಾರಿಲಭಟ್ಟನು ಕೊನೆಯ 'ಬ' ಕಾರದ ಉಚ್ಚಾರಣೆಯನ್ನೇನು ಗಮನಿಸಿದ್ದಾನು? ('ಬ' ತಮಿಳಿನಲ್ಲಿ ಉಪಧ್ವನಿ). ಅವನು 'ಪಾಪ್' ಎಂದು ಕೊಟ್ಟಿರುವುದರಿಂದಲೂ, ಕೊನೆಯ 'ಪ' ಸ್ವರಗಳ ಮಧ್ಯೆ ಬಂದಿಲ್ಲವಾದ್ದರಿಂದಲೂ, ಕೊನೆಯ 'ಪ'ದ ಹಿಂದೆ ಅನುನಾಸಿಕ ಇಲ್ಲದೇ ಇರುವುದರಿಂದಲೂ ಇದರ ಉಚ್ಚಾರಣೆ ದ್ರಾವಿಡ ನಿಯಮಕ್ಕನುಸಾರವಾಗಿ 'ಪ'ವೇ. ಜೊತೆಗೆ 'ಪಾಪ್' ಪದದಲ್ಲಿ 'ಪ್' ಪದಮಧ್ಯವೇನೂ ಅಲ್ಲ. ಒಟ್ಟಿನಲ್ಲಿ ಕುಮಾರಿಲಭಟ್ಟನ ವಿವರಣೆಯಂತೆ ಅವನು ಕೇಳಿದ್ದೋ ಅಥವಾ ಓದಿದ್ದೋ ತಪ್ಪು ಇರಬಹುದು. ಪಾಪಪುಣ್ಯದ ಕತೆಗಳ ಮೇಲೆ ಶಬ್ದನಿಷ್ಪತ್ತಿಯನ್ನು ಹೇಳುವ ಭಟ್ಟನ ವಿವರಣೆ ಎಷ್ಟರ ಮಟ್ಟಿಗೆ ಸಮಂಜಸ? ಒಂದು ಪಕ್ಷ ಇದು ವಿಚಾರಾರ್ಹವಾದರೂ ಇದೊಂದೇ ಆಧಾರದ ಮೇಲೆ "ಪದಮಧ್ಯದಲ್ಲಿ 'ಪ' ಕಾರ ಇತ್ತೆಂದು ಖಚಿತವಾಗಿ ತಿಳಿದುಬರುತ್ತವೆ" ಎಂದು ಹೇಳುವುದು ವೈಜ್ಞಾನಿಕ ವಾಗುವುದಿಲ್ಲ.

೧.೨೬ "....ಇದರ ಉಚ್ಚಾರಣೆ ಇಂಗ್ಲೀಷಿನ ṭ ಧ್ವನಿಯ ಉಚ್ಚಾರವಿದ್ದಂತೆ" (ಪು. ೭೭೦). ಇಲ್ಲಿ ಗಮನಿಸಬೇಕಾದ ವಿಷಯ ಇಂಗ್ಲೀಷಿನಲ್ಲಿ /ṭ/ ಧ್ವನಿಮಾವೇ ಅಲ್ಲ.

೧.೨೭. "ತಮಿಳಿನಲ್ಲಿ ಎಲ್ಲಿ /-ಱ/ ಇವೆಯೋ ಅದು ಸಾಮಾನ್ಯವಾಗಿ ಕನ್ನಡದಲ್ಲಿ –ತ್ತ–(ಅಥವಾ –ಟಾ–) ಮತ್ತು ತೆಲುಗು ಭಾಷೆಯಲ್ಲಿ –ಟ್ಟ– ಆಗಿರುತ್ತದೆ. ಕೆಲವು ಉದಾಹರಣೆಗಳು: ಏಱ್ > ತ.ಏ: ತೆ.ಏರು."(ಪು.೭೭೨)

ಇಲ್ಲಿ ಬಹುಶಃ ಏಱ್>ಏತ ಎಂದಿರ ಬೇಕು. ಜೊತೆಗೆ ಮೇಲಿನ ವಿವರಣೆಗೂ ಕೆಳಗಿನ ಉದಾಹರಣೆಗೂ ಏನೂ ಸಂಬಂಧವಿಲ್ಲ.

೧.೨೮. ೨೭೪ನೆಯ ಪುಟದಲ್ಲಿ ಉಚ್ಚಾರಣೆಯಲ್ಲಿ ಡ>ರ ಆಗುವುದರ ಬಗ್ಗೆ ಹೇಳಿ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಆದರೆ ಅದೇ ಸ್ಥಾನದಲ್ಲಿ ಬಳಸಲಾದ

ಬೆರ್ಕು < ಬೆಕ್ಕು
ಅರ್ಕ < ಅಕ್ಕ

ಈ ಉದಾಹರಣೆಗಳ ಅವಶ್ಯಕತೆ ತಿಳಿಯುವುದಿಲ್ಲ.

೧.೨೯. ೭೭೬, ೩೭೭ ನೆಯ ಪುಟಗಳ ವಿಷಯ ೪೬ ನೆಯ ಅಧ್ಯಾಯಕ್ಕೆ ಸಂಬಂಧಿಸಿದಂತೆ ಕಾಣುತ್ತದೆ. ಆದರೆ ಇದು ರೇಫ ಮತ್ತು ಶಕಟರೇಫ: /ರ್/–/ಱ್/ ಎಂಬ ೪೫ ನೆಯ ಅಧ್ಯಾಯದಲ್ಲಿ ಬಂದಿದೆ.

೧.೩೦. ೩೮೦ ನೆಯ ಪುಟದ ೨೦,೨೧,೨೨ ಸಾಲುಗಳಲ್ಲಿ ಕೊಟ್ಟಿರುವ ಉದಾಹರಣೆಗಳ ಮೂಲಕ ಲೇಖಕರು ಏನನ್ನು ಹೇಳಬಯಸುತ್ತಾರೆಂದು ತಿಳಿಯುವುದಿಲ್ಲ.

೧.೩೧. "ಸಂಸ್ಕೃತದಿಂದ ತಮಿಳಿಗೆ ಬಂದ ಕೆಲವು ಪದಗಳಲ್ಲಿ ಸಂಸ್ಕೃತದ ಶಬ್ದದ ಆದಿಯ ಕ್- ಧ್ವನಿ > ಚ್ ಧ್ವನಿಯಾಗಿದೆ" (ಪು.೩೮೫) ಎಂದು ಹೇಳಿ ಮುಂದೆ (ಪು. ೩೮೬) ಉದಾಹರಣೆಗಳನ್ನು ಕೊಟ್ಟಿದ್ದಾರೆ. ಆದರೆ ಉದಾಹರಣೆಗಳಿಗೂ ವಿವರಣೆಗೂ ಯಾವ ಸಂಬಂಧವೂ ಇಲ್ಲ. ಸಂಸ್ಕೃತದ –ಶ್ ತಮಿಳಿನಲ್ಲಿ –ಚ್ ಆಗುತ್ತದೆಂದು ಈ ಉದಾಹರಣೆಗಳಿಂದ ತಿಳಿದುಬರುವುದು. ಈ 'ಚ್' ಧ್ವನಿ ಮುಂದಿನ ಹಂತದಲ್ಲಿ ಶೂನ್ಯಧ್ವನಿಯಾಗುತ್ತದೆಂಬುದು ಲೇಖಕರ ಗಮನಕ್ಕೆ ಬಂದಂತೆ ಕಾಣುವುದಿಲ್ಲ.

ಉದಾ : ಶ್ರೇಣಿ > ಚೇಣಿ

ಸೂಚಿ > ಚೂಚಿ

ಎಂದಷ್ಟೇ ಕೊಟ್ಟಿದ್ದಾರೆ. ಆದರೆ ಇದು ಮುಂದೆ ಏಣಿ, ಊಚಿ ಎಂದೂ ಆಗಿದೆ.

೧.೩೨. "ನೆಳಲ್–ನೆರಳು" (ಪು. ೩೯೧). ಇಲ್ಲಿ –ಲ್ > –ಳ್ ಆಗಿದೆ. ಜೊತೆಗೆ-ಳ್– > –ರ್–ಆಗಿದೆ. ಇದನ್ನು ಲೇಖಕರು ಗಮನಿಸಿದಂತೆ ಕಾಣುವುದಿಲ್ಲ. ಎಲ್ಲೂ ಳ್ > ರ ಆಗುವುದರ ಬಗ್ಗೆ ಹೇಳಿಲ್ಲ. ಈ ಪದವನ್ನು ಹೀಗೆ ವಿವರಿಸಬಹುದು. ತ: ನಿೞಲ್ ಕ: ನೆೞಲ್ > ನೆಳಲ್ > ನೆರಳ್ > ನೆರಳು. ೞ > ಳ > ರ ಬದಲಾವಣೆ ಇರಬೇಕು.

೨. ಅನಿಯತ ರೀತಿಯ ಸಂಕೇತ ಬಳಕೆ :

೨.೧. ಏಳನೆಯ ಪುಟದಲ್ಲಿ ಸಂಕೇತಗಳನ್ನು ಮೂಲದ ತಮಿಳಿಗೆ ಮೂಲತ ಎಂದೂ, ಮೂಲದ ಕನ್ನಡಕ್ಕೆ ಮೂಲಕ ಎಂದೂ ಹೇಳಿ ಅದೇ ಮುಂದಿನ ಪುಟದ ರೇಖಾಚಿತ್ರದಲ್ಲಿ ಮೂತ, ಮೂಕ ಎಂದು ಮುಂತಾಗಿ ಬಳಸಿರುವುದು ಗೊಂದಲವೇರ್ಪಡಿಸುತ್ತದೆ.

೨.೨. ಗುಜರಾತ್ > ಗುರ್ಜರ

ಮರಾಠ > ಮಹಾರಾಷ್ಟ್ರ

ಕನೂಜ್ > ಕನ್ಯಾಕುಬ್ಜ (ಪು. ೬೪).

ಲೇಖಕರ ಪ್ರಕಾರ ಕನೂಜ್ ಮುಂತಾದ ಪದಗಳಿಂದ ಕನ್ಯಾಕುಬ್ಜ ಮುಂತಾದ ಪದಗಳು ಬಂದಿವೆ. ಆದರೆ ನಿಜಕ್ಕೂ ಕನ್ಯಾಕುಬ್ಜ ಮುಂತಾದವೇ ಪ್ರಾಚೀನರೂಪಗಳು.

೨.೩. † ಈ ಚಿಹ್ನೆಯನ್ನು ಅಲ್ಲಲ್ಲಿ ಬಳಸಿದ್ದಾರೆ. ಇದು ಯಾವುದರ ಸಂಕೇತವೆನ್ನುವುದರ ವಿವರವೆಲ್ಲೂ ಇಲ್ಲ.

೩. ತಪ್ಪುಗಳು :

	ಗ್ರಂಥದಲ್ಲಿ ಇರುವುದು	ಪುಟ	ಇರಬೇಕಾದದ್ದು
೩.೧.	Phonome	xiii	Phoneme
೩.೨.	ಇ–, ಇ ಈ	xvii	ಇ– ಇ, ಈ
೩.೩.	> – ಇದರ ಹಿಂದಿನ ಪದದಿಂದ ಮುಂದಿನ ಪದ ಬಂದಿದೆ.		> – . . . . .
	> – ಇದರ ಹಿಂದಿನ ಪದ ಮುಂದಿನ ಪದದಿಂದ ಬಂದಿದೆ.	xviii	< – . . . . .
೩.೪.	ತೊ– ತೊ	೭	ತೊ – ತೊದ.
೩.೫.	ತಮಿಳದ	೩೨	ತಮಿಳಿನ.
೩.೬.	ಪುಹನಾನೂರು	೫೩	ಪುಱನಾನೂರು.
೩.೭.	ತ. ಅವಣ್	೨೨೭ ಸಾಲು ೧೭	ಅವನ್
೩.೮.	ಸ್ತ್ರೀಲಿಂಗ. ಅವನ್, ಅವಳ್	೨೨೭ ,, ೧೮	ಅವಳ್, ಆವಳ್.
೩.೯.	ಹ.ಗ. ಏನ್	೨೨೪ ,, ೨೪	ಏವನ್.
೩.೧೦.	ಕ. ನಂಬಲಿ	೨೫೭ ,, ೨	ನಂಬದೆ.
೩.೧೧.	ತ. ಶಯ್ಯಾದ	೨೫೭ ,, ೧೦	ಜೆಯ್ಯಾದ.
೩.೧೨.	ದ್ರಾವೇ	೨೭೮ ,, ೯	ದ್ರಾವಿಡವೇ.
೩.೧೩.	ಮ. ತಾಲ್ಯಾ	೨೮೪ ,, ೧೨	ತಲ.
೩.೧೪.	ಅಪ್ಪಳ. ತ;	೨೮೫ ,, ೧೧	ಅಪ್ಪಳರ್.
೩.೧೫.	ಕೇಳುವಾಲೆ	೨೮೯ (ಟಿಪ್ಪಣಿ) ೯	ಕೇಳುವಾಗಲೇ

ಗ್ರಂಥದಲ್ಲಿ ಇರುವುದು	ಪುಟ			ಇರಬೇಕಾದದ್ದು
೩.೧೬. ತ. ತೋಟ್ಟನ್	೨೮೭	ಸಾಲು	೨೮	ತೋಟ್ಟವ್.
೩.೧೭. ಮುಳುಗೈ–ಅಂಕುರ	೩೧೭	,,	೨೮	ಮುಳಕ್ಕೈಲ.
೩.೧೮. ಮುಗ. ತ.	೩೧೮	,,	೧	ಮುಂಗೈ.
೩.೧೯. ತಿಳಿ. ತ.	,,	,,	೯	ತಿರಿ.
೩.೨೦. ಚುರಳ್. ತ;	,,	,,	೧೮	ಚುರುಳ್.
೩.೨೧. ಎಱುಂಬು – ರುವೆ	,,	,,	೨೯	ಎಱುಂಬು– ಇರುವೆ.
೩.೨೨. ಒಳಿ – ಒಚ್ಚಿಡು	೩೧೯	,,	೪	ಒಲಿ.
೩.೨೩. K, t, t, P.	೩೨೫	,,	೧೩	k, ṭ, t, p.
೩.೨೪. >ಉರುಪು (ತ)> ಇರುವು	೩೩೧	,,	೧	>ಉರುಪು(ತ)> ಉರುವು.
೩.೨೫. ತ. ಕುಡಿ	೩೩೩	,,	೧೭	ಕೊಡಿ.
೩.೨೬. ತ. ಕುರುಟ್ಟು	,,	,,	೨೧	ಕುರುಡು.
೩.೨೭. ಗೊಂಡಲದ	,,	,,	೨೬	ಗೊಂದಲದ.
೩.೨೮. Homonyam	೩೪೭	,,	೨೬	Homonym.
೩.೨೯. ಹೊಗಳಿದ್ದಾರೆ	೩೫೪	,,	೩೭	ಹೊಗಳಿದ್ದಾನೆ.
೩.೩೦. – t. ḍ	೩೫೯	,,	೩	- ṭ . ḍ.
೩.೩೧. ಐ, ಐ	೩೭೫	,,	೯	ಐ, ಬಿ.
೩.೩೨. ಮೇ|| ರೈಸ್	,,	,,	೧೦	ಮೆ|| ರೈಸ್.
೩.೩೩. ಅರಳು> ಅಳು	,,	,,	೨೩	ಅರಳು> ಅಳ್ಳು.
೩.೩೪. ಕ – >	೩೮೧	,,	೪	ಕ್→
೩.೩೫. ಕಾಲ್ (ತ)	೩೮೨	,,	೭	ಕಾಲ್ಲು.
೩.೩೬. ವಿದೇಶಿಗಳಿಂದ	*vi*	,,	೬	ವಿದೇಶಗಳಿಂದ.
೩.೩೭. ಆಲೋಢನೆ	*vii*	,,	೧೯	ಆಲೋಚನೆ.
೩.೩೮. ಖಚಿತೆಯ	ಮುನ್ನುಡಿ			ಖಚಿತತೆಯ.
೩.೩೯. ha:ḍvonge> Pa:ḍuvonge	೩೫೦	,,	೨೧	ha:ḍuvonge< pa:ḍuvonge.

೩.೪೦. ಈಗ ರೂಢಿಯಲ್ಲಿರುವಂತೆ ಕನ್ನಡ ವರ್ಣಮಾಲೆ ಇಂತಿದೆ ಎಂದು ಹೇಳಿ ಅವರ್ಗೀಯ ವ್ಯಂಜನಗಳು ಎನ್ನುವ ಶೀರ್ಷಿಕೆಯ ಕೆಳಗೆ "ೖ – ಐತ್ವ, ಹೀಗೆ ಒತ್ವದ ಚಿಹ್ನೆಯನ್ನು ಐತ್ವಕ್ಕೆ ಕೊಟ್ಟಿದೆ (ಪು. ೭೨).

ಇಲ್ಲಿ ಬಳಸಿರುವ 'ಇಳಿ' ಶಬ್ದಕ್ಕೆ "ತಲೆಕಟ್ಟು ದೀರ್ಘ" ಎಂಬ ಶಬ್ದವೂ 'ವಟ್ರಸುಡಿ'ಗೆ 'ವಟ್ರಸುಳಿ' ಶಬ್ದವೂ ಬಳಕೆಯಲ್ಲಿವೆ. ಇವನ್ನೂ ಕೊಡಬಹುದಿತ್ತು. 'ವಟ್ರಸುಳಿ ದೀರ್ಘ' (ಅಕ್ಷರ) ಬಳಕೆಯಲ್ಲಿಲ್ಲ (ಪು. ೭೨).

೩.೪೧. ಅಡಿಟಿಪ್ಪಣಿಗಳ ಸಂಖ್ಯೆ 4.2 ಎಂದಿವೆ. ಇವು ಏನನ್ನು ಸೂಚಿಸುತ್ತವೋ ಗೊತ್ತಿಲ್ಲ (ಪು. ೮೧). ೮೭ನೆಯ ಪುಟದ ಅಡಿಟಿಪ್ಪಣಿಗಳ ಸಂಖ್ಯೆ 1. ಎಂಬುದು ಎರಡು ಕಡೆ ಬಂದು 5 ಬಿಟ್ಟುಹೋಗಿದೆ.

೩.೪೨. ಇಳಂಬೂರಣರ್, ಚೇನಾವರೈಯರ್, ನಚ್ಚಿನಾರ್ಕ್ಕಿನಿಯರ್ ಇವು ತೊಲ್ಕಾಪ್ಪಿಯಂ ಗೆ ಟೀಕೆ ಬರೆದ ಟೀಕಾಚಾರ್ಯರ ಹೆಸರುಗಳು. ವ್ಯಾಕರಣ ಕೃತಿಗಳ ಹೆಸರಲ್ಲ (ಪು. ೮೪).

೩.೪೩. ಮೊಸಳೆಗೆ ತಮಿಳು ಶಬ್ದ ಮೊದಲೈ ಅಲ್ಲ ಮುದಲೈ(ಪು.೮೯,೯೨).

೩.೪೪. 'ಇಳೈ' ತಮಿಳು ಶಬ್ದಕ್ಕೆ ಕನ್ನಡ ಸಂವಾದಿ 'ಎಳೆ' (ದಾರ).

೩.೪೫. ಸೊಂಡಿಲಿಗೆ ತಮಿಳಿನಲ್ಲಿ 'ತುಂಬಿಕ್ಕೈ' ಎನ್ನುತ್ತಾರೆ. 'ಸುಂಡಲ್' ಎಂದರೆ ಕಡಲೆ ಎಂದರ್ಥ (ಪು. ೯೧).

೩.೪೬. ಕಿಱಿದು ಕನ್ನಡಪದಕ್ಕೆ ತಮಿಳುಪದ ಚಿಱಿತು ಅಲ್ಲ; ಚಿಱಿದು. ಹಾಗೆ ಸಾಸಿರಕ್ಕೆ ಆಯಿರಂ ಎಂದಿರಬೇಕು (ಪು. ೩೩).

೩.೪೭. "ಶ್ರಾವಣ–ಓಣಂ" ಇದು ತಪ್ಪು. ಓಣಂ ಎಂಬುದು ಮಲೆಯಾಳ ಪದ. ತಮಿಳಿನಲ್ಲಿ 'ಆವಣಿ' ಎಂದು.

೩.೪೮. ಹಾಸ್ಯಕ್ಕೆ ಅರಟಿಯುವರ್ ಸಂವಾದಿಪದವಲ್ಲ. ಅರಟಿಯುವರ್ ಎಂಬ ಪದವೇ ತಮಿಳಿನಲ್ಲಿ ಇದ್ದಂತಿಲ್ಲ (ಪು. ೯೩).

೩.೪೯. 'ಲೀಲಾವತಿ ತಿಲಕಂ' ಎಂದು ಯಾವ ಪುಸ್ತಕವೂ ಮಲೆಯಾಳ ಸಾಹಿತ್ಯದಲ್ಲಿ ಇಲ್ಲ. ಆದರೆ 'ಲೀಲಾತಿಲಕಂ' ಎಂಬ ವ್ಯಾಕರಣಕೃತಿಯೊಂದಿದೆ. ಇದರ ಕರ್ತೃ ಯಾರೆಂದು ಗೊತ್ತಾಗಿಲ್ಲ ಇದು ಇತ್ತೀಚೆಗೆ ಕನ್ನಡಕ್ಕೂ ಭಾಷಾಂತರಗೊಂಡಿದೆ (ಪು.೯೫).

೩.೫೦. ತಮಿಳಿನಲ್ಲಿ ಮೇಲ್ ಎಂಬ ಶಬ್ದ ಮೇಲೆ ಎಂಬರ್ಥ ಕೊಡುತ್ತದೆಯೇ ಹೊರತು (ಸ್ವತಂತ್ರವಾಗಿ ಬಂದಾಗ) ಪಶ್ಚಿಮ ಎಂಬರ್ಥ ಕೊಡು

ವ್ರದಿಲ್ಲ. ಪಕ್ಷಿವುಕ್ಕೆ ತಮಿಳು ಶಬ್ದ "ಮೇಱ್ಕು"(ಮೇಲ್+ಕು). ಮೇಲ್–ವಿಶೇಷಣ ವಾಗುತ್ತದೆ.

೨.೫೧. ೨೭೨ನೆಯ ಪುಟದ ಕೊನೆಯ ಪ್ಯಾರಾದ ವಿಷಯ ಮತ್ತೆ ೨೭೮ನೆಯ ಪುಟದ ಮೊದಲ ಪ್ಯಾರಾದಲ್ಲಿ ಪುನರುಕ್ತಿಗೊಂಡಿದೆ.

೨.೫೨. ತಮಿಳಿನ 'ಕಿೞಮೈ'ಗೆ 'ವಾರ' (ದಿನ) ಎಂಬರ್ಥವಿದೆ (ಪು. ೨೧೬).

೨.೫೩. ೨೨೪ ಪುಟ "ನ ವ್ಯವಸ್ಥೆ..." ಎಂದು ಪ್ರಾರಂಭವಾಗಿದೆ. ಇಲ್ಲಿಯ 'ನ' ಇರಬೇಕಾದದ್ದು ಹಿಂದಿನ ಪುಟದಲ್ಲಿ.

೨.೫೪. ನಂಜು ಶಬ್ದಕ್ಕೆ ತಮಿಳಿನಲ್ಲಿ 'ನೋಯ್', 'ನೊಱುಂಗು' ಪದಗಳಿವೆ, 'ನೂಱು' ಅಲ್ಲ.

೨.೫೫. ತಮಿಳು ಉದಾ: 'ಶಿವಪ್' ಎಷ್ಟರಮಟ್ಟಿಗೆ ಸರಿಯಾದ ಉದಾಹರಣೆಯೆಂಬುದು ಸಂದೇಹ. ಇದರ ಸರಿಯಾದ ಉಚ್ಚಾರಣೆ 'ಚಿವಪ್ಪು' ಅಥವಾ 'ಸಿವಪ್ಪು' ಎಂದಾಗುತ್ತದೆ. ತಮಿಳಿನಲ್ಲಿ ಶ್ ಗೆ ಧ್ವನಿಮಾ ಬೆಲೆಯಿಲ್ಲ.

೨.೫೬. "ಲಳಯೋರಭೇದಃ ಆದಂತೆ ಲಡಯೋರಭೇದಃ ಕೂಡ ಆಗಿದೆ" ಎಂದಿರುವುದು ತಪ್ಪು. 'ಳಡಯೋರಭೇದಃ' ಎಂದಿರಬೇಕೆಂದು ತೋರುತ್ತದೆ.

೨.೫೭. ಇಲ್ಲಿ ಕೆಲವು ಪದಗಳನ್ನು ಸರಿಯೆಂದೂ ಕೆಲವನ್ನು ತಪ್ಪು ಎಂದೂ ಪಟ್ಟಿ ಮಾಡಿದ್ದಾರೆ. ಆದರೆ ನಿಜಕ್ಕೂ ಯಾವುದು ಸರಿ ? ಯಾವುದು ತಪ್ಪು ? ಎಂದು ಗೊತ್ತಾಗುವುದಿಲ್ಲ. ಅವು ಹೀಗಿವೆ :

ತಪ್ಪು	ಸರಿ	ಪುಟ
ಬುದ್ದಿವಂತ	ಬುದ್ಧಿವಂತ	೫೨೨
ಪ್ರಾವೀಣ್ಯತೆ	ಪ್ರವೀಣತೆ	,,
ಮೌಢ್ಯ	ಮೌಢ್ಯ	೫೨೪
ವೈಯಾಕರಣಿ	ವೈಯಾರಕಣ	೫೨೫

೪. ಹೆಸರು(ಪರಿಭಾಷೆ)ಗಳಲ್ಲಿ ದ್ವಂದ್ವ

೪.೧ 'ಕೊಲಾಮಿ' ಭಾಷೆಗೆ ಕೆಲವೆಡೆ 'ಕೋಲಾಮಿ', ಕೆಲವೆಡೆ 'ಕೋಲಾಮಿ' ಇನ್ನೂ ಕೆಲವೆಡೆ 'ಕೊಲಾಮಿ'– ಹೀಗೆ ನಾನಾ ತೆರನಾಗಿ ಹೆಸರು ಕೊಟ್ಟಿದೆ.

೪.೨. ಹೀಗೆಯೆ 'ನಾಯ್ಕ್'ಗೆ ನಾಯಿಕಿ, ನಾಯ್ಕೊ ಎಂದೂ 'ಮಲ್ತೊ'ಗೆ ಮಲ್ತೊ, ಮಲ್ತೋ, ಮಾಲ್ತೊ ಎಂದೂ ಕುಈಗೆ ಕುಈ, ಕಯೊ ಎಂದೂ ಹೆಸರುಗಳನ್ನು ಬಳಸಿದ್ದಾರೆ. ಇಲ್ಲಿ ಯಾವುದಾದರೂ ಒಂದು ರೀತಿಯ ಬರವಣಿಗೆಯನ್ನು ಬಳಸಬಹುದಾಗಿತ್ತು.

೪.೩. ರಾಮಸ್ವಾಮಿಶಾಸ್ತ್ರಿಗಳು ಒಂದು ಸಾಲಿನಲ್ಲಿ ರಾಮಸ್ವಾಮಿಶಾಸ್ತ್ರಿಗಳಾಗಿಯೂ ಮತ್ತೊಂದು ಸಾಲಿನಲ್ಲಿ ರಾಮಾಶಾಸ್ತ್ರಿಗಳಾಗಿಯೂ ದರ್ಶನವೀಯುತ್ತಾರೆ.

೪.೪. ಒಮ್ಮೆ ರ್‍ಯಾಸಮಸ್‌ರಾಸ್ಕ್ ಆಗಿರುವವರು ಮತ್ತೊಮ್ಮೆ ರ್‍ಯಾಸ್‌ಮಸ್‌ರಾಸ್ಕ್ ಆಗುತ್ತಾರೆ (ಪು. ೧೭).

೪.೫. ಕೆಲವೊಂದು ಹೆಸರುಗಳನ್ನು (ಈ ಹೆಸರುಗಳ ಉಚ್ಚಾರಣೆ ಲೇಖಕರಿಗೆ ಗೊತ್ತಿಲ್ಲವೆಂದು ಕಾಣುತ್ತದೆ) ಪೂರ್ಣ ಇಂಗ್ಲೀಷಿನಲ್ಲಾದರೂ ಕೊಡಬಹುದಿತ್ತು, ಇಲ್ಲವೆ ಪೂರ್ಣ ಕನ್ನಡದಲ್ಲಾದರೂ ಕೊಡಬಹುದಾಗಿತ್ತು. ಈ ಎರಡನ್ನೂ ಬಿಟ್ಟ ಶೈಲಿ ಅನವಶ್ಯಕ.

ಉದಾ: ಬರ್ನಾರ್ಡ್ Schmidt (ಪು. ೩೦)

೪.೬. ಮೊದಲಮಾತಿನಲ್ಲಿ ಲೇಖಕರು (xiii) "ದಿವಂಗತರಾದವರನ್ನು ಆದಷ್ಟು ಏಕವಚನದಲ್ಲೇ ಸಂಬೋಧಿಸಿದೆ. ಇದನ್ನು ಅವಿನಯವೆಂದು ಯಾರೂ ತಿಳಿಯಬಾರದು" ಎಂದು ಹೇಳಿದ್ದಾರೆ. ಆದರೆ ಈ ಮಾತನ್ನು ಉಳಿಸಿಕೊಂಡಿಲ್ಲ. ಪಾಶ್ಚಿಮಾತ್ಯವಿದ್ವಾಂಸರ ವಿಷಯವಾಗಿ ಸಾಧ್ಯವಾದಷ್ಟು ಇದನ್ನು ಪಾಲಿಸಿದ್ದಾರೆ. ಆದರೆ ಭಾರತೀಯವಿದ್ವಾಂಸರ ವಿಷಯದಲ್ಲಿ ಏರುಪೇರಾಗಿದೆ. "ದಿವಂಗತ ಪ್ರಾಕ್ತನ ವಿಮರ್ಶವಿಚಕ್ಷಣ ರಾವ್‌ಬಹದೂರ್ ರಾ. ನರಸಿಂಹಾಚಾರ್ಯರು......" ಈ ಶೈಲಿ ಅವಶ್ಯಕವೇ? ಮತ್ತೊಂದು ಉದಾಹರಣೆಯನ್ನು ಗಮನಿಸಿ:

"ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯನ......." (ಪು.೧೬)
"ಕೃಷ್ಣಮಾಚಾರ್ಯರೂ, ರಾಮಸ್ವಾಮಿಶಾಸ್ತ್ರಿಗಳೂ........" (,,)
"ಶ್ರೀರಂಗಪಟ್ಟಣದ ಕೃಷ್ಣಮಾಚಾರಿ,......." (ಪು.೧೮)

ಗಮನಿಸಬೇಕಾದ ವಿಷಯ: ಕೃಷ್ಣಮಾಚಾರ್ಯರು ನಿಜಕ್ಕೂ ದಿವಂಗತರು.

೪.೭. ಪಾರಿಭಾಷಿಕಶಬ್ದಗಳಾದ 'Voiced' ಮತ್ತು 'Voiceless' ಗಳಿಗೆ ಕೆಲವೆಡೆ (ಪು. ೮೬) ಸರಳ ಮತ್ತು ಪರುಷವೆಂದೂ ಇನ್ನು ಕೆಲವೆಡೆ 'ಘೋಷ', 'ಅಘೋಷ'ವೆಂದೂ ಬಳಸಿದ್ದಾರೆ.

೫. ವಿಚಿತ್ರ ವಾಕ್ಯಗಳು

ಗ್ರಂಥದಲ್ಲಿ ಅಲ್ಲಲ್ಲಿ ಕೆಲವೊಂದು ವಿಚಿತ್ರ ವಾಕ್ಯಗಳಿವೆ. ಇವುಗಳ ಅರ್ಥ ವೇನೆಂಬುದು ಗೊತ್ತಾಗುವುದಿಲ್ಲ. ಅವು:

೫.೧. "ವಿದ್ವಾಂಸರು ಈ ಜನಪದಸಾಹಿತ್ಯದತ್ತ ಬಹುಮುಖ್ಯವಾಗಿ ಹರಿಸ ಬೇಕಾಗಿದ್ದ ಒಂದು ದೃಷ್ಟಿಯನ್ನು ಇದುವರೆಗೂ ಹೆಚ್ಚಿಗೆ ಕೊಟ್ಟಿಲ್ಲ" (ಪು.೫೫). (ಪು. ೬೪).

೫.೨. "ಕರ್ನಾಟಕ ಸಂಸ್ಕೃತಲೇಖಕರ ಕೈಯಲ್ಲಿ ಕರ್ನಾಟಕ ಆಯಿತು."

೫.೩. "ಅಕ್ಷರವೆಂದರೆ ವರ್ಣ ಎಂಬ ಅರ್ಥವೇ ಇಂದಿಗೂ ಪ್ರಚಾರದಲ್ಲಿ ನಿಂತಿತು" (ಪು. ೭೧).

೫.೪. "ಭಾಷಾವಿಜ್ಞಾನದ ವಿವೇಚನೆಯ ದೃಷ್ಟಿಯಿಂದ ಕ್|ಚ್ ಎರಡೂ ಧ್ವನಿಗಳಿರುವ ಶಬ್ದ ರೂಪಗಳಲ್ಲಿ ಚಕಾರಕ್ಕಿಂತಲೂ ಪ್ರಾಚೀನವೆಂಬುದು ನಿರ್ವಿವಾದ" (ಪು.೮೮).

೫.೫. "ತೆಲುಂಗು ಎಂಬ ಪದವನ್ನು ಹಿಂದಿನ ಗ್ರಂಥಗಳಲ್ಲಿ ತೆಲುಂಗು ಎಂದು ಬರೆದಿದ್ದಾರೆ" (ಪು.೧೦೬). (ಇಲ್ಲಿ ಯಾವ ಪದದಲ್ಲೂ ಅರ್ಧಾನುಸ್ವಾರ ಪ್ರಯೋಗ ವಿಲ್ಲ).

೫.೬. "೧೪ನೆಯ ಶತಮಾನದಿಂದ ಈಚೆಗೆ ಅವು ಘರ್ಷಗಳಾದವು" (ಈ ಸಂದರ್ಭದಲ್ಲಿ ಈ ವಾಕ್ಯದ ಅರ್ಥವಾಗುವುದಿಲ್ಲ) (ಪು. ೩೩೫).

೬. ಇನ್ನು ಕೊನೆಯದಾಗಿ ಒಂದು ಮಾತು. ಕೊನೆಯ ಅಧ್ಯಾಯವಾದ "ಉಪಭಾಷಾ ಪರಿವೀಕ್ಷಣೆ"ಯಲ್ಲಿ ಕುಱುಂಬ ಮತ್ತು ಇರುಳ ಉಪಭಾಷೆಗಳು (?) ಕನ್ನಡಕ್ಕೆ ಬಹು ಸಮೀಪವೆಂದು ತೋರಿಸಿಕೊಡಲು ಪ್ರಯತ್ನಿಸಿದ್ದಾರೆ. ಕೇವಲ ಹನ್ನೆರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಆದರೆ ಈ ಪದಗಳು ಕನ್ನಡಕ್ಕೆ ಮಾತ್ರವಲ್ಲ ತಮಿಳಿಗೂ ಸಮೀಪ. ಕೇವಲ ಇಂತಹ ಶಾಬ್ದಿಕ ಹೋಲಿಕೆಯಿಂದೇನೂ ಕುಱುಂಬಭಾಷೆಯನ್ನು ಕನ್ನಡದ ಪ್ರಭೇದವೆನ್ನಲಾಗುವುದಿಲ್ಲ. ವ್ಯಾಕರಣ ಪ್ರಕ್ರಿಯೆಗಳ ಹೋಲಿಕೆಯನ್ನೂ ಗಮನಿಸಬೇಕಾಗುತ್ತದೆ. ಕುಱುಂಬ, ಇರುಳ ಭಾಷೆಗಳ ಬಗ್ಗೆ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ನಿಬಂಧಗಳು ಸಿದ್ಧವಾಗುತ್ತಿವೆ. ಅವು ಹೊರಬಂದ ಮೇಲೆ ಯಾವುದನ್ನೂ ಖಚಿತವಾಗಿ ಹೇಳಬಹುದು.

ಇವಲ್ಲದೆ ಕಾಟ್ಟುನಾಯ್ಕಾ, ಬಡಗ, ಕಸಬ ಭಾಷೆಗಳೂ ಕೂಡ ಕನ್ನಡಕ್ಕೆ ಸಮೀಪವಾಗಿಯೇ ಕಾಣುತ್ತವೆ. ಇವುಗಳ ಶಾಸ್ತ್ರೀಯಅಭ್ಯಾಸದ ನಂತರವೇ

ಇವು ಕನ್ನಡದ ಪ್ರಭೇದಗಳೋ, ಸ್ವತಂತ್ರ ಭಾಷೆಗಳೋ ಎಂದು ಹೇಳಲು ಸಾಧ್ಯ. ಕಾಟ್ಟುನಾಯ್ಕಾ, ಕಸಬ ಭಾಷೆಗಳ ಬಗ್ಗೆಯೂ ಅಣ್ಣಾಮಲೈ ವಿಶ್ವವಿದ್ಯಾಲಯದ ಭಾಷಾವಿಜ್ಞಾನ ಪ್ರೌಢ ಸಂಶೋಧನಕೇಂದ್ರದಲ್ಲಿ ನಿಬಂಧಗಳು ಸಿದ್ಧವಾಗುತ್ತಿವೆ.

ಸಹಾಯಕ ಗ್ರಂಥಗಳು

ಕೇಶಿರಾಜ : ಶಬ್ದಮಣಿದರ್ಪಣಂ. ಸಂ: ಡಿ. ಎಲ್. ನರಸಿಂಹಾಚಾರ್. ೧೯೬೮, ಶಾರದಾ ಮಂದಿರ, ಮೈಸೂರ-೪.

ಲೀಲಾತಿಲಕಂ : ಸಂ: ಇಳಂಗುಳಂ ಕುಂಜನ್ ಪಿಳ್ಳೈ. ಭಾಷಾಂತರ : ಸುಬ್ರಾಯ ಭಟ್, ಬಿ. ಕೆ. ತಿಮ್ಮಪ್ಪ; ೧೯೭೪, ಮೈಸೂರ ವಿಶ್ವವಿದ್ಯಾಲಯ.

Harald Schiffman: MorphoPhonemics of the Kannada Verb, University of Washington, Seattle.

Kushalappa Gowda, K: A Grammar of Kannada, 1972; Annamalai University, Annamalai Nagar.

Shanmugam, S. V. : Dravidian Nouns, 1971; Annamalai University, Annamalai Nagar.

Subrahmanyam, P. S. : Dravidian Verb Morphology 1971; Annamalai University, Annamalai Nagar.

Nair V. R. P : Malayalam– A Linguistic description, 1972; Trivandrum.

ಅಡಿವೆಯ್ಯನ ಪೂಜೆ

ಎಂ. ಎಸ್. ಸುಂಕಾಪುರ

ಕೋಲು ಮುತ್ತಿನ ಕೋಲು ಕೋಲ || ಪಲ್ಲ ||

ಕಂಚನು ಹೊಳದಾವು ಕಡಿಕಂಚು ಹೊಳದಾವು
ಕಂಚಿಗಿ ಕಂಚ ಹೊಳದಾವ | ಅಡವಿಸ್ವಾಮಿ
ಮಂಚದ ಕಾಲ ಹೊಳದಾವ ೧

ಕಾಜನು ಹೊಳದಾವು ಕಡಿಕಾಜು ಹೊಳದಾವು
ಕಾಜಿಗೆ ಕಾಜು ಹೊಳದಾವು | ಅಡವಿಸ್ವಾಮಿ
ತೇಜಿಯು ಕಾಲ ಹೊಳದಾವು ೨

ಮಠದ ಬಾಗಿಲ ಮುಂದ ಮಾನ್ಯರು ಕಟಿಸಿದ ಭಾವಿ
ಗಂಧ ಕಸ್ತೂರಿ ತೆರಿಹೊಡೆದ | ಭಾವ್ಯಾಗ
ತಂದೆ ಅಡಿವೆಯ್ಯನ ಜಳಕವು ೩

ಅರಸೇರ ಹಿತ್ತಲದಾಗ ಮತ್ತ ಹುಟ್ಟಿರುವುದ
ಅರಿಪಿಣದ ಪತ್ತಲ ಉಡುವುದ | ಚಂಡಿನ ಹೂವೆ
ನೀ ಬಾರ ಲಿಂಗದಡಿಗಳಿಗೆ ೪

ಹಾದಿಯ ಒಳಗ ಮತ್ತ ಹುಟ್ಟಿರುವುದ
ಮುಟ್ಟಿದರ ಮೈಯು ಹಿಡಿಯುವುದ | ಉತ್ರಾಣಿ
ನೀ ಬಾರ ಲಿಂಗದಡಿಗಳಿಗೆ ೫

ಮೂರುಸಂಜಿಲೆ ಮೂಡುವದಾ ಮೊಗ್ಗಿ
ಉದಯ ಹಾಯುತಲಿ ಅರಳುವ | ದಾಸಾಳ್ಹೂವೆ
ನೀ ಬಾರ ಲಿಂಗದಡಿಗಳಿಗೆ ೬

ಹಿತ್ತಲದಾಗ ಮತ್ತ ಹುಟ್ಟಿರುವುದ
ಮುಟ್ಟಿದರ ಮುಗ್ಗಿ ಅರಳುವುದ | ಮಲ್ಲಿಗಿ ಹೂವೆ
ನೀ ಬಾರ ಲಿಂಗದಡಿಗಳಿಗೆ ೭

ಎಲ್ಲ ಪುಷ್ಪಗಳೆಲ್ಲ ನಿಲ್ಲದಲೆ ಬಂದಾವು
ಅಲ್ಲೊಬ್ಬನ್ಯಾಕ ತಡದಾನ | ಕ್ಯಾದಿಗಿರಾಯ
ನಾಲಿಗಿ ಸೀಳಿ ಕರತರುವೆ ೮

ಇಷ್ಟು ಪುಷ್ಪಗಳೆಲ್ಲ ತಪ್ಪದಲೆ ಬಂದಾವು
ಹುಚ್ಚಿಯೊಬ್ಬಳ್ಯಾಕ ತಡದಾಳ | ಮದುಗುಣಿಕೆವ್ವ
ತಿಪ್ಪಿದಂಡ್ಯಾಗ ಇರುವನ್ನ ೯

ಹನ್ನೆರಡುವರ್ಷಕ್ಕೆ ಫಲಬರುವುದ
ರೆಕ್ಕಿಂದರೆಕ್ಕಿ ಉದರುವ | ತೆಂಗಿನ ಫಲವೆ
ನೀ ಬಾರ ಲಿಂಗದಡಿಗಳಿಗೆ ೧೦

ಹತ್ತಾರು ವರ್ಷಕ್ಕೆ ಮತ್ತೆ ಫಲಬರುವುದ
ಗಣ್ಣಿಂದಗಣ್ಣು ಉದರುವ | ಅಡಕಿಯ ಫಲವೆ
ನೀ ಬಾರ ಲಿಂಗದಡಿಗಳಿಗೆ ೧೧

ಕರಿಯಾನ ಕಣ್ಣಿನ ನಡುವಲಗಣ್ಣಿನ
ಸಾಧಿಸಿ ಮೆಯ್ದು ತನಿರಸದ | ಬಾಳೀಹಣ್ಣೆ
ನೀ ಬಾರ ಲಿಂಗದಡಿಗಳಿಗೆ ೧೨

ಕಪ್ಪುರದ ಹೇರು ತಪ್ಪದಲೆ ಬರತಾವ
ತಪ್ಪದಲೆ ಮಠವ ಹೊಗತಾವ | ಅಡವಿಸ್ವಾಮಿ
ಅಪ್ಪ ಅಡಿವ್ಯೆನ ಶಿವಪೂಜೆ ೧೩

ಗಂಧದ ಹೇರು ಹೊಂದದಲೆ ಬರುತಾವ
ಹೊಂದದಲೆ ಮಠವ ಹೊಗತಾವ | ಅಡವಿಸ್ವಾಮಿ
ತಂದಿ ಅಡಿವ್ಯೆನ ಶಿವಪೂಜೆ ೧೪

ಆಕಾಶದಿಂದ ಧೂಪದ ಹೊಗಿ ಬಂದ
ಆಕಾಶದ ಗಂಟಿ ಢಣಲೆಂದು | ಅಡವಿಸ್ವಾಮಿ
ಆತು ಅಡಿವ್ಯೆನ ಶಿವಪೂಜೆ ೧೫

ಊದಿಸುತ ಬಾರಿಸುತ ಊರ ಹೊಕ್ಕವರ್‍ಯಾರ
ಕಾನನ ಮಂಡಲ ದೊರಿಗೋಳ | ಅಡವಿಸ್ವಾಮಿ
ಶರಣರು ಹೊಂಟಾರು ಮರ್ತ್ಯೆಕ ೧೬

ನೇಲಿ : ಶಬ್ದಾರ್ಥ ವಿವೇಚನೆ

ಪಿ. ಶ್ರೀಕೃಷ್ಣ ಭಟ್

ನೇಲಿಯಂ ಪಿಡಿವ ಕಪ್ಪಡಮುಡುವ ನಿಂದಿರಲು
ಸಾಲದಳವಳಿವ ಬಾಯ್ಬಿಡುವ ಸಂಕಟವಿಲ್ಲ
ಸೂಲಿಸುವ ಬಗ್ಗಿಸುವ ನೋಯಿಸುವ ನುಲಿವ ಮರ್ಮಸ್ಥಾನಮಂ
ನಿಗುಚುವ।
ಬಾಲೆಯುರ ಹಂಗಿಲ್ಲ ಮೇಲೆ ನಾಣ್ಗೆಡುವ ನಿ
ಘಾಲಂಬಮಿಲ್ಲ ಮಧ್ಯಮರಾತ್ರಿ ಮೆಯ್ದೆಗೆದ
ಕಾಲ ಶಯನಸ್ಥಳದೊಳೆಂದಿನಂದದಿ ನಿದ್ರೆಗಟವಟಿಸುತಿರ್ಪಾಗಳು॥

ಸಿದ್ಧರಾಮಚಾರಿತ್ರ ೧–೫೫

ಶಿವಯೋಗಿಸಿದ್ಧರಾಮ ತಾಯಿ ಸುಗ್ಗವ್ವೆಯ ಗರ್ಭದಿಂದ ಭುವಿಗವತರಿಸುವ ಸಂದರ್ಭ. ಕವಿ ರಾಘವಾಂಕನ ದೃಷ್ಟಿಯಲ್ಲಿ ಸುಗ್ಗವ್ವೆಯ ಗರ್ಭ "ಲೋಕದ ಗರ್ಭದಂತಲ್ಲದೆ ಅನುಪಮಂ". ಅದನ್ನೂ ಹುಟ್ಟಿಬರಲಿರುವ ಸಿದ್ಧರಾಮನ ಅಲೌಕಿಕತೆಯನ್ನೂ ಸಿದ್ಧಪಡಿಸುವ ಸಲುವಾಗಿ ಸುಗ್ಗವ್ವೆಯ ಪ್ರಸವದ ರೀತಿಯ ಅಸಾಮಾನ್ಯತೆಯನ್ನು ಕವಿ ವರ್ಣಿಸುತ್ತಾನೆ. ಹೆರಿಗೆಸಮಯದಲ್ಲಿ ಅನುಭವಿಸುವಂತಹ 'ನೇಲಿಯನ್ನು ಹಿಡಿವ, ಕಪ್ಪಡವನ್ನುಡುವ, ನಿಂದಿರಲು ಸಾಧ್ಯವಾಗದಂತೆ ಶಕ್ತಿಗುಂದುವ, ಗೋಳಾಡುವ ಇತ್ಯಾದಿ ಗರ್ಭವತಿಸಾಮಾನ್ಯವೂ ದಾರುಣವೂ ಆದ ಸಂಕಟ ಸುಗ್ಗವ್ವೆಗುಂಟಾಗಲಿಲ್ಲ" ಎನ್ನುವುದು ಈ ಪದ್ಯದ ಸಾರ. 'ನೇಲಿಯಂ' ಎಂಬುದಕ್ಕೆ 'ನೇಲಮಂ' ಎಂಬ ಪಾಠಾಂತರವೂ ಇದೆ.

ನೇಲಿಯೆಂದರೇನು ? ಗ್ರಂಥದ ಕೊನೆಯಲ್ಲಿರುವ ಅರ್ಥಕೋಶದಲ್ಲಿ (ಮೊದಲ ಮುದ್ರಣ ೧೯೪೧) ಅದಕ್ಕೆ ಪ್ರಶ್ನಾರ್ಥಕ ಚಿಹ್ನೆಯಿದೆ. ಎರಡನೆಯ ಮುದ್ರಣದಲ್ಲೂ (೧೯೭೫) ಅರ್ಥಕೋಶದ ಎಲ್ಲಾ ಪ್ರಶ್ನಾರ್ಥಕ ಚಿಹ್ನೆಗಳು ಯಥಾವತ್ತಾಗಿ ಮುಂದುವರಿದಿವೆ. ಕನ್ನಡದ ಪ್ರಸಿದ್ಧ ನಿಘಂಟುಗಳಾದ "ಕನ್ನಡ-ಇಂಗ್ಲಿಷ್ ನಿಘಂಟು" (ಕಿಟ್ಟೆಲ್), "ಸಿರಿಗನ್ನಡ ಅರ್ಥಕೋಶ" (ಕಾರಂತ),

"ಸಂಕ್ಷಿಪ್ತ ಕನ್ನಡ ನಿಘಂಟು"(ಕನ್ನಡ ಸಾಹಿತ್ಯ ಪರಿಷತ್ತು), "ಸಚಿತ್ರ ಕನ್ನಡ-ಕನ್ನಡ ಕಸ್ತೂರಿಕೋಶ" (ಪಂಡಿತ ಜಿ. ಎ. ಕವಲಿ) ಮುಂತಾದವುಗಳಲ್ಲಿ 'ನೇಲಿ'ಗೆ ಪ್ರವೇಶ ದೊರಕಿಲ್ಲ. (ನೇಲಕ್ಕೂ ಅದೇ ಗತಿ).

ಕಾಸರಗೋಡುಪ್ರದೇಶದ ಹವ್ಯಕಕನ್ನಡದಲ್ಲಿ 'ನೇಲಿ' ಎಂಬ ಪದ ಪ್ರಯೋಗವಿದೆ. ಅದನ್ನು 'ನೇಲಬಳ್ಳಿ' ಎಂದೂ ಹೇಳುವುದುಂಟು. ಹಿಂದಿನ ಕಾಲದಲ್ಲಿ ಹೆರಿಗೆಸಮಯದಲ್ಲಿ ಗರ್ಭಿಣಿಗೆ ತಿಣುಕಲು (ತೀಂಕು, ಮುಲುಕು, ಮುಕ್ಕು, to groan, to Strain) ಸಹಾಯಕವಾಗುವಂತೆ ಹೆರಿಗೆಕೋಣೆಯ ಜಂತಿಗಾಗಲಿ, ಮಾಡಿನ ಗಳಕ್ಕಾಗಲಿ ವಸ್ತ್ರ ಇಲ್ಲವೆ ಹಗ್ಗವನ್ನು ಕಟ್ಟಿ ನೇತು ಹಾಕುವ ರೂಢಿಯಿತ್ತು. ಅದನ್ನು ಆಧರಿಸಿ ಗರ್ಭಿಣಿ ತಿಣುಕಬೇಕಿತ್ತು. ಹಾಗೆ ತೂಗಿಸಿದ ವಸ್ತ್ರ ಯಾ ಹಗ್ಗಕ್ಕೆ 'ನೇಲಿ' ಅಥವಾ 'ನೇಲಬಳ್ಳಿ'ಯೆಂದು ಹೆಸರು. ಈಗಲೂ ಈ ರೀತಿಯ ವ್ಯವಸ್ಥೆಗೆ ಹಾಸನ, ಮೈಸೂರು, ಮಂಡ್ಯಗಳಲ್ಲಿ 'ನ್ಯಾಕೆ' (ತೊಟ್ಟಿಲ ಹಗ್ಗ)ಯನ್ನು ಉಪಯೋಗಿಸುತ್ತಿರುವಂತೆ ತಿಳಿದು ಬರುತ್ತದೆ.[೧] ಮಲೆಯಾಳದಲ್ಲಿ ಈ ನೇಲಿಯನ್ನೆ ಪಿಡಿವಳ್ಳಿ, ಅಯವಳ್ಳಿ, ಅಶವಳ್ಳಿ ಎಂದೆಲ್ಲ ಕರೆಯುತ್ತಾರೆ. ಮೇಲಿನ ಪದ್ಯದಲ್ಲಿ ಹೇಳಿದ ನೇಲಿಗೂ ಈ ಅರ್ಥವೇ ಇದ್ದಿರಬೇಕು.

'ನೇಲ್' ಧಾತುವಿನಿಂದ 'ನೇಲಿ' ಹುಟ್ಟಿದೆ. ನೇಲಿಸಲ್ಪಟ್ಟುದು ಯಾವುದೋ ಅದು ನೇಲಿ. ನೇಲಿಸಲ್ಪಟ್ಟುವೆಲ್ಲ ನೇಲಿ. ಈ ವಿಸ್ತೃತ ಅರ್ಥ ಸಂಕುಚಿತವಾಗಿ ಹಿಂದೆ ಹೇಳಿದ ಅರ್ಥ ಮಾತ್ರಕ್ಕೆ ಸೀಮಿತವಾಗಿ ಕ್ರಿ.ಶ. ಹನ್ನೆರಡನೆಯ ಶತಮಾನಕ್ಕಾಗಲೇ ಕನ್ನಡದಲ್ಲಿ ರೂಢವಾಗಿರಬೇಕು. ಹಾಗೆ ಅದು ರಾಘವಾಂಕನ ಪ್ರಯೋಗದಲ್ಲಿ ಬಂದಿರಬೇಕು. ತುಳು ಭಾಷೆಯಲ್ಲಿ 'ನೇಲೆ' ಎಂಬ ಪದಪ್ರಯೋಗ ಈ ಅರ್ಥದಲ್ಲಿದೆ. ಹಾಗಿದ್ದೂ ಮದ್ರಾಸು ವಿಶ್ವವಿದ್ಯಾನಿಲಯದಿಂದ ಪ್ರಕಾಶಿತ ತುಳು-ಇಂಗ್ಲಿಷ್ ನಿಘಂಟಿನಲ್ಲಿ 'ನೇಲೆ'ಯೆಂಬ ಶಬ್ದವಿಲ್ಲ. (ತುಳುವಿನ ಕೆಲವು ಉಪಭಾಷೆಗಳಲ್ಲಿ "ಕೈಚಾಂಗ್" (ಕೈಗೆ ಆಧಾರ) ಎಂಬ ಶಬ್ದ ಈ ಅರ್ಥದಲ್ಲಿ ಬಳಕೆಯಲ್ಲಿದೆ.)

ಇನ್ನು 'ನೇಲ' ಎಂಬ ಪಾಠಾಂತರದ ವಿಚಾರ. ಟಿ. ಬರೊ ಮತ್ತು ಎಂ.ಬಿ. ಎಮಿನೊ ಅವರ ದ್ರಾವಿಡಭಾಷಾಜ್ಞಾತಿಕೋಶ (A Dravidian Etymo-

---

೧. ಈ ವಿಚಾರವನ್ನು ನನಗೆ ತಿಳಿಸಿದವರು ನನ್ನ ಸಹೋದ್ಯೋಗಿಮಿತ್ರರಾದ ಶ್ರೀಮಾನ್ ಬಿ. ಕೆ. ಶಿವಪ್ಪ. ಎಂ. ಎ. ಅವರು.

logical Dictionary) ವಲ್ಲಿ ಕನ್ನಡದ 'ನೇಲ್'ಗೆ ಸಮಾನರೂಪಗಳಾಗಿ ತಮಿಳಿನ ಞಾಲ್ (to hang, decline, descend), ನಾಲ್ (to hang, swing, be suspended, hung up, hang oneself) ಎಂಬ ರೂಪಗಳನ್ನೂ ಮಲೆಯಾಳದ ಞಾಲುಕ (to hang, swing), ಞಾಲಿ (suspended) ಎಂಬ ರೂಪಗಳನ್ನೂ ಕೊಡಲಾಗಿದೆ. ಗುಂಡರ್ಟ್‌ರವರ ಮಲೆಯಾಳ – ಇಂಗ್ಲೀಷ್ ನಿಘಂಟಿನಲ್ಲಿ 'ಞಾಲಂ' ಎಂಬುದಕ್ಕೆ The Earth ಎಂದರ್ಥಯಿಸಿ ಕಂಸದಲ್ಲಿ the hanging? ಎಂದು ಕೊಟ್ಟುದು ಗಮನಾರ್ಹವಾಗಿದೆ. ಮಲೆಯಾಳದ ಎ. ಆರ್. ಎ. ನಿಘಂಟಿನಲ್ಲಿ 'ಞಾಲಂ'ಗೆ ನೇತಾಡುತ್ತಿರುವುದು ಎಂಬ ಅರ್ಥವನ್ನು ಕೊಡಲಾಗಿದೆ. ತುಳುವಿನಲ್ಲಿ 'ನೇಲ' ಎಂಬ ಶಬ್ದಕ್ಕೆ 'ನೇತಾಡುವ ಹಗ. ಎಂದರ್ಥ[೨]. ಇದು ಮಲಯಾಳದ 'ಞಾಲಂ' ಗೆ ಹತ್ತಿರವಾಗುತ್ತದೆ. 'ಞಾಲಂ' 'ನೇಲ' ಗಳಂತೆ ಕನ್ನಡದಲ್ಲೂ 'ನೇಲ' ಎಂಬ ರೂಪ ರೂಢವಾಗಿರಲೆಡೆಯಿದೆ. ಹೀಗಿರಲು ನಾಲ್, ಞಾಲ್, ಞಾಲಿ, ಞಾಲಂ, ನೇಲ್, ನೇಲೆ, ನೇಲ– ಇವೆಲ್ಲ ಒಂದೇ ಮೂಲದಿಂದ ಒಂದೇ ಅರ್ಥದಲ್ಲಿ ಬಂದವುಗಳಾಗಿರಬೇಕು. ಮಲಯಾಳ ಶಬ್ದಗಳ ಞ ಕಾರದ ಸ್ಥಾನದಲ್ಲಿ ಕನ್ನಡದಲ್ಲಿ ನ ಕಾರವಿರುವುದು ಅಪೂರ್ವವೇನಲ್ಲ.

ಕನ್ನಡ	ಮಲೆಯಾಳ
ನಾನ್	ಞಾನ್
ನಾನು	
ಕುನ್ನಿ	ಕುಞ್ಞ
ನರ	ಞರಂಬು
ನರಲ್	ಞರಙ್ಙುಕ
	ನರಙ್ಙುಕ

ಈ ಕೆಳಗಿನ ಶಬ್ದಗಳನ್ನು ಅವಲೋಕಿಸಬೇಕು[೩].

ತಮಿಳು	ಮಲೆಯಾಳ	ಕನ್ನಡ	ಅರ್ಥ
ಞಾಂಜಿಲ್	ಞೇಜೋಜಲ್	ನೇಗಿಲ್	plough
ನಾಂಜಿಲ್	ನೇಞ್ಞಲ್	ನೇಗಲ್	
	ನೇಙ್ಙಲ್	ನೇಗಿಲ	

೨. Nēta = A hanging rope. ದ್ರಾವಿಡಭಾಷಾಜ್ಞಾತಿಕೋಶ ಪು. ೧೮೭.
೩. ದ್ರಾವಿಡಭಾಷಾಜ್ಞಾತಿಕೋಶ, ಪು. ೧೮೬–೮೭.

ತಮಿಳು	ಮಲಿಯಾಳ	ಕನ್ನಡ	ಅರ್ಥ
ಞಾಣ್	ಞಾಣ್	ನೇಣ್	string
		ನೇಣು	
ಞಾಯಿಱು	ಞಾಯಿಱು		
ನಾಯಿಱು	ಞಾಯಱು	ನೇಸಱು	sun
	ಞಾಱು		
ಞಾಱಿಲ್	ಞಾಱಿಲ್	ನೇಱಿಲ್, ನೆಱಿಲ್	Priyangu (A certain tree)

ಈ ಶಬ್ದಗಳಲ್ಲಿರುವ ಪರಸ್ಪರ ಸಂಬಂಧದ ಹಿನ್ನೆಲೆಯಲ್ಲಿ ಕೆಳಗಿನ ಶಬ್ದಗಳನ್ನು ಸಮೀಕ್ಷಿಸಬಹುದು :

ತಮಿಳು	ಮಲಿಯಾಳ	ಕನ್ನಡ	ತುಳು
ಞಾಲ್	ಞಾಲುಕ	ನೇಲ್	ನೇಲೆ
ನಾಲ್	ಞಾಲಿ	ನೇಲೆ	ನೇಲ
	ಞಾಲಂ	ನೇಲ	

ಈ ಸಮೀಕ್ಷೆಯ ಆಧಾರದಿಂದ ಈ ಪದಗಳೆಲ್ಲ ಮೂಲದಲ್ಲಿ ಒಂದೇ ಧಾತುವಿನಿಂದ ಹುಟ್ಟಿದವಾಗಿರಬೇಕೆಂದು ನಿರ್ಣಯಿಸಬಹುದು. ಭಾಷೆಗಳಲ್ಲಿ ಸಹಜವಾಗಿ ತೋರುವ ಅರ್ಥವ್ಯತ್ಯಾಸಕ್ಕೆ (Sementic change) ಅನುಸರಿಸಿ ಕನ್ನಡ ಮತ್ತು ತುಳುವಿನಲ್ಲಿ ನೇಲೆ ಮತ್ತು ನೇಲಗಳು ಈ ವಿಶಿಷ್ಟವಾದ ಅರ್ಥದಲ್ಲಿ ಬಳಕೆಯಾಗತೊಡಗಿರಬೇಕು. ಕಾಲಕ್ರಮೇಣ ಕನ್ನಡಭಾಷೆ ನೇಲೆ, ನೇಲಯೆಂಬ ಶಬ್ದಗಳನ್ನೇ ರೂಢಿಯಿಂದ ಕಳಕೊಂಡಂತೆ ತೋರುತ್ತದೆ. ಆದರೆ ಹಲವಾರು ಪ್ರಾಚೀನಶಬ್ದರೂಪಗಳನ್ನು ತನ್ನಲ್ಲಿಟ್ಟುಕೊಂಡಿರುವ ಹವ್ಯಕಕನ್ನಡ 'ನೇಲೆ' ಯನ್ನು ಇನ್ನೂ ಬಳಸುತ್ತಿರುವುದು ಸಮಂಜಸವೇ ಆಗಿದೆ.

● ●

ಕೀಚಕ-ಸೈರೇಂಧ್ರಿ ವಾದ

● ಎಸ್. ಉಮಾಪತಿ

ಪದ*

ಕ್ಷಿತಿಪ ಕೇಳಯ್ಯ | ದ್ರೌಪತಿಗೆ ಕೀಚಕ
ಹತವಾದನು ಪವನಸುತನ ಕಯ್ಯಲು || ೧ ||

ಇತ್ತ ಕೇಳಯ್ಯ ಭೂಪೋತ್ತಮರಾಯ
ಸತ್ಯ ಪಾಂಡವರಾ ಕೌರವ ಲೆತ್ತವನಾಡಲು || ೨ ||

ಧರ್ಮರಾಯಗೆ ಇದರ ಮರ್ಮ ತಿಳಿಯದೆ
ಸರ್ವಭೂಮಿಯ ಸೋತು ಹೊರಟು ಪುರವನು || ೩ ||

ವರುಷ ಹನ್ನೆರಡು ವನವಾಸ ಕಳೆದರೂ
ಇರಬೇಕಾಯಿತ್ತು ಗುಪ್ತದಿ ಇನ್ನೊಂದು ವರುಷ || ೪ ||

ಧನವನೆಲ್ಲವ ಬನ್ನಿ ಮಹಾಂಕಾಳಿಗೊಪ್ಪಿಸಿ
ಕನಕಭಟ್ಟನಾಗಿ ಧರ್ಮಜಾ ಅನುಜಾರಿಗೆಂದಾ || ೫ ||

ಭೀಮ ಬಾಣಸಿ ಇಂದ್ರಸೂನು ಬೃಹಂದಳೆ
ಮಾನಿನಿ ದ್ರೌಪತಿ ಸೈರೇಂಧ್ರಿ ತಾನು ತಾಳಿದಳು || ೬ ||

ರೂಪು ಅಡಗಿಸಿ ವಿರಾಟರಾಯಗೆ ಚಾರರಾದರು
ಭೂಪಾಲ ನಾಲ್ಕೆಂಟು ಮಾಸಾದಿ || ೭ ||

---

* ರಾಣೆಬೆನ್ನೂರುತಾಲೂಕು ಮಾಕನೂರಿನಲ್ಲಿ ದೊರೆತ ಎರಡು ಕಾಗದದ ಹಸ್ತಪ್ರತಿಗಳಿಂದ ಪ್ರತಿಮಾಡಿದೆ.

ದುರುಳ ಕೀಚಕ ಒಂದಿನ ತರಳೆ ನೋಡಿ ತಾ
ಮರುಳು ಹಿಡಿದಾಗ ಸಹೋದರಿಗೆ ಕೇಳಿದಾ ॥ ೮ ॥

ಅಕ್ಕ ಕೇಳೆ ಇವಳ್ಯಾರಮ್ಮ ಚಿಕ್ಕಪ್ರಾಯದ ಬಾಲೆ ಇಹಳು
ಠಕ್ಕಿಸದೆ ಇವಳ ಇರವ ಗಕ್ಕನೆ ಪೇಳೇ ॥ ೯ ॥

ತಮ್ಮ ನೀನು ಪರರ ಹೆಣ್ಣ ಹೆಮ್ಮೆಯಿಂದ ಕೇಳುವದ್ಯಾಕೊ
ಸುಮ್ಮನೆ ನಡೆಯೊ ನಿಮ್ಮ ಮನಿಗೆ ತಮ್ಮ ನೀನೀಗಾ ॥ ೧೦ ॥

ಮಿಂಚಿನಂತೆ ತೊಳಗುತಿರುವಾ ಚಂಚಲಾಕ್ಷಿ ಇವಳ್ಯಾರಕ್ಕಾ
ವಂಚಿಸಾದೆ ಪೇಳೆ ನೀನೂ ವಂಚನಿಲ್ಲಾದೇ ॥ ೧೧ ॥

ಎನ್ನ ಸೇವೆಗೊಂಬುವಂತಾ ಕನ್ನೆ ಸೈಳೇಂದ್ರಿ ಇವಳ ಮೇಲೆ
ನಿನ್ನ ಮನಸನು ಇಡಲಿ ಬೇಡಾ ಎನ್ನ ತಮ್ಮನೇ ॥ ೧೨ ॥

ದಾಸಿಯರೊಳಗೆಲ್ಲ ಇವಳು ಲೇಸು ಕಾಣಿಸ್ತಾಳೆ ಅಕ್ಕವ್ವಾ
ಬೇಸರಿಲ್ಲದಿವಳ ಎನ್ನ ವಶವ ಮಾಡವ್ವಾ ॥ ೧೩ ॥

ನಿನ್ನ ವಶ ಮಾಡುವುದಕ್ಕೆ ಕನ್ನೆಗುಂಟೊ ಪುರುಷರೈವರು
ಎನ್ನ ಮಾತ ಲಾಲಿಸಿ ಸುಮ್ಮನೆ ಹೋಗೋ ॥ ೧೪ ॥

ಇವಳಿಗಾಗಿ ಪ್ರಾಣನೀಗಿ ಕಳಿವೆ ಇಲ್ಲಿ ನಿನ್ನ ಪಾದದಲಿ
ಘಳಿಲಾನೆ ಈ ಸಖಿಯುಳನು ಒಲಿಸದಿದ್ದಾರೆ ॥ ೧೫ ॥

ಪ್ರಾಣಬಿಡುವುದ್ಯಾಕೋ ನಿನಗೆ ಜಾಣೆ ಸೈಳೇಂದ್ರಿ ಒಲಿಸುವೆ ನಾನು
ಮಾನದಿಂದರಮನೆಗೆ ತೆರಳು ನೀನು ಸುಮ್ಮನೇ ॥ ೧೬ ॥

ನಾರಿ ಬಾ ವೈಯಾರಿ ನೀ ಬಾಬಾ ವೀರ ಪುರುಷರರಸಿ ನೀ ಬಾಬಾ
ಮಾರನ ಮುಂಗೈಯ ಅರಗಿಳಿಯೆ ನೀರೇ ನೀ ಬಾಬಾ ॥ ೧೭ ॥

ತಾಯಿ ಎನಗೆ ಸವಿ ಮಾತಾಡಿ ಭಾವಿಸಿದ ಪರಿಯಾವುದು
ವಾಯುದಿಂದ ತಿಳಿಸೆ ಎನಗೆ ದೇವಿ ನೀನೀಗಾ ॥ ೧೮ ॥

ಹೊನ್ನಕಳಸಗಿಂಡಿಯೊಳಗೆ ಕನ್ನೆ ಮಧುವ ಇರಿಸಿ ನೀನೂ
ಚೆನ್ನಿಗ ಕೀಚಕಾನಿಗಿತ್ತು ಮನ್ನಿಸಿ ಬಾರೇ ॥ ೧೯ ॥

ನಿಮ್ಮ ತಮ್ಮನರಮನೆಗೆ ನಮ್ಮನು ಕಳಿಸುವರೆ ಈಗ
ನಿಮ್ಮ ತಮ್ಮ ಮೂರ್ಖ ಇಹನು ಪೋಗಲಾರೆನು || ೨೦ ||

ಶ್ರೋತ್ರಿಯುವಳೆ ಎನಗೆ ನೀನು ಪ್ರತ್ಯುತ್ತರವ ಕೊಡುವದ್ಯಾಕೆ
ಕತ್ತ ಹಿಡಿದು ನೂಕಿ ನಿನ್ನ ಅತ್ತ ದೂಡುವೆನೇ || ೨೧ ||

ಕತ್ತ ಹಿಡಿದು ಎನ್ನ ನೀನು ಅತ್ತ ನೂಕುವದ್ಯಾಕೆ ಪೋಗುವೆ
ಚಿತ್ತದಿ ಶ್ರೀಹರಿಯು ಸ್ಮರಿಸುತ ತೆರಳಿ ಬಂದಾಳು || ೨೨ ||

ನಾರಿ ಬರುವ ಭರವ ನೋಡಿ ವೀರಕೀಚಕ ಮನದಿ ಉಬ್ಯಾಡಿ
ಬಾರೆ ಭಾಮಿನಿ ಬಾ ಮುದ್ದು ರಮಣಿ ನೀರೆ ನೀ ಬಾರೆ || ೨೩ ||

ರಮಣಿ ಎಂದು ಕರೆಯುವುದಲ್ಲಾ ನಮಗೆ ಉಂಟು ಪುರುಷರೈವರು
ನಿಮಗೆ ಮಧುವ ಕಳುಪಿದರಿಂದ ಬಂದೆನಿಲ್ಲಿಗೆ || ೨೪ ||

ಮಧುವ ತರಲು ಬಂದರೇನೆ ಮಧುರ ಮಾತುಗಳುಳ್ಳ ನೀರೆ
ಅಧರಸುಧೆಯು ಸವಿದು ನೋಡೆ ಸುದತಿಮಣಿಯುಳೆ || ೨೫ ||

ಅಧರಸುಧೆಯುಗೊಂಬುವಂತಾ ಸುದತಿಮಣಿಯು ಬೇರೆವುಂಟು
ಸದರ ಇಟ್ಟು ಸಾಯಬೇಡ ಸುದತಿಯುರಿಗೇ || ೨೬ ||

ಸರಸಿಜಾಕ್ಷಿಯುವಳೆ ಹರುಷದಿಂದಾ ಎನಗೆ ನೀನು
ಸುರತ ಸುಖವಾದೋರಿ ಎನ್ನ ಕೊರತೆ ಪರಿಹರಿಸೂ || ೨೭ ||

ದುರುಳಾ ನೀನು ಎನ್ನಾ ಕಂಡು ಸುರತಕೇಳಿಗೆ ಕರೆಯುಬಹುವೇ
ಮರಿಯಾದೆ ನಿಂದುಳುಹಿಕೊಂಡು ಇರು ನೀ ಸುಮ್ಮನೇ || ೨೮ ||

ಎನ್ನ ಮನವ ಮರಿಯಾದೆಯನು ಕನ್ನೆ ನೀನೂ ಉಳುಹಿಸಬೇಕು
ನಿನ್ನ ಕೆಡಿಸಾದನಕ ನಾನೂ ಬಿಡುವನಲ್ಲಾವೇ || ೨೯ ||

ದುಷ್ಟ ಪಾಪಿ ನನ್ನ ಕೆಡಿಸಿಬಿಟ್ಟಾರೀಗ ನಿನಗೆ ಕಡೆಗಾಲ
ಸೃಷ್ಟಿಕರ್ತ ತಂದ ನಿನಗೆ ತಿಳಿದು ನೋಡೀಗಾ || ೩೦ ||

ನಗೆಮುಖದನಾರಿ ನಿನ್ನ ಬೊಗರಿಕುಚವ ಎದೆಗೆ ಅಪ್ಪಿ
ಸೊಗಸು ಮಾಡೆನಗೆ ನೀನೂ ನಗೆಯು ಮಾತೇಕೆ || ೩೧ ||

ಖೋಡಿಮನುಜ ಕೇಳು ನಿನ್ನ ಕೂಡೆ ನಗೆಯು ನಮಗ್ಯಾತಕ್ಕೆ
ಬ್ಯಾಡ ಇಂಥ ಕೆಟ್ಟಮಾತು ಆಡದಿರು ಎಲವೋ || ೩೨ ||

ಕನ್ನೆಮಣಿಯೇ ಕೇಳು ನೀನು ಎನ್ನ ಕೂಡೆ ಮುನಿಸೇತಕ್ಕೆ
ಹೊನ್ನ ಕೊಟ್ಟು ನಿನ್ನ ಮನ್ನಿಸುವೆ।
ಆಹೋಹೋ ಸೈರೇಂದ್ರಿ ನಿನ್ನ ಮಾಡಿಕೊಳದೆ ನಾ ಬಿಡೆನೆ || ೩೩ ||

ಹೊನ್ನ ಒಲ್ಲೆ ಚಿನ್ನ ಒಲ್ಲೆ ನಿನ್ನ ಸೇವೆ ಮೊದಲೆ ಒಲ್ಲೆ
ಗನ್ನಗತಕ ನುಡಿಯು ಸಲ್ಲದು ಕೆಟ್ಟದುರುಳ ಕೀಚಕ
ನಿನ್ನ ಹಲ್ಲ ಮುರಿಸಾದೆ ನಾ ಬಿಡೆ || ೩೪ ||

ಹಲ್ಲ ಮುರಿಸುವೆನೆಂದು ಎನಗೆ ಸಲ್ಲದಾ ಮಾತಾಡಿದರೀಗಾ
ನಲ್ಲೆ ನಿನ್ನ ಸೀರೆ ಕಳಚುವೆನೇ ಆಹೋಹೋ।
ಸೈರೇಂದ್ರಿ ಗಲ್ಲಕಡಿದು ಗಮಕ ಮಾಡುವೆನೇ || ೩೫ ||

ಎನ್ನ ಮಾನ ಕಳೆಯಾದಿರೋ ನಿನ್ನ ವಶವಾದೆ ನಾ ಈಗ
ಭಿನ್ನವಿಲ್ಲದೆ ಕಳುಹಿಸೋ ಮನೆಗೆ ನಾ ಬರುವೆ ನಾಳೆಗೆ
ನನ್ನ ಮಾತ ನಂಬೋ ನೀನೀಗಾ || ೩೬ ||

ಮಂದಗಾಮಿನಿ ನಿನ್ನ ವಚನ ನಂಬಿದೆ ಪೋಗೆಂದಲ್ಲಿಗೆ
ಸಂದುದು ಒಂದು ವರುಷ ಪಾಂಡವಾರ್ಗೆ ಎಂದ ಮುನಿರಾಯ || ೩೭ ||

ಮುಂದೆ ಕಥೆ ಕೇಳಯ್ಯ ಪೇಳುವೆ ಸುಂದರಾಂಗಿ
ಸೈರೇಂದ್ರಿ ಭರದಿ ಬಂದು ಭೀಮನ ಪಾದದಿ ಬಿದ್ದು
ನಿಂದು ನಮಿಸಿದಳೂ || ೩೮ ||

ಮಡದಿಯ ಪಿಡಿದೆತ್ತುತ ಭೀಮ ನುಡಿಸಿ ಕೇಳಿದ ಶೋಕವಿದ್ಯಾತಕ್ಕೆ
ಬಿಡದೆ ಪೇಳೆ ಎನ್ನ ಮುಂದೆ ಬೆಡಗಿನ ಜಾಣೆ || ೩೯ ||

ಪ್ರಾಣಪತಿಯೆ ಕೇಳು ನೀನು ಮಾನಗೇಡಿ ದುರುಳ ಕೀಚಕನು
ಹೀನತನದಿ ಸೆರಗ ಪಿಡಿದು ಮಾನ ಕಳದಾನು || ೪೦ ||

ಕಾಂತೆ ನೀನು ಎನ್ನ ಮುಂದೆ ಇಂಥ ಮಾತ ಉಸುರಲಿ ಬೇಡ
ಕಾಂತರುಂಟು ಬೇರೆ ನಾಲ್ವಾರು ಅವರಲ್ಲಿಗೆ ಸಾಗೇ || ೪೧ ||

ಪತಿಗಳೈವರೊಳಗೆ ನೀನು ಅತಿಮೋಹದ ಪುರುಷನೆಂದೂ
ಸತಿಯು ಬಂದರವಳ ಶೋಕಾ ಹಿತವಾಯಿತೆ ನಿನಗೆ || ೪೨ ||

ನಾರಿ ನಿನ್ನ ಶೋಕವನ್ನು ದೂರಮಾಡದಾಗದೆನ್ನಿಂದಾ
ಧೀರಪಾರ್ಥರಮಣರಿಗೆ ಪೇಳಿ ಪಾರುಮಾಡಿಕೊ || ೪೩ ||

ಹೆಂಡತಿಗೆ ಬಂದಭಿಮಾನ ಗಂಡ ಕೇಳಿ ಕಾಯದೆ ಬಿಡನು
ಷಂಡರಂತೆ ಮಾತಾಡುವರೆ ಭಂಡ ಪುರುಷನೆ ನೀ || ೪೪ ||

ದಿಂತೆ ಹೆಣ್ಣೆ ಎನಗೆ ನೀನು ಷಂಡನೆಂದು ಜರಿಯಬಹುದೆ
ಮಂಡಲಾದೊಳಿದಿರ್ಯಾರುಂಟು ಗಂಡಸರೊಳು || ೪೫ ||

ಸ್ತ್ರೀಯುಳಿಗೆ ಬಂದಭಿಮಾನ ಪೇಳಲಾಗಿ ಬಾರದ ಕೋಪ
ಜಾಳುಮಾತಿಗೆ ಖತಿಯು ನೀನು ತಾಳಿ ಫಲವೇನು || ೪೬ ||

ನಿನ್ನಭಿಮಾನವನು ಕಳೆದ ಕುನ್ನಿ ಖೂಳನ ಶಿರವ ಭೂಮಿ
ಗಿಳಿಸದ್ದೋದರೆ ನಾನು ಧನುವ ಪಿಡಿವೆ ಏನೇ || ೪೭ ||

ನಾಳೆ ಬರುವೆನೆಂದು ನಾನು ಮೂಳ ಕೀಚಕಗ್ಹೇಳಿ ಬಂದಿಹೆನು
ಏಳು ನೀನು ಎನ್ನ ಬೆಂಬಲದಿ ಖೂಳನರಮನಿಗೇ || ೪೮ ||

ಅರಮನಿಗೆ ಬಂದರೆ ನಾನು ಪುರುಷನೆಂದು ತಿಳಿದು ಖೂಳನು
ಬರದೆ ಹೆದರಿ ಪೋದಾನು ಕಾಂತೆ ದುರುಳ ಕೀಚಕನ || ೪೯ ||

ಕಾಂತ ನೀನು ಹೆಣ್ಣಿನ ರೂಪ ಚಿಂತೆ ಇಲ್ಲದೆ ತಾಳಿ ಬಂದರೆ
ಭ್ರಾಂತಗೇಡಿ ಬರುವ ಅಲ್ಲಿಗೆ ಏಕಾಂತ ಮಾಡಲಿಕೆ || ೫೦ ||

ನಾರಿ ನಿನ್ನ ಕುಪ್ಪಸ ಸೀರೆ ತಾರೆ ತಾಳುವೆ ಸ್ತ್ರೀರೂಪವನ್ನು
ನೀರೆ ನಿಲ್ಲುವುದೇಕೆ ಈಗ ಬಾರೆ ಹೋಗೋನು ||೫೧||

ಭರದಿ ತನ್ನ ವಸ್ತ್ರಗಳನೆಲ್ಲ ಪುರುಷಗಿತ್ತು ಹೆಣ್ಣುರೂಪಿನಲಿ
ಕರದು ತಂದರಮನೆಯೊಳಿರಿಸಿ ಮರೆಯಗೊಂಡಾಳು || ೫೨ ||

ಲಾಲಿಸಿ ತಾ ಕೀಚಕ ಬಂದು ಬಾಲೆ ಏಳೇ ಮಲಗುವದ್ಯಾಕೆ
ಲೋಲದಿಂದ ಎನ್ನೊಡನೆ ವಿಲಾಸ ಮಾಡದೆ || ೫೩ ||

ಪ್ರೀತಿಯಿಲ್ಲದವನ ಕೂಡೆ ಏತರ ವಿಲಾಸವು ನಮಗೆ
ಘಾತಕದಿಂದ ಎನಗೆ ಮೋಸ ಮಾಡಿದೇ || ೫೪ ||

ಅಂಬುಜಾಕ್ಷಿ ಸರಸದಿಂದ ತಾಂಬೂಲಾವ ಸವಿಸಾದೆನಗೆ
ಗಂಧ ಕಸ್ತೂರಿ ಧರಿಸಾದೆ ನೀನು ಹಾಗೆ ಮಲಗುವರೆ || ೫೫ ||

ಪಟ್ಟದರಸಿ ಪ್ರಾಸ್ಯಾಳು ನಿನಗೆ ಕೊಟ್ಟ ಭಾಷೆಗೆ ಬಂದೆ ಇಲ್ಲಿಗೆ
ಇಷ್ಟು ಉಡಾಣೆ ಮಾಡುವದ್ಯಾಕೊ ಪಾಪಿಯೆ || ೫೬ ||

ಮಡದಿ ಮೈ ಕಲ್ಲಾಗಿದೆ ಏಕೆ ಒಡಲರೋಮ ಉಕ್ಕಿನಲಗ್ಯಾಕೆ
ಬೆಡಗು ತಿಳಿಯದಿವಳದು ಎಂದು ಮುಡುಕು ಮಾಡಿದಾ || ೫೭ ||

ಸ್ತ್ರೀಯ ರೂಪ ತಾಳಿಕೊಂಡಿರುವ ವಾಯುಜಾತ ಎದ್ದು ಕೋಪದಲಿ
ನಾಯಿ ನಿಲ್ಲು ನಿಲ್ಲೆನುತಾಗ ಸಾಯೆ ಬಡಿದಾನು || ೫೮ ||

ಮತ್ತೆ ಕೀಚಕ ಎದ್ದು ಅಬ್ಬರದಿ ಎತ್ತಿ ಹೊಡೆಯುಲಾಗ ಭೀಮನು
ತತ್ತರಿಸುತ್ತ ಧರಣಿಗೆ ಬೀಳೆ ಮೂರ್ಛೆಯಿಂದಾಲಿ || ೫೯ ||

ಮರೆಯೊಳಿದ್ದಾ ಸೈಳೇಂದ್ರಿ ನೋಡಿ ಪುರುಷಾ ಮಡಿದಾನೆಂದು ತಿಳಿದು
ತ್ವರಿತದಿಂದ ಬಂದು ನಿಂದಾಳು ಬರಿಯ ಬತ್ತಾಲದಿ || ೬೦ ||

ಚದುರೆ ರೂಪ ಕಂಡು ಕೀಚಕನು ಮದನತಾಪ ಹೆಚ್ಚಿ ಮೋಹದಲಿ
ಬೆದರಿ ಮರೆಯೊಳ್ನಿಂತೆ ನೀನ್ಯಾಕೆ ಮಧುರೆ ಬಾರೆಲೆಗೇ || ೬೧ ||

ನಿದ್ರೆಯಂತೆ ಮಲಗಿದಾ ಭೀಮ ಎದ್ದು ಎದೆಗೆ ಒದೆಯೆ ಆ ಕ್ಷಣದಿ
ಬಿದ್ದ ಭೂಮಿಗೆ ಕೀಚಕ ಒದರಿ ಸದ್ದು ಇಲ್ಲಾದೆ || ೬೨ ||

ಖಳನ ಎದೆಯ ಮೇಲೆ ಭೀಮನು ಕುಳಿತು ಬಾಯೊಳಿರುವ ಪಲ್ಲುಗಳ
ಘಳಿಲಾನೆ ಕಿತ್ತವನ ನಾಲಗೆಯ ಸೇದು ಸೀಳಿದನು || ೬೩ ||

ದುರುಳ ಖಳನ ಕೊಂದು ಭೀಮನು ತರುಣಿ ಅಭಿಮಾನವ ಕಾಯ್ದನು
ಪರಸ್ತ್ರೀಯರಿಗಳುಪಿ ಕೀಚಕನು ಮರಣಹೊಂದಿದನು || ೬೪ ||

ತರಳಾರು ನಾವು ಈ ಚರಿತೆಯನು ಅರಿಯಾದೆ ತಪ್ಪಿದರೆ ಬಲ್ಲವರು
ಚರಣಕೃಪೆಯನಿತ್ತಾರೆ ನಿಮಗೆ ಹರನು ಒಲಿವಾನು || ೬೫ ||

ಇತಿ "ಕೀಚಕ ಸೈಳೇಂದ್ರಿ ವಾದ" ಸಮಾಪ್ತ ಮಂಗಳ ಮಹಾಶ್ರೀಶ್ರೀಶ್ರೀ.

ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ

● ಯು. ಎಸ್. ಎಸ್. ಆರಾಧ್ಯ

ತಮ್ಮದೇ ಆಲಯಗಳ ಅಂತರಾಳದೊಳಗೆ ಕಚ್ಚಿಕೊಂಡಿರುವ
ವಿಷದ ಬೇರುಗಳ ಕೀಳುವ ವೇಳೆಗೇ
ಹಾರೆಗುದ್ದಲಿಗಳ ಕಳೆದುಕೊಳ್ಳುತ್ತಿರುವ,
ಅನ್ಯರ ಅರವತ್ತು ಕವಲುಬೇರುಗಳ
ತಾಯಿ ಬೇರೊಡನೆಯೇ ಕಿತ್ತು ಹೊತ್ತು
ಹೂತ ಹೂಳೆತ್ತುವ ಹುಮ್ಮಸಿಗ ಕ್ರಾಂತಿಕಾರಿಗೆ ಗುರುವಾಗು ಬಾ.

ನೀನಿರುವೆಯೆಂದು ಭಾವಿಸಿದ, ನೀನಿರುವಲ್ಲಿ ಇದೆಯೆಂದು ಭಾವಿಸಿದ
ನಮ್ಮವರ ಬೇರುಗಳ ಶೂನ್ಯನರನಾಡಿಗಳ ಕಥೆಹೇಳಿ ಹೊರಳಾಡಿಸೆಬ್ಬಿಸಲು
ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ.

ನೀನಿದ್ದ ದಿನ ಈ ವಸುಧೈವ ಕುಟುಂಬಕದ ಗಲ್ಲಿಗಲ್ಲಿಗಳ
ಹುಲ್ಲುಹಾಸಿದ ರಹದಾರಿಗಳನೆಲ್ಲ ಹುಡುಕಲು ಹೇಗೆ ಹೊರಗಾಗಿ
ನಿಂತೆಯೆಂಬುದರ ಮಾದರಿಗಾಗಿ
ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ.

ಬೊಮ್ಮವನು ಕಂಡೆವೆಂದು ಸುಮ್ಮನಿರದಿವರ ಕೇಂದ್ರ ಸರಿಪಡಿಸು ಬಾ
ಮಿಂಚಿನೊಡಲಿಗೇ ತಂತಿಜೋಡಿಸುವ ಸಂಚುಗಾರರ ಹೊಂಚುವ
ಕಾದಹೆಂಚಿನ ಮನಮನಕೆ, ಅಗೆದಬೇರಿನ
ಸಾರಜನಕಗಂಟುಗಳ ಗೊಂಚಲಾಗಿ
ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ.

ಕ್ರಾಂತಿ ಹೊತ್ತಿದೆ ಇಲ್ಲಿ ಕನವರಿಸಿ ಕರಿವಾಂತಿ ಕಾರುವವರ ಮೇಲೆ
ಯಾರ ಮೈ ಬಿಸುಗೆ ಬಿಡಲಾರದೆಂಬುದನರಸೆ
ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ.

ಕಾಮನಬಿಲ್ಲಿನೇಳುವರ್ಣಗಳೊಳಗೆ ಏಳರ ಶನಿಯಂತೆ
ಲಯವಾಗುವವಗೊಂದು ಬಿಳಿಬೆಳಕರೂಪ ಕೊಡಲು
ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ.

ಮಣ್ಣಿನ ವಾಸನೆಯವರ ಮಣ್ಣ ಬಣ್ಣವ ತೋರಿ
ನಿನ್ನ ನಾನೂರು ಹೋಳುಗಳನೆಲ್ಲ ಒಂದುಗೂಡಿಸಿಕೊಂಡು
ನಾಲ್ಕುದಿನಕಾಗಿ ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ.

● ●

ಹೆಣ

● ಟಿ. ಎಂ. ರಮೇಶ್

ಆ ದಿವಸ ಗಾಯತ್ರಕ್ಕ ಏಳುವುದು ದಿನಕ್ಕಿಂತ ಸ್ವಲ್ಪ ತಡವಾಗಿ ಹೋಗಿತ್ತು. ಮೂರುಗಂಟೆಗೇ ಏಳುತ್ತಲಿದ್ದ ಅವಳಿಗೆ, ನಾಲ್ಕು ತಿಂಗಳಾದರೂ ಎಂದೂ ಹೀಗಾಗಿರಲಿಲ್ಲ ಎಂದುಕೊಳ್ಳುತ್ತ ಆಕೆ ಹೊರಬಂದಳು. ಬೆಳ್ಳಿಯಿನ್ನು ಮೂಡಿರಲಿಲ್ಲ. ಆದರೆ ಮೇಲಿನ ನಕ್ಷತ್ರರಾಶಿ ದಿನಾ ನೀನಿಷ್ಟುಹೊತ್ತಿಗೆ ಎದ್ದು ಬಹಳ ಹೊತ್ತಾಗಿರುತ್ತಿತ್ತು ಎಂಬುದನ್ನ ಸೂಚಿಸುತ್ತಿದ್ದವು.... ಇಂದು ಯಾವ ಕಾರಣದಿಂದಲೂ ಕೆರೆಗೆ ಹೋಗುವುದನ್ನ ತಪ್ಪಿಸಕೂಡದು. ಇವತ್ತು ಬಾರಕೂರಿಗೆ ಹೋದರೆ ಮರಳಿ ಬರುವುದು ಇನ್ನು ನಾಲ್ಕೆಂಟುದಿನ ತಡೆ. ಇಂದು ಹೋಗಲೇಬೇಕು– ಆಕೆ ಅಂದುಕೊಂಡಳು. ಬಾಗಿಲನ್ನ ತೆರೆದ ಹಾಗೇ ಬಿಟ್ಟು ಒಳಹೋಗಿ ಸೀರೆ ತುಂಡೊಂದನ್ನ ತೆಗೆದುಕೊಂಡಳು. ಒಳಬಾಗಿಲನ್ನ ತೆಗೆದುಹಾಕಿ ಮಾಡಿದ ಶಬ್ದಕ್ಕೆ ನಾಗವೇಣಿಗೆ ಎಚ್ಚರವಾಯಿತು. "ಬಾಗ್ಲು ಹಾಕ್ಕಂಡು ಹೋಗು ಹಿರಿಯಮ್ಮ–ಚಳಿ" ಎಂದು ಹೇಳಿದ ಆಕೆ ಪುನಃ ಮುಸುಕೆಳೆದಳು. ಗಾಯತ್ರಕ್ಕ ಬಾಗಿಲು ಮುಳಿಸಿ ಮೆಟ್ಟಲಿಳಿದು ಕೆರೆಯ ದಿಕ್ಕಿಗೆ ನಡೆದಳು.

....ಅವಳು ಗಂಡ ಸತ್ತಂದಿನಿಂದ ಮೂರು ಮೂರೂವರೆಗೆ ಏಳುತ್ತಾಳೆ. ಹೋಗಿ ಕೆರೆಯಲ್ಲಿ ಈಸುತ್ತಾಳೆ, ಮುಳುಗೇಳುತ್ತಾಳೆ, ದೂರದಲ್ಲಿ ಆಂಜನೇಯನಿಗೆ ಅಭಿಮುಖವಾಗಿ ಕುಳಿತು ಜಪ ಪ್ರಾರಂಭಿಸುತ್ತಾಳೆ. ಹೆಣದಂತೆ ಅಲ್ಲಾಡದವೆ ಕುಳಿತು ಶಿಲೆಯಾಗಿ ಜಪ ಮಾಡುತ್ತಾಳೆ– ಬೆಳ್ಳಿ ಮುಳುಗುವತನಕ. ಐದೂವರೆ ಹೊತ್ತಿಗೆ ಆಕೆ ಮತ್ತೊಮ್ಮೆ ಮಿಂದು ಬರುವಾಗ ಜೀಜಿಮನೆ ಸರಸತ್ತೆ ಕೆರೆಯತ್ತ ಹೊರಟಿರುತ್ತಾಳೆ. ಗಾಯತ್ರಕ್ಕ ವಿಧವೆಯಾಗಿ ಏಳೆಂಟು ತಿಂಗಳಾಯಿತಷ್ಟೆ. ರಾಮಕೃಷ್ಣನ ಎರಡನೇ ಹೆಂಡತಿಯಾಗಿದ್ದರೂ ಮಹಾ ಪತಿವ್ರತೆ. ಅವಳಷ್ಟು ನಿಷ್ಠೆಯಿಂದ ಆ ರೀತಿಯ ದಿನಚರಿ ಬೆಳೆಸಿಕೊಂಡವರು ಯಾರೂ ಇಲ್ಲ—

—ಎಂದು ಭಾವಿಸುತ್ತಾರೆ ಜನ. ಬಹುಶಃ ಆಂಜನೇಯನಗುಡಿಗೆ ಹೋಗುವಂತಿದ್ದರೆ ಅಥವಾ ಆಂಜನೇಯನ ಬದಲು ಅಲ್ಲಿ ಬೇರೆ ಯಾವುದಾದರೂ ದೇವ

ರಿದ್ದಿದ್ದರೆ ಇಷ್ಟು ಹೊತ್ತಿಗೆ ಗಾಯತ್ರಕ್ಕ ದೇವರನ್ನು ಪ್ರತ್ಯಕ್ಷ ಮಾಡಿಕೊಂಡು ಬಿಡುತ್ತಿದ್ದಳು ಎಂದವರು ಅನ್ನುವುದುಂಟು....

ಕತ್ತಲೆಯಲ್ಲಿಯೆ ಅಭ್ಯಾಸಬಲದ ಮೇಲೆ ಆಕೆ ಬಿರಬಿರನೆ ನಡೆದಳು. ಕೆರೆಯ ದಡದಲ್ಲಿನ ಕಣಿಗಲಮರದ ಹತ್ತಿರಹೋಗಿ ತಂದ ಸೀರೆತುಂಡನ್ನ ಅಲ್ಲಿಟ್ಟಳು. ಬೆಳ್ಳಿ ಮೂಡಿರಲಿಲ್ಲ. ಏಳುವುದು ಬಹಳ ತಡವಾಗಲಿಲ್ಲ– ಎಂದು ಭಾವಿಸಿದಳು. ಒಂದು ಗಳಿಗೆ ತಡವಾಗಿರಬೇಕು, ಅಷ್ಟೆ. ಸೀರೆಯನ್ನ ಕಚ್ಚೆ ಹಾಕಿ ಬಿಗಿದು ನೀರಿಗೆ ಧುಮುಕಿದಳು.

ಗಾಯತ್ರಕ್ಕ ಈಸುವುದನ್ನ ಜನ ನೋಡಿದ್ದುಂಟು; ಈಗಲ್ಲ. ಅವಳು ವಿಧವೆಯಾಗುವ ಮುನ್ನ, ಮಧ್ಯಾಹ್ನದ ಹೊತ್ತಿಗೆ ಅವಳು ಸ್ನಾನಕ್ಕೆ ಬಂದಾಗ ಈಸುತ್ತಿದ್ದಳು. ಈಸುವುದನ್ನ ಆಕೆಗೆ ಯಾರೂ ಕಲಿಸಿಕೊಡಬೇಕಾಗಿರಲೇ ಇಲ್ಲ. ಹೇಳಿ ಕೇಳಿ ಆಕೆ ಸರಿಗದ್ದೆಯ ಹೆಣ್ಣು. ಅಲ್ಲಿಯ ಎರಡಾಳು ಗುಂಡಿಯಲ್ಲಿ ತೇಲಿದವಳು. ಬಿತ್ತಲಗದ್ದೆ ಸೇರಿದ ಬಳಿಕ ಅವಳು ಹಲವಾರು ಹುಡುಗಿಯರಿಗೆ ಈಸು ಕಲಿಸಿದ್ದುಂಟು. ಗಾಯತ್ರಕ್ಕ ಈಸುವುದನ್ನ ನೋಡಬೇಕು. ವೇಗವಾಗಿ ಈಸುತ್ತಾಳೆ, ಚಂದವಾಗಿ ಈಸುತ್ತಾಳೆ. ಊರಿನ ಪ್ರಖ್ಯಾತ ಈಸುಗಾರ ಹುಡುಗರು ಮಾಡುವ ವಿದ್ಯೆಗಳನ್ನೆಲ್ಲ ಮಾಡುತ್ತಾಳೆ–ಒಂದನ್ನ ಬಿಟ್ಟು. ಅವರು ಆಂಜನೇಯನಗುಡಿಗೆ ಈಸಿಹೋದರೆ ಇವಳು ಹೋಗುವುದಿಲ್ಲ; ಹೋಗುವಂತಿಲ್ಲ. ತನ್ನ ಕೆರೆಯಲ್ಲಿ ಸರ್ವರಿಗೂ ಸ್ನಾನಮಾಡಲು ಪರವಾನಿಗಿ ಕೊಟ್ಟದ್ದ ಆಂಜನೇಯ ಹೆಂಗಸರನ್ನ ತನ್ನಲ್ಲಿ ಸೇರಿಸುತ್ತಿರಲಿಲ್ಲ. ಅಲ್ಲಿಯ ಜನರು ಅದಕ್ಕೊಂದು ಕಥೆಯನ್ನೇ ಹೇಳುವುದುಂಟು.

ದೇವಸ್ಥಾನದ ಕಟ್ಟೆಯನ್ನ ಹಿಡಿದು ಮೇಲೆ ಹತ್ತಿದಳು. ವರ್ಷದ ಮೊದಲ ಮಳೆಯೂ ಬಿದ್ದಿರದಿದ್ದರಿಂದ ನೀರು ಗುಡಿಯ ಎರಡು ಮೂರು ಮೆಟ್ಟಲುಗಳಲ್ಲಿಗೆ ಇಳಿದಿತ್ತು. ಚಾವಡಿಯಲ್ಲಿ ನಿಂತು ಕೂದಲನ್ನೊಮ್ಮೆ ಹಿಂಡಿದಳು. ದಿನಾ ಬೆಳ್ಳಿ ಮೂಡುವಹೊತ್ತು. ಸುತ್ತ ನೋಡಿದಳು. ನಕ್ಷತ್ರದ ಬೆಳಕು ಮುಸುಕು ಮುಸುಕಾಗಿ ಹರಡಿದ್ದರಿಂದ ಯಾರಿದ್ದರೂ ಕಾಣಿಸುವಂತಿತ್ತು. ಅವರು ಬಂದಿಲ್ಲ. ಬಂದಿದ್ದರೆ ಅದೂ ಆ ಮೂರನೇ ಅಥವಾ ನಾಲ್ಕನೇ ಕಂಭಕ್ಕೊರಗಿ ನಿಂತಿರುತ್ತಿದ್ದರು– ಅವಳು ಅಂದುಕೊಂಡಳು. ಬಾಗಿಲಲ್ಲೆ ನಿಂತು ಆಂಜನೇಯನನ್ನೊಮ್ಮೆ ನೋಡಿ ನಕ್ಕು ನಿಧಾನವಾಗಿ ಒಳಗೆ ಅಡಿಯಿರಿಸಿದಳು. ಎದೆ ಧಸಕ್ಕೆಂದಿತು.

ಬಾಗಿಲ ಎದುರೇ ಅಡ್ಡವಾಗಿ ಮಲಗಿತ್ತೊಂದು ಆಕೃತಿ. ಯಾವುದೋ ವ್ಯಕ್ತಿ–ಆಕಾರ ಹೇಳಿತು. ತಾನು ಇಲ್ಲಿ ಬಂದದ್ದು ಅವರಿಗೆ ತಿಳಿದರೆ?

ಯಾರೆಂದು ನೋಡಲು ಬಗ್ಗಿದಳು. ಮುಖ ಸ್ಪಷ್ಟವಾಗಿ ಕಾಣಲಿಲ್ಲ. ಹೆಣ್ಣು ಎಂಬುದು ಸ್ಪಷ್ಟವಾಯಿತು. ತಾವಿಬ್ಬರೂ ಕಳ್ಳರೆ ಎಂದು ಒಮ್ಮೆಗೇ ಅನ್ನಿಸಿದರೂ ಪೂರ್ಣ ಸಮಾಧಾನವಾಗಲಿಲ್ಲ. ಭಯವಾಗಿ ಹಿಮ್ಮೆಟ್ಟಿದಳು. ತಾನು ಬಾಗಿಲಿಗೆ ಅಡ್ಡವಾಗಿ ನಿಂತಿರುವುದರಿಂದ ಹೆಣದಮುಖ ಸರಿಯಾಗಿ ಕಾಣುತ್ತಿಲ್ಲ ಎಂದಾಕೆಗೆ ಹೊಳೆಯಿತು. ಬದಿಗೆ ಸರಿದಳು. ನಕ್ಷತ್ರದ ಬೆಳಕಿನಲ್ಲಿ ಮಲಗಿದವರ ಮುಖ ಮಸಕು ಮಸಕಾಗಿ ಕಾಣಿಸಿತು. ಗಮನಿಸಿದಳು. ಧೈರ್ಯಗೊಂಡಳು. ಬಗ್ಗಿದಳು. ಮುಖವನ್ನು ನಿರುಕಿಸಿದಳು. ಮೂಗಿನ ಮೇಲೆ ಕೈಯಿಟ್ಟಳು. ಕೈಹಿಡಿದು ದೊಪ್ಪನೆ ಬಿಟ್ಟಳು. ಹೆಣ !

ನಕ್ಷತ್ರದ ಬೆಳಕು ಈಗ ನೇರವಾಗಿ ಹೆಣದ ಮುಖಕ್ಕೇ ಬೀಳುತ್ತಿದ್ದಂತಿತ್ತು. ನೋಡಿದಳು, ಎದೆ ಜೋರಾಗಿ ಬಡಿದುಕೊಂಡಿತು. ಸತ್ತವಳು ಗೆಳತಿಯಾಗಿದ್ದವಳು – ಭಟ್ಟರ ಮನೆ ಸುಭದ್ರ. ನಾಲ್ಕು ದಿನದಿಂದ ನಡೆದ ಗಲಾಟೆಯ ಪರಿಣಾಮ ಇದು. ಅಯ್ಯೋ ಗೆಳತಿ, ನಿನಗೆ ನನ್ನ ಗೆಳೆತನ ಸಾಲಲಿಲ್ಲ – ಗಾಯತ್ರಕ್ಕ ಮರುಗಿದಳು.

ಅವಳು ಕಂಭವೊಂದನ್ನು ಆಧರಿಸಿ ನಿಂತಳು. ಆಕೆಯ ಮೈ ನಡುಗುತ್ತಿತ್ತು. ದಿನಾ ಚಳಿಯಲ್ಲಿ ನೀರಿಗೆ ನುಗ್ಗಿ ಅಭ್ಯಾಸವಾಗಿತ್ತು. ನೀರಿಂದ ಎದ್ದಾಗ ಚಳಿಯಾಗುತ್ತಿದ್ದರೂ ದೇವಸ್ಥಾನ ಬೆಚ್ಚಗಿರುತ್ತಿತ್ತು. ಆದರೂ ಈಗ ನಡುಕ. ಆಂಜನೇಯನತ್ತ ನೋಡಿದಳು. ಅವನ ಗದೆ ಹೆಗಲಿಗೆ ಏರುತ್ತಿತ್ತು. ಭೀಕರವಾಗಿ ಕಂಡ. ಸುಭದ್ರಳನ್ನು ನೋಡಿದಳು. ವಿಕಾರವಾಗಿ ಕಂಡಳು. ಎಷ್ಟೇ ಗಟ್ಟಿಯಾಗಿ ಹಿಡಿದರೂ ಜೀವ ಒದ್ದಾಡಿತು. ಹೊರಗೋಡಿದಳು.

ಬೆಳ್ಳಿಯನ್ನು ಮೋಡವೊಂದು ಮುಚ್ಚಿತ್ತು. ಇಷ್ಟು ಹೊತ್ತಿಗಾಗಲೆ ಅವರು ಬರಬೇಕಾಗಿತ್ತು. ಅಯ್ಯೋ ಬರಲೇ ಇಲ್ಲ. ಬರುತ್ತಾರೋ ಇಲ್ಲವೋ. ಅಯ್ಯೋ, ಹೆದರಿಕೆಯಾಗುತ್ತಿದೆ, ಅವರು ಬರಲೇ ಇಲ್ಲ. ಇವತ್ತು ಅವರು ಬರಲೇಬೇಕು– ಉಹೂಂ, ನಾನು ಬಾರಕೂರಿಗೆ ಹೋಗುವುದು ಅವರಿಗೆ ತಿಳಿದಂತಿಲ್ಲ, ಬರಲಾರರು. ಬರುವುದಿದ್ದರೆ ಇಷ್ಟುಹೊತ್ತಿಗೆ ಬಂದುಬಿಡುತ್ತಿದ್ದರು. ವಾಪಸಾಗಿ ಬಿಡಬೇಕು. ಹೆದರಿಕೆ. ಊರಿಗೆ ಹೋಗಿ ಸುಭದ್ರಳ ಹೆಣ ಗುಡಿಯಲ್ಲಿದೆ–ಪಾಪಿಗಳಾ ನೋಡಿ ಎಂದು ತಿಳಿಸಬೇಕು…… ನಿನಗೆ ಹೇಗೆ ತಿಳಿಯಿತು. ಅಂದರೆ?– ಗಾಯತ್ರಕ್ಕ ಸಣ್ಣದಾಗಿ ನಡುಗಿದಳು.

ಗಾಯತ್ರಕ್ಕನಿಗಿಂತ ಮುಂಚೆ ಅಲ್ಲಿ ಎಂದೂ ಯಾರೂ ಈಸಿ ಬರುತ್ತಿರಲಿಲ್ಲ. ಇಂದು ಸುಭದ್ರ ಬಂದಿದ್ದಾಳೆ. ಸುಭದ್ರ ಗಾಯತ್ರಕ್ಕನ ಶಿಷ್ಯೆಯೇ. ಸುಭದ್ರ

ಳಿಗೆ ಗಾಯತ್ರಕ್ಕನೇ ಈಸು ಕಲಿಸಿಕೊಟ್ಟವಳು. ನಿನ್ನೆಯೇ ಗಾಯತ್ರಕ್ಕ ಯೋಚಿಸಿದ್ದಳು– ಸುಭದ್ರ ಹೆಚ್ಚು ದಿನ ಉಳಿಯುವುದಿಲ್ಲ ಎಂದು. ಸುಭದ್ರ ಮತ್ತೆ ಮುಳುಗಿ ಗಿಳುಗಿ ಸತ್ತಳೋ?– ಗಾಯತ್ರಕ್ಕ ಯೋಚಿಸಿದಳು: ಅವಳು ಸುಭದ್ರಳಿಗೆ ಆಳವಿಲ್ಲದಲ್ಲಿ ಈಸುವುದನ್ನ ಮಾತ್ರ ಕಲಿಸಿದ್ದಳು. ತನ್ನ ಹಾಗೇ ಅವಳಿಗೂ ಆಂಜನೇಯನ ಮೇಲೆ ಸಿಟ್ಟು. ಅದಕ್ಕೆ ಅವನೆದುರೇ, ಅವನ ನಿಯಮವನ್ನು ಮುರಿದು ಸತ್ತಿದ್ದಾಳೆ. ಪಾಪ ಸುಭದ್ರಳದೇನು ತಪ್ಪು ? ಅವಳ ಹೆಣ ದೇವಾಲಯವನ್ನು ಅಪವಿತ್ರಗೊಳಿಸಿದೆ. ಹೆಣದ್ದು ತಪ್ಪು. ಹೆಣಕ್ಕೆ ಕಾರಣರಾದವರದ್ದು ತಪ್ಪು.

ಪಾಪ, ಸುಭದ್ರ. ಗಾಯತ್ರಕ್ಕ ಒಳಬಂದಳು. ಸುಭದ್ರಳ ಕೆನ್ನೆಯನ್ನು ಸವರಿದಳು. ಭಯವೆನ್ನಿಸಲಿಲ್ಲ. ಛೀ, ಪಾಪ. ಅಯ್ಯೋ ಪಾಪ. ಬೆಳೆಯುವ ವಯಸ್ಸು ಪಾಪ. ಗಂಡನನ್ನು ಕಾಣಲಿಲ್ಲ, ಮಕ್ಕಳನ್ನ ಮುದ್ದಾಡಲಿಲ್ಲ, ಪಾಪ. ಪಾಪ, ಇವಳೇ ಪಾಪ ! ಪಾಪವೇ ಸತ್ತುಹೋಯಿತು ? ಸುಭದ್ರ ಸತ್ತಳು. ಸತ್ತವರ ಸ್ಮರಣೆ ಮಾಡಬೇಕಂತೆ– ಗಾಯತ್ರಕ್ಕ ಅಂದುಕೊಂಡಳು.

ಸುಭದ್ರ ನೆರೆದದ್ದು ಹದಿನಾಲ್ಕಕ್ಕೆ. ಈಗವಳಿಗೆ ಇಪ್ಪತ್ತೈದು. ಹನ್ನೊಂದು ವರ್ಷಗಳ ಕಾಲ ಬಯಕೆಯ ಕೂಸಾಗಿದ್ದಳು. ಅವಳದು ತಪ್ಪಿಲ್ಲ; ಅವಳಿಗೆ ಗಂಡು ಜೀವ ಕೊಳ್ಳಲಾಗಲಿಲ್ಲ. ಸುಭದ್ರ ಪಾಪ, ಒಳ್ಳೆಯವಳು. ನನ್ನೊಡನೆ ಸುಖ ದುಃಖಗಳಲ್ಲಿ ಭಾಗಿಯಾದಳು. ಅವರು ಸತ್ತಾಗ ಬಂದು ಸಮಾಧಾನ ಹೇಳಿದವಳು. ಹೆಣದ ಮುಖ ಹೊತ್ತವಳು ನಾನು. ಕೆರೆಯ ದಡಕ್ಕೆ ನನ್ನನ್ನು ಕರೆತಂದು ಸಮಾಧಾನ ಹೇಳಿದವಳು. ಓದದಿದ್ದರೂ ಅಪಾರ ಬುದ್ಧಿವಂತಿಕೆಯುಳ್ಳವಳು. ಕುರಿಯಾದರೂ ಬಲಿ, ಕುದುರೆಯಾದರೂ ಬಲಿ. . ಬೆಳ್ಳಿ ಕಂಡಿತು. ಸೂರ್ಯ ಉದಯಿಸಿದಾಗ ಊರು ಕಂಡಿತು. . . . . . ಅವಳು ಬಯಲಿಗೆ ಬಂದಳು. ತಾನಾಗಿ ಸಾಯುವುದಕ್ಕಿಂತ ಬೇರೆಯವರಿಂದ ಸಾಯಿಸಿಕೊಂಡಳು. ಎರಡೇ ವಿಧ ? ನಾನು ಸಾಯಲು ಬಯಸಲಿಲ್ಲ– ಗಾಯತ್ರಕ್ಕ ಯೋಚಿಸಿದಳು.

"ಬೆಳ್ಳಿ ಬೆಳ್ಳಗಾಗಿ, ಗಾಯತ್ರಕ್ಕನ ಜಪ ಮುಗಿಯುವ ಹೊತ್ತು, ಏಳ್ರಿ" ಎಂದು ಊರಿನ ತಾಯಂದಿರು ತಮ್ಮ ಹೆಮ್ಮಕ್ಕಳನ್ನ ಎಬ್ಬಿಸುವ ಹೊತ್ತು. ಇನ್ನು ಇಂದು ಗೌಡರು ಬರುವುದಿಲ್ಲ. ಸೂರ್ಯ ಮೂಡುವ ಹೊತ್ತಾಗುತ್ತಿದೆ, ಬೇಗನೆ ಆಚೆ ದಾಟಬೇಕು ಎಂದುಕೊಂಡ ಗಾಯತ್ರಕ್ಕ ನೀರಿಗಿಳಿಯಲು ತಯಾರಾದಳು. ಒಮ್ಮೆ ಹಿಂದೆ ನೋಡಿದಳು. ಬಾಗಿಲಿಗೆ ಅಡ್ಡವಾಗಿದ್ದರಿಂದ ಸುಭದ್ರಳ ಹೆಣ ಕಾಣಲಿಲ್ಲ. ಮಧ್ಯಾಹ್ನದತನಕ ಹೆಣ ಅಲ್ಲೇ ಕೊಳೆಯುತ್ತಿರಬೇಕು. ಹತ್ತು ಗಂಟೆಗೋ ಹನ್ನೊಂದು ಗಂಟೆಗೋ ಊರ ಹುಡುಗರು ಸ್ನಾನಕ್ಕೆ ಬಂದಾಗ ಈಸಿ

ಕೊಂಡು ಬರುತ್ತಾರೆ. ಹೆಣ ನೋಡುತ್ತಾರೆ. ಸುದ್ದಿ ಮುಟ್ಟಿಸುತ್ತಾರೆ. ಅಷ್ಟು ಹೊತ್ತಿನತನಕ ಆಂಜನೇಯ ಹೆಣ ಕಾಯಬೇಕು! ಇವತ್ತು ಶನಿವಾರವೂ ಅಲ್ಲ. ಶನಿವಾರವಾಗಿದ್ದರೆ ಪೂಜೆಮಾಡುವುದಕ್ಕೆಂದು ಸೂರಭಟ್ಟರು ಎಂಟುಗಂಟೆಗೇ ಬರುತ್ತಿದ್ದರು.

ದಿನದ ಜಡತೆ, ಆಯಾಸ ಇರದುದರಿಂದಲೋ ಏನೋ ಈಸುವ ವೇಗವನ್ನ ಹೆಚ್ಚಿಸಿಕೊಂಡು ಸಾಗಿದಳು. ದಡ ಹತ್ತಿನಿಂತು ದೇವಸ್ಥಾನದತ್ತ ತಿರುಗಿ ನೋಡಿದಳು. ಆಂಜನೇಯನನ್ನ ನಂಬಿಕೊಂಡು ಬದುಕಿದ್ದಕ್ಕೆ ತನ್ನನ್ನು ಬ್ರಹ್ಮಚಾರಿಣಿಯಾಗಿರಿಸಲು ಮಾಡಿದ ಅವನ ಯತ್ನಕ್ಕೆ, ಅವನ ಮೇಲೆ ಸುಭದ್ರ ಚೆನ್ನಾಗಿಯೇ ಸೇಡು ತೀರಿಸಿಕೊಂಡಿದ್ದಾಳೆ ಎಂದುಕೊಂಡಳು. ಬಯಕೆ ಕೊಟ್ಟಬಳಿಕ ಅದನ್ನ ತೀರಿಸಿಕೊಳ್ಳುವ ಅನುಕೂಲವನ್ನ ದೇವರು ಕೊಡದಿದ್ದಾಗ ಮನುಷ್ಯ ತನ್ನ ಪ್ರಯತ್ನಕ್ಕೆ ಮೊರೆಹೋಗಬೇಕಲ್ಲವೆ?– ತನ್ನ ಸಾಧನೆಗೆ ತಾನೇ ನಕ್ಕಳು ಅವಳು. ಪೂರ್ವದಿಕ್ಕು ಹೊಂಬಣ್ಣಕ್ಕೇರಿತ್ತು. ಮತ್ತೊಮ್ಮೆ ನೀರಿನಲ್ಲಿ ಮುಳುಗಿ ಎದ್ದು ಮರದ ಹತ್ತಿರ ಬಂದಳು. ಅತೃಪ್ತಿ ಚಿಮುಕಿತು. ನಾಳಿನ, ನಾಡದ್ದಿನ, ಅದರ ಮರುದಿನದ ಅತೃಪ್ತಿಯ ಯೋಚನೆ ಕೊರೆಯಿತು. ಸೀರೆತುಂಡಿನಿಂದ ಮೈ ಒರೆಸಿಕೊಂಡಳು. ಉಟ್ಟುದನ್ನು ಬಿಚ್ಚಿ ಮಡಿ ಉಟ್ಟಳು. ಬೆಳಗ್ಗೆ ಸಕ್ಕರೆ ನಿದ್ದೆಯನ್ನ ಹಾಳುಮಾಡಿಕೊಂಡು ಹೆಣದ ಹಾಗೆ ಕೊರೆಯುವ ಚಳಿಯಲ್ಲಿ ಮಿಂದು ಬಾಳುವ ಪರಿಸ್ಥಿತಿ ಬದುಕಿನ ಒಳಸುಳಿಯನ್ನು ಅಂಜಿಕೆಯಿಂದ ಸವಿದಾಗ ಗೌಡರು ಬಹಳ ಸಾರಿ ಹೇಳಿದ್ದರು "ನಮ್ಮನೇಗೆ ಬಂದ್ಬಿಡು. ನಾನು ನಿನ್ನ ನೋಡ್ಕತ್ತೀನಿ. ಠಾಕುಠೀಕಾಗಿ ಊರಲ್ಲಿ ಮೆರೆಸ್ತೀನಿ. ನಿಮ್ಮ ಬ್ರಾಂಬರು ಮಾಡೂದೆಲ್ಲ ಗೊತ್ತೈತಿ. ಬಯಕೆ ಒಣಗ್ಸಿ ಅಂತ ದೇವ್ರೆಂದೂ ಹೇಳೋದಿಲ್ಲ.." ಎಂದು ಅದಕ್ಕೆ ಗಾಯತ್ರಕ್ಕನೇ ತಯಾರಿರಲಿಲ್ಲ.

ಸೂರ್ಯ ಅದೇ ತಾನೆ ಜನಿಸಿದ್ದ. ರಸ್ತೆ ಸ್ವಚ್ಛವಾಗಿ ಕಾಣುತ್ತಿತ್ತು. ದಾರಿಯಲ್ಲಿ ಸರಸತ್ತೆ ಸಿಕ್ಕಿದಳು. ಬೆಳಗಿನ ಫಲಾಹಾರ ಆಗುವತನಕ ಗಾಯತ್ರಕ್ಕ ಯಾರೊಂದಿಗೂ ಮಾತಾಡುವುದಿಲ್ಲ ಎಂದು ತಿಳಿದಿದ್ದ ಸರಸತ್ತೆ ಅವಳನ್ನೇನೂ ಕೇಳಲಿಲ್ಲ. ಗಾಯತ್ರಕ್ಕನ ಮುಖವನ್ನ ನೋಡಿದಳು. ಗಾಯತ್ರಕ್ಕ ಸಣ್ಣಗೆ ನಕ್ಕಳು. ಜನ ಹೇಳುವುದು ನಿಜ, ಸರಸತ್ತೆ ಅಂದುಕೊಂಡಳು, ಗಾಯತ್ರಕ್ಕನ ಮುಖದ ತೇಜಸ್ಸು ಹೆಚ್ಚುತ್ತಿದೆ. ಗಾಯತ್ರಕ್ಕನೂ ಆ ಮಾತನ್ನ ಕೇಳಿದ್ದಳು. ಅವನ್ನ ಅರಿತ ಜನ ಗಾಯತ್ರಕ್ಕನಿಗೆ ಗೌರವದಿಂದ ತಲೆಬಾಗತೊಡಗಿದ್ದರು. ಗಾಯತ್ರಕ್ಕನಿಗೆ ಭಯವಾಯಿತು. ನೆಲ ನೋಡಿ ನಡೆಯತೊಡಗಿದಳು. ಜನ ತಪ್ಪು ಪಾಪಿಗಳು ಎಂದುಕೊಂಡರು. ಅವಳ ತೇಜಸ್ಸು ಹೆಚ್ಚಲು ಅವಳ ನಿಷ್ಠೆ

ಕಾರಣ, ಜಪ ಕಾರಣ ಎಂದು ಭಟ್ಟರ ಅಂಬೋಣ. ಅದೇ ಭಟ್ಟರ ಮಗಳು ಸುಭದ್ರ. ನಿನ್ನೆ ಸುಭದ್ರಳಿಗೆ ಗಾಯತ್ರಕ್ಕನನ್ನ ತೋರಿಸಿ ಕೂಗಾಡಿದ್ದರು. "ಅವಳ್ನ ನೋಡು. ಇವಳ ಹೇಸಿಗೆ ತಿನ್ನ–ಆಗಾದರೂ ಬುದ್ಧಿ ಬರುತ್ತೇನೋ!" ಸುಭದ್ರ, ಪಾಪ. ನಿನ್ನೆ ನಾನು ನನ್ನ ಪಾಪ ಹೇಳಿದ್ದರೆ ಸುಭದ್ರ ಖಂಡಿತ ಉಳಿದುಕೊಳ್ಳುತ್ತಿದ್ದಳು. ನಿನ್ನೆ ನಾಚಿಕ್ಕೆದು ಎನ್ನಿಸಿತ್ತು. ಇಂದು ಈ ಮಾತನ್ನ ಸುಭದ್ರಳಿಗೆ ಹೇಳಬೇಕು ಎಂದುಕೊಂಡಿದ್ದೆ. ಸುಭದ್ರ ಸತ್ತಳು, ಇಂದು ನಾನು ಬದುಕಿ... ಇದು ಸತ್ತವರ ಸ್ವರ್ಗ, ತ್ರಿಶಂಕು ಸ್ವರ್ಗ–ಗಾಯತ್ರಕ್ಕ ಆಲೋಚಿಸಿದಳು.

ಮನೆ ಸೇರಿದ ಗಾಯತ್ರಕ್ಕ ಸೀದಾ ದೇವರಕೋಣೆಗೆ ಹೋಗಿ ವಿಭೂತಿ ಬಳಿದುಕೊಂಡಳು. ಮಡಿ ಮೆಟ್ಟಿಗೆ ಹೋಗಿ ನಿನ್ನೆ ಒಣಗಿಸಿದ ಮಡಿಸೀರೆ ಎತ್ತಿಕೊಂಡಳು. ನಾಗವೇಣಿಯ ಅಮ್ಮ ಸ್ನಾನಮಾಡುತ್ತಿದ್ದಳು. ಮಡಿನೀರು ತಂದ ಗಾಯತ್ರಕ್ಕ ಪುನಃ ದೇವರ ಮುಂದೆ ಕುಳಿತಳು. ರಾಜೀವ ಮುಖ ತೊಳೆದು ಹೊರಗೆ ಹೊರಡುವತನಕ ಜಪ ಮಾಡಿದಳು.

ಸುಭದ್ರ ಸತ್ತಸುದ್ದಿ ಹಬ್ಬಿತು. ಮಧ್ಯಾಹ್ನ ಹನ್ನೆರಡರ ಹೊತ್ತಿಗೆ ಹೆಣವನ್ನ ಊರ ಪಡುಕ್ಕೆ ತಂದ ಸುದ್ದಿಯೂ ಗಾಯತ್ರಕ್ಕನಿಗೆ ತಲುಪಿತು. ದೇವಸ್ಥಾನ ಅಪವಿತ್ರವಾದುದರಿಂದ ಊರಿಗೆ ಊರೇ ಕುಗ್ಗಿಹೋಗಿತ್ತು. ಇನ್ನು ಊರಿಗೆ ಉಳಿಗಾಲವಿಲ್ಲ ಎಂದು ಪಾಡಿ ಹೊಡೆದು ಭಟ್ಟರು ರಕ್ತ ತುಂಬ ತಿರುಗಾಡತೊಡಗಿದ್ದರು. ಸುಭದ್ರಳ ಅಪ್ಪ–ಭಟ್ಟರ ಪಾಲಿಗೆ ಅಕೆ ನಿನ್ನೆಯೇ ಹೆಣ. ಅವರು ತಮ್ಮ ಮನೆಯ ಹತ್ತಿರ ಹೆಣ ತರಲು ಬಿಡಲಿಲ್ಲವಂತೆ. ಕೆರೆಯ ದಡದ ಮೇಲೆ ಊರೇ ನೆರೆಯಿತು. ತಿರುಗಾಟ ಹೇಳದೆ ಕೇಳದೆ ನಿಂತಿತು. ಅವಳಿಗೆ ಆನಂದವಾಯಿತು–ನಾಳೆ ಗೌಡರು ಬರಬಹುದು.

ಸೂರ್ಯ ಪ್ರಖರವಾದ ಬೆಳಕು ಚೆಲ್ಲುತ್ತಿದ್ದಾಗ ಊರವರೊಟ್ಟಿಗೆ ಗಾಯತ್ರಕ್ಕನೂ ಕೆರೆಯ ದಡಕ್ಕೆ ಹೊರಟಳು. ಕೆರೆಯ ದಡದಲ್ಲಿ ಅಪಶಬ್ದದ ಮಾತುಗಳು, ಕೆರೆಯ ದಡದಲ್ಲಿ ಆಗುವ ಅನಾಹುತದ ಮಾತುಗಳು, ಕೆರೆಯ ದಡದಲ್ಲಿ ದೇವರ ನ್ಯಾಯದ ಮಾತುಗಳು, ಕೆರೆಯ ದಡದಲ್ಲಿ ಮನುಷ್ಯ ಗೊಂಬೆಯ ಬಗ್ಗೆ ಮಾತುಗಳು, ಮನುಷ್ಯ ಗೊಂಬೆಯ ಮಾತುಗಳು. ಗಾಯತ್ರಕ್ಕನಿಗೆ ಹಲವರು ದಾರಿಬಿಟ್ಟು ದೂರಸರಿದರು. ಅವಳು ಮಡಿ ಮೈಲಿಗೆಯಾದರೆ ಊಟ ಮಾಡುವ ಮುನ್ನ ಮತ್ತೊಮ್ಮೆ ಸ್ನಾನ ಮಾಡಬೇಕು. ಸುಭದ್ರಳನ್ನ ಯಾರೂ ಮುಟ್ಟಲಿಲ್ಲ. ಸುಭದ್ರಳನ್ನ ಮುಟ್ಟಿದವರನ್ನು ಯಾರೂ ಮುಟ್ಟಲಿಲ್ಲ. ಅವಳು ಮೈಲಿಗೆ. ಗಾಯತ್ರಕ್ಕನಿಗೆ ಖೇದವೆನ್ನಿಸಿತು. ಒಬ್ಬರ ಕಣ್ಣಲ್ಲೂ ಹನಿ ನೀರಿಲ್ಲ.

ಶೌಚಕ್ಕೆ ಹೋದರೆ ಪಾಪವಲ್ಲ, ಗಾಯತ್ರಕ್ಕ ಎಂದೋ ನಿರ್ಧರಿಸಿದ್ದಳು. ಸುಭದ್ರ ಶೀಲಕ್ಕೆ ಕುಂದು ತಂದವಳು. ಮದುವೆಯಾಗದಿದ್ದುದು ಅವಳ ಕರ್ಮ. ಅವಳು ಆಸೆಗೆ ಬಲಿ ಬಿದ್ದಳು. ಅವಳು ಪಾಪಿ. ಊರಿಗೇ ಅಪಮಾನ ಎಸಗಿದವಳು. ಇಂಥವರು ಒಬ್ಬರಿದ್ದರೆ ಸಾಕು, ಊರಿನ ಉಳಿದ ಹೆಣ್ಣುಮಕ್ಕಳು ಇದೇ ದಾರಿ ಹಿಡಿಯುತ್ತಾರೆ. ಭಟ್ಟರು, ಪಾಪ ಅವರಿಗಿನ್ನೂ ಮೂರು ಹೆಣ್ಣುಮಕ್ಕಳು ಇದ್ದಾರೆ. ಹಿರಿಯದು ಹೀಗೆ ಎಂದಾದರೆ ಉಳಿದವರನ್ನು ಕೈ ಹಿಡಿಯಲು ಯಾರು ಮುಂದೆ ಬಂದಾರು? ಇಂಥವಳನ್ನ ಜೀವಂತ ಸುಡಬೇಕು ಎಂದು ಕೂಗಾಡಿದ್ದರು ಜನ. ಅವಳು ಸತ್ತಳು, ಒಳ್ಳೆಯದಾಯಿತು. ಊರ ಪೀಡೆ ಹೋಯಿತು ಎಂದವರು ಅಂದುಕೊಳ್ಳುತ್ತಿದ್ದಾರೆ.

ಇಂಥವರು ಸತ್ತರೆ ಒಳ್ಳೆಯದಾಗುತ್ತದೆ. ಯಾರು ಏನೂ ಮಾಡಲಾರರು. ಇಂಥವರು ತಾವಾಗಿಯೇ ಸಾಯಬೇಕು.

ಸುಭದ್ರ ಮದುವೆಯಾಗದೆ ಸತ್ತಳು. ಅವಳು ಪಿಶಾಚಿಯಾಗುತ್ತಾಳೆ. ಬಯಕೆಯ ನಿಶಾಚರಿಯಾಗುತ್ತಾಳೆ. ಇದ್ದಿದ್ದರೂ ಅದೇ ಆಗುತ್ತಿದ್ದಳು. ಆದರೂ ಅವಳು ಜೀವಂತವಾಗಿರುವುದಿಲ್ಲ. ಇನ್ನು ನನ್ನ ಗೆಳತಿ ಸುಭದ್ರ ಇಲ್ಲ. ಸುಭದ್ರ ಮದುವೆಯಾಗುವ ಆಸೆಯಿಲ್ಲದೆ ಹೆಣವಾದಳು. ನಾನು ಇನ್ನು ಈ ಜನ್ಮದಲ್ಲಿ ಮದುವೆಯೇ ಇಲ್ಲದೆ ಹೆಣವಾಗುವವಳು– ಗಾಯತ್ರಕ್ಕನ ಯೋಚನೆ ಹರಡತೊಡಗಿದಂತೆಲ್ಲ ಅವಳ ಮನಸ್ಸು ಪ್ರಕ್ಷುಬ್ಧವಾಗತೊಡಗಿತು. ಸುಭದ್ರ ಹೆಣವಾಗಿದ್ದಳು, ಉಸಿರಾಡಿದಳು. ಅವಳ ತೇಜಸ್ಸು ಹೆಚ್ಚಿತು, ಹೆಣವಾಗಬೇಕಾಯಿತು. ನಾನೂ ನಾಳೆ...? ಮಡಿಯಲ್ಲಿ ಹೋದರೆ ಜನರ ಬಾಯಲ್ಲಾದರೂ ಕೈಲಾಸ ದೊರಕಬಹುದು– ಗಾಯತ್ರಕ್ಕ ಅಂದುಕೊಂಡಳು.

ಚಿತ್ತಲಗಡ್ಡೆಯೇನೂ ಸಣ್ಣ ಊರಲ್ಲ. ಕೆರೆಯನ್ನ ಸುಮಾರಾಗಿ ಸುತ್ತುವರಿದು ನಿಂತ ಮನೆಗಳೇ ಇಪ್ಪತ್ತಕ್ಕು ಹೆಚ್ಚು. ಹರಡಿನಿಂತ ಮನೆಗಳು ಎಂಟು ಹತ್ತು....ಕೃಪೇಣ ಹೆಣ ನೋಡಬಂದವರಲ್ಲಿ ಹಲವರು ಕರಗಿದರು. ಕಾಗೂರು ಪೋಲೀಸರಿಗೆ ವಿಷಯ ತಿಳಿಯುವ ಮುನ್ನ ಕೆಲಸ ಮುಗಿಸಬೇಕು—ಪಟೇಲರು ಗಡಬಡಿಸಿದರು. ಗೌಡರು ಬೇಗನೆ ಮುಗಿಸಿ ಎಂದರು. ಭಟ್ಟರು ಲಗು ಲಗು ಎಂದರು. ಹೆಗಡೆಯವರು ದನಿಗೂಡಿದರು.

ಪ್ರಮುಖರ ಗುಂಪಿನಲ್ಲಿ ಗೌಡರನ್ನ ಕಂಡಾಗ ಇವರು ಊರಲ್ಲೇ ಇದ್ದಾರೆ ಎಂದುಕೊಂಡಳು ಗಾಯತ್ರಕ್ಕ. ಇಷ್ಟು ಏಕೆ ಬೇಗ್ಗೆ ಬರಲಿಲ್ಲ ಎಂದು ಕೇಳಬೇಕೆಂದುಕೊಂಡಳು. ಇನ್ನು ಕೇಳುವ ಅವಶ್ಯಕತೆಯಾದರು ಏನು? ಎಂದಿದ್ದರೂ ಹೆಣ ಹೆಣವೇ. ಪ್ರೇತ ಹೆಣವೇ. ಕತ್ತಲೆ ಹೆಣವೇ. ಬೊಂಬೆ ಹೆಣವೇ.

ದಾರಿ ಬಿಡಿಸಿಕೊಂಡು ಓಡಿದಳು. ಹದಿನಾಲ್ಕು ವರ್ಷದವಳಿದ್ದಾಗ ಓಡಿದ ಹಾಗೆ ಓಡಿದಳು. ಒಂದೇ ಸವನೆ ಓಡಿಓಡಿ ಮನೆಗೆ ಬಂದಳು. ಮನೆಯಲ್ಲಿ ಯಾರೂ ಕಾಣಲಿಲ್ಲ. ಸೀದಾ ನಡುಮನೆಗೆ ಹೋದಳು. ಗದ್ದೆಹುಳಕ್ಕೆ ಹೊಡೆಯಲೆಂದು ತಂದಿಟ್ಟ ಔಷಧಿಸೀಸೆ ತೆಗೆದುಕೊಂಡಳು.

ಸುಭದ್ರ–ಪಾಪ–ಗಾಯತ್ರಿ–ಬಯಕೆ–ಹೆಣ.

ಅವರೆದುರಿಗೆ ಹೋಗಬೇಕು. ಎಲ್ಲವನ್ನ ಗಳುಹಬೇಕು. ಇದನ್ನ ಸುಭದ್ರ ಬೇರೆಯವರಿಗೆ ಹೇಳಿಕೊಡಬೇಕಾಗಿಲ್ಲ, ನಾನು ಯಾರಿಗೂ ಹೇಳಿಕೊಡಬೇಕಾಗಿಲ್ಲ ಎಂದು ಘೋಷಿಸಬೇಕು. ಇದು ಪ್ರಕೃತಿ ಎನ್ನಬೇಕು. ಗಟಗಟ ಕುಡಿಯಬೇಕು. ಗೌಡರು ತೆಪ್ಪಗೆ ನೋಡುತ್ತಾರೆ. ಜನ ನೋಡುತ್ತಾರೆ. ಈ ಗಾಯತ್ರಿ, ವಿಧವೆ ಗಾಯತ್ರಿ, ರಾಮಕೃಷ್ಣನ ಹೆಂಡತಿ ಗಾಯತ್ರಿ, ಹಾದರಗಿತ್ತಿ ಗಾಯತ್ರಿ ಹೆಣವಾಗುತ್ತಾಳೆ. ಕಾಗೂರು ಪೋಲೀಸರಿಗೆ ತಿಳಿಯುವ ಮುನ್ನ ಅವಳ ಹೆಣವನ್ನ ಸುಡಲಾಗುತ್ತದೆ–ಧಾವಿಸಿದಳು.

ಗಾಯತ್ರಕ್ಕನನ್ನ ನೋಡದೆ ತಮ್ಮ ಮಾತಿನಲ್ಲೇ ಮುಳುಗಿದ್ದ ಊರ ಯುವಕರ ತಂಡದಿಂದ ಗಾಯತ್ರಕ್ಕ ನಿಲ್ಲಬೇಕಾಯಿತು. ಒಬ್ಬ ಹೇಳುತ್ತಿದ್ದ: "ಸುಭದ್ರ ಇದ್ದು ತನ್ನ ತಾಕತ್ತನ್ನ ತೋರಿಸಬೇಕಾಗಿತ್ತು". "ನಿನಗಾ? ಹ್ಹೋಹ್ಹೋ" ಎಲ್ಲ ಘೊಳ್ಳೆಂದು ನಕ್ಕರು...ಉಳಿದು ತೋರಿಸಬೇಕಾಗಿತ್ತು. ಗಾಯತ್ರಕ್ಕ ಪುನರುಚ್ಚರಿಸಿದಳು. ಸುಭದ್ರ ಹೆಣವಾಗಿದ್ದಾಳೆ. ಅವಳನ್ನೀಗ ಎತ್ತಿಕೊಂಡು, ಊಹುಂ, ಹೊತ್ತುಕೊಂಡು ಹೋಗುತ್ತಾರೆ, ಸುಡುತ್ತಾರೆ. ತಲೆಪಾಪ ಹೋಗುವಂತೆ ಸ್ನಾನ ಮಾಡುತ್ತಾರೆ. ಶಾಂತಿ ಮಾಡಿಸುತ್ತಾರೆ. ಜನಿವಾರ ಬದಲು ಮಾಡಿಕೊಳ್ಳುತ್ತಾರೆ. ಭಟ್ಟರ ಜೋಬು ತುಂಬುತ್ತಾರೆ, ಅಷ್ಟೇ.

ಅಷ್ಟೇ, ಜನ ನೋಡುತ್ತಲೇ ಇರುತ್ತಾರೆ. ಆ ಹುಡುಗ ಜ್ಞಾನಿ. ಗಾಯತ್ರಕ್ಕನಿಗೆ ಅನ್ನಿಸಿತು. ಸುಭದ್ರಳತ್ತ ನೋಡಿದಳು. ಅವಳಿಗೆ ಗೌರವವೇನೂ ದೊರೆಯಲಿಲ್ಲ, ದೊರೆಯುವುದೂ ಇಲ್ಲ. ನೋಡುವುದಷ್ಟೇ ಈ ಜನರ ಹಣೆಬರಹ. ಇವರಿಗೆ ಜೀವ ಇಲ್ಲ. ಇವರು ಹೆಣ, ಹಳೆಯ ಹೆಣ. ಗಾಯತ್ರಕ್ಕನಿಗೆ ಏನನ್ನಿಸಿತೋ ಹಿಡಿದಿದ್ದ ಸೀಸೆಯನ್ನ ಬೀಸಿ ಕೆರೆಗೆಸೆದಳು. ಜಂಗುಳಿಯಲ್ಲಿ ನುಗ್ಗಿ ಮುಖ್ಯಸ್ಥರ ಬಳಿ ಬಂದಳು. ಗೌಡರ ಕುತ್ತಿಗೆಯನ್ನ ತನ್ನೆರಡೂ ಕೈಯಿಂದ ಬಳಸಿ ಅಪ್ಪಿಕೊಂಡಳು.

● ●

ಎಂ. ಚಿದಾನಂದಮೂರ್ತಿ ಅವರ 'ಕಲ್ಪನಾವಿಲಾಸ'ಕ್ಕೆ ಪ್ರತಿಕ್ರಿಯೆ

● ಎಸ್. ಎಸ್. ಹಿರೇಮಠ

ಸಾಧನೆ ೫-೧ ರ 'ಮಂಥನ' ವಿಭಾಗದಲ್ಲಿ "ಹರಿಹರನ ಎರಡು ಪದ್ಯಗಳ ಬಗ್ಗೆ (ಕಲ್ಪನಾವಿಲಾಸದ) ಒಂದು ಟಿಪ್ಪಣೆ" ಎಂಬ ಲೇಖನದಲ್ಲಿ ಡಾ. ಎಂ. ಚಿದಾನಂದಮೂರ್ತಿಯವರು, ಡಾ. ಫ. ಗು. ಹಳಕಟ್ಟಿಯವರು ಪ್ರಕಟಿಸಿದ 'ಮಾದರ ಚನ್ನಯ್ಯಗಳ ಮಹಾತ್ಮೆ' ಎಂಬ ರಗಳೆಯ ಪ್ರಾರಂಭದ ಎರಡು ಪದ್ಯಗಳಲ್ಲಿ ಮೊದಲನೆಯ ಚಿಕ್ಕಪದ್ಯದ ಬಗ್ಗೆ ಹೀಗೆ ಬರೆಯುತ್ತಾರೆ '... ಗಣಗಳ ದೃಷ್ಟಿಯಿಂದ ಬಹುಮಟ್ಟಿಗೆ ಸಲಕ್ಷಣವಾಗಿರುವ ಒಂದು ತ್ರಿಪದಿ. ಮೂರನೆಯ ಪಾದದಲ್ಲಿ ಕೊನೆಯ ಎರಡು ಗಣಗಳು ವಿಷ್ಣು ಬ್ರಹ್ಮ ಆಗಿವೆ (ಲಕ್ಷಣದ ಪ್ರಕಾರ ಬ್ರಹ್ಮ ವಿಷ್ಣು ಆಗಬೇಕು). ಮೊದಲನೆಯ ಪಾದದ ಒಳಪ್ರಾಸ ಬರುವ ಜಾಗದಲ್ಲಿ ಮತ್ತು ದ್ವಿತೀಯ ಪಾದದ ಪ್ರಾಸಸ್ಥಾನದಲ್ಲಿ ಪ್ರಾಸನಿಯಮದ ಉಲ್ಲಂಘನೆ ಆಗಿವೆ" ಎಂದೂ ಪ್ರಾಸವು 'ಎಗರಿ' ಹೋಗಿರುವುದಕ್ಕೆ ಕವಿ ಬೇಕೆಂದೇ ಛಂದಶ್ಶಾಸ್ತ್ರದ ನಿಯಮ ಮೀರಿದ್ದಾನೆಂದೂ ಸಾಧಿಸಿದ್ದಾರೆ. ಅಲ್ಲದೆ ಪ್ರಾಸನಿರಾಕರಣೆಯ ಬಗ್ಗೆ ಗೋವಿಂದ ಪೈಗಳ ಸ್ಥಾನದಲ್ಲಿ ಹರಿಹರನನ್ನು ನಿಲ್ಲಿಸಿದ್ದಾರೆ.[೧]

ಡಾ. ಫ. ಗು. ಹಳಕಟ್ಟಿಯವರ "ಹರಿಹರನ ರಗಳೆಗಳು" ಸಂಗ್ರಹದಲ್ಲಿರುವ ಪದ್ಯವನ್ನು[೨] ಡಾ. ಎಂ. ಚಿದಾನಂದಮೂರ್ತಿಯವರು ತ್ರಿಪದಿಯನ್ನಾಗಿ ಮಾಡಿದ್ದು ಹೀಗೆ:

ಸನ್ನುತಾಗಮನಿಕರ ತಲ್ಲಣಂಗೊಳೆ ತನ್ನ
ಜಿಹ್ವೆಯೊಳು ಸವಿದು ಪನ್ನಂಗಧರಗಿತ್ತ
ಚನ್ನಯ್ಯನೆನ್ನಯ್ಯನೆಂಬೆ||[೩]

---

೧. ನೋಡಿ : ಸಾಧನೆ: ೫-೧ "ಹರಿಹರನ ಎರಡು ಪದ್ಯಗಳ ಬಗ್ಗೆ (ಕಲ್ಪನಾವಿಲಾಸದ) ಒಂದು ಟಿಪ್ಪಣಿ". ಪುಟ: ೧೩೫-೧೪೭.

೨. ಡಾ. ಫ. ಗು. ಹಳಕಟ್ಟಿ ಸಂಪಾದಿತ "ಹರಿಹರನ ರಗಳೆಗಳು" ೧೯೬೮: ಪುಟ, ೩೪೮ರಲ್ಲಿ ಅಚ್ಚಾದ ಪದ್ಯ ಹೀಗಿದೆ:

ಸನ್ನುತಾಗಮನಿಕರ ತಲ್ಲಣಂಗೊಳೆ ತನ್ನ । ಜಿಹ್ವೆಯೊಳು ಸವಿದು
ಪನ್ನಂಗಧರಗಿತ್ತ ಚೆನ್ನಯ್ಯನೆನ್ನಯ್ಯನೆಂಬೆ ‖ (?)

೩. ಸಾಧನೆ: ೫-೧. "ಹರಿಹರನ ಎರಡು ಪದ್ಯಗಳ ಬಗ್ಗೆ (ಕಲ್ಪನಾವಿಲಾಸದ)ಒಂದು ಟಿಪ್ಪಣಿ".

ತಮ್ಮ ಲೇಖನದಲ್ಲಿ " ಈ ತ್ರಿಪದಿಯಲ್ಲಿ ಗಣನಿಯಮ ಬಹುತೇಕ ಸರಿಯಾಗಿದೆ. ಪ್ರಾಸನಿಯಮ ಎಗರಿ ಹೋಗಿದೆ" ಎಂದಿದ್ದಾರೆ.[೪]

ಈ ಪದ್ಯ ಅಂಶಗಣಾನ್ವಿತ ತ್ರಿಪದಿ ಎಂಬುದು ಡಾ. ಎಂ. ಚಿದಾನಂದ ಮೂರ್ತಿಯವರ ಅಭಿಪ್ರಾಯ. ಅಂಶಗಣಾನ್ವಿತ ತ್ರಿಪದಿಯ ಲಕ್ಷಣ ಹೀಗಿದೆ:

ವಿ ವಿ ವಿ ವಿ
ವಿ ಬ್ರ ವಿ ವಿ
ವಿ ಬ್ರ ವಿ

ವಿಷ್ಣುಗಣದ ಬದಲಿ ಅಲ್ಲಲ್ಲಿ ಬ್ರಹ್ಮಗಣವೊ, ರುದ್ರಗಣವೊ ಬರಬಹುದು.[೫] ಈ ಸಾಮಾನ್ಯ ಲಕ್ಷಣವು ಹರಿಹರನ ಪದ್ಯಕ್ಕೆ ಸರಿಯಾಗಿ ಹೊಂದಬೇಕಾದರೆ ಅಲ್ಪ ವ್ಯತ್ಯಾಸಗಳನ್ನು ಮಾಡಬೇಕಾಗುತ್ತದೆ. ಹಸ್ತಪ್ರತಿಗಳಲ್ಲಿ ಸಾಲನ್ನು ಗುರುತಿಸುವ ದಂಡ ಹಾಕುವಾಗ ತಪ್ಪುಗಳಾಗುವದು ಸಹಜವಿದೆ.

ಪದ್ಯದ ಮೊದಲನೆಯ ಸಾಲು "ಸನ್ನುತಾಗಮನಿಕರ ತಲ್ಲಣಂಗೊಳೆ" ಎಂಬುದಕ್ಕೆ ನಿಲ್ಲಿಸಿದಾಗ ಮಾತ್ರ ನಾಲ್ಕು ವಿಷ್ಣುಗಣಗಳು ಬರುತ್ತವೆ. 'ತನ್ನ' ಎಂಬುದು ಎರಡನೆಯ ಸಾಲಿನ ಮೊದಲಶಬ್ದ ಎಂಬುದು ಸ್ಪಷ್ಟವಾಗುತ್ತದೆ. ಈ ಸಾಲಿನಲ್ಲಿ 'ನಿಕರ' ಶಬ್ದದ 'ರ' ಕಾರ ಒಂದು ಲಘುವಾಗಿದ್ದರೂ ಗುರುವೆಂದು ಭಾವಿಸಿಕೊಳ್ಳಬೇಕು. ಇದು ಅಂಶಗಣದಲ್ಲಿ ಸಾಮಾನ್ಯನಿಯಮ.[೬] ಆದರೆ ಒಂದು ಗುರುವನ್ನು ಲಘುವಾಗಿಸಿಕೊಂಡ ಉದಾಹರಣೆ ಬಹುಶಃ ಇಲ್ಲ, ಅಲ್ಲದೆ ಈ ಪಾದದಲ್ಲಿ ಬರುವ 'ತಲ್ಲಣ' ಶಬ್ದ ಶಿಥಿಲದ್ವಿತ್ವವೂ ಅಲ್ಲ. ಹೀಗಿದ್ದಾಗ ಡಾ. ಎಂ. ಚಿದಾನಂದಮೂರ್ತಿಯವರು ಮೊದಲನೆಯ ಸಾಲನ್ನು ಅಂಶಗಣಾನ್ವಿತ ತ್ರಿಪದಿಗೆ ಹೊಂದಿಸುವಾಗ ಇಷ್ಟು ಸುಲಭವಾದ ತಪ್ಪನ್ನು ಹೇಗೆ ಮಾಡಿದರೊ ತಿಳಿಯದು. ಏಕೆಂದರೆ ಈ ಸುಲಭ ತಪ್ಪಿನ ಆಧಾರದ ಮೇಲೆಯೇ ಅವರ ಲೇಖನದ ಮುಂದಿನ ವಿಚಾರ ಓಡಿದೆ. 'ತನ್ನ' ಶಬ್ದವು ಎರಡನೆಯ ಸಾಲಿಗೆ ಬಂದರೆ, ಆದಿಪ್ರಾಸ 'ಎಗರಿ' ಹೋಗುವ ಪ್ರಶ್ನೆಯೇ ಇಲ್ಲ. ಮೊದಲ ಸಾಲಿನ ಛಂದಸ್ಸೂ ಸರಿ ಆಗುತ್ತವೆ; ಹೀಗೆ:

---

೪. ನೋಡಿ: ಸಾಧನೆ ೫-೧. "ಹರಿಹರನ ಎರಡು ಪದ್ಯಗಳ ಬಗ್ಗೆ (ಕಲ್ಪನಾ ವಿಲಾಸದ) ಒಂದು ಟಿಪ್ಪಣಿ"

೫. ಕೈಪಿಡಿ (ಸಂ. ೧) ಪುಟ ೧೦೪, ೧೨೫, ೧೨೬ ಮತ್ತು "ಅಂಶಗಣದ ಇತಿಹಾಸ" 'ಕರ್ನಾಟಕ ಭಾರತಿ' ೮-೨. ಪುಟ ೬೫. ಡಾ. ಎಂ. ಎಂ. ಕಲಬುರ್ಗಿ.

೬. "ಅಂಶಗಣದ ಇತಿಹಾಸ"- ಡಾ. ಎಂ. ಎಂ. ಕಲಬುರ್ಗಿ. ಕರ್ನಾಟಕ ಭಾರತಿ ೮-೨. ಪುಟ: ೬೭.

—·∪· — | ∪ ∪· ∪·∪ | ∪ · —·∪ | —· ∪ ·∪
ಸನ್ನುತಾ | ಗಮನಿಕ | ರ ತಲ್ಲ | ಣಂಗೊಳೆ
(—)

ಇನ್ನು ಎರಡನೆ ಸಾಲು, 'ತನ್ನ ಜಿಹ್ವೆಯೊಳು ಸವಿದು ಪನ್ನಂಗಧರಗಿತ್ತ'೭. ತ್ರಿಪದಿ ನಿಯಮದ ಪ್ರಕಾರ ವಿ|ಬ್ರ|ವಿ|ವಿ ಬರಬೇಕು. ಆದರೆ ಇಲ್ಲಿ ವಿ|ವಿ|ವಿ|ರು ಅಥವಾ ವಿ|ಬ್ರ|ವಿ|ವಿ|ವಿ, ಅಥವಾ ವಿ|ಬ್ರ|ರು|ರು– ಈ ಗಣಗಳು ಬರುತ್ತವೆ. ಈ ರೀತಿ ಅಂಶಗಣಾನ್ವಿತ ತ್ರಿಪದಿಯಲ್ಲಿ ರುದ್ರಗಣ ಬರುವುದನ್ನು (ಸಾಮಾನ್ಯವಾಗಿ, ಅಂಶಗಣಾನ್ವಿತ ತ್ರಿಪದಿಯ ಮೊದಲ ಸಾಲನ್ನು ಬಿಟ್ಟು ಉಳಿದೆರಡು ಸಾಲುಗಳಲ್ಲಿ ವಿಷ್ಣುಗಣದ ಬದಲಿ ಅಲ್ಲಲ್ಲಿ ರುದ್ರಗಣ ಬರಬಹುದು ಎನಿಸುತ್ತದೆ. ಅಪವಾದಗಳೂ ಇವೆ) ಡಾ. ಎಂ. ಚಿದಾನಂದಮೂರ್ತಿಯವರು ಬೇರೆಡೆ ತೋರಿಸಿಕೊಟ್ಟಿದ್ದಾರೆ೮. ಅಲ್ಲಿಯೂ ಒಂದು ಸಣ್ಣ ತಪ್ಪು ಮಾಡಿದ್ದಾರೆ೯.

ಇಲ್ಲಿ "ತನ್ನ ಜಿಹ್ವೆಯೊಳು ಸವಿದು ಪನ್ನಂಗಧ"೧೦ ಇಷ್ಟಕ್ಕೇ ನಿಂತಾಗ ವಿ|ಬ್ರ|ವಿ|ವಿ ಗಣಗಳು ಬಂದು ಲಕ್ಷಣಕ್ಕೆ ಸರಿಯಾದೀತು. ಆದರೆ ಮೂರನೆಯ ಸಾಲಿನಲ್ಲಿ ಆದಿಪ್ರಾಸಕ್ಕಾಗಿ 'ರ[ನಿ]ಗಿತ್ತ' ಎಂಬುದಾಗಿ [ನಿ] ಎಂಬ ಊಹಿತಪಾಠವನ್ನು ಹೇಳಬೇಕಾಗುತ್ತದೆ. ಆಗಲೂ ಕೂಡ ಮೂರನೆಯ ಸಾಲಿನಲ್ಲಿ ತ್ರಿಪದಿಯ ಸಾಮಾನ್ಯನಿಯಮದ ಪ್ರಕಾರ ವಿ|ಬ್ರ|ವಿ ಗಣಗಳು ಬರುವದಿಲ್ಲ. ಅಲ್ಲಿ [ನಿ] ಪಾಠ ಇಟ್ಟುಕೊಂಡರೆ ಒಂದು ವಿಷ್ಣುಗಣವು [ಅಂದರೆ, ವಿ|ಬ್ರ|

---

೭. ಸಾಧನೆ: ೫-೧ "ಹರಿಹರನ ಎರಡು ಪದ್ಯಗಳ ಬಗ್ಗೆ (ಕಲ್ಪನಾ ವಿಲಾಸದ) ಒಂದು ಟಿಪ್ಪಣಿ" ಪುಟ. ೧೪೭: ಇಲ್ಲಿ, 'ತನ್ನ' ಎಂಬ ಶಬ್ದ ಎರಡನೆ ಸಾಲಿಗೆ ತಂದದ್ದು ನಾನು.

೮. ಸಾಧನೆ ೫-೩ "ಎರಡು ಶಾಸನೋಕ್ತ, ಸೇರಿ ಒಟ್ಟು ಐದು ತ್ರಿಪದಿಗಳು"– ಎಂ. ಚಿದಾನಂದಮೂರ್ತಿ. ಪುಟ: ೧೬೪-೧೬೫.

೯. ಅದೇ. ವರ್ಧಮಾನಪುರಾಣದ ಮೂರು ತ್ರಿಪದಿಗಳ ಬಗ್ಗೆ ಹೇಳುವಾಗ ಎರಡನೆ ತ್ರಿಪದಿಯ (ಆಶ್ವಾಸ ೭. ಪದ್ಯ ೩೫) ಕೊನೆ ಸಾಲಿನಲ್ಲಿ "ಇಲ್ಲಿಯ ಕೊನೆಯ ಪದ ಮೂಲತಃ 'ಜಗಕ್ಕೆಲ್ಲಂ' ಎಂದೇ ಇತ್ತೆಂಬುದರ ಬಗ್ಗೆ ಅನುಮಾನವಿಲ್ಲ" ಎಂದಿದ್ದಾರೆ. ಹೀಗೆ ಹೇಳಲು ಏನೂ ಕಾರಣವಿಲ್ಲ. ವರ್ಧಮಾನಪುರಾಣದ ಉಳಿದೆರಡು ತ್ರಿಪದಿಗಳಂತೆ ಈ ತ್ರಿಪದಿಯ ಕೊನೆಗೂ ವಿಷ್ಣುಗಣ ಬರಬೇಕಾದರೆ "ಜಗಕೆಲ್ಲಂ" ಎಂದೇ ಇದ್ದುದು ಸರಿ ಇದೆ. ಈ ಮೂರು ತ್ರಿಪದಿಗಳ ಅಂಶಗಣಲಕ್ಷಣ ಒಂದೇ ರೀತಿಯಾಗಿಯೂ ಮತ್ತು ಸರಿಯಾಗಿಯೂ ಇದೆ. ಅಂದರೆ ಈ ರೀತಿ:

ವಿ ವಿ ವಿ ವಿ
ವಿ ಬ್ರ ವಿ ವಿ
ವಿ ಬ್ರ ವಿ

೧೦. ಈ ರೀತಿ ಶಬ್ದ ಒಡೆದುಕೊಂಡು, ಸಾಲು ಮುಗಿಯದು ತ್ರಿಪದಿಯಲ್ಲಿ.

ವಿ|ವಿ], [ನಿ] ಪಾಠ ಇಟ್ಟುಕೊಳ್ಳದಿದ್ದರೂ ಕೂಡ ಒಂದು ವಿಷ್ಣುಗಣವು ಹೆಚ್ಚಿಗೆ ಬರುವದು. ಒಟ್ಟಾರೆ ಈ ಪದ್ಯದಲ್ಲಿ ಒಂದು ವಿಷ್ಣುಗಣ (ಮೂರಂಶ) ಹೆಚ್ಚಿಗೆ ಬಂದಿದೆ.[೧೧]

ಈಗ ಈ ಪದ್ಯವನ್ನು ಹೀಗೆ ರೂಪಿಸಬಹುದು :

ಸನ್ನುತಾಗಮುನಿಕರ ತಲ್ಲಣಂಗೊಳೆ
ತನ್ನ ಜಿಹ್ವೆಯೊಳು ಸವಿದು ಪನ್ನಂಗಧರಗಿತ್ತ
ಚನ್ನಯ್ಯನೆನ್ನಯ್ಯನೆಂಬೆ ||

ಅಥವಾ

ಸನ್ನುತಾಗಮುನಿಕರ ತಲ್ಲಣಂಗೊಳೆ
ತನ್ನ ಜಿಹ್ವೆಯೊಳು ಸವಿದು ಪನ್ನಂಗಧ
ರ[ನಿ]ಗಿತ್ತ ಚನ್ನಯ್ಯನೆನ್ನಯ್ಯನೆಂಬೆ ||

"ಮೂರನೆಯ ಪಾದದಲ್ಲಿ ಕೊನೆಯ ಎರಡು ಗಣಗಳು ವಿಷ್ಣು ಬ್ರಹ್ಮ ಆಗಿವೆ (ಲಕ್ಷಣದ ಪ್ರಕಾರ ಬ್ರಹ್ಮ ವಿಷ್ಣು ಆಗಬೇಕು)" ಎಂದು ಡಾ. ಎಂ. ಚಿದಾನಂದ ಮೂರ್ತಿಯವರು ಹೇಳಿದ್ದು ಅಷ್ಟು ಮಹತ್ವದ್ದಲ್ಲ. ಲಕ್ಷಣಕ್ಕೆ ಹೊಂದುವಂತೆ ಮತ್ತು ಲಯ ತಾಳಕ್ಕೆ ಹೊಂದುವಂತೆ "ನೆನ್ನಯ್ಯ" ದ 'ಯ್ಯ'ವನ್ನು ಗುರು ವಾಗಿಸಿ ಕೊಳ್ಳಲೇಬೇಕಾದ್ದರಿಂದ ವಿ|ಬ್ರ|ವಿ ಈ ಗಣಗಳೇ ಬರುತ್ತವೆ; ಒಂದು ವೇಳೆ "ಚನ್ನಯ್ಯನೆನ್ನಯ್ಯನೆಂಬೆ" ಎಂಬುದಾಗಿ ಇಟ್ಟುಕೊಂಡರೆ.

"ದ್ವಿತೀಯ ಪಾದದ ಪ್ರಾಸಸ್ಥಾನದಲ್ಲಿ ಪ್ರಾಸನಿಯಮದ ಉಲ್ಲಂಘನೆ ಯಾಗಿದೆ" ಎಂಬ ಡಾ. ಎಂ. ಚಿದಾನಂದಮೂರ್ತಿಯವರ ಮಾತಾಗಲಿ ಹರಿಹರ ಬೇಕೆಂದೇ ಛಂದೋನಿಯಮ ಮೀರಿದ್ದಾನೆಂಬ[೧೨] ಅವರ ಊಹೆ ಕಲ್ಪನೆಗಳಾಗಲಿ ತೀರ ಜಳ್ಳಾಗುತ್ತವೆ. ಇದೇರೀತಿಯ ಊಹೆಯನ್ನು ವೃತ್ತದ ಬಗೆಗೂ ಮಾಡಿ ದ್ದಾರೆ.[೧೩] "ತನ್ನ ಕೃತಿಯ ಆರಂಭ ಅಂತ್ಯಗಳಲ್ಲಿ ಕಂದ ವೃತ್ತಗಳನ್ನು ತರುತ್ತಿದ್ದವನು ಇಲ್ಲಿ ತ್ರಿಪದಿಯನ್ನು ತಂದು ತನ್ನ ನಿಯಮವನ್ನು ತಾನೆ

೧೧. ಸಾಂಖ್ಯತೊಂಡರ ರಗಳೆಯ ಪ್ರಾರಂಭದ ಕಂದಪದ್ಯದ ಕೊನೆಯ ಸಾಲಿನಲ್ಲಿ "ಮಾತ್ರಾಧಿಕ್ಯದೋಷ" ಇರುವದನ್ನು ಸಂಪಾದಕರು ಸೂಚಿಸಿದ್ದಾರೆ. "ಮಹಾಕವಿ ಹಂಪೆಯ ಹರಿಹರದೇವಕೃತ ಪುರಾತನರ ರಗಳೆಗಳು" ಸಂ: ಡಾ. ಆರ್.ಸಿ. ಹಿರೇಮಠ. ಪುಟ ೬೩೧.

೧೨. ಸಾಧನೆ ೫-೧. ಪುಟ: ೧೪೫-೧೪೬.

೧೩. ಅದೇ. ಅಡಿಟಿಪ್ಪಣಿ. ಪುಟ: ೧೪೬.

ಮೀರಿದ್ದಾನೆ" ಎಂಬ ಅವರ ಮಾತು ಮಾತ್ರ ಈ ತ್ರಿಪದಿಯು ಪ್ರಕ್ಷಿಪ್ತವಿಲ್ಲದಿದ್ದರೆ ಸರಿ ಎನಿಸುತ್ತದೆ.[೧೪]

ಪ್ರಾಸನಿರಾಕರಣೆಯ ವಿಚಾರ ಇಲ್ಲಿ ಇಲ್ಲವೆಂಬುದು ಸುವಿದಿತವಿದ್ದಾಗ ಡಾ. ಎಂ. ಚಿದಾನಂದಮೂರ್ತಿಯವರ ಕೊನೆಯ ಮಾತು[೧೫] ("ಪ್ರಾಸನಿರಾಕರಣೆಯ ಬಗ್ಗೆ ಮಾತನಾಡುವಾಗ ಶ್ರೀ ಗೋವಿಂದ ಪೈಯವರ ಹೆಸರನ್ನು ನಾವೆಲ್ಲ ಹೇಳುತ್ತೇವೆ. ಹರಿಹರನ ಪ್ರಾಸನಿರಾಕರಣೆಯೂ ಉಲ್ಲೇಖನೀಯವಲ್ಲವೇ? ಅದೂ, ಏಳು ಶತಮಾನಗಳಿಗೂ ಹಿಂದಿನಷ್ಟು ಪ್ರಾಚೀನಕಾಲದಲ್ಲಿ!") ನಿರಾಧಾರವಾಗುತ್ತದೆ. ಅಲ್ಲವೆ ಆದಿಪ್ರಾಸವನ್ನು ಅಲ್ಲಲ್ಲಿ ಮೀರುತ್ತ ಬಂದುದು ಕನ್ನಡ ಕಾವ್ಯಗಳಲ್ಲಿ ಬಹಳ ಹಿಂದಿನಿಂದಲೂ ಕಾಣುತ್ತೇವೆ. ಆದಿಪ್ರಾಸದಲ್ಲಿ ಲ ಳ; ಶ ಸ ಷ, ಫ ಭ, ಇತ್ಯಾದಿಗಳ ಮಿಶ್ರ ಬಳಕೆ ಪ್ರಾಸದ ಉಲ್ಲಂಘನೆಯನ್ನು ಸೂಚಿಸಲಾರದೇನು ?

"ಹರಿಹರನ ಹತ್ತು ರಗಳೆಗಳು" ಎಂಬ ಡಾ. ಎಸ್. ಎಸ್. ಮರುಳಯ್ಯನವರ ಸಂಪಾದಿತ ಕೃತಿಯಲ್ಲಿ ಚನ್ನಯ್ಯನರಗಳೆಯ ಪ್ರಾರಂಭದಲ್ಲಿ ವೃತ್ತ ಮಾತ್ರ ಇದೆ. ಅಡಿಟಿಪ್ಪಣಿಯಲ್ಲಿ "ಈ ವೃತ್ತದ ಬದಲು 'ಗ' ಪ್ರತಿಯಲ್ಲಿ ಈ ಕಂದಪದ್ಯವಿದೆ'' ಎಂದು ಹೇಳಿದ್ದಾರೆ. ಆ ಕಂಡಪದ್ಯ ಹೀಗಿದೆ:

ಪನ್ನಗಭೂಷನುಮೇಶಂ
ತನ್ನಂ ತಾಂ ಪೋಲ್ವ ಹಂಪೆಯ ವಿರೂಪಾಕ್ಷಂ |
ತನ್ನಂ ಮೆಚ್ಚಿದಂ ಮಾದರ
ಚನ್ನಯ್ಯನನುನ್ನತೋನ್ನತಾಬ್ಧಿ ಶಶಾಂಕಂ |*

---

೧೪. ಹರಿಹರ ಒಂದೇಸ್ಥಲದ ರಗಳೆ ಬರೆಯುವಾಗ ಸಾಮಾನ್ಯವಾಗಿ ಪ್ರಾರಂಭ, ಅಂತ್ಯಗಳಲ್ಲಿ ಕಂದಪದ್ಯಗಳನ್ನೆ ಬರೆದರೂ ಕೂಡ, 'ಸಂಸಾರವ್ಯಾಮೋಹನಿರಸನ ರಗಳೆ'ಯ ಆದಿ ಅಂತ್ಯದಲ್ಲಿ ಕಂದವೂ ಇಲ್ಲ ವೃತ್ತವೂ ಇಲ್ಲ. ನೇರವಾಗಿ ರಗಳೆ ಪ್ರಾರಂಭವಾಗಿದೆ. 'ಗಣನಾಥನ ರಗಳೆ'ಯ ಆದಿಯಲ್ಲಿ ಯಾವ ಪದ್ಯವಿಲ್ಲ. 'ಹಂಪೆಯರಸನ ರಗಳೆ'ಯ ಪ್ರಾರಂಭದಲ್ಲಿ ಮಾತ್ರ ವೃತ್ತ ಇವೆ. ಅಂತ್ಯದಲ್ಲಿ ಏನೂ ಇಲ್ಲ. ಅನೇಕ ಸ್ಥಲಗಳುಳ್ಳ ಒಬ್ಬ ಶರಣನ ಚರಿತ್ರೆ ಬರೆಯುವಾಗ ಕೃತಿಯ ಆರಂಭ ಅಂತ್ಯದಲ್ಲಿ ಕಂದಗಳನ್ನು, ನಡುವಿನ ಸ್ಥಲಗಳ ಆದಿಯಲ್ಲಿ ವೃತ್ತವನ್ನು, ಎಲ್ಲೋ ಒಂದೊಂದೆಡೆ ಕಂದವನ್ನು ಬರೆಯುತ್ತಾನೆ. ಆದರೆ ಈ ನಿಯಮವೂ ಕಟ್ಟುನಿಟ್ಟಾಗಿಲ್ಲ. ಶಂಕರದಾಸಿಮಯ್ಯನ ಮೂರು ಸ್ಥಲಗಳ ಅರಂಭದಲ್ಲಿ ವೃತ್ತಗಳೇ ಇವೆ.

ನೋಡಿ: "ಹರಿಹರನ ರಗಳೆಗಳು" ಡಾ. ಫ. ಗು. ಹಳಕಟ್ಟಿ ಮತ್ತು ಡಾ. ಆರ್.ಸಿ. ಹಿರೇಮಠ ಅವರು ಸಂಪಾದಿಸಿದ "ಪುರಾತನರ ರಗಳೆಗಳು".

೧೫. ಸಾಧನೆ ೫-೧. "ಹರಿಹರನ ಎರಡು ಪದ್ಯಗಳ ಬಗ್ಗೆ (ಕಲ್ಪನಾ ವಿಲಾಸದ) ಒಂದು ಟಿಪ್ಪಣಿ"

* "ಹರಿಹರನ ಹತ್ತು ರಗಳೆಗಳು" ಸಂ: ಡಾ. ಎಸ್. ಎಸ್. ಮರುಳಯ್ಯ. ಪುಟ ೧.

'ಕಣ್ಣಪ್ಪನ ರಗಳೆ'ಯು ಕೊನೆಗೆ ಭಿನ್ನಹಸ್ತಪ್ರತಿಗಳಲ್ಲಿ ಎರಡು ಬೇರೆ ಬೇರೆ ಕಂದಪದ್ಯಗಳು ಸಿಗುತ್ತವೆ.[೧೬] ತಿರುನೀಲಕಂಠರ ರಗಳೆಯು ಕೊನೆಗೂ ಹೀಗೆಯೇ.[೧೬]

ಹೀಗೆ ನೋಡಿದಾಗ ಚನ್ನಯ್ಯನರಗಳೆಯು ಪ್ರಾರಂಭದಲ್ಲಿ ಬರುವ ಈ ತ್ರಿಪದಿಯು ಪ್ರಕ್ಷಿಪ್ತವಿರಬಹುವೆಂಬ ಅನುಮಾನ ಬರುತ್ತದೆ.

● ●

---

೧೬. "ಪುರಾತನರ ರಗಳೆಗಳು"- ಸಂ: ಡಾ. ಆರ್. ಸಿ. ಹಿರೇಮಠ. ಪುಟ ೨೮೨.
೧೭. ಅದೇ. ಪುಟ ೨೯.

ಲಿಂಗಲೀಲಾವಿಲಾಸ ಚಾರಿತ್ರ : ವ್ಯಾಖ್ಯಾನಗ್ರಂಥವಾಗಿ

● ಎಂ. ಚಿದಾನಂದಮೂರ್ತಿ

ವಚನಗಳ ಸಂರಕ್ಷಣೆಗಾಗಿ ಹದಿನೈದನೆಯ ಮತ್ತು ಹದಿನಾರನೆಯ ವೀರಶೈವ ವಿದ್ವಾಂಸರು ಕೈಗೊಂಡ ಪ್ರಯತ್ನಗಳ ಫಲವಾಗಿಯೇ ಈ ದಿನ ನಮಗೆ ಇಷ್ಟಾದರೂ ವಚನವಾಙ್ಮಯ ಉಳಿದುಕೊಂಡು ಬಂದಿದೆ. ಆ ಸಂಕಲನಕಾರರ (ಮತ್ತು ವ್ಯಾಖ್ಯಾನಕಾರರ) ಪರಿಚಯ ಈ ಲೇಖನದ ಉದ್ದೇಶವಲ್ಲ. ಆ ವಿದ್ವಾಂಸರು ಮಾಡಿದ ಸಂಕಲನಗಳು ಬಹು ಅಮೂಲ್ಯವಾದವು– ಆ ಬಗ್ಗೆ ಅನುಮಾನವಿಲ್ಲ. ಅವರಲ್ಲಿ ಕೆಲವರು ವಚನಗಳಿಗೆ ಬರೆದ ವ್ಯಾಖ್ಯಾನಗಳು, ವಚನಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಎಷ್ಟರಮಟ್ಟಿಗೆ ಸಹಾಯಕವಾಗಿವೆ? ಇದನ್ನು ವಿಚಾರಿಸುವುದು, ಮುಖ್ಯವಾಗಿ ಲಿಂಗಲೀಲಾವಿಲಾಸಚಾರಿತ್ರವನ್ನು ಗಮನದಲ್ಲಿಟ್ಟುಕೊಂಡು ಪರ್ಯಾಲೋಚನೆ ಮಾಡುವುದು ಈ ಚಿಕ್ಕ ಲೇಖನದ ಉದ್ದೇಶ.

ವಚನಕಾರರ ವಚನಗಳಿಗೆ ಮೂರು ಮುಖಗಳಿವೆ ಅಥವಾ ಉದ್ದೇಶಗಳಿವೆ–

(೧) ಧಾರ್ಮಿಕ (ಮತ್ತು ಆಧ್ಯಾತ್ಮಿಕ)
(೨) ಸಾಮಾಜಿಕ
(೩) ಸಾಹಿತ್ಯಕ

ಇವು ಮೂರೂ ಬೇರೆಬೇರೆ ಅಲ್ಲ, ಒಂದು ಇನ್ನೊಂದನ್ನು ಅವಲಂಬಿಸಿವೆ ಮತ್ತು ಸ್ಪಷ್ಟವಾಗಿ ಬೇರ್ಪಡಿಸಲಾಗದಷ್ಟು ಬೆರೆತುಕೊಂಡಿವೆ. ಆಯಾ ಓದುಗರಿಗೆ ಆಯಾ ಮುಖ ಒಮ್ಮೊಮ್ಮೆ ಪ್ರಮುಖವಾಗಿ ಕಾಣಬಹುದು– ಇದು ಅವರ ಅಭಿರುಚಿ ಉದ್ದೇಶಗಳನ್ನು ಅವಲಂಬಿಸಿರುತ್ತದೆ.

ವಚನಗಳ ವ್ಯಾಖ್ಯಾನಕಾರರ ಕಾಲದಲ್ಲಿ ವೀರಶೈವವು ಆಂದೋಲನದ ಸ್ವರೂಪವನ್ನು ಕಳಿದುಕೊಂಡು ಮುಖ್ಯವಾಗಿ ಧರ್ಮವಾಗಿ ಪರಿಣಮಿಸಿತ್ತು. ಇದರ

ಪರಿಣಾಮ ಅವರ ವ್ಯಾಖ್ಯಾನಗಳಲ್ಲೂ ಕಾಣುತ್ತದೆ. ವಚನಕಾರರ ಸಾಮಾಜಿಕಪ್ರಜ್ಞೆಯಾಗಲಿ, ಸಾಮಾಜಿಕ ಕಳಕಳಿಯಾಗಲಿ, ಅವರ ಕ್ರಾಂತಿಕಾರಕ ಹೊಸ ದೃಷ್ಟಿಯಾಗಲಿ ವ್ಯಾಖ್ಯಾನಕಾರರಿಗೆ ಅರ್ಥವಾಗಿತ್ತು ಎಂದು ಹೇಳುವುದು ಕಷ್ಟ. ವ್ಯಾಖ್ಯಾನಕಾರರದು ಮುಖ್ಯವಾಗಿ ಧಾರ್ಮಿಕ, ಆಧ್ಯಾತ್ಮಿಕ ಸಾಧನೆಯ ದೃಷ್ಟಿ. ಪ್ರಧಾನವಾಗಿ ಧಾರ್ಮಿಕವಾಗಿರುವ ವಚನಗಳ ವ್ಯಾಖ್ಯಾನವನ್ನು ಬರೆಯುವಲ್ಲಿ ಅವರು ಯಶಸ್ವಿಯಾಗುವಂತೆ, ಸಾಮಾಜಿಕ ಉದ್ದೇಶವನ್ನುಳ್ಳ ವಚನಗಳಿಗೆ ಅವರು ವ್ಯಾಖ್ಯಾನ ಬರೆಯುವಲ್ಲಿ ವಿಫಲರಾಗುತ್ತಾರೆ. ಅಂತಹ ವಚನಗಳಲ್ಲೂ ಧರ್ಮ, ಆಧ್ಯಾತ್ಮವನ್ನೇ ಹುಡುಕಲು ಯತ್ನಿಸುತ್ತಾರೆ. ಇಪ್ಪತ್ತನೆಯ ಶತಮಾನದಲ್ಲಿರುವ ನಮಗೆ ಸಾಮಾಜಿಕ ಉದ್ದೇಶದ ವಚನಗಳು ಅರ್ಥವಾಗುತ್ತವೆ ಮತ್ತು ಪ್ರಿಯವಾಗುತ್ತವೆ. ಆದರೆ ಧಾರ್ಮಿಕ ಉದ್ದೇಶದ ವಚನಗಳು 'ಅರ್ಥ'ವಾಗುವುದು ಕಷ್ಟ. ಎಷ್ಟೋ ವಚನಗಳಿಗೆ ಪದಶಃ ಅರ್ಥ ಮಾಡಬಹುದು; ಆದರೆ ಅವುಗಳ ಹಿಂದಿನ ನಿಜವಾದ ಮರ್ಮ ತಿಳಿಯದೇ ಹೋಗಬಹುದು. ವಚನಗಳ ಸಾಹಿತ್ಯಕಮೌಲ್ಯದ ಬಗ್ಗೆ ವ್ಯಾಖ್ಯಾನಕಾರರು ಬಹುಮಟ್ಟಿಗೆ ನಿರ್ಲಕ್ಷ್ಯ ಮನೋಭಾವವನ್ನು ತಾಳಿದ್ದಾರೆ ಆದರೆ ಈ ದಿನ ವಚನಗಳಿಗೆ ಕನ್ನಡದಲ್ಲಿ ಸ್ಥಾನವಿದ್ದರೆ ಅಥವಾ ಪ್ರಾಮುಖ್ಯ ಬಂದಿದ್ದರೆ ಅವುಗಳ ಸಾಹಿತ್ಯಕ ಗುಣದಿಂದಾಗಿ. ಇದನ್ನು ಕುರಿತ ವಿಸ್ತಾರವಾದ ವಿವೇಚನೆಗೆ ಇದು ಸರಿಯಾದ ಜಾಗವಲ್ಲ[೧].

ಕಲ್ಲಮಠದ ಪ್ರಭುದೇವನ ಲಿಂಗಲೀಲಾವಿಲಾಸಚಾರಿತ್ರ ಒಂದು ವಚನ ಸಂಕಲನವೂ ಹೌದು, ವ್ಯಾಖ್ಯಾನಗ್ರಂಥವೂ ಹೌದು. ಅವನ ಸಂಕಲನದ ಉದ್ದೇಶ ಪೂರ್ತಿ ಧಾರ್ಮಿಕವಾದುದು. ಲಿಂಗದ ಲೀಲೆ, ವಿಲಾಸಗಳ ಚಾರಿತ್ರವನ್ನು ವಚನಗಳ ಮೂಲಕವೇ ಚಿತ್ರಿಸುವುದು. ಇದಕ್ಕೆ ಕಾರಣ, ಲಿಂಗಲೀಲಾವಿಲಾಸದ ಚರಿತೆಯೂ 'ಶರಣಚಾರಿತ್ರ'ವೂ ಒಂದೇ ಆಗಿರುವುದು ("ಈ ಲಿಂಗಲೀಲಾವಿಲಾಸದ ಚಾರಿತ್ರವೇ ಶರಣಚಾರಿತ್ರವೆಂದು ಪುರಾತರ ವಚನಗಳಿಂದ ಕಾಣಲಾಯಿತ್ತಾಗಿ, ಮಿಕ್ಕಿನ ವೇದಾಗಮಂಗಳು ಜಡ್ಡು ಗೋಜಡೆಂದು ಅವಬಿಟ್ಟು ಪುರಾತರ ವಚನ ಏಳುನೂಱಎಪ್ಪತ್ತ ತೆಗೆದುಕೊಂಡು ಷೋಡಶಸ್ಥಲ ಪರಿಕ್ರಮ

೧. ಸ್ವಲ್ಪ ಹೆಚ್ಚಿನ ವಿವರಗಳಿಗೆ ನೋಡಿ-: ಎಂ. ಚಿದಾನಂದಮೂರ್ತಿ. ವಚನಸಾಹಿತ್ಯ (ಬೆಂಗಳೂರು ವಿಶ್ವವಿದ್ಯಾಲಯ ೧೯೭೫) ಇದರಲ್ಲಿ 'ಸಂಕಲನಯುಗ' ಎಂಬ ಅಧ್ಯಾಯ, ಅದರಲ್ಲೂ ಪು. ೧೯೯, ೨೦೦-೧, ೨೦೪-೨೦೫.

ದಿಂದ ಸೇರಿಸಿ, ವ್ಯಾಖ್ಯಾನವ ಮಾಡಿದ ವಿದ್ಯಾನಗರದ ಕಲ್ಲಮಠದ ಪ್ರಭುದೇವಾರ್ಯನು..."[೨] ಶರಣರ ನಡೆ, ನುಡಿಗೆ ಇಂತಹ ಮಹತ್ವವಿರುವುದರಿಂದಲೇ, ಅವರ ವಚನಗಳ ಮುಂದೆ ವೇದ ಆಗಮಗಳು 'ಜಡ್ಡುಗೊಜಡಾ'ಗಿ ಕಂಡಿವೆ, ಕಲ್ಲುಮಠದ ಪ್ರಭುದೇವನಿಗೆ.

ಲಿಂಗವಲೀಲೆಯನ್ನು ಹದಿನಾರು ಸ್ಥಲಗಳಲ್ಲಿ ವಚನಗಳ ಮೂಲಕ ಚಿತ್ರಿಸಿರುವ ಕ್ರಮ ಮನನೀಯವಾಗಿದೆ, ಮತ್ತು ಆಯಾ ಸ್ಥಲದ ಆರಂಭದಲ್ಲಿ ಕೊಟ್ಟಿರುವ ವ್ಯಾಖ್ಯಾನಕಾರನ ವಿವರಣೆಯ ಗದ್ಯವನ್ನಷ್ಟೇ ಓದಿಕೊಂಡು ಹೋದರೂ ವಚನಕಾರರ ತಾತ್ವಿಕ ಹಿನ್ನೆಲೆಯ ತತ್ವ ದರ್ಶನವಾಗುತ್ತದೆ. ಆಯಾ ಸ್ಥಲದ ರಚನೆ ಹೀಗಿರುತ್ತದೆ: ಆರಂಭದಲ್ಲಿ ಆ ಸ್ಥಲದ ವಿವರಣೆಯನ್ನು ವ್ಯಾಖ್ಯಾನಕಾರ ಸಂಕ್ಷಿಪ್ತವಾಗಿ ಗದ್ಯದಲ್ಲಿ ಮಾಡಿಕೊಡುತ್ತಾನೆ. ಬಳಿಕ ಆ ವಿವರಣೆಗೆ ಸಮರ್ಥನೆಯ ರೂಪವಾಗಿ ಸಂಸ್ಕೃತ ಗ್ರಂಥಗಳಿಂದ ಒಂದೋ ಹಲವೋ ಶ್ಲೋಕಗಳನ್ನೂ ಬಳಿಕ ವಚನಗಳನ್ನೂ ಉದ್ಧರಿಸುತ್ತಾನೆ. ಸಂಸ್ಕೃತ ಶ್ಲೋಕಗಳಿಗೆ ಕೆಲವೆಡೆ ಅನ್ವಯಾನುಗುಣವಾಗಿ ಪದಶಃ ಅರ್ಥವನ್ನೂ ಕೆಲವೆಡೆ ಸಾರಾಂಶವನ್ನೂ ಕೊಡುತ್ತಾನೆ. ಆದರೆ ವಚನಗಳಿಗೆ ಮಾತ್ರ ಎಲ್ಲ ಕಡೆಗೂ ಸಾರಾಂಶರೂಪದ ಟೀಕೆಯನ್ನು ಮಾತ್ರ ಕೊಡುತ್ತಾನೆ. ವಚನಗಳು ಸುಲಭವಾಗಿದ್ದರೆ ಸಾರಾಂಶವನ್ನೂ ಕೊಡದೆ, "ಈ ವಚನ ಕಾಣಬಂದರ್ಥ" ಎಂದು ಮಾತ್ರ ಹೇಳಿ ಮುಂದೆ ಹೋಗುತ್ತಾನೆ.

ಟೀಕೆ ಅಥವಾ ವ್ಯಾಖ್ಯಾನ ಮುಖ್ಯವಾಗಿ ಎರಡು ಕೆಲಸಗಳನ್ನು ಮಾಡಬೇಕು. ಒಂದು, ಮೂಲಕೃತಿಯ ವಾಚ್ಯಾರ್ಥವನ್ನು ಸ್ಪಷ್ಟಪಡಿಸಬೇಕು; ಎರಡು, ಅಲ್ಲಿ ಕಾಣುವ ಧ್ವನಿ, ರಹಸ್ಯ, ಸೌಂದರ್ಯ ಏನಿದೆ ಅದರ ಕಡೆ ಓದುಗರ ಗಮನ ಸೆಳೆಯಬೇಕು. ವಚನಗಳು ಕನ್ನಡದಲ್ಲಿರುವುದರಿಂದ ಅವುಗಳನ್ನು ಪದಶಃ ವಿವರಿಸುವುದು ಅನಗತ್ಯವೆಂದು ಭಾವಿಸಿ, ಅವುಗಳ ಒಟ್ಟರ್ಥವನ್ನೇ ಗಮನದಲ್ಲಿಟ್ಟುಕೊಂಡು ವ್ಯಾಖ್ಯಾನಿಸುತ್ತ ಹೋಗಿದ್ದಾನೆ ಪ್ರಭುದೇವ. ಇದರಿಂದ ಓದುಗರಾದ ನಮಗೆ ಆಗಿರುವ ನಷ್ಟ ದೊಡ್ಡದು. ಅವನಿಗೆ ಗೊತ್ತಿದ್ದ ಮತ್ತು ಸುಲಭವೆಂದು ಅನ್ನಿಸಿದ್ದ ಅನೇಕ ಪದಗಳ ಅರ್ಥ ನಮಗೆ ಈ ದಿನ ತಿಳಿಯದು. ಅವುಗಳನ್ನು ಅವನು ಸ್ಪಷ್ಟಪಡಿಸಿದ್ದರೆ ಎಷ್ಟು ಚನ್ನಾಗಿತ್ತು ಎಂದು ನಮಗೆ ಅನ್ನಿಸುತ್ತದೆ. ಉದಾಹರಣೆಗೆ 'ಗಳಿಹ' (ಪು. ೧೮೭); 'ದಂಗಟನ ಪುಣಿಜೆ'

೨. ಲಿಂಗಲೀಲಾವಿಲಾಸ ಚಾರಿತ್ರ (ಸಂ. ಎಸ್. ಎಸ್. ಭೂಸನೂರಮಠ, ಧಾರವಾಡ; ೧೯೫೬ ಪು. ೪೧೯).

(ಪು. ೧೮೪)[1] "ತನ್ನ ಶರೀರವೆಂಬುದೀಗ ದಂಗಟನೆಂಬ ಶಬ್ದಕ್ಕರ್ಥ. ಅಂತಪ್ಪ ಶರಣನ ಸ್ವದೇಹದಲ್ಲಿರ್ದ ಷಡ್ವಿಧ ಶಕ್ತಿಯರೆಂಬವರು ಪುಣ್ಯಾಂಗನೆಯರೆಂಬುದೀಗ ದಂಗಟನ ಪುಣಿಜೆಯರೆಂಬ ಶಬ್ದಕ್ಕರ್ಥ"– ಈ ವ್ಯಾಖ್ಯಾನ ನಿಜವಾಗಿಯೂ ಸಹಾಯಕ, ನಿಜ. ಒಂದು ವೇಳೆ 'ದಂಗಟ' ಎಂಬ ಶಬ್ದಕ್ಕೆ ನಮಗೆ ಅರ್ಥ ಗೊತ್ತಿದ್ದರೂ ವ್ಯಾಖ್ಯಾನದ ಅಗತ್ಯವಿದ್ದೇ ಇರುತ್ತಿತ್ತು. ಆದರೆ 'ದಂಗಟ'ದ ಅರ್ಥ ತಿಳಿದಿದ್ದರೆ, ಮತ್ತೊಮ್ಮೆ ನಾವೇ ವಚನವನ್ನು ಓದಿ, ವ್ಯಾಖ್ಯಾನದ ಸಹಾಯದಿಂದ, ಆ ಬೆಡಗಿನ ವಚನದ ಮೇಲಿನ ಚಿತ್ರ ಮತ್ತು ಒಳಗಿನ ಅರ್ಥಗಳೆರಡನ್ನೂ ಗ್ರಹಿಸಬಹುದಾಗಿತ್ತು. ಹೀಗಾಗಿ, ವಚನಗಳ ವ್ಯಾಖ್ಯಾನಕಾರರು ಪದಶಃ ಅರ್ಥದ ಟೀಕೆ ಬರೆಯಬಾರದಾಗಿತ್ತೇ ಎಂದು ಬಹಳಸಾರಿ ನನಗೆ ಅನ್ನಿಸಿದೆ.

ಕೆಲವೆಡೆ ಪದಗಳಿಗೆ ಅರ್ಥಗೊತ್ತಿದ್ದರೂ, ವ್ಯಾಖ್ಯಾನದ ಸಹಾಯವಿಲ್ಲದಿದ್ದರೆ ಓದುಗ ಹೇಗೆ ತಬ್ಬಿಬ್ಬಾಗುತ್ತಾನೆ ಎಂಬುದಕ್ಕೆ ಒಂದು ನಿದರ್ಶನ.

ತೊಂಡಲ ಮುಡಿದುಕೊಂಡು, ತಮ್ಮ ತಮ್ಮ ಗಂಡರ ಹಿಂದುಗೊಂಡು,
ನಾಡ ಮಿಂಡರ ನೋಡುತ್ತಲಿ,
ಇಂದು ನಮ್ಮ ಹುಲಿ ಹೋಯಿತ್ತು ಬನ್ನಿರೇ.
ಗಂಡರ ಗಂಡನವ್ವಾ ಕೂಡಲಸಂಗ
ಕಂಡರೆ ಮೂಗ ಕೊಯ್ವ. (ಪು. ೧೬೧)

ಇಲ್ಲಿಯ ವಾಚ್ಯಾರ್ಥ ಸ್ಪಷ್ಟವಾಗಿದೆ. ಆದರೆ 'ಹುಲಿ'ಯ ಶಬ್ದಚಿತ್ರವನ್ನು ಹಿಂದಿನ ಚಿತ್ರಕ್ಕೆ ಹೊಂದಿಸಿಕೊಳ್ಳುವುದು ಕಷ್ಟವಾಗುತ್ತದೆ. ಇದಕ್ಕೆ ಪ್ರಭುದೇವನ ಬಹು ಸುಂದರವಾದ ವ್ಯಾಖ್ಯಾನ ಹೀಗಿದೆ–

"ಭಕ್ತನೆಂಬ ಮುತ್ತೈದೆಗೆ ಅಂಗದ ಮೇಲಣ ಲಿಂಗವೆ ಗಂಡ. ವಿಭೂತಿ ರುದ್ರಾಕ್ಷಿಯ ಅಲಂಕಾರವೇ ತೊಂಡಲು ಎಂಬುದೀಗ 'ತೊಂಡಲು ಮುಡಿದುಕೊಂಡು ತಮ್ಮ ತಮ್ಮ ಗಂಡರ ಹಿಂದುಗೊಂಡು' ಎಂಬ ಶಬ್ದಕ್ಕರ್ಥ. ಅಂತು ವಿಭೂತಿ ರುದ್ರಾಕ್ಷಿಯ ಧರಿಸಿಕೊಂಡು ಅಂಗದ ಮೇಲೆ ಲಿಂಗವಿದ್ದು ಅನ್ಯದೈವದ ಭಜನೆಗೆ ಮನವೆಳಸುತ್ತಿಹರು ಎಂಬುದೀಗ 'ನಾಡ ಮಿಂಡರ ನೋಡುತ್ತಲಿ' ಎಂಬ ಶಬ್ದಕ್ಕರ್ಥ. ಅಂತು ಅಂಗದ ಮೇಲೆ ಲಿಂಗವಿದ್ದು ಅನ್ಯದೈವವ ಭಜಿಸುತ್ತ ನಾವು ಭಕ್ತರೆಂದು ತಮಗೆ ಕಾಲವ್ಯಾಘ್ರ ಭಯ ಹೋಯಿತ್ತೆಂದು ನುಡಿವುತ್ತಿಹರೆಂಬುದೀಗ 'ಇಂದು ನಮ್ಮ ಹುಲಿ ಹೋಯಿತ್ತು ಬನ್ನಿರೇ, ಎಂಬ ಶಬ್ದಕ್ಕರ್ಥ. ಅಂತು ಲಿಂಗವಿರ್ದು ಅನ್ಯದೈವವ ಭಜಿಸುವರ ಮಾನಹಾನಿಯ ಮಾಡಿ ಕಾಲನ ಕೈಯ ಬಡಿಸುವ ಶಿವನೆಂಬುದೀಗ 'ಗಂಡರ ಗಂಡನವ್ವಾ ಕೂಡಲಸಂಗ ಕಂಡರೆ ಮೂಗಕೊಯ್ವ' ಎಂಬ ಶಬ್ದಕ್ಕರ್ಥ".

---

೧. ಇಲ್ಲಿಯ 'ದಂಗಟನ ಪುಣಿಜೆಯರು' ಎಂಬಲ್ಲಿ 'ಪುಣಿಜೆ' ಎಂಬುದು 'ಪುಳಿಂದೆ'(= ಬೇಡಿತಿ) ಎಂಬುದರ ತದ್ಭವವೆಂದು ತೋರುತ್ತದೆ. ಪುಳಿಂದೆ > ಪುಳಿದೆ > ಪುಣಿದೆ > ಪುಣಿಜೆ (ಹೋಲಿಸಿ: ಗಳಿಲಾಗಣೆ ಗದೆಲಾಗಜೆ). 'ಪುಣಿಜೆ' – ಒಂದು ಅಪೂರ್ವ ರೂಪ.

'ಹುಲಿ' ಶಬ್ದಕ್ಕೆ 'ಕಾಲ' ಎಂಬ ವಿವರಣೆಯನ್ನು ಕೊಟ್ಟಿರುವುದು ಎಷ್ಟು ಉಚಿತವಾಗಿದೆ ಮತ್ತು ಸಹಾಯಕವಾಗಿದೆ!

"ಆಚಾರವೆಂಬ ಬಿಲ್ಲಿಗೆ ವಿಚಾರವೆಂಬ ನಾರಿ ..." (ಪು, ೩೭೫) ಈ ವಚನದಲ್ಲಿ ಇರುವ ರೂಪಕ ಬಿಲ್ಲಿನಿಂದ ಬಾಣಪ್ರಯೋಗ ಮಾಡುವುದಕ್ಕೆ ಸಂಬಂಧಿಸಿದ್ದು. ಇವರಲ್ಲಿ ಉಪಮಾನದ ಭಾಗವನ್ನು ಅತ್ತ ಬದಿಗಿಟ್ಟು ಉಪಮೇಯದ ಭಾಗವನ್ನು ಮಾತ್ರ ವ್ಯಾಖ್ಯಾನಕಾರ ವಿವರಿಸುತ್ತಾನೆ (" ಶ್ರೀ ಗುರುಕೃಪೆಯಿಂದ ತನುವಿಗೆ ಆಚಾರವನಳವಡಿಸಿ, ಮನಕ್ಕೆ ಜ್ಞಾನವನಳವಡಿಸಿ... " ಇತ್ಯಾದಿ) ಎಂದರೆ, ವ್ಯಾಖ್ಯಾನದ ಸಹಾಯದಿಂದ ಅದರ ಆಧ್ಯಾತ್ಮಿಕ ಅರ್ಥ ತಿಳಿಯುತ್ತದೆ. ಅದರ ಬೆಳಕಿನಲ್ಲಿ ಮೂಲ ವಚನವನ್ನು ಓದಿ ಅವರ ಸಾಹಿತ್ಯಕ ಸೌಂದರ್ಯವನ್ನು ನಾವು ಸವಿಯಬಹುದು. ಆದರೆ ಸಾಹಿತ್ಯಭಾಗದ ಕಡೆ ಮಾತ್ರ ವ್ಯಾಖ್ಯಾನಕಾರನ ಗಮನ ಹೋಗುವುದಿಲ್ಲ.(ಇದಕ್ಕೆ ಕಾರಣವನ್ನು ಹಿಂದೆಯೇ ಸೂಚಿಸಿದೆ).

ಆಧ್ಯಾತ್ಮಿಕ ಅನುಭವದ ಅಥವಾ ಧಾರ್ಮಿಕವಿಷಯದ ವಚನಗಳಿಗೆ ವ್ಯಾಖ್ಯಾನ ಬರೆಯುತ್ತ, ಲೌಕಿಕ ಅಥವಾ ಸಾಮಾನ್ಯಸಂಗತಿಗಳನ್ನು ಹೇಳುವ ವಚನಗಳಲ್ಲಿಯೂ ಧಾರ್ಮಿಕ ಅರ್ಥವನ್ನು ಕಾಣುವುದು ಎಲ್ಲ ವ್ಯಾಖ್ಯಾನಕಾರರಲ್ಲಿಯೂ ಇರುವ ಒಂದು ದೋಷ. ಕೆಲವು ಉದಾಹರಣೆಗಳು:

> **ಲಿಂಗಾರ್ಚನೆಯ ಮಾಡುವ ಮಹಾಮಹಿಮರೆಲ್ಲರೂ**
> **ಸಲಿಗೆವಂತರಾಗಿ ಒಳಗೈದಾರೆ!**
> **ಆನು ದೇವಾ ಹೊಱಗಣವನು,**
> **ಸಂಬೋಳಿ ಸಂಬೋಳಿಯೆನುತ್ತ ಇಂಬಿನಲ್ಲಿ ಇದೇನೆ.**
> **ಕೂಡಲಸಂಗಯ್ಯಾ, ನಿಮ್ಮ ನಾಮವಿಡಿದು ನಾನು ಅನಾಮಿಕನಾದೆನು.**
> **(ಪು. ೩೯೦-೧)**

ಈ ವಚನ ಬಸವಣ್ಣನ ಅಕೃತಕ ವಿನಯದ ಒಂದು ಚಿತ್ರವನ್ನು ಕೊಡುತ್ತದೆ. ವಚನದ ಸ್ವಾರಸ್ಯವನ್ನು ವಿವರಿಸಲು ಇದು ಜಾಗವಲ್ಲ. ಇಲ್ಲಿರುವ ಸಂಗತಿ ಇಷ್ಟು: ಮನೆಯ ಒಳಗೆ ಶಿವಭಕ್ತರು ಪೂಜೆಯಲ್ಲಿ ಮಗ್ನರಾಗಿದ್ದಾರೆ; ಬಸವಣ್ಣ ಕಾವಲುಗಾರನಂತೆ ಹೊರಗೆ ಬಾಗಿಲು ಕಾಯುತ್ತಿದ್ದಾನೆ. ಶಿವಭಕ್ತರಿಗೆ ಹೋಲಿಸಿಕೊಂಡಾಗ ತಾನು ಅಸ್ಪೃಶ್ಯನೇ ಸರಿ ಎಂದು ಭಾವಿಸಿಕೊಳ್ಳುತ್ತಾನೆ. ('ಸಂಬೋಳಿ'- ಹೊಲೆಯರು ತಮ್ಮ ಬರವನ್ನು ಸೂಚಿಸಲು ಕೂಗುತ್ತಿದ್ದ ಕೂಗು; 'ಅನಾಮಿಕ'-ಹೊಲೆಯ). ವಚನದ ಉತ್ತರಾರ್ಧಕ್ಕೆ "....ಲಿಂಗ ತಾನೆಂದಱಿದು ಶಿವೋಹಂ ಶಿವೋಹಂ ಎಂಬ ಶಿವನ ಅದ್ವಯನಾಮವಿಡಿದು ಚತುರ್ವಿಧ ಪದಂಗಳಿಗೆ ಹೊಱಗಾಗಿ ಕಡೆ ಮೊದಲಿಲ್ಲದ ನಿರ್ನಾಮ ವಸ್ತುವೆ

ತಾನಾವ ಶರಣನೆಂಬುದೀ ವಚನದ ತಾತ್ಪರ್ಯಾರ್ಥ". ವ್ಯಾಖ್ಯಾನಕಾರ ವಚನವನ್ನು ಸರಿಯಾಗಿ ಗ್ರಹಿಸಿಲ್ಲವೆಂದು ಹೇಳಿದರೆ ಸಾಲದು, ತಪ್ಪಾಗಿ ಗ್ರಹಿಸಿದ್ದಾನೆ ಎಂದೇ ಹೇಳಬೇಕು. ಬಸವನ ಮನೆಯ ಒಳಗೆ ಇದ್ದ ಭಕ್ತರಲ್ಲಿ 'ಹೊಲೆಯ'ರೂ ಇದ್ದಿರಬೇಕು; 'ತಾನು ಹೊಲೆಯ' ಎಂದು ಕರೆದುಕೊಳ್ಳುವ ಬಸವಣ್ಣನ ಸಾಮಾಜಿಕ ಕ್ರಾಂತಿಯ—ಅಸ್ಪೃಶ್ಯತಾನಿವಾರಣೆಯ-ಒಂದು ಅಂಶವೂ ಈ ವಚನದಲ್ಲಿದೆ. ಅಂತಹ ಸಂಗತಿಗಳ ಕಡೆ ವ್ಯಾಖ್ಯಾನಕಾರರ ಗಮನ ಹೋಗುವುದೇ ಇಲ್ಲ. 'ನಂಬದೆ ನಚ್ಚದೆ ಬಱಿದೆ ಕರೆವರ ಕೊಂಬ ಮೆಟ್ಟಿ ಕೂಗೆಂದು...' ಎಂಬ ವಚನಕ್ಕೆ 'ನಂಬುಗೆ ವಿಶ್ವಾಸವಿಲ್ಲದೆ ಪೂಜಿಸುವರ ಮನ ತಲೆಯ ಮೆಟ್ಟಿ ಮಾಯೆ ಉಲಿದಾಡುತ್ತಿಹಳು ಎಂದು ಮುನ್ನಿನ ಶಿವ ಕೊಟ್ಟ ಅಪ್ಪಣೆ' ಎಂದು ವ್ಯಾಖ್ಯಾನಿಸಿದರೆ ಏನೆನ್ನಬೇಕು? 'ಸತ್ತಕೋಳಿಯೆದ್ದು ಕೂಗಿತ್ತ ಕಂಡೆ' ಎಂಬಲ್ಲಿ "ಪರಬ್ರಹ್ಮವೆಂಬುದೀಗ ಸತ್ತುವೆಂಬ ಶಬ್ದಕ್ಕರ್ಥ" ಎಂಬ ವ್ಯಾಖ್ಯಾನ ಖಂಡಿತ ಸರಿಯಲ್ಲ.

ನಿಜ ಹೇಳಬೇಕೆಂದರೆ, ಪ್ರಭುದೇವನ ಬಗ್ಗೆ ಮಾತ್ರವಲ್ಲ. ಒಟ್ಟು ವ್ಯಾಖ್ಯಾನಕಾರರ ಬಗ್ಗೆ ನನಗೆ ಅತೃಪ್ತಿ ಇದ್ದೇ ಇದೆ. ಇದಕ್ಕೆ ನಮ್ಮ ಕಾಲವೂ ಅಭಿರುಚಿಯೂ ಕಾರಣವಿರಬಹುದು. ಮತ ಅಥವಾ ಧರ್ಮ ಒಂದು ದೊಡ್ಡ ಮೌಲ್ಯವೆಂಬ ನಂಬಿಕೆ ಹಿನ್ನೆಲೆಗೆ ಸರಿಯುತ್ತಿದೆ. ಸಮಾಜ, ಸಾಮಾಜಿಕ ಕಳಕಳಿ ಇವು ಮುಖ್ಯವಾಗುತ್ತಿವೆ. ಹಾಗೆಯೇ ಸಾಹಿತ್ಯವನ್ನು ಸಾಹಿತ್ಯವಾಗಿಯೇ ನೋಡುವುದು, ಮೆಚ್ಚುವುದು ಪ್ರಮುಖವಾಗುತ್ತಿದೆ. ಅಥವಾ, ಸಾಹಿತ್ಯಕ್ಕೆ ಒಂದು ಸಾಮಾಜಿಕ ಉಪಯೋಗವಿರಬೇಕು ಎನ್ನುವ ವಾದವೂ ಕೇಳಿಬರುತ್ತಿದೆ. ಹೀಗಿರುವಾಗ ಧರ್ಮವೇ ಪ್ರಧಾನವಾಗಿದ್ದ ವ್ಯಾಖ್ಯಾನಕಾರರ ಟೀಕೆ ಕೆಲವು ಕಡೆ ಅತೃಪ್ತಿ ಹುಟ್ಟಿಸಿದರೆ ಆಶ್ಚರ್ಯವಿಲ್ಲ. ವ್ಯಾಖ್ಯಾನಗಳು ಇಲ್ಲದೇ ಹೋಗಿದ್ದರೆ,ವಚನಗಳ ಬಗ್ಗೆ ಈಗ ನಮಗಿರುವ ಅರಿವು ಕಡಿಮೆಯಾಗುತ್ತಿತ್ತೇ? ಎನ್ನುವ ಪ್ರಶ್ನೆಯನ್ನು ಹಾಕಿಕೊಂಡಿದ್ದೇನೆ. ಅಥವಾ, ವ್ಯಾಖ್ಯಾನಗಳನ್ನು ಓದಿದರೆ ಈಗ ನಮಗಿರುವ ಅರಿವು ಇನ್ನು ಆಳವಾಗುತ್ತದೆಯೇ? ಎನ್ನುವ ಅದೇ ಪ್ರಶ್ನೆಯ ಇನ್ನೊಂದು ಮುಖವನ್ನೂ ಜ್ಞಾಪಿಸಿಕೊಂಡಿದ್ದೇನೆ. ವ್ಯಾಖ್ಯಾನಗಳ ಒಂದು ಪರಂಪರೆಯ ಬಗ್ಗೆಯೇ ಒಂದು ಮಾತಿನ ತೀರ್ಮಾನವನ್ನು ಹೇಳುವುದು ತಪ್ಪು-ಆದರೂ, ಅಳುಕಿನಿಂದಲೇ 'ಬಹುಶಃ ಇಲ್ಲ' ಎಂಬ ಉತ್ತರವನ್ನು ನಾನೇ ಕೊಟ್ಟುಕೊಂಡಿದ್ದೇನೆ.

ವ್ಯಾಖ್ಯಾನವು ಬೆಡಗಿನವಚನಗಳಿಗೆ ಅತ್ಯಂತ ಅಗತ್ಯವೆಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಮೇಲಿನ ಮಾತುಗಳನ್ನು ಬೆಡಗಿನ ವಚನಗಳ

ವ್ಯಾಖ್ಯಾನಗಳಿಗೆ ಅನ್ವಯಿಸಬಾರದು. ಆದರೆ ಬಿಡಿಗಿನ ವಚನಗಳು ವಚನವಾಙ್ಮಯದ ಇತರ ಭಾಗದಷ್ಟು ಮುಖ್ಯ, ಗಣನೀಯ ಎಂದು ಅನ್ನಿಸುತ್ತದೆಯೋ ಎಂಬ ಪ್ರಶ್ನೆಯೂ ಉಂಟು.

ವ್ಯಾಖ್ಯಾನಕಾರರ ಗ್ರಂಥಗಳು ಸಂಕಲನಗ್ರಂಥಗಳೂ ಆಗಿವೆ: ಆ ದೃಷ್ಟಿಯಿಂದ ಅವು ಖಂಡಿತವಾಗಿಯೂ ಅಮೂಲ್ಯ.

ಸೇರಿಗೆ ಸವ್ವಾಸೇರು

● ಎಚ್. ಎಂ. ಬೀಳಗಿ

ಶಾಸ್ತ್ರವಿಸ್ತಾರ ತುಸು ತಿಳಿಸುವೆ ಜನಕಾ |
ಗುಲ್ಲ ಮಾಡದೆ ಜರಾ ಕೇಳರಿ ಮಜಕೂರ |
ಒಂದು ಊರಾಗ ಒಬ್ಬ ಇದ್ದ ಸಾವುಕಾರ | ಆತಗಿದ್ದರಪ್ಪ ಇಬ್ಬರ ಹೆಂಡರಾ |
ಪೈಲಾದಾಕಿ ಇದ್ದಾಳ ಬೆರಕಿ ಮಂತರ ತಂತರಕ || ೧ ||

ಮಕ್ಕಳಿಲ್ಲದೆ ರೊಕ್ಕಾ ಇದ್ದೇನು ಸುಡಬೇಕ |
ಹಡೀಲಿಲ್ಲ ಮುಂಚಿನ್ಯಾಕಿ | ಮತ್ತೊಂದ ಆದಾನ ಉಡಕಿಽ |
ಇಟ್ಟ ಆಕಿ ಮ್ಯಾಗ ಸಾಂಭ ಹರಕಿ | ಗಂಡಸಮಗ ಹುಟ್ಯಾನ ರಾಜೌಂಶಿಽ |
ಪ್ರೀತಿ ಮಮತಿ ಮಾಡುವ ಪತಿ ಆಕಿಮ್ಯಾಲ ಲಕ್ಕ || ೨ ||

ಮೊದಲಿನ ಹೆಣತಿ ಮನದಾಗ ಮುರುತಿದ್ದಲ ಚಟಕ |
ಹೆಂಡರಿಗೆ ತಾಕೀತ ಕೊಟ್ಟ ಗಂಡಾ ವ್ಯಾಪಾರಕ ಹೊಂಟಾ |
ಮೊದಲಿನ ಹೆಂಡತಿ ಮನಿಯಾಗ ಅರ್ಭಟಾ | ನಡಸ್ಯಾಳ ತನ್ನ ಬಂಗಾಲಿ ಆಟ |
ರಂಭಿ ಉಬ್ಬಿ ಬಟ್ಟಲ ತುಂಬಿ ತಗೊಂಡಾಳ ಉದಕ || ೩ ||

ಮಂತ್ರಿಸಿ ಸಿಂಬಡಸ್ಯಾಳ ನೀರಾ ತಾಯಿ ಮಗ್ನ ತಟಕ |
ನೀರ ಬಿದ್ದ ಬರೋಬರಿ | ಆಕಳ ಆಗ್ಯಾಳ ನಾರಿ,
ಮಗ ಆಗಿ ನಿಂತಾ ಸಣ್ಣ ಹೋರಿ |
ಡುರಕಿ ಹೊಡಿಯುತಾ ತನ ಕಾಲ ಕೆದರಿ |
ಅಲ್ಲೆ ಇದ್ದ ಕಟುಕನ ಕರೆದು ಕೊಟ್ಟಾಳ ತಾಬೀಕ || ೪ ||

ಸಾವುಕಾರ ವ್ಯಾಪಾರ ಮಾಡಿಕೊಂಡ ತಿರುಗಿ ಬಂದ ಆ ಕ್ಷಣಕ |
ನೋಡತಾನ ಮನಿಯಾಗ ಹೋಗಿ ಮೋಹದ ಸತಿ ಸುತರಿಗೆ |
ಕಾಣಲಿಲ್ಲ ಇಬ್ಬರು ಕಣ್ಣಿಗೆ, ಒಬ್ಬಾಕಿ ಕುಂತಿದ್ಲು ಮೊದಲಿನ ಗೂಗಿ |
ಕಂಡ ಗಂಡ ಕೇಳತಾನ ಉಂಡ ಮಾರಿ ಬಾಡಿ ಮುಖ || ೫ ||

ಯಾವಲ್ಲಿ ಹೋಗ್ಯಾಳ ನನ್ನ ಸತಿ, ಸುತ ಹಿತಚಿಂತಕ |
ತಗದ ಹೇಳ್ಯಾಳ ಹಂಚಕಿs | ಬಂದೀತ ಕೆಟ್ಟ ಕಸಾರಕಿs |
ಉಳದಾಳ ಅಂತ ಬಹಳ ಮಾಡಿದ್ದೆ ಜ್ವಾಕಿ |
ಮಗನು ನೋಡಿ ಹೋದಾನ ಓಡಿ ನೋಡಲಾರದಕ || ೬ ||

ನೆನಸಿ ನೆನಸಿ ಅಳತಾನ ಸೋಸಿ ಸಾಪ್ರಕಾರ ನಸೀಬಕ |
ಅಯ್ಯೋ ನನ್ನ ಮೋಹದ ಮಡದಿ ಬಿಟ್ಟ ನನಗ ಯಾವಲ್ಲಿ ಹ್ವಾದಿ |
ಮುದ್ದು ಮಗನಿಗೆ ಯಾವ ಕಡೆ ಹಾದಿ ತೋರಿಸಿ ನನಗ ವನವಾಸ ತಂದಿ |
ದುಃಖಸುಖಯಿಟ್ಟಿದಿ ನನಗ ತಪ್ಪದೆ ಸಾವುತನಕ || ೭ ||

ಬಂದೀತ ಬಕರೀದ ಹಬ್ಬ ಮುಂದ ತುಸು ದಿನಕ |
ಗಂಡಗ ಅಂತಾಳ ಕುಂತ, ಕುಂಡರಬ್ಯಾಡ್ರಿ ಮೈಮರತಾ |
ಸತ್ತವರ ಕೂಡ ಯಾರೂ ಹೋಗೂದಿಲ್ಲ ಸತ್ತಾ |
ಇದ್ದವರ ಜನ್ಮಕ ಇರಬೇಕ ಸ್ವಸ್ಥಾ |
ಇಂದ ಚಂದ ಆಕಳ ತಂದ ಕುರಬಾನಿ ಕೊಡಬೇಕ || ೮ ||

ಕಟುಕಗ ಕೊಟ್ಟದ್ದ ಆಕಳಾ ತಂದಾಳಾ ಕ್ಷಣಕ |
ಕಂಡ ಗಂಡನ ಮಾರಿ ಒದರೀತ ಚಿಟ್ಟನೆ ಚೀರಿ |
ಪತಿ ಅಂದಾ ಇದಕ ಸಾಕೂನು ನಾರಿ | ಮತ್ತೊಂದ ತಂದ ಕೊಡೂನು ಬ್ಯಾರಿ |
ಮಮತಿ ಪ್ರೀತಿ ಬಹಳ ಬರತೈತಿ ನೋಡೂನ ಇದಕ || ೯ ||

ಸದ್ಯಕ್ಕ ಇದ್ದದ್ದ ಬಿಟ್ಟು, ಗುದ್ಯಾಡುದು ಯಾಕ |
ಹಿಡಿಲಿಲ್ಲ ಹೆಣತಿ ಕೂಸಾ | ಕೆಡವಿ ಕೋದಾನ ಗೋಣಾ |
ಆ ಭೋಳೆಗಂಡಗ ಆ ರಕ್ತ ನೋಡೋಣ ಬವಳಕಿ ಬಂದು ಮುಚ್ಯಾನ ಕಣ್ಣಾ |
ಅಂತಾಳ ಸಪತಿ ಆತ ನಿಶ್ಚಿಂತಿ ನನ್ನ ಮನತಕ್ಕ || ೧೦ ||

ಸವತಿಗೆ ಕೊಂದ ರಂಡಿ ಇರಲಿಲ್ಲ ಸುಮ್ಮಕ |
ಜನಾ ಬಹಳ ಸಾಲೂದಿಲ್ಲಾ ಹೋರಿಗೆ ಹಿಡತಂದಾಳಲ್ಲಾ |
ಕಟುಕಗ ಅಂತಾಳ ತಿಂಪೈತಿ ಕಾಳಾ | ಅವರಕಿಂತ ಇದು ಇದ್ದೀತು ನಿವಳಾ |
ಭಾರಿ ಹೋರಿ, ತರದಿ ಮಾರಿ ನೋಡಿಗ ಬಳಿಕ || ೧೧ ||

ಕಸವೀಲಿ ಕೊಸರಿಬಂದು ಬಿದ್ದೀತ ತಂದಿ ಪಾದಕ |
ಕಂಡ ಆ ಹೊಯ್ಮಾಲಿ ಮುಲತಾಯಿ ಮಾಡತಾಳ ನಕಲಿ |
ತಂದಿ ಅಂದಾನೂ ಇದರs ಇರಲಿ | ಮುಂದಿನ ಹಬ್ಬಕ ಕೊಯ್ಯುನು ನಾರಿ |
ತಂದಿ ಅಂದ, ಕಟುಕನ ಕರದು ತಿರುಗಿ ಒಯ್‌ ಹಿಂದಕ || ೧೨ ||

ಕಂಡು ಕಟುಕನ ಮಗಳು ಮಾಡತಾಳ ದುಃಖ |
ಆಕಳ ಹೋದೀತು ತೀರಿ ಇದು ಒಂದ ಉಳದೀತ ಹೋರಿ |
ತಂದೆಗಂದಾಳು ನೀವೇನು ತಿಳಿದಿರಿ ಅದು ಹೋರಿ ಅಲ್ಲಾ ಮಗಾಹಾನ ಸಾವುಕಾರ |
ತಂದಿ ಮುಂದಿ ಮುಂದ ಸುದ್ದಿ ಹೇಳೀದ ಬಳಿಕ || ೧೩ ||

ಬಂದಾನ ಆ ಹೋರಿ ತಂದಿ ಆ ಕಟುಕನ ಮನಿತನಕ |
ಹಡದವ್ವಾ ಮಾಡ ಸಾಹಸಾ | ಉಡಸೂವೆ ಸೀರಿಕುಬಸಾ |
ಕಟುಕಳಂದಾಳ ನನವಾತಾ ತುಸು ಕೇಳರಿ ನಂದು ಇತ್ತು ಮನಸಾ |
ಈಗ ಬ್ಯಾಗ ನನಗ ಅವಂಗ ಲಗ್ನ ಮಾಡಬೇಕ || ೧೪ ||

ಕೊಟ್ಟಾನ ಸಾವುಕಾರ ವಚನ ಘಟ್ಟಿ ತಿಳಿ ಮನಕ |
ನಿನ್ನ ಮ್ಯಾಲೆ ಎರಡನೆಯಿಲ್ಲಾ | ಅನ್ನಾನಾ ಕಟುಕನ ಅಬಲಾ |
ತಗೊಂಡಾಳ ಕೈಯ್ಯಾಗ ನೀರಿನ ಬಟಲಾ |
ಮಂತ್ರಿಸಿ ಉಗ್ಗ್ಯಾಳ ಹೋರಿಯ ಮ್ಯಾಲಾ |
ಕಂದ ಚಂದ ನಿಂತಾನ ಇಂದ | ಮನುಷ್ಯಾಗಿ ಲಕ್ಕ || ೧೫ ||

ವಚನದ ಸರಿಯಾಗಿ ಮದುವಿಯಾತ ಖಡಕ |
ಮನಿಮಗಳು ಬಂದಾಳು ಸೊಸಿ ನಡದೀತ ಗುಸುಮುಸಿ |
ಸೊಸಿ ಒಗದಾಳ ನೀರ ಮಂತ್ರಿಸಿ | ಅತ್ತಿ ಚಿಗರಿ ಆದಾಳ ಪರದೇಶಿ |
ಸೇರಿಗೆ ಸವ್ವಾಸೇರು ಆದರ ಮುರುತೈತಿ ಸೊಕ್ಕ || ೧೬ ||

ಬಾಗಲಕೋಟ್ಯಾಗ ಗುರು ದಸ್ತಗೀರನ ಬೆಳಕ |
ಕರುಣುಳ್ಳ ಕೇಶುಪೀರ ಮಸ್ತ ಬುದ್ಧಿಕೊಟ್ಟಾನ ಧೀರಾ |
ದೇಶದ ಮ್ಯಾಗ ನಾಗುಗೌಸುನ ಹೆಸರಾ
ಡಂಕಾ ಹೊಡುತೈತಿ ಇಲ್ಲದಾಂಗ ಕಸರಾ |
ತಮ್ಮಾ ದಮ್ಮಾ ಬಿಟ್ಟಬಿಡ ಹಮ್ಮಾ ಬರುದಿಲ್ಲ ಕೆಲಸಕ್ಕ || ೧೭ ||

ಜನಪದ ಕವಿಚರಿತೆ

● ಎಂ. ಎಸ್. ಲಠ್ಠೆ

೧೪. ಶಿಶುನಾಳ ಶರೀಫರು (೧೮೧೮–೧೮೮೯):

ಧಾರವಾಡಜಿಲ್ಲೆಯ ಸಿಗ್ಗಾವಿ ತಾಲೂಕಿನ ಶಿಶುನಾಳದಲ್ಲಿ (೧೮೧೮) ಶರೀಫರು ಹುಟ್ಟಿದ್ದು. ತಂದೆ ಇಮಾಮಸಾಹೇಬ, ತಾಯಿ ಹಾಜುಮಾ. ಮಗ ಶರೀಫ ಒಳ್ಳೆಯ ಪರಿಸರದಲ್ಲಿಯೆ ಬೆಳೆದುಬರುತ್ತಾನೆ. ಹಿಂದೂಶಾಸ್ತ್ರ, ಪುರಾಣಗಳನ್ನರಿತ ತಂದೆಯಂತೆಯೇ ಮಗನೂ ಅತ್ತ ಒಲವು ಹರಿಸುತ್ತಾನೆ. ಮುಲ್ಕೀಪರೀಕ್ಷೆ ಪಾಸಾದುದರಿಂದ ಪ್ರಾಥಮಿಕಶಾಲಾಶಿಕ್ಷಕ ಹುದ್ದೆಯೂ ದೊರಕುತ್ತದೆ. ವಯಸ್ಸಾದ ಮೇಲೆ ಕುಂದಗೋಳದ ಫಾತಿಮಾಬಿಯ ಜೊತೆ ಲಗ್ನವೂ ಆಗುತ್ತದೆ. ಹುಟ್ಟಿದ ಮಗುವೊಂದು ಕಾಲರಾಬೇನೆಗೆ ತುತ್ತಾಗುತ್ತದೆ. ಇದಾದ ಕೆಲ ವರುಷಗಳಲ್ಲಿ ಹೆಂಡತಿಯೂ ಸತ್ತುಹೋಗುತ್ತಾಳೆ. ಇದರಿಂದಾಗಿ ಶರೀಫರಿಗೆ ಕ್ಷಣಕಾಲ ವ್ಯಥೆಯಾದರೂ ಸಂಸಾರಬಂಧನದಿಂದ ಬಿಡುಗಡೆಯಾಯಿತೆಂದು ಸಂತೋಷಪಡುತ್ತಾರೆ. ಲೋಕವಿಲಕ್ಷಣವಾದ ರೀತಿಯಲ್ಲಿ ಶರೀಫರ ಜೀವನ ನಡೆಯುತ್ತದೆ. ಅಧ್ಯಾತ್ಮ ದತ್ತವಾಲಿದ ಸಾಮಾನ್ಯರ ಬದುಕಿಗಂಟಿದ ಚಿಂತನೆ ಅವರದಾಗುತ್ತದೆ. ಅನುಭಾವಿಗಳ ಜೊತೆ ಒಡನಾಟವಿದ್ದುದರಿಂದ ಅವರಂತೆಯೇ ಮಹಾನುಭಾವಿಗಳಾಗುತ್ತಾರೆ. ಕಳಸದ ಗುರುಗೋವಿಂದಭಟ್ಟರ ಶಿಷ್ಯರಾದುದರಿಂದಲಂತೂ ಇವರ ಅಂತಸ್ತು ಇನ್ನೂ ಮೇಲೇರುತ್ತದೆ. ಪ್ರತಿಫಲವಾಗಿ ಸಾಮಾನ್ಯರಿಂದ ಹಿಡಿದು ಪಂಡಿತರ ವರೆಗೆ, ಮಕ್ಕಳಿಂದ ಹಿಡಿದು ಮುದುಕರೂ ಕೂಡ ಸಂತೋಷ ಹಾಗೂ ಅಭಿಮಾನ ತಾಳುವ ರೀತಿಯಲ್ಲಿ ಅನುಭವದ ಪದಗಳನ್ನು ರಚಿಸಹತ್ತುತ್ತಾರೆ.

"ನನ್ನೊಳಗೆ ನಾನೇ ತಿಳಕೊಂಡೆ। ನನಗೆ ಬೇಕಾದ ಗುರುವನ ಪಡಕೊಂಡೆ।
ಗುರೂಪದೇಶ ಕೇಳಿಕೊಂಡೆ। ಗುರುಗೋವಿಂದನ ಪಾದಾ ಹಿಡಕೊಂಡೇ।"

ಎಂದು ಸಂತೋಷದಿಂದ ಗುರುವನ್ನು ಸ್ಮರಿಸುತ್ತ ಹಾಡಿ, ಕುಣಿದಾಡುತ್ತಾರೆ. ಸಮಾಜದಲ್ಲಿ ಮನುಷ್ಯ, ಸಹಬಾಳ್ವೆಯಲ್ಲಿ ತೊಡಗಿದಾಗ ಉದ್ಭವಿಸುವಂತಹ

ಹಲವಾರು ಸಮಸ್ಯೆಗಳನ್ನು ಎದುರಿಸಲು ಜ್ಞಾನಬೇಕು. ಅಂಥ ಜ್ಞಾನ ನೀಡು ವುದಕ್ಕೆ ತಕ್ಕ ಗುರುಬೇಕೆಂದು ಘೋಷಿಸಿದ್ದಾರೆ–ತಕ್ಕ ಗುರುಗೋವಿಂದರನ್ನು ಪಡೆದ ಅನುಭವವಾಗಿ.

ಶರೀಫರು ರಚಿಸಿದ ಹಾಡುಗಳು ಸಾವಿರಾರು. ಅದರಲ್ಲಿ ಹೆಚ್ಚಾಗಿ ಅನುಭವ ಸಾರದ ಭಕ್ತಿಗೀತೆಗಳಿವೆ. ಮಕ್ಕಳಹಾಡು, ಲಾವಣಿ, ಮಂಗಳಾರತಿ ಪದಗಳನ್ನು ರಚಿಸಿದ್ದಾರೆ. ‘ಶಿಶುನಾಳಧೀಶಾ’ ಎನ್ನುವುದು ಶರೀಫರ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ. ಶಿಶುನಾಳ ಗ್ರಾಮದೇವತೆಯೆನಿಸಿದ ಕಂಬದ ಮೇಲಿರುವ ಬಸವಣ್ಣನ ವಿಗ್ರಹವೇ ಈ ಶಿಶುನಾಳಧೀಶ. ಶರೀಫರ ಜನ್ಮಭೂಮಿಯಾದ ಶಿಶುನಾಳ ದಲ್ಲಿ ಪ್ರತಿ ಅಮಾವಾಸ್ಯೆಗೂ ದೊಡ್ಡ ಜಾತ್ರೆ ನೆರೆಯುತ್ತದೆ. ಅವರು ಪ್ರಾಣ ಬಿಟ್ಟು, ಎಪ್ಪತ್ತೇಳು ವರುಷಗಳು ಗತಿಸಿದ್ದರೂ (೧೮೮೯) ಅವರನ್ನು ಬದುಕಿ ಸಿದ್ದಾರೆ– ಆ ಭಾಗದ ಜನ. ಅದಕ್ಕೆ ಪ್ರತೀಕವಾಗಿ ಅಸಂಖ್ಯಾತ ಭಕ್ತರು, ಅನುಯಾಯಿಗಳು, ಯಾತ್ರಿಕರು–ಅವರ ಗದ್ದುಗೆಯ ದರ್ಶದ ಪಡೆದು, ಅವರ ಗೀತೆಗಳನ್ನು ಹಾಡಿ, ಕೇಳಿ, ಸಂತೋಷಪಡುತ್ತಾರೆ. ಮನ ಹಗುರುಮಾಡಿ ಕೊಳ್ಳುತ್ತಾರೆ. ಅಲ್ಲಿಯ ಮೇಳಗಳ ಹಾಡು ಕೇಳಿದ ಕಿವಿ, ನುಡಿಸಿದ ನಾಲಿಗೆ ಪವಿತ್ರವಾಗುತ್ತವೆ. ಮನದ ಮೈಲಿಗೆ ಕಳಚಿಹೋಗುತ್ತದೆ. ಹಿಂದೂ–ಮುಸ್ಲೀ ಮರೆಲ್ಲರೂ ಏಕೋಭಾವದಿಂದ ಶರೀಫರನ್ನು ಅಪ್ಪಿಕೊಳ್ಳುವಂತಾಗುತ್ತವೆ. ಹಳ್ಳಿ ಗಳಲ್ಲೆಲ್ಲಾ ಈಗಲೂ ಇವರ ಪದಗಳನ್ನು ಸುಶ್ರಾವ್ಯವಾಗಿ, ಅಷ್ಟೇ ಭಕ್ತಿಪರವಶ ರಾಗಿ ಹಾಡುವುದುಂಟು.

ಶರೀಫರು ತಮ್ಮ ಜೀವಮಾನದಲ್ಲಿ ನಾಡಿನ ಹಲವಾರು ಪುಣ್ಯಕ್ಷೇತ್ರಗ ಳನ್ನು ಸಂದರ್ಶಿಸಿದ್ದಾರೆ. ಅವುಗಳ ಮೇಲೆ ಹಾಡೂ ರಚಿಸಿದ್ದಾರೆ. ಹಬ್ಬ-ಹರಿದಿನ ಜಾತ್ರೆ ಮೊದಲಾದ ಸಮಾರಂಭಗಳ ಕುರಿತೂ ಪದ ಹೆಣೆದಿದ್ದಾರೆ. ಎಲ್ಲಮ್ಮನ ಮೇಲಿನ ಹಾಡಂತೂ ಜೋಗತಿಯರನ್ನು ದಂಗುಬಡಿಸಿದೆ. ತಲೆಯ ಮೇಲೆ ಜಗ ಹೊತ್ತುಕೊಂಡು ‘ಎಲ್ಲಿ ಕಾಽಣೆಽಲ್ಲಿ ಕಾಽಣೆ| ಎಲ್ಲಮ್ಮ ನಿನ್ನಂಥಾಕಿನ್ನೆಽಲ್ಲಿ ಕಾಽಣೆಽಲ್ಲಿ ಕಾಣೆ’ ಎಂದು ಹಾಡಿದ್ದೇ ಹಾಡಿದ್ದು. ಹಾಗೆಯೆ ಉಳವಿ, ಹುಲಗೂರ ಮೊದಲಾದ ಕ್ಷೇತ್ರಗಳನ್ನು ಕಂಡೂ ಹಾಡು ರಚಿಸಿದ್ದಾರೆ. ‘ಅಲ್ಲಿಕೇರಿಗೆ ಹೋಗುಣು ಬರ್ತೀರೇನ್ರಿ ನೀವು| ಒಲ್ಲದಿದ್ರ ಇಲ್ಲೇಽ ಇರತೀರೇನ್ರಿಽ |’ ಎನ್ನುವ ಪದವಂತೂ ಭಜನಿಮೇಳಗಳಲ್ಲೆಲ್ಲಾ ಡಂಗುರ ಬಾರಿಸಿದೆ. ‘ಸೋರುತಿಹುದು ಮನೆಯ ಮಾಳಿಗೆ| ಅಜ್ಞಾನದಿಂದ ಸೋರುತಿಹುದು ಮನೆಯ ಮಾಳಿಗೆ’ ಎನ್ನುವ ಹಾಡು ಅಧ್ಯಾತ್ಮದಂಚಿಗೆ ಒಯ್ದು ನಿಲ್ಲಿಸುವಂತಿದೆ. ‘ನನ್ನೊಳಗೆ ನಾ ತಿಳಕೊಂಡೆ| ನನಗೆ ಬೇಕಾದ ಗಂಡನ ಮಾಡಿಕೊಂಡೆ| ಆಜ್ಞಿಪ್ರಕಾರ ನಡಕೊಂಡೆ ನಾ|

ಎಲ್ಲರ ಹಂಗೊಂದ ಹರಕೊಂಡೆ|' ಎನ್ನುವಂಥ ಹಲವಾರು ಹಾಡುಗಳಲ್ಲಿ ಶರೀಫರ ಸತಿ-ಪತಿ ಭಾವವನ್ನು ಗುರುತಿಸಬಹುದಾಗಿದೆ. 'ಬಿದ್ದಿಯಬೆ ಮುದುಕಿ ನೀ | ಸಪ್ಪಕಿದು ಹುಲಗೂರ ಸಂತಿ, ಗದ್ದಲದೊಳಗ ಯಾತಕ ನಿಂತಿ' ಎನ್ನುವಂಥ ಹಾಡುಗಳಲ್ಲಿ ವಿಡಂಬನೆ ಸೂರೆಯಾಗಿದೆ. ಹೀಗೆ ಶರೀಫರ ಕವಿತ್ವಶಕ್ತಿ ಸೆಲೆಯೊಡೆದು ಮಡುಗಟ್ಟಿ ಜನಪದ ಪ್ರವಾಹವಾಗಿ ಹರಿದಿದೆ. ಡಾ. ಸಿಂದಗಿ ಅವರು ಶರೀಫರ ಕುರಿತೇ ಮಹಾಪ್ರಬಂಧ ಬರೆದು ಡಾಕ್ಟರೇಟ ಪದವಿ ಸಂಪಾದಿಸಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಂಥ ಘನವ್ಯಕ್ತಿತ್ವ, ಸಾಹಿತ್ಯ ಶ್ರೀಮಂತಿಕೆ, ಅನುಭವದ ಐಸಿರಿ ಶ್ರೀ ಶರೀಫರದು. ಅಂತೆಯೇ ಅವರನ್ನು ಕರ್ನಾಟಕದ ಕಬೀರರೆಂದು ಜನ ಕೊಂಡಾಡುವುದುಂಟು.

ಮುಸಲ್ಮಾನಧರ್ಮದಲ್ಲಿ ಹುಟ್ಟಿದ ಶರೀಫರು ಹಿಂದೂಗುರುವಿನ ಶಿಷ್ಯರಾಗಿ, ಶ್ರೇಷ್ಠ ಸಂತರೆನಿಸಿ ಕನ್ನಡ ಜನಪದಲೋಕದ ರಸಋಷಿಯಾಗಿ ಮೆರೆದಿದ್ದಾರೆ.

೧೫. ಹಲಸಂಗಿಯ ಖಾಜಾಭಾಯಿ (೧೮೪೭-೧೯೦೭):

ವಿಜಾಪುರ ಜಿಲ್ಲೆಯ 'ಹಲಸಂಗಿ' ಜನಪದಸಾಹಿತ್ಯಸೆಲೆಯ ಬುಗ್ಗೆ. ಗೆಳೆಯರ ಬಳಗದಿಂದ ಇನ್ನೂ ಪ್ರಸಿದ್ಧಿ ಪಡೆದಿದೆ. ಮಧುರಚೆನ್ನರ ಜನ್ಮಭೂಮಿ. ಹಲವಾರು ಜನಪದ ಕವಿಗಳ, ಗಾಯಕರ, ಸಂಗ್ರಹಕಾರರ ನೆಲೆವೀಡು. ಖಾಜಾಭಾಯಿ ಎಂಬ ಕವಿಯು ಹುಟ್ಟಿದ್ದು ಇಲ್ಲಿಯೇ. ಅವರೀಗ ಪೈಗಂಬರವಾಸಿಗಳಾಗಿ ೭೦ ವರುಷಗಳಾದರೂ ಆಗಿರಬೇಕು. ಆಗ ಅರುವತ್ತು ವರುಷಗಳಿದ್ದವಂತೆ. ಅಂದರೆ ಸುಮಾರು ೧೮೪೭ ರಿಂದ ೧೯೦೭ ರ ಅವಧಿಯಲ್ಲಿ ಬಾಳಿರಬೇಕು.

ಜಮಾಸಾಬ ಸಮುಸೇರ ನದಾಫ ಎಂಬವರ ಮಗನೇ ಈ ಖಾಜಾಭಾಯಿ. ಅದೇ ಊರ ದಾವಪೀರನ ಭಕ್ತ. ಜನಪದಕವಿಗಳಾದ ಅದೇ ಊರಿನ ಸಂಗೂ ವಸ್ತಾದ ರಾಯಪ್ಪ ಗುರುಗಳಾಗಿದ್ದರು. ಇವರ ಒಡನಾಟದಿಂದಾಗಿ ಹಾಡಲು ಕಲಿತು, ಮುಂದೆ ತಾನೂ ಹಾಡು ರಚಿಸುತ್ತ ಬಂದನು. 'ಸಂಗು ವಸ್ತಾದ ರಾಯಪ್ಪನ ಹೆಸರ| ಶಿಷ್ಯಾಹಾನ ಶಿಖರ ಖಾಜಾ ಕವೀಶ್ವರ|' ಎಂಬ ಚರಣಗಳಲ್ಲಿ ಈ ಗುರು-ಶಿಷ್ಯರ ಸಂಬಂಧ ಅರಿತುಕೊಳ್ಳಬಹುದಾಗಿದೆ. ಹರದೇಶಿ ಪಂಗಡಕ್ಕೆ ಸಂಬಂಧಿಸಿದ ಕವಿಯ ಹಾಡುಗಳು ಆಕರ್ಷಕವಾಗಿವೆ. ಶ್ರೀ ಸಿಂಪಿ ಲಿಂಗಣ್ಣ ಮತ್ತು ಧೂಲಾ ಅವರು ತಮ್ಮ 'ಜೀವನ ಸಂಗೀತ' ಎಂಬ ಸಂಗ್ರಹದಲ್ಲಿ ೧೯೩೩ ರಲ್ಲೀ ಈ ಖಾಜಾನ ಹಲವಾರು ಲಾವಣಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಖಾಜಾನ ಜೊತೆಗಾರ ಖಂಡೂ ತಳವಾರ ಎಂಬವನಿದ್ದು-ಸೂರು ಹಿಡಿದು ಜೋಕು ಹೇಳುವಲ್ಲಿ ಬಹಳೇ ಚತುರನಿದ್ದನು. ವೈರಿಗಳಿಗೂ ಕೂಡ ದಿಗಿಲುಬೀಳು

ತ್ತಿತ್ತಂತೆ. ರಾಮಚಂದ್ರ ಮತ್ತು ಮೌಲಾ ಎನ್ನುವವರು ಖಾಜಾನ ಶಿಷ್ಯರಾಗಿದ್ದರು. ಗಂಡುಮಕ್ಕಳಿಲ್ಲ, ಇಬ್ಬರು ಹೆಣ್ಣುಮಕ್ಕಳು ಮಾತ್ರ ಇದ್ದಾರೆ.

ಖಾಜಾನ ಹಾಡುಗಳೆಂದರೆ ಆತನೇ ಹೇಳಿಕೊಂಡಂತೆ ದವನಮುಡಿದ ಹಾಗೆ. 'ಖಾಜಾನ ಕವಿಯ ನೋಡಿರಿ ಮುಡಿದ್ಹಂಗ ದವನ' ರಾಜಕವಿಯೆನಿಸಿದ ಖಾಜಾ ಅಷ್ಟೇ ಪರಿಣಾಮಕಾರೀ ಹಾಡು ಹೇಳುತ್ತಿದ್ದರಂತೆ. 'ಶಿಶ್ಯಾ ಖಾಜ ರಾಜಕವಿ ಸಾಜ ಮೋಜ ಹಾಡುಣಕಿ ಸಭಾಕ ಭರ್ತಿ|' ಕೆಳಗಿನ ಪದ್ಯಗಳಿಂದ ಆತನ ಕಾವ್ಯಶಕ್ತಿಯನ್ನು ಅರಿತುಕೊಳ್ಳಬಹುದು.

'ಗುರುವೆ ನಿಮ್ಮ ಪಾದಕ ಬೆರಸಿ| ಪೂಜಿಮಾಡುವೆ ಸಾಹಿತ ತರಸಿ|
ತೀರ್ಥ ಸೀತಾಳದಿಂದ ಪಾದ ತೊಳಸಿ| ಅಬಿರ ಕಸ್ತೂರಿ ಅಂಗಕಧರಸಿ|
ಜಾಜಿ ಪುಷ್ಪ ಮಲ್ಲಿಗೆ ಏರಸಿ| ....
....
ಭುವನದೊಳಗೆ ಬಂದೆನು ಜನಿಸಿ| ಹರಿಯ ಪಾದಸೇವಕ ಅನಿಸಿ|
ನಿನ್ನ ಪಾದಮ್ಯಾಲ ನನ್ನ ಆಶಿ| ಖಾಜಾ ವರವ ಬೇಡಿದ ಎಲಸಿ|
ಗುರುವೆ ನಿಮ್ಮ ಪಾದಕ ಬೆರಸಿ| ಪೂಜಿ ಮಾಡುವೆ ಸಾಹಿತ ತರಸಿ|'

'ಕರನಾಟಕ ಹಲಸಂಗಿ ಊರ| ಮೆರಿಯುತಾವ ತೂರ|
ಮಲಿಕ ಮೈತರ ಹಚ್ಚಿ ಪರಿಗಿ| ಖಾಜ್ಯಾನಕವಿ ಸವಿಸಕ್ಕರಿ ಎಲ್ಲರಿಗಿ|
ಖಂಡೂನ ಸೂರಕೇಳಿ ಕಲ್ಲಮನಸ ಕರಗಿ|
ಹೊಳಿನೀರ ಥೆರಿಯ ಹೊಡೆದಂಗ
....
ತ್ರಿಲೋಕ ತಿರುಗಿಬಂದ ಹಾಡಿ| ಇಲ್ಲ ನಿನ್ನ ಜೋಡಿ|
ರಂಬಿ ನಿನ್ನ ನೋಡಿ| ನಾಚ್ಯಾಳ ಕಡಿಗೀ|'

೧೬. ಮೋಟನಹಳ್ಳಿಯ ಹಸನಸಾಹೇಬ (೧೮೫೬-೧೯೧೬):

ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಇಟಗಾಲ ಗ್ರಾಮದಲ್ಲಿ ಹಸನಕವಿ ಹುಟ್ಟಿದ್ದು. ಬಹುದಿನ ಬದುಕಿದ್ದಾಗಲಿ, ಪ್ರಾಣಬಿಟ್ಟದ್ದಾಗಲಿ ಯಾದಗಿರಿ ತಾಲೂಕಿನ ಮೋಟನಹಳ್ಳಿಯಲ್ಲಿ. ಆದರೂ ಕವಿ ತನ್ನ ಹಾಡುಗಳಲ್ಲಿ ಹುಟ್ಟೂರ ವೀರಭದ್ರದೇವರನ್ನೇ ಸ್ಮರಿಸಿದ್ದಾನೆ.

೧೨೦ ವರುಷಗಳ ಹಿಂದಿನ ಮಾತು. ಅಂದರೆ ಸುಮಾರು ೧೮೫೬ ರಲ್ಲಿ ಕವಿ ಹುಟ್ಟಿರಬೇಕು. ೬೦ ವರುಷ ಬಾಳಿ ೧೯೬೦ ರಲ್ಲಿ ತೀರಿಕೊಂಡ ನೆನಪು ಆ ಭಾಗದ ಹಿರಿಯರಿಗೆ. ಹಸನ ಚಿಕ್ಕವನಿದ್ದಾಗ ತಂದೆ-ತಾಯಿಗಳನ್ನು ಕಳೆದು

ಕೊಳ್ಳುತ್ತಾನೆ. ತನ್ನ ದಿನದ ಬಹಳಷ್ಟು ವೇಳೆಯನ್ನು ಇಟಗಾಲದ ವೀರಭದ್ರ ದೇವರ ಸನ್ನಿಧಿಯಲ್ಲೇ ಕಳೆಯುತ್ತಾನೆ. ಆತನ ಪ್ರೇರಣೆಯಿಂದಲೇ ಕಾವ್ಯ ಕಟ್ಟುವ ಶಕ್ತಿ ಈತನಿಗೆ ಲಭಿಸಿದ್ದು. ಆದುದರಿಂದ ತನ್ನ ಹಾಡುಗಳ ಕೊನೆಗೆ 'ಇಟಪುರ' (ಇಟಗಾಲ)ದ ಈಶನನ್ನು (ವೀರಭದ್ರದೇವರು) 'ವಿಠಪುರೀಶ' ಎಂದು ಸ್ಮರಿಸಿದ್ದಾನೆ. ಅದೇ ಅಂಕಿತವಾಗಿದೆ.

ಸರ್ವಜ್ಞ ಕವಿಯಂತೆ ಈ ಹಸನನೂ ಕಂಡದ್ದನ್ನಾಡುವ ಕವಿ. ಆದರಿಂದ ತೊಂದರೆಗೊಳಗಾಗಬೇಕಾಗುತ್ತಿತ್ತು. ಒಮ್ಮೆ ಕ್ವಾಟಗೇರಿ ಸಾಹುಕಾರರ ಮನೆಯಲ್ಲಿ ವಾಸಮಾಡುತ್ತಿದ್ದಾಗ, ಅಲ್ಲಿ ನಡೆದ ಗುಗ್ಗುಳ ಪೂಜೆಯ ದೀಪ ಆರಿಹೋಗುತ್ತದೆ. ಜನ ವ್ಯಂಗ್ಯವಾಗಿ ನಿಮ್ಮ ಹಸನನಲ್ಲಿ ಅಂಥ ಶಕ್ತಿ ಇದ್ದರೆ ಹೊತ್ತಿಸಲಿ ಎನ್ನುತ್ತಾರೆ. ಈ ವಿಷಯ ತಿಳಿದ ಹಸನ ಹಾಡು ಹಾಡುತ್ತಿದ್ದಂತೆಯೆ ಆ ದೀಪ ಹೊತ್ತಿತಂತೆ. ಜನ ಬೆರಗಾಗಿ ಕ್ಷಮೆ ಕೇಳುತ್ತಾರೆ.

ಹಸನ ಮುಸಲ್ಮಾನ. ಹಿಂದೂಧರ್ಮದಲ್ಲಿ ಅಧಿಕನಿಷ್ಠೆ, ಅದರಲ್ಲೂ ವೀರಶೈವಸಿದ್ಧಾಂತದನ್ವಯ ಹಾಡು ರಚಿಸುತ್ತ ಬಂದವನು. ಇದಕ್ಕೆ ಕುಪಿತಗೊಂಡ ಮುಸಲ್ಮಾನರು ತಮ್ಮ 'ಅಮೀನ'ಸಾಬನೊಬ್ಬನಿಂದ ಅರಕೇರಿ ಠಾಣೆಯಲ್ಲಿ ಕಟ್ಟಿಹಾಕಿಸುತ್ತಾರಂತೆ. ಜನಪದ ಹಾಡು ಹೇಳುತ್ತಿದ್ದಂತೆಯೆ ಛಟ್ ಛಟಿಲ್ಲೆಂದು ಬಿಚ್ಚಿಕೊಳ್ಳುತ್ತದಂತೆ. ಈತನ ಮಹಿಮೆಗೆ ಅಮೀನ ಬೆಪ್ಪಾಗಿ ಕ್ಷಮೆ ಕೇಳುತ್ತಾನಂತೆ. ಇಂಥ ಹಲವಾರು ಘಟನೆಗಳನ್ನು ಚಿತಾಪುರದ ಹಿರಿಯ ಅನುಭಾವಿಗಳಾದ ಶ್ರೀ ರೇಷ್ಮಿ ಕಲ್ಲಪ್ಪನವರ ಬಾಯಿಂದ ಕೇಳಬೇಕು. ನನಗಂತೂ ಕೇಳುತ್ತಿದ್ದಂತೆಯೆ ಕಣ್ಣೀರು ಉದುರಿದವು–ಈ ಜನಪದ ಹಾಡುಗಳ ರಚನೆಯಿಂದ ಅಮಂಗಲ ನಿವಾರಣೆಯೆಂದೆಂದು.

ಹಸನ ಬರೆದ ಹಾಡುಗಳಿಗೆ ಲೆಕ್ಕವಿಲ್ಲವಂತೆ. ಆದರೂ ಕೇವಲ ೧೫೦ ಮಾತ್ರ ದೊರೆತಿವೆ. ಅವುಗಳಲ್ಲಿ ಕೆಲವನ್ನು ಡಾ. ವಿ. ಶಿವಾನಂದರು ಪ್ರಕಟಿಸಿದ್ದುಂಟು. ಹಸನನಿಗೆ ಇಬ್ಬರು ಮಕ್ಕಳು. ಅಳಿಯತನಕ್ಕೆಂದು ಮೋಟನಹಳ್ಳಿಗೆ ಬಂದು ಅಲ್ಲಿಯೆ ಪ್ರಾಣಬಿಟ್ಟ. ಈತನ ಹಾಗೂ ಮಕ್ಕಳ ಸಮಾಧಿಗಳು ಅಲ್ಲಿಯೇ ಇವೆ. ಹಸನ ಬಯಲಾಟ ಬರೆದಿದ್ದನೆಂದೂ ಕೆಲವರು ಹೇಳುವುದುಂಟು.

"ಆಟವಾಡೆಲೊ ಬಯಲ್ ಬೈಲಾಟವಾಡೆಲೊ |
ಆಟವಾಡೆಲೊ ತ್ರಿಕೂಟಸ್ಥಾನದಿ |
ನೋಟ ಬಲಿದು ಭಾನುಕೋಟಿ ಪ್ರಕಾಶನ |
....
ತದ್ರೂಪ 'ವೀಠಪುರೀಶನ' ಕೃಪ |"

೧೭. ಇಂಗಳಗಿಯ ಹಸನಸಾಹೇಬ (೧೮೫೮-೧೯೧೮):

ವಿಜಾಪುರಜಿಲ್ಲೆಯ ಸಿಂದಗಿತಾಲೂಕಿನ ಒಂದು ಹಳ್ಳಿ ಬೀಬಿಇಂಗಳಗಿ. ಅಲ್ಲಿಯ ಮುಸಲ್ಮಾನ ಮನೆತನದ ಮುಮ್ಮಾಸಾಬ ಮತ್ತು ಕುರಸುಂಬಿ ದಂಪತಿಗಳಿಗೆ ಮಗನಾಗಿ ಹುಟ್ಟಿದವನೇ ಈ ಹಸನ. ಸು ೧೮೫೮ ರಲ್ಲಿ ಜನಿಸಿದ ಈತನು ೬೦ ವರುಷ ಬದುಕಿದ್ದನಂತೆ.

ಹಸನನ ಒಡನಾಟ ಹೆಚ್ಚಾಗಿ ಹಿಂದೂಗಳೊಂದಿಗೆ. ದೇವಿಯ ಉಪಾಸಕ ಬೇರೆ. ಮರ್ತುಜಖಾಜಿ ಎಂಬವನಿಂದ ಧರ್ಮದೀಕ್ಷೆಯನ್ನು ತೊಟ್ಟಿದ್ದ. ಚಿಕ್ಕಂದಿನಿಂದಲೂ ಶಾಸ್ತ್ರಪಂಡಿತರ, ಚರಮೂರ್ತಿಗಳ ಸಹವಾಸ ಈತನಿಗೆ. ರಾಮಕೃಷ್ಣ ಪರಮಹಂಸ ಹಾಗೂ ದೇವಿಯ ಪ್ರತಿಮೆಗಳನ್ನು ಯಾವ ಆಡಂಬರವಿಲ್ಲದೆ ಗುಪ್ತ ರೀತಿಯಲ್ಲಿ ಪೂಜಿಸುತ್ತಿದ್ದನಂತೆ. ಈತ ಕಲಿತದ್ದು ೫ನೆಯ ತರಗತಿವರೆಗೆ. ಒಡ್ಡೋಡಗಿ ಗ್ರಾಮದ 'ಇಬ್ರಾಹಿಮಶಾ' ಎಂಬ ಗುರುಗಳ ಹತ್ತಿರ ಅಭ್ಯಾಸ ಮಾಡಿದವನು. ಪಂಡಿತರಾದ ಗುರುಬಸಯ್ಯ ಮತ್ತು ಬಸಪ್ಪ ದಾನಾಗೋಳ ಅವರ ಸಹಪಾಠಿ. ಅಸಾಧಾರಣ ಪ್ರತಿಭೆಯಿಂದಾಗಿ ಕಾವ್ಯರಚನೆಯ ಶಕ್ತಿ ಗಳಿಸಿಕೊಂಡವನು. ದೇವಿಯ ಪ್ರೇರಣೆಯೇ ತನ್ನ ಹಾಡುಗಳಿಗೆ ಕಾರಣವೆಂದು ಅರಿತಿದ್ದು, ಆ ದೇವಿಯ ಹೆಚ್ಚಳವನ್ನೇ (ನಾಗೇಶಿ) ಸಾರಿದ್ದಾನೆ. ಒಮ್ಮೆಯಂತೂ ದೇವಿ ಕನಸಿನಲ್ಲಿ ಬಂದು 'ನೀನು ಹಾಡು ರಚಿಸು, ನಿನಗೆ ಸರಿಸಮಾನರು ಯಾರೂ ಇಲ್ಲ. ಆದರೆ ಒಂದು ಮಾತು: ಹಾಡಿನ ಕೊನೆಗೆ ಮುದ್ರಿಕೆ ಇಡುವಾಗ ನಿನ್ನ ಹೆಸರಿನ ಮೊದಲು ಇನ್ನೊಬ್ಬರದನ್ನು ಜೋಡಿಸಿಕೊ' ಎಂದು ಹೇಳಿದ್ದರಿಂದ, ಆತ ಹಾಡುಗಳಲ್ಲಿ 'ಮಲ್ಲಾ-ಹಸನ' ಎಂಬ ಮುದ್ರಿಕೆ ಹಾಕಿದ್ದಾನೆಂದು ಹೇಳುತ್ತಾರೆ. ಇಲ್ಲಿಯ 'ಮಲ್ಲಾ' ನಾಗರಾಳದ ತಳವಾರನಂತೆ. ತುಂತುಣಿ ಬಾರಿಸುವಲ್ಲಿ ನಿಷ್ಣಾತನಿದ್ದನಂತೆ. ಬಡೇಸಾಬ ಪೀರ ಮನೆದೇವರು, ಇಬ್ರಾಹಿಮಶಾ ಗುರು-ಇವರನ್ನು ಕವಿ ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ.

ಹಸನನ ಹಾಡುಗಳಿಗೆ ಲೆಕ್ಕವಿಲ್ಲ-ಸಹಸ್ರಾರು. ಜೊತೆಗೆ ಉತ್ತರಕರ್ನಾಟಕದಲ್ಲಿ ಆ ಕಾಲಕ್ಕೆ ಜಯಭೇರಿ ಬಾರಿಸಿದ 'ರಾಧಾನಾಟ' ರಚಿಸಿದವನು ಇವನೇ. ತನ್ನ ಶಿಷ್ಯರೊಂದಿಗೆ ಅದನ್ನು ಆಡಿಯೂ ತೋರಿಸುತ್ತಿದ್ದನು. ಆ ಶಿಷ್ಯರಲ್ಲಿ ಅತ್ಯಂತ ಪ್ರಸಿದ್ಧಿ ಪಡೆದ ತಳೇವಾಡದ 'ನಬಿ'ಯಂತೂ ಈ ಆಟದ ಜನಪ್ರಿಯತೆಗೆ ಇನ್ನೂ ಕಾರಣನಾದವನು. ನಬಿ ಸ್ವತಃ ರಾಧಾನ ಪಾತ್ರ ಹಾಕಿ ಮುಗ್ಧ ಜನರನ್ನೂ ಬೆಪ್ಪುಗೊಳಿಸುತ್ತಿದ್ದನಂತೆ. ಕರ್ನಾಟಕದ ಮೂಲೆಮೂಲೆಗೂ ಆತ ಈ ಆಟ ಹಾಡಿದ್ದುಂಟು. ರಾಧಾನಾಟಕ್ಕೆ ಮುಂದೆ ಜನ 'ನಬಿಯಾಟ' 'ತಳೆವಾಡಿ ಆಟ' ಎಂದು ಕರೆಯಹತ್ತಿದರು. ಹಸನನು ನಾಗೇಶಿ ಹಾಡು ಹೇಳುತ್ತ ಕರ್ನಾಟಕ

ಮಹಾರಾಷ್ಟ್ರಗಳನ್ನೆಲ್ಲಾ ಸಂಚರಿಸಿದ್ದಾನೆ. ಈತನ ತೋಡಿಗೆ ಉತ್ತರಿಸಲಾರದೆ ಅದೆಷ್ಟೋ ಹರದಾಸರು ಪಲಾಯನಮಾಡಿದ್ದಾರಂತೆ. ತನ್ನ ಸಾವು ಇನ್ನು ೧೩ ದಿನಗಳಿದ್ದಾಗ–ಊರ ಹಿರಿಯರನ್ನೆಲ್ಲಾ ಮೊದಲೇ ಕರೆದು ತನ್ನ ಸಾವನ್ನು ತಿಳಿಸಿ, ಚರಿತ್ರೆಯನ್ನೇ ಹಾಡಿನಲ್ಲಿ ಎರಕಹೊಯ್ದು, ಕೊಟ್ಟ ಅವಧಿಗೆ ಪ್ರಾಣ ಬಿಟ್ಟಿದ್ದಾನೆ. ಅಂಥ ಧಾರ್ಮಿಕಶಕ್ತಿ ಕವಿಯದು.

"ಕಲ್ಪನಕವಿಗಳು ಕೂತು ಕೇಳರಿ ಹಿರಿಯರಾ | ಹೇಳುವೆ ಸಣ್ಣ ಪಾರಾ |
ಇಂಗಳಗಿ ಹಸನಸಾಹೇಬರದು ಕೀರ್ತಿ ದೂರ ದೂರಾ | ಹಾ|ಜೀ–ಜೀ |
ತಾಯಿ ತಂದಿ ಹೊಟ್ಟಿಯಲ್ಲಿ ಹುಟ್ಟಿ ಐದಮಂದಿ ಅಣ್ಣತಮ್ಮರಾ |
ಜ್ಞಾನವುಳ್ಳವರಾ |
ಇಬ್ರಾಹಿಮಶಾ ವಸ್ತಾದಲ್ಲಿ ಸಾಲಿಕಲ್ತು ಓದಿದರಾಽಽ | ಹಾ|ಜೀ |
... .
ಹೇಳದೆ ಓಡಿಓಡಿ ಹೋದರು ಡಪ್ಪ ಬಗಲಿಗಿ ಹಾಕ್ಕೊಂಡಾ |
ಮಾತು ಮನಗಂಡಾ |
ಡಂಕಾ ಹೊಡಿಸಿಬಿಟ್ಟಾನೊ ಹಸನ ತುರಾಯಿ ಕಸಗೊಂಡಾ | ಹಾ|ಜೀ|
....
ಸವಿಲಾರದ ದ್ರವ್ಯ ಗಳಿಸಿದ ಸಹಜ ಸರಹಾಕಿ ಬಿಟ್ಟ | ಇಲ್ಲದದ್ದಽ |
ಕಲ್ಪನದ ಕಥಿಮಾಡಿ ಇಟ್ಟ ಬೇಡುವನು ಅರ್ಜಿ | ಹಾ|ಜೀ |
....
ತನ್ನೊಳಗೆ ತಾ ತಿಳಿದ ಮನಸ ಆಯಿತು | ಏನ ಸುಸ್ತ |
ಏನಾದದ್ದು ಆಗಲಿ ನೋಡಾನು ಕೈಲಾಸದ ತಗತ್ | ಹಾ|ಜೀ |
ಘಟಚಕ್ರ ಓದಿನೋಡಿ ತಿಳಕೊಂಡ ಮರಣದ ಗಣಿತ | ಎಣಿಸಿ ಗುಣವಂತ |
ಇನ್ನು ೧೩ ದಿವಸಕ್ಕ ಸ್ವರ್ಗಹೊಂದುವೆನು ತುರ್ತ | ಹಾ|ಜೀ |"

ಸಮಾಜಮುಖಂಡರ, ಧಾರ್ಮಿಕ ಮಹಾಪುರುಷರ ಮೇಲೂ ಹಾಡು ರಚಿಸಿದ್ದುಂಟು. ತಾಳಿಕೋಟಿ ಪರಪ್ಪನ ಲಾವಣಿಯಂತೂ ಸೊಗಸಾಗಿ ಹರಿದು ಬಂದಿದೆ.

"ತಾಳಿಕೋಟಿ ದೊಡ್ಡಪ್ಯಾಟಿ | ಸುತ್ತಕೋಟಿ ನಡುವ ಹುಟ್ಟಿ |
ತಿಗಡಿ ಬುಗಡಿ ಬಾಜಾರಾ | ಅಲ್ಲಿ ಪರಪ್ಪನವ್ರು ದೊಡ್ಡ ಸಾವ್ಕಾರ್ರಾ |
....
ಇಂಗಳಗಿ ಗ್ರಾಮ ಡೋಣಿ ಧಡಿಯೇ | ಬಡೆಸಾಬ ಪೀರನ ಅಡಿಯೆ |
ಸದ್ಗುರುಪಿನ ಪಾದಾ ಹಿಡಿಯೆ | ಇಬ್ರಾಹಿಮಶಾ ವಸ್ತಾದ ಮಕ್ತುಮನ
ಪದ ನೆಪ್ಪ ಹಿಡಿಯೆ |"

ಆಧ್ಯಾತ್ಮಿಕ ತಳಹದಿಯ ಮೇಲೆ ಹಸನನ ಹಾಡುಗಳು ಸಾಕಷ್ಟು. ತೋಡಿ, ಖ್ಯಾಲಿಗಳಿಗೂ ಲೆಕ್ಕವಿಲ್ಲ. ಒಗಟುಗಳ ರೂಪದ ಪ್ರಶ್ನೋತ್ತರಗಳೂ ಬೇಕಾದಷ್ಟು. ಅವರ ಮೊಮ್ಮಗ ಬಂದಗಿ ಸಾಹೇಬ ಮತ್ತು ಇಂಗಳೇಶ್ವರದ ಲಾಲಸಾ ಮೊದಲಾದವರು ಈಗಲೂ ಇವರ ಹಾಡುಗಳನ್ನು ಹಾಡುವುದುಂಟು. ಲಾವಣಿ, ಗೀಗೀ ಸಾಹಿತ್ಯದ ಮೇಲೆ ಸಂಶೋಧನ ನಡೆಸುತ್ತಿರುವ ಶ್ರೀ ಶಂಕರಗೌಡ ಬಿರಾದಾರ ಅವರ ಗ್ರಂಥ ಹೊರಬಂದಾಗ ಹಸನನ ಜನಪದ ಹಾಡುಗಳ ಮೇಲೆ ಹೊಸಬೆಳಕು ಬೀಳಬಹುದು. ಎಂದೂ ಸವೆಯಲಾರದ ಕಾವ್ಯ ದ್ರವ್ಯವನ್ನು ಸಾರಸ್ವತಲೋಕಕ್ಕೆ ಹಸನನು ಕೊಟ್ಟುಹೋಗಿದ್ದಾನೆ.

೧೮. ನರೋಣಾದ ಹೈದರಲಿ (೧೮೭೭–೧೯೩೭):

ಕಲಬುರ್ಗಿ ಜಿಲ್ಲೆಯ ಆಳಂದತಾಲೂಕಿನ ಗ್ರಾಮ ಒಂದು ದೊಡ್ಡ ಊರು. ನೀರಿನ ಆಶ್ರಯದಿಂದಾಗಿ ಸಾಕಷ್ಟು ತೋಟಪಟ್ಟಿಗಳು. ಜನಪದಕವಿಗಳಿಗಂತೂ ಜನ್ಮಭೂಮಿ. ಈಗ್ಗೆ ನೂರುವರುಷಗಳ ಹಿಂದೆ ಮುಸಲ್ಮಾನಧರ್ಮದ ಲಾಡಲೆ ಸಾಬ ಶೇಖನ ಹೊಟ್ಟೆಯಿಂದ ಹೈದರಲಿ ಹುಟ್ಟಿದ್ದು. ಇವನು ಕಲಿತದ್ದು ಮೋಡಿ; ಕನ್ನಡ, ಉರ್ದು, ಹಿಂದಿ, ಮರಾಠಿ ಭಾಷೆಗಳನ್ನೂ ಬಲ್ಲವನು. ಒಳ್ಳೆಯ ಮಾತುಗಾರ. ಕಾಯ್ದೆ ಪಂಡಿತ. ಅಲ್ಲಿಯ ಗಾವಠಿ ಶಾಲೆಯಲ್ಲಿ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದ. ಹುಟ್ಟುಪ್ರತಿಭಾವಂತ. ಊರ ನ್ಯಾಯ ನಿಬಾಜುಗಳಗಾಗಿ ವಕೀಲರ ಕಡೆಗೆ ಕರೆದೊಯ್ಯುತ್ತಿದ್ದುದರಿಂದ ಹಿರಿಯನೆಂದೂ, ಸಲ್ಲಾಗಾರನೆಂದು ಕರೆಯುತ್ತಿದ್ದರು.

ಹೈದರಲಿ ಮೋಹರಮ್, ಭಜನಿಹಾಡು, ಲಾವಣಿಗಳನ್ನು ರಚಿಸಿದ್ದು ಈಗಲೂ ಅಲ್ಲಿಯ ಬಂಡೆಪ್ಪ, ಶಿವಶರಣಪ್ಪ ಮೊದಲಾದವರು ಹಾಡುವುದುಂಟು. ಹೇಮರಡ್ಡಿ ಮಲ್ಲಮ್ಮನ ಆಟವೊಂದನ್ನೂ ರಚಿಸಿದ್ದಾನೆ. ಪೇಟಿ–ತಬಲಾ ಬಾರಿಸುವಲ್ಲೂ ಎತ್ತಿದ ಕೈ. ಆಟದಲ್ಲಿ ಸ್ವತಃ ಸೋಗೂ ಹಾಕುತ್ತಿದ್ದನು. ಸು. ೧೮೭೭ರಲ್ಲಿ ಹುಟ್ಟಿದ ಕವಿ, ೬೦ ವರುಷ ಬದುಕಿ ಮುಂದೆ ೧೯೩೭ರ ಅವಧಿಯಲ್ಲಿ ತೀರಿಕೊಂಡನೆಂದು ತಿಳಿದುಬರುತ್ತದೆ.

'ಇಂದುಧರ ನೆನೆಯುತಲಿನ್ನ| ಪಾದವ ಪಿಡಿಯೊ ಸದ್ಗುರುವಿನ|
ತನುವಿಲ್ಲ ಸ್ಥಿರ ಗುರುಳಿ ಪ್ರಕಾರ| ಸಾರ್ಥಕಮಾಡೊ ಜನ್ಮ
ಗುರುವಿನ ಹೊರ್ತು'
'ಮೊಹರಮ್ ಚಾಂದನೋಡಿ ಬಂದ ನಿಂತೆವರಿ| ಲೇಝಿಮ್ ಆಡೋವಕ|
ಮೌಲಾಲಿ ತಾಲಿಮು ನೋಡುದುಕ'

೧೯. ಕಾಳಗಿ ಮಶಾಕಸಾಬ (೧೮೮೭–೧೯೪೭) :

ಕಲಬುರ್ಗಿ ಜಿಲ್ಲೆಯ 'ಕಾಳಗಿ' ಐತಿಹಾಸಿಕ ಸ್ಥಳ. ಅಲ್ಲಿಯ ಮುಸಲ್ಮಾನ ಧರ್ಮದ ಮಶಾಕಸಾಹೇಬ ಜಗಜಟ್ಟಿಯೆನಿಸಿದಂತೆ ಜನಪದಕವಿಯೂ ಆಗಿದ್ದನೆಂದು ತಿಳಿದುಬರುತ್ತದೆ. ರಿವಾಯತ ರಚಿಸುವಲ್ಲಂತೂ ಪಳಗಿದವನೆಂದು ಹೇಳುತ್ತಾರೆ. ತೀರಿಕೊಂಡು ಸುಮಾರು ೩೦ ವರುಷಗಳಾದುವೆಂದೂ ಆಗ ೬೦ ವರುಷದವನೆಂದೂ ಹಿರಿಯರು ಹೇಳಿದ್ದು.

೨೦ ಸಿರಗುರದ ಇಂದಲಬೇಗ (೧೮೯೨–೧೯೬೨) :

ವಿಜಾಪುರಜಿಲ್ಲೆಯ ಸಿರಗುರಗ್ರಾಮ ಮುಲ್ಲಾ ಇಂದಲಬೇಗನ ಜನ್ಮಸ್ಥಳ. ಆತ ಸ್ವರ್ಗವಾಸಿಯಾಗಿ ೧೫ ವರುಷಗಳಾಗಿರಬೇಕು. ಆಗ ಅವನಿಗೆ ೭೦ ವರುಷಗಳಿದ್ದುವಂತೆ. ಜನಪದಕವಿಗಳಿಗೂ ಸಂತರಿಗೂ ಜನ್ಮಭೂಮಿಯಾದ ಅಗರಖೇಡದಿಂದ ೪ ಮೈಲು ಅಂತರದಲ್ಲಿ ಈ ಊರು. ಇಂದಲಬೇಗ ಸ್ವತಃ ಹಾಡುಗಾರನಿದ್ದಂತೆ ಕವಿಯೂ ಇದ್ದ. ಮೊಹರಮ್‌ಹಾಡು, ಗೀಗೀ, ಲಾವಣಿ, ಹೋಳಿ, ಹಂತಿ, ಡೊಳ್ಳಿನ ಪದಗಳನ್ನು ರಚಿಸಿದ್ದುಂಟು. ಉದ್ಯೋಗ ಒಕ್ಕಲುತನ. ಹಾಡುವುದಂತೂ ಹವ್ಯಾಸವೇ ಆಗಿತ್ತು. ಸುತ್ತುಮುತ್ತಲಿನ ಜಾತ್ರೆಗಳಲ್ಲಿ ಈತನಿಗೆ ಆಮಂತ್ರಣ.

೨೧. ಯಾದವಾಡದ ಹುಸೇನಿ (೧೮೯೬–೧೯೭೬) :

ಗೋಕಾಕ ತಾಲೂಕಿನ ಯಾದವಾಡ ಈ ಹುಸೇನಿಯ ಊರು. ೧೮೯೬ರಲ್ಲಿ ಹುಟ್ಟಿದ ಈತನಿಗೆ ಹಾಡು ರಚಿಸುವ ಕಲೆ ಕರಗತವಾದದ್ದು ಚಿಕ್ಕಂದಿನಿಂದಲೇ. ಓದು–ಬರೆಹ ಅಷ್ಟಕ್ಕಷ್ಟೇ. ಸಾಲಿಗೆ ಹೋಗಿ ಕಲಿತದ್ದಲ್ಲ. ಹೆಣ್ಣು ಹೆಚ್ಚು ಎಂದು ಹಾಡು ಹೇಳುತ್ತಿದ್ದನು. 'ಯಾದವಾಡ ಹುಸೇನಿ' ಎಂಬ ಮುದ್ರಿಕೆ ಈತನ ಹಾಡುಗಳಲ್ಲಿ. ನಾಗರಾಳದಲ್ಲಿರುವ ತನ್ನ ಅಕ್ಕನ ಮನೆಯಲ್ಲಿ ಈಗ್ಗೆ ೭–೮ ತಿಂಗಳ ಹಿಂದೆಯೇ ತೀರಿಕೊಂಡನಂತೆ. ಗಾಂಧೀಜಿ ಕುರಿತಾದ ಲಾವಣಿ ಅತ್ಯಂತ ಪ್ರಸಿದ್ಧಿ ಪಡೆದದ್ದು.

"ಹುಟ್ಟಿಬಂದ ಭೂಮಿ ಮೇಲೆ ಶ್ರೇಷ್ಠಪದವಿ ಗಳಿಸಿಕೊಂಡ |
ಲೋಕದೊಳು ಕೀರ್ತಿ ಅಪರ್‍ದು ಆತ ಜಾಹೀರಾ |
ಗಾಂಧೀ ಮಹಾತ್ಮಾ ಅಂಬೋರು ಬುದ್ಧಿಯಲ್ಲಿ ಭಾಳೆ ಚತುರಾ |
ಶಾಂತಮೂರ್ತಿ ಸಮುದ್ರಗುಣ ಇದ್ದಂಗ ಭೋಳಶಂಕರಾ |
ರೂಪನೋಡಿದರ ಅವನ ಸ್ವರೂಪ ಸದಾಶಿವನ್ಹಂಗ |
ಸ್ವರ್ಗದಿಂದ ಬಂದಾರೇನ ಕೊಟ್ಟ ಅವತಾರ |

ರತ್ನ ಕಳದ ಕತ್ತಲಿ ಬಿದ್ದಂಗ ಆತ ಶುಕ್ರಾರಾ |
ಸತ್ರುಸುದ್ದಾ ಅವರು ಸತ್ತಾಂಗಲ್ಲಾ ಕೇಳರಿ ಇದ್ದಂಗ |
ಕೇಳ್ರಿ ಅವ್ರು ಭಾಳ್ ಸಾತ್ವಿಕರಾ |
ಸತ್ವ ಬಿತ್ತಿ ತೋರಿಸಿ ಹ್ವಾದ್ರ ಅವರು ತಮ್ಮ ಅವತಾರಾ |
'ಯಾದವಾಡ ಹುಸೇನಿಸಾಬ' ತನಗ ತಿಳಿದಷ್ಟು ಹೊಂದಿಸಿ ಅಕ್ಷರಾ |"

೨೨. ರಾಣೇಬೆನ್ನೂರಿನ ಸಮ್ಮದಸಾಹೇಬ (೧೮೯೯) :

ರಾಣೇಬೆನ್ನೂರು, ಧಾರವಾಡ ಜಿಲ್ಲೆಯ ಒಂದು ತಾಲೂಕುಸ್ಥಳ. ಲಾವಣಿಕಾರನೆಂದು ಪ್ರಸಿದ್ಧಿಪಡೆದ ಸಮ್ಮದಸಾಹೇಬ ಹುಟ್ಟಿದ್ದು ಧಾರವಾಡ ಜಿಲ್ಲೆಯ ಬೆಳ್ಳೂಡಿ ಗ್ರಾಮ. ಈಗ ಆತನ ವಾಸ್ತವ್ಯ ಶಿವಮೊಗ್ಗಾ ಜಿಲ್ಲೆಯ ಶಿಕಾರಪುರ ತಾಲೂಕಿನ ಪುಣ್ಯೇದಹಳ್ಳಿಯಲ್ಲಿ. ಬಹಳ ವರುಷ ರಾಣೇಬೆನ್ನೂರಿನಲ್ಲೇ ವಾಸ ಮಾಡಿದ್ದರಿಂದ ಆತನನ್ನು ರಾಣೇಬೆನ್ನೂರ ಸಮ್ಮದಸಾಹೇಬ ಎಂದೂ ಲಾವಣಿ ರಚಿಸುವುದರಿಂದ ಲಾವಣಿಕಾರನೆಂದೂ ಕರೆಯುವರು. ಆತ, ಹಳೆಯ ಬಾಟ್ಲಿಗಳಲ್ಲಿ ದೇಶೀ ಔಷಧ ತುಂಬಿ ತ್ವಚೆರೋಗಕ್ಕೂ, ದನಗಳ ಬಾಧೆಗೂ ಪೇಟೆಂಟ್ ಔಷಧ ಕೊಡುವ ವೈದ್ಯ. ಹಾಗೆಯೇ ಸ್ವಾತಂತ್ರ್ಯಸಂಗ್ರಾಮದಲ್ಲಿ ಲಾವಣಿ ಹಾಡಿ ಜನತೆಯನ್ನು ಹುರಿದುಂಬಿಸಿದುದರಿಂದ ಜೇಲೂ ಕಂಡುಬಂದ ಸ್ವಾತಂತ್ರ್ಯಯೋಧ. ಉದರಪೋಷಣೆಗೆಂದು ಬಟ್ಟೆ ಹೊಲಿಯುವ ಕಾಯಕ ಕೈಕೊಂಡದ್ದರಿಂದ ಈತ ದರ್ಜಿ. ಇಂದು ಒಕ್ಕಲುತನದಲ್ಲಿ ನಿರತನಾದ ವೃದ್ಧರೈತ.

ಮುಸಲ್ಮಾನಧರ್ಮದ ಹಲಂಬಿ ಮತ್ತು ಅಬ್ದುಲ್ಲಸಾಹೇಬರಿಗೆ ಮಗನಾಗಿ ಸು. ೧೮೯೯ರಲ್ಲಿ ಹುಟ್ಟಿದ್ದ ಸಮ್ಮದಸಾಬನನ್ನು ಸಾಕಿ ಸಲುಹಲು ಆಗದ್ದಕ್ಕೆ ಬೆಟಗೇರಿಯ ಅನಾಥಾಶ್ರಮದಲ್ಲಿ ಸೇರಿಸುತ್ತಾರೆ. ಹೇಗೆ ಹೇಗೋ ಅಲ್ಲಿ ತಿಂದುಂಡು ಬೆಳೆದ ಈ ಕವಿಗೆ ದೀನದಲಿತರ ಅನುಭವ ಸಾಕಷ್ಟು. ಮುಂದೆ ರಾಣೇಬೆನ್ನೂರಿಗೆ ತಂದೆ-ತಾಯಿಗಳಲ್ಲಿ ಬಂದಾಗ ಅಲ್ಲಿಯ ಮದ್ದುಮಾಡುವ ಹಾನಗಲ್ಲ ಶೇಖೂಸಾಹೇಬ ಕವಿಯ ಪರಮಶಿಷ್ಯನಾಗಿ ಜನಪದಹಾಡು ರಚಿಸಲು ಪ್ರಾರಂಭಿಸುತ್ತಾನೆ. ಚಿಕ್ಕಂದಿನಿಂದಲೂ ಗುಂಯ್-ಗುಂಯ್ ರಾಗತೆಗೆದು ಹಾಡುತ್ತಿದ್ದ ಕವಿ-ಕೈಯಲ್ಲಿ ಡಪ್ಪು ಹಿಡಿದು ಲಾವಣಿ ಹಾಡುತ್ತಾನೆ. ಔಷಧ ಮಾರುವಾಗ ಲಾವಣಿ ಹಾಡಿಯೇ ಈತ ಜನರನ್ನು ಆಕರ್ಷಿಸುವುದು.

ನೂರಾರು ಲಾವಣಿ, ಮೋಹರಮ್‌ಹಾಡು ರಚಿಸಿದ್ದಾನೆ. ಸಂಪಗಾಂವದ ವಾಲಿಚನ್ನಪ್ಪನನ್ನು, ಮೈಲಾರ ಮಹಾದೇವಪ್ಪನನ್ನು ಕುರಿತು ರಚಿಸಿದ ಲಾವಣಿಗಳಂತೂ ಹಿಂದೂಜನರನ್ನು ಬಡಿದೆಬ್ಬಿಸಿವೆ.

'ಶಾಂತಿಕಾಳಗದ ಕ್ರಾಂತಿ ಹರಡಿತು| ಕದನ ಕೇಳ್ರಿ ಖರೆ ನಡೆದದ್ದು |
ಕ್ರಾಂತಿವೀರ ಶೂರ ವಾಲಿ ಚನ್ನಪ್ಪನ | ಕದನ ಕೇಳ್ರಿ ಖರೆ ನಡೆದದ್ದು |
... ...
ಸುದ್ದಿಕೇಳಿ ವಾಲಿ ಚನ್ನಪ್ಪ ಶೆಡ್ಡುಹೊಡೆದು ನಿಂತ |
ಎದ್ದೋಗುವತನಕ ಬ್ರಿಟಿಷರಿಗೆ ಕಾಡುವೆನೆನುತ |
ಸಿದ್ಧ ಮಾಡಿದನು ದಂಡು ತಾನೆ ಕರ್ನಲ್ಲಾಗಿ ನಿಂತ |
ಬುದ್ದಿ ಕಲಿಸುವೆ ಬ್ರಿಟಿಷರಿಗೆ ಎಂದು ಮಾಡಿದ ಪಂಥ |'

'ಸುತನಂ ಕಾಣದ ಮಾತೆಯಂತೆ ನಮ್ಮ ಭಾರತ ಹಾಕ್ವುದು ಕಣ್ಣೀರ |
ಶಾಂತಿಸಮರದಲಿ ಗುಂಡಿನೇಟಿನೊಳು ಮಡಿದ ಮಾದೇವಪ್ಪ ಮೈಲಾರ |
ಮಲ್ಲಸರ್ಜನಂತೆ ಜಗಜಟ್ಟಿ ಮೈಕಟ್ಟು ಇತ್ತು ಪೈಲ್ವಾನ ಸರಿ |
ಬಲದೋಳು ಭೀಮನು ಕಳೆಯೋಳು ಕಾಮನು ಛಲತೊಟ್ಟ
ಭೀಮನು ಸರಿ |
ಸರ್ಕಾರ್ದ ಬೆದರಿಕೆಗೆ ಹಾಕಲಿಲ್ಲ ಅವ ಸೊಪ್ಪು |
ನೀರ್ಬರುತಿದೆ ಕಣ್ಣಿಗೆ ಬಂದರೆ ಆತನ ನೆಂಪು |

೨೩. ಕೊಳ್ಳೂರ ಹುಸನಾಸಾಹೇಬ (೧೯೦೦-೧೯೬೪) :

ಕೊಳ್ಳೂರು, ಬೀದರಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿದೆ. ಅದಕ್ಕೆ ಕೊಲ್ಲೂರು, ಕೊಹಿನೂರು ಎಂದೂ ಕರೆಯುತ್ತಾರೆ. ಅಲ್ಲಿಯ ಜನಪದಕವಿ ಭದ್ರಪ್ಪ ಗೌಡ. ಅವರಿಗೆ ಶಿಷ್ಯ-ಮಗನಾಗಿ ಹುಸನಾ ಹೆಸರುವಾಸಿಯಾದದ್ದು. ಸುಮಾರು ೧೯೦೦ರಲ್ಲಿ ಜನ್ಮತಾಳಿದ ಈ ಕವಿ ೧೯೬೪ರ ವರೆಗೂ ಜೀವಿಸಿದ್ದನೆಂದು ತಿಳಿದು ಬರುತ್ತದೆ.

ಹುಸನಾ ಕೊಳ್ಳೂರಿನ ಜಿಂದಾಮದಾರಸಾಹೇಬ ಮತ್ತು ಹಾರಕೂಡದ ಚನ್ನಬಸವ ಶಿವಾಚಾರ್ಯರಲ್ಲಿ ಅಗಾಧ ನಿಷ್ಠೆ ಇಟ್ಟವನು. ಅಂತೆಯೇ ಅವರನ್ನು ಕುರಿತು ಹಲವಾರು ಪದಗಳನ್ನು ರಚಿಸಿದ್ದಾನೆ. ಕಲ್ಯಾಣದ ಬಸವಣ್ಣ, ಕಲಬುರ್ಗಿ ಶರಣಬಸವೇಶ್ವರ, ಹಳ್ಳದ ರಾಚಣ್ಣ, ಹನುಮಂತ ಮೊದಲಾದವರ ಮೇಲೂ ಹಾಡುಕಟ್ಟಿ ಹಾಡಿದ್ದಾನೆ. ಪ್ರತಿಭೆ-ಪಾಂಡಿತ್ಯ ಎರಡನ್ನೂ ಮೇಳವಿಸಿಕೊಂಡ ಹುಸನಾ ಹಲವಾರು ಬಯಲಾಟಗಳನ್ನು ರಚಿಸಿದ್ದಾನೆ. 'ಬಾಣಾಸುರ' ಹೆಚ್ಚು ಜನಪ್ರಿಯವಾದ ಆಟವಾಗಿದೆ. ಹುಸನಾ ಚತುರ ಮಾತುಗಾರ. ಪೇಟಿ-ತಬಲಾ ಬಾರಿಸುವುದರಲ್ಲೂ ಪಳಗಿದವನು. ದುಡ್ಡು ಗಳಿಸದಿದ್ದರೂ ಕಲಾನಿಧಿಯಾಗಿದ್ದ. ನೂರಾರು ಜನರು ಹುಸನಾನ ಶಿಷ್ಯರಾಗಿ ಗುರುವನ್ನು ಹಾಡಿಹರಸಿದ್ದಾರೆ. ಈತ ಹುಟ್ಟಿದ್ದು ಕೊಳ್ಳೂರಾದರೂ ಮುಂದೆ ನಿಂತದ್ದು ಸಿರಗಾಪುರ. ಹುಟ್ಟೂರಾದ

ಕೊಳ್ಳೂರನ್ನೇ ಹಾಡುಗಳಲ್ಲಿ ಸ್ಮರಿಸಿದ್ದಾನೆ. ಲಾವಣಿ, ಗೀಗೀ, ಭಜನಾಪದಗಳನ್ನು ರಚಿಸಿದ್ದಾನೆ. ಡೊಳ್ಳಿನ ಹಾಡು, ರಿವಾಯತ ಪದಗಳನ್ನು ರಚಿಸಿದ್ದು ಕೇಳಬರುತ್ತದೆ. ಪ್ರೊ. ವೀಸಾಜಿ ಅವರು 'ನೆಲದ ನುಡಿ' ಎಂಬ ಪುಸ್ತಿಕೆಯಲ್ಲಿ ಹುಸನಾನ ಬಗ್ಗೆ ಬರೆದಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. 'ಕೊಲ್ಲೂರ ಹುಸನಾ' ಎನ್ನುವುದೇ ಈತನ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ. ತತ್ವದ ಗಾಂಭೀರ್ಯ, ಸಂಗೀತದ ದೇಶಿ, ಜನಪದ ಜೀವನಸಿದ್ಧಾಂತ ಇವರ ಹಾಡುಗಳ ವೈಶಿಷ್ಟ್ಯ. ಈ ಕೆಳಗಿನ ಚರಣಗಳಲ್ಲಿ ಈ ಅಂಶವನ್ನು ಕಾಣಬಹುದಾಗಿದೆ.

'ಹುಸನನ ಪದಹಾಡಿ ರಸದೊಳಗ ಈಸಾಡಿ
ವ್ಯಸನವ ಹರಿದು ದೂರಿಟ್ಟು ! ನನ ಗೆಳೆಯ
ಹಸನಾಗೆ ಬಾಳುವೆ ಮಾಡೋಣ.'

'ಪರುಷದ ಖಣಿಯು ದರುಶನ ಮಾಡುದಕ
ಕೊಲ್ಲೂರ್ಕ ಹೋಗಾನು ಬಾ। ಚೆನ್ನವೀರರ
ಚಿನ್ಮಯರೂಪವ ಕಾಣಾನು ಬಾ'

'ಸತ್ಯ ಹಾರಕೂಡ ಮುತ್ಯಾನ ನಾಮವು ಭಕ್ತಿಲಿಂದೆ ನುಡಿರಿ।
ಮಿಥ್ಯೆಯೆಂಬೊ ಅತ್ಯಾಚಾರವು ಹೋಗಲಾದ ನಿತ್ಯ ಹೊತ್ತು ದುಡಿರಿ।
... ...
ಕಾಡಿದವರಿಗಿ ಕೇಡ ಬರತದ ಪಾದಕ ಎರಗಿರಿ।
'ಕೊಳ್ಳೂರ ಹುಸನಾ' ಕರವ ಮುಗಿದು ವರವ ಬೇಡ್ಯಾನರಿ।'

೨೪. ಚಾಂದಕೋಟಿ ಗುಡುಲಾಲ (೧೯೦೬-೧೯೫೭) :

ವಿಜಾಪುರಜಿಲ್ಲೆಯ ಸಿಂದಗಿತಾಲೂಕಿನಲ್ಲಿದೆ ಈ ಚಾಂದಕೋಟಿ. ಮುಸಲ್ಮಾನಧರ್ಮದ ನಬಿಸಾಬನ ಮಗನೇ ಈ ಗುಡುಲಾಲ. ತಂದೆಯೂ ಜನಪದ ಕವಿ. ಗುಡುಲಾಲ ತೀರಿಕೊಂಡೇ ೨೦ ವರುಷಗಳಾದವಂತೆ. ಆಗ ಆತ ೫೦ ವರುಷದವನಿರಬೇಕೆಂದು ಹಿರಿಯರು ಹೇಳುವುದುಂಟು. ತಂದೆಯ ಹಾಡುಗಾರಿಕೆ ಕಾವ್ಯ ರಚನೆಯ ಶಕ್ತಿ ರಕ್ತಗತವಾಗಿ ಮಗ ಗುಡುಲಾಲನಿಗೆ ಬಂದದ್ದು. ತಂದೆ ರಚಿಸಿದ ಅಲ್ಲದೆ ಮೌಲಾಲಿಮು ಹಾಡುಗಳನ್ನು ಈತ ಹಾಡುತ್ತಿದ್ದನಂತೆ. ಬರುಬರುತ್ತ ತಾನೇ ರಚಿಸಹತ್ತಿದ. ಹಾಡುಗಳ ಕೊನೆಗೆ 'ಗುಡುಲಾ' ಎನ್ನುವ ಮುದ್ರಿಕೆಯಿದೆ.

"ದಾಸರಾಟ ಬಂದರೆಲ್ಲಾ। ರೂಪೈ ಕೊಟ್ಟ ನಡಸ್ತಾರ।
ಹೋಳ್ಗಿ ತುಪ್ಪ ಉಣಸ್ತಾರ। ಕುಂತ ಕೇಳ್ತಾರ ಒಳ್ಳೇ ಕಿಸ್ತಾ।

ಕನ್ನಡಜನಾಂಗದಲ್ಲಿ ಇಂಥ ಸಾಹಿತ್ಯವೊಂದು ಜೀವಂತವಾಗಿರುವ ಅಂಶವನ್ನು ನಮ್ಮ ನಾಡಿನ ಕೆಲವು ಜಾನಪದ ಅಭ್ಯಾಸಿಗಳು ಬಹುದಿನಗಳ ಹಿಂದೆಯೇ ಗುರುತಿಸಿದಂತಿದೆ. ಶ್ರೀ ಎಲ್. ಗುಂಡಪ್ಪನವರು ತಮ್ಮ 'ನಾಡಪದಗಳು' ಎಂಬ ಜಾನಪದಸಂಕಲನದಲ್ಲಿ 'ಬ್ರಾಹ್ಮಣರ ಹಾಡುಗಳು' ಎಂಬ ಸ್ವತಂತ್ರ ವಿಭಾಗವನ್ನು ಕಲ್ಪಿಸಿ "ಈ ಹಾಡುಗಳನ್ನೆಲ್ಲಾ ಕೂಡಿಹಾಕಿ ಪ್ರತ್ಯೇಕ ಪುಸ್ತಕ ಮಾಡಬಹುದು"[೧] ಎಂದು ಹೇಳಿದುದು, ಶ್ರೀ ದೇವುಡು ಅವರು 'ಬ್ರಾಹ್ಮಣೀ ಹಾಡು' ಎಂದು ಕರೆದುದು, ಡಾ. ಬಿ.ಎಸ್. ಗದ್ದಿಗಿಮಠ ಅವರು 'ಲೋಕಗೀತೆಗಳು' ಸಂಗ್ರಹದ ಕೆಲವು ಹಾಡುಗಳ ಅಡಿಯಲ್ಲಿ 'ಬ್ರಾಹ್ಮಣರಿಂದ ಸಂಗ್ರಹಿಸಿದುವು'[೨] ಎಂದು ಸೂಚಿಸಿದುದು ಇದಕ್ಕೆ ನಿದರ್ಶನ. ಹೀಗಿದ್ದರೂ ಜನಪದಸಾಹಿತ್ಯದ ಸ್ಪಷ್ಟ ತಿಳಿವಳಿಕೆಯ ಕೊರತೆಯಿಂದಾಗಿ ಬಹಳಷ್ಟು ಜನಪದಗೀತಸಂಕಲನಗಳು ಈ ಅಂಶವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಲಿಲ್ಲ. ಇವುಗಳಲ್ಲಿ ಶ್ರೀ ಆರ್. ಎಸ್. ಪಂಚಮುಖಿಯವರ "ಕರ್ನಾಟಕದ ಜಾನಪದಗೀತೆಗಳು", ಕೆ. ಶಿವರಾಮ ಐತಾಳರ "ದಕ್ಷಿಣ ಕನ್ನಡದ ಜನಪದಸಾಹಿತ್ಯ" ಟಿ. ಕೇಶವಭಟ್ಟರ "ಹಾಡಿನ ಚೂಡಾಮಣಿ" ಮತ್ತು ಡಾ. ಬಿ. ಎಸ್. ಗದ್ದಿಗಿಮಠರ "ಲೋಕಗೀತೆಗಳು'' ಮುಂತಾದುವು ಮುಖ್ಯವಾದುವು. ಹೀಗೆ ನಡೆಯುತ್ತಲಿರುವ ಜನಪದಸಾಹಿತ್ಯಸಂಕಲನದ ಕಸಮುಸುರೆ ಕಾರ್ಯವನ್ನು ಇತ್ತೀಚೆ ಕೆಲವರು ಆಕ್ಷೇಪಿಸಿ ಈ ಎರಡನ್ನೂ ಬೇರೆ ಬೇರೆಯಾಗಿ ಸಂಗ್ರಹಿಸಿ, ಬೇರೆ ಬೇರೆ ಹೆಸರುಗಳಿಂದ ಕರೆಯಬೇಕೆಂದು ಹೇಳುತ್ತಲಿದ್ದಾರೆ:

೧. "ಶಿಷ್ಟಸಾಹಿತ್ಯ ಮತ್ತು ಜನಪದಸಾಹಿತ್ಯಗಳ ಮಧ್ಯದಲ್ಲಿ "ಜನಪ್ರಿಯ ಸಾಹಿತ್ಯ" ಎಂಬೊಂದು ವಿಭಾಗ ಕಲ್ಪಿಸುವುದು ಅಗತ್ಯ.''

—ಡಾ. ಚಂದ್ರಶೇಖರ ಕಂಬಾರ

೨. "ಈ ಮೂರೂ ಪ್ರದೇಶಗಳ (ಉತ್ತರಕರ್ನಾಟಕ, ದಕ್ಷಿಣ ಕರ್ನಾಟಕ, ಮತ್ತು ಕರಾವಳಿಕರ್ನಾಟಕ) ಬ್ರಾಹ್ಮಣರಲ್ಲಿರಬಹುದಾದ ಸಾಹಿತ್ಯ 'ಜಾಣಪದ ಸಾಹಿತ್ಯ'ವೇ ಹೊರತು ಜಾನಪದಸಾಹಿತ್ಯವಲ್ಲ.''

—ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ ಏರ್ಪಡಿಸಿದ್ದ ಅಖಿಲಕರ್ನಾಟಕ ಪ್ರಥಮ ಜಾನಪದಸಮ್ಮೇಲನದ ವೇದಿಕೆಯ ಮೇಲೆ ಓದಿದ ಪ್ರಬಂಧಗಳ ಸಂಕಲನವಾದ

೧ ನಾಡಪದಗಳು (೧೯೪೭) ಪು. ೧೮೭.

೨ ಲೋಕಗೀತಗಳು ಪು. ೯೬–೧೦೮. ಅ. ೩.

"ಜಾನಪದ ಸಾಹಿತ್ಯದರ್ಶನ–೧''ರಲ್ಲಿ ಪ್ರಕಟವಾದ ಅಭಿಪ್ರಾಯಗಳಿವು.[೩] ಶಿಷ್ಟವೂ ಅಲ್ಲದ ಜಾನಪದವೂ ಅಲ್ಲದ ಒಂದು ಸಾಹಿತ್ಯವರ್ಗ ಇದ್ದುದನ್ನು ಈ ಉಭಯ ಹೇಳಿಕೆಗಳು ಒಪ್ಪುವುದಾದರೂ ಅದನ್ನು 'ಜನಪ್ರಿಯ ಸಾಹಿತ್ಯ', 'ಜಾಣಪದ ಸಾಹಿತ್ಯ'— ಈ ಎರಡರಲ್ಲಿ ಯಾವ ಹೆಸರಿನಿಂದ ಕರೆಯಬೇಕೆಂಬ ವಿಷಯವಾಗಿ ಮಾತ್ರ ಮತಭೇದವನ್ನು ತಾಳಿವೆ.

ಜಾನಪದವಿಜ್ಞಾನಿಗಳು ಹೇಳುವಂತೆ 'ಜನಪ್ರಿಯತೆ'ಯೂ[೪] ಜನಪದ ಸಾಹಿತ್ಯದ ಒಂದು ಪ್ರಧಾನ ಲಕ್ಷಣವಾಗಿರುವ ಕಾರಣ, ಈ 'ಮಧ್ಯವರ್ಗ'ದ ಸಾಹಿತ್ಯಕ್ಕೆ 'ಜನಪ್ರಿಯ ಸಾಹಿತ್ಯ'ವೆಂಬ ಹೆಸರು ಸಮಂಜಸವೆನಿಸದು. ಅನಾಗರಿಕರಿಂದ ಅರೆನಾಗರಿಕರನ್ನು ಪ್ರತ್ಯೇಕಿಸುವ ಒಂದು ಪ್ರಮುಖ ಅಂಶವೆಂದರೆ 'ಜಾಣತನ'ವಾದುದರಿಂದ ಇದನ್ನು 'ಜಾಣಪದ ಸಾಹಿತ್ಯ'ವೆಂದು ಕರೆಯುವುದು ತುಂಬ ಉಚಿತವೆನಿಸುತ್ತದೆ. ಅಲ್ಲದೆ 'ಜಾನಪದ ಸಾಹಿತ್ಯ'[೫]–'ಜಾಣಪದ ಸಾಹಿತ್ಯ' ಎಂಬ ಧ್ವನಿಸಾಮ್ಯತೆಯಿಂದ ಎರಡರಲ್ಲಿಯ ವ್ಯತ್ಯಾಸ ತಟ್ಟನೇ ಗಮನಕ್ಕೆ ಬರುತ್ತದೆ. ಈಗ ಇವುಗಳ ಮುಂದಿನ ಹಂತವಾದ ಶಿಷ್ಟಸಾಹಿತ್ಯವನ್ನು 'ಶಿಷ್ಟಪದಸಾಹಿತ್ಯ' ವೆಂದೂ ಕರೆದಲ್ಲಿ "ಜಾನಪದಸಾಹಿತ್ಯ ಜಾಣಪದಸಾಹಿತ್ಯ ಶಿಷ್ಟಪದ ಸಾಹಿತ್ಯ ಎಂಬ ಅರ್ಥಪೂರ್ಣ ಮೂರು ಪಾರಿಭಾಷಿಕ ಪದಗಳನ್ನು ಬಳಕೆಗೆ ತಂದಂತಾಗುತ್ತದೆ.

'ಶಿಷ್ಟಪದ ಸಾಹಿತ್ಯ'ದ ಲಕ್ಷಣದ ಬಗೆಗೆ ಸಾವಿರಾರು ವರ್ಷಗಳಿಂದ, ಜಾನಪದ ಸಾಹಿತ್ಯದ ಲಕ್ಷಣದ ಬಗೆಗೆ ನೂರಾರು ವರ್ಷಗಳಿಂದ ವಿದ್ವಾಂಸರು ಆಲೋಚಿಸುತ್ತ ಬಂದಿದ್ದಾರೆ. ಈ ಆಲೋಚನೆಗಳ ಮಧ್ಯ ಉಪೇಕ್ಷಿತವಾಗಿರುವ "ಜಾಣಪದ ಸಾಹಿತ್ಯ"ದ ಲಕ್ಷಣಗಳನ್ನು ಹೀಗೆ ಹೇಳಬಹುದು.

೧. ಜಾಣಪದಸಾಹಿತ್ಯವು ಜಾನಪದಸಾಹಿತ್ಯ ಮತ್ತು ಶಿಷ್ಟಪದಸಾಹಿತ್ಯಗಳ ಮಧ್ಯಲಕ್ಷಣಗಳನ್ನು ಹೊಂದಿದೆ.

---

೩ ಜಾನಪದ ಸಾಹಿತ್ಯ ದರ್ಶನ–೧. ಪು. ೧೧ ಮತ್ತು ೬೩

೪ "ಅಜ್ಞಾತ ಕರ್ತೃತ್ವ, ಸಾಮೂಹಿಕ ಬೆಳವಣಿಗೆಯ ಮುದ್ರೆ, ವಾಕ್ ಪರಂಪರೆಯ ಸುದ್ಧ ಹಾಗೂ ಚಂಚಲಸ್ಥಿತಿ, ಜನಪ್ರಿಯತೆ, ಸಾಮಾನ್ಯತಾಸ್ತ್ರೀ ಹಲವು ಮನಸ್ಸುಗಳಲ್ಲಿ ಹಾದು ಸಂಪಾದಿಸಿದ ರಾಷ್ಟ್ರೀಯ ಸ್ವರೂಪ" ಸಿ. ಪಿ. ಕೆ. 'ಜನಪದಗೀತೆ' ಪು. [illegible]. (Quoted from Chambers Encyclopaedia).

೫ ಆಧುನಿಕ ಕನ್ನಡ ಜಾನಪದ ವಿದ್ವಾಂಸರು 'ಜಾನಪದಸಾಹಿತ್ಯ' ಎಂಬುದು ಯೋಗ್ಯ ಪ್ರಯೋಗ ಎನ್ನುತ್ತಾರೆ. ನನ್ನದೃಷ್ಟಿಯಲ್ಲಿ ಜನಪದಸಾಹಿತ್ಯ, ಜಾನಪದಸಾಹಿತ್ಯಗಳೆರಡೂ ಯೋಗ್ಯಪ್ರಯೋಗಗಳು(ನೋಡಿ.ಜೀಬಗೇರಿಕೃಷ್ಣಶರ್ಮ:ಕನ್ನಡಜಾನಪದಸಾಹಿತ್ಯ.ಪು.೪)

೨. ಮಧ್ಯಮವರ್ಗದ ಮನಸ್ಸಿನ ಆಡಂಬರಪೂರ್ಣ ಮಿಡಿತ ಸದಾ ಕೇಳಿಸುತ್ತವೆ.

೩. ಜಾನಪದಸಾಹಿತ್ಯದ ಅನುಕರಣೆಯೆಂಬಂತೆ ರೂಪ ಪಡೆಯುತ್ತದೆ.

೪. ರಚನೆ ಮತ್ತು ಭಾಷೆ ಜಾನಪದಸಾಹಿತ್ಯದಷ್ಟು ಮುಕ್ತವೂ ಅಲ್ಲ; ಶಿಷ್ಟಪದಸಾಹಿತ್ಯದಷ್ಟು ಬದ್ಧವೂ ಅಲ್ಲ.

೫. ಜಾನಪದಸಾಹಿತ್ಯದಂತೆ ವಾಕ್‌ಸಂಪ್ರದಾಯವೂ ಹೌದು; ಶಿಷ್ಟಪದ ಸಾಹಿತ್ಯದಂತೆ ಲಿಖಿತ ಸಂಪ್ರದಾಯವೂ ಹೌದು.

೬. ಪಾಠವು ಜಾನಪದಸಾಹಿತ್ಯದಷ್ಟು ಚಂಚಲವೂ ಅಲ್ಲ; ಶಿಷ್ಟಪದ ಸಾಹಿತ್ಯದಷ್ಟು ಸ್ಥಿರವೂ ಅಲ್ಲ.

೭. ಜಾನಪದಸಾಹಿತ್ಯದ ಪ್ರಮುಖಲಕ್ಷಣವಾದ "ಸಾಮೂಹಿಕ ಪುನಃ ಸೃಷ್ಟಿ" ಎಂಬ ಮಾತು ಕ್ವಚಿತ್ ಅರ್ಥಪಡೆಯುತ್ತದೆ.

೮. ಕರ್ತೃತ್ವವು ಜ್ಞಾತವೂ ಆಗಿರಬಹುದು, ಅಜ್ಞಾತವೂ ಆಗಿರಬಹುದು.

ಈ ಲಕ್ಷಣಗಳಿಂದ ಕೂಡಿದ ಸಾಹಿತ್ಯ, ಗ್ರಂಥಸ್ಥಭಾಷೆಯನ್ನು ಹೊಂದಿದ ಯಾವುದೇ ಜನಾಂಗದಲ್ಲಿ ತಕ್ಕಮಟ್ಟಿಗೆ ಸೃಷ್ಟಿಯಾಗುತ್ತಲಿರುತ್ತದೆ. ಸಾಮಾನ್ಯವಾಗಿ 'ಕೆಲವು ಜನಾಂಗಗಳ ಸಾಹಿತ್ಯ' ಮತ್ತು 'ಕೆಲವು ಜನಪದಸಾಹಿತ್ಯ ಪ್ರಕಾರಗಳು' ಈ ಜಾಣಪದಸಾಹಿತ್ಯವರ್ಗಕ್ಕೆ ಸೇರುತ್ತಿದ್ದು, ಉದಾಹರಣೆಗೆ ಕನ್ನಡವನ್ನೇ ನೋಡಬಹುದು.

ಕನ್ನಡನಾಡಿನಲ್ಲಿ ಬ್ರಾಹ್ಮಣರದು ಪ್ರತಿಷ್ಠಿತವರ್ಗ. ಹಳ್ಳಿಗಳಲ್ಲಿ ಬದುಕಿಯೂ ಇವರು ತಮ್ಮ ನಡೆ-ನುಡಿಗಳಲ್ಲಿ ಮಡಿವಂತಿಕೆಯ ಸೀಮಾರೇಖೆಯನ್ನು ಉಳಿಸಿಕೊಂಡಿರುತ್ತಾರೆ. ಒಂದು ಹಳ್ಳಿಯಲ್ಲಿ ಬ್ರಾಹ್ಮಣ, ಲಿಂಗವಂತ, ಕಬ್ಬಿಲ, ಕುರುಬ, ಮುಸಲ್ಮಾನ, ಹರಿಜನ ಇತ್ಯಾದಿ ಜಾತಿಯವರಿದ್ದರೆ ಭಾವನೆ-ಭಾಷೆ ಇತ್ಯಾದಿಗಳಲ್ಲಿ ಬ್ರಾಹ್ಮಣರದೇ ಒಂದು ರೀತಿ, ಮಿಕ್ಕ ಅಬ್ರಾಹ್ಮಣರದೇ ಒಂದು ರೀತಿ. ಭಾಷಾವಿಜ್ಞಾನಿಗಳೂ ಕನ್ನಡ ಭಾಷೆಯ ಸಾಮಾಜಿಕ ಪ್ರಭೇದವನ್ನು ಬ್ರಾಹ್ಮಣ ಭಾಷೆ, ಅಬ್ರಾಹ್ಮಣಭಾಷೆಯೆಂದು ಬಿಚ್ಚಿಹೇಳುವುದನ್ನು ಇಲ್ಲಿ ನೆನೆಯಬಹುದು. ಹೀಗೆಯೇ ಅವರ ಸಾಹಿತ್ಯದಲ್ಲಿಯೂ ಒಂದು ಪ್ರತ್ಯೇಕತೆ ಎದ್ದು ಕಾಣುತ್ತದೆ. ಬಯಕೆಯ ಹಾಡುಗಳ ತುಲನೆಯಿಂದ ಈ ಮಾತನ್ನು ಸ್ಪಷ್ಟಪಡಿಸಿಕೊಳ್ಳಬಹುದು.

ಅಬ್ರಾಹ್ಮಣರ ಹಾಡು :

ಸುಬದೇವಿ ಮತ್ತೇನ ಬಗಿಸ್ಯಾಳ ||ಪ||

ಒಂದಂಬು ತಿಂಗಳಿಗಿ ಒಂದೇನ ಬಗಸ್ಯಾಳ |
ಅಂಗಳದೊಳಗಿನ ಎಳಿಬಿಸಲ |
ತಿಂದೇನೆಂಬುವಳ ||ಸು||

ಎರಡಂಬು ತಿಂಗಳಿಗಿ ಎರಡೇನ ಬಗಸ್ಯಾಳ |
ಎರಡೆಲಿ ವರದ ಎಳಿಹುಣಚಿ |
ತಿಂದೇನೆಂಬುವಳ ||ಸು||

ಮೂರೆಂಬು ತಿಂಗಳಿಗಿ ಮೂರೇನು ಬಗಸ್ಯಾಳ |
ಮೂಡಲ ದಿಕ್ಕಿನ ಮಗಿಮಾವ
ತಿಂದೇನೆಂಬುವಳ ||ಸು||

ನಾಕೆಂಬು ತಿಂಗಳಿಗಿ ನಾಕೇನ ಬಗಸ್ಯಾಳ |
ಕಾಕಿಯು ಹಣ್ಣ ಕೈತುಂಬ |
ತಿಂದೇನೆಂಬುವಳ ||ಸು||[೬]

... ...

ಬ್ರಾಹ್ಮಣರ ಹಾಡು :

ಗರ್ಭಿಯು ತನುಜನ | ಗರ್ಭಿಣಿಯಾದಳೈ ||ಪ||
ತಿಂಗಳೆಂಟು ದಿವಸಕ ಅಂಗನೆ ಮಣಿಯುತಾಳ |
ಸಿಂಗಾರವಾದ ಕೇದಗೆ ಬಗೆಸುವಳ ||೧||

ಎರಡಂಬು ತಿಂಗಳಿಗಿ ಪರಡಿಯು ಪಾಯಸ |
ಮೊಸರ ಮೋದಕ ಚಿತ್ರಾನ್ನ ಬಗೆಸುವಳ ||೨||

ಮೂರಂಬು ತಿಂಗಳಿಗೆ ನೀರಲ ಅಂಜೂರಿ |
ದ್ರಾಕ್ಷಿ ಕಿತ್ತಿಳೆ ಮಗಿಮಾವ ಬಗೆಸುವಳ ||೩||

ನಾಲ್ಕೆಂಟು ತಿಂಗಳಿಗಿ ಪಾಕದೊಳಗಿನ ದೋಸೆ |
ಸಾಕೆಂಬುತನಕ ಪಾಯಸ ಪರಡಿ ಬಯಸುವಳ ||೪||[೭]

....

ಈ ರಚನೆಗಳಲ್ಲಿ ಎರಡನೆಯದು ಮೊದಲನೆಯದರ ಅನುಕರಣೆಯೆಂಬುದು ಸ್ಪಷ್ಟ. ಸಂವೇದನೆ, ಭಾಷೆ ಇತ್ಯಾದಿ ದೃಷ್ಟಿಗಳಿಂದ ಎರಡೂ ಹಾಡುಗಳು ಬೇರೆ ಬೇರೆ ಕವಲುಗಳಾಗಿ ಬೆಳೆದಿವೆ. ಗರ್ಭಿಣಿ, ತನುಜ, ಅಂಗನೆ ಮೊದಲಾದ ಜಾನಪದವಲ್ಲದ ಶಬ್ದಗಳು ಒಂದರಲ್ಲಿ, ತೀರ ಜಾನಪದವಾದ ಶಬ್ದಗಳು ಇನ್ನೊಂದರಲ್ಲಿ.

---

೭ ಬಿ. ಎಸ್ ಗದ್ದಿಗಿಮಠ. ಲೋಕಗೀತೆಗಳು ಪು. ೯೩,೯೯.

ಬಯಕೆಯ ವಸ್ತುಗಳಾದ ಪರಡಿ ಪಾಯಸ ಮೋದಕ ಚಿತ್ರಾನ್ನ ಇತ್ಯಾದಿ ಒಂದುಕಡೆ, ಎಳೆಬಿಸಿಲು ಎಳೆಹುಣಿಚಿ ಕಾಕಿಹಣ್ಣು ಇನ್ನೊಂದು ಕಡೆ. ಬಹುಶಃ ಒಂದು ನಾಗರಿಕರ ನಾಲಗೆ ಚಾಪಲ್ಯವಾದರೆ, ಇನ್ನೊಂದು ನಾಗರಿಕರಲ್ಲದವರ ನೈಸರ್ಗಿಕ ಬಯಕೆ. ಈ ಎರಡೂ ವರ್ಗಗಳ ಬೇರೆ ಹಾಡುಗಳಲ್ಲಿಯೂ ಇಂಥ ಭಿನ್ನತೆ ಕಂಡುಬರುವುದರಿಂದ ಒಬ್ಬರದು ಜಾನಪದ, ಇನ್ನೊಬ್ಬರದು ಜಾಣ ಪದವೆಂದು ತಟ್ಟನೇ ಹೇಳಬಹುದಾಗಿದೆ. ಈ ಪ್ರಸಂಗದಲ್ಲಿ "ಕರಾವಳಿಪ್ರದೇಶ ಹವ್ಯಕಬ್ರಾಹ್ಮಣರಲ್ಲಿ ಜನಪದಸಾಹಿತ್ಯವಿದೆಯೆಂದು ಕೆಲವರು ಹೇಳುವರಾದರೂ ಅದನ್ನು ಜಾನಾಪದವೆಂದು ಕರೆದರೆ ಜನಪವಾದ ಬಂದೀತು"[೭] "ಭಾಗವಂತಿಕೆ ಮೇಳ ಎಂಬ ಬ್ರಾಹ್ಮಣರ ಜನಪದಸಾಹಿತ್ಯ ದಕ್ಷಿಣಕರ್ನಾಟಕದಲ್ಲಿದೆಯೆಂದು ವಿದ್ವಾಂಸರು ಹೇಳುವರಾದರೂ ಅದರ ಪರೀಕ್ಷೆ ಅತ್ಯವಶ್ಯ"[೮] ಎಂಬ ಮಾತುಗಳನ್ನು ಇಲ್ಲಿ ನೋಡಬೇಕು.

ಮೂಲತಃ ಬ್ರಾಹ್ಮಣರ ಹಾಡುಗಳಲ್ಲಿ ಕಂಡುಬರುವ ಈ ಪ್ರತ್ಯೇಕತೆ ಬ್ರಾಹ್ಮಣರಂಥ ಇತರ ಪ್ರತಿಷ್ಠಿತ ಜಾನಪದರಲ್ಲಿಯೂ ಕೆಲವು ಸಲ ಇಣುಕುತ್ತದೆ. ಉದಾ:

ಅಷ್ಟಾವರಣದ ಸೀರಿಯನುಟ್ಟು |
ನಿಷ್ಠೆ ಪಂಚಾಕ್ಷರಿ ಕುಪ್ಪಸತೊಟ್ಟು |
ಶ್ರೇಷ್ಠ ಷಟ್ಸ್ಥಲ ವಸ್ತುಗಳನಿಟ್ಟು | ಹೀಂಗ
ದಿಟ್ಟಿಸಿ ತೂಗಿರಿ ಚಿತ್ತಸ್ವಸ್ಥದಲೀ || ಜೋ ಜೋ ||

ಎಚ್ಚರವಹಿಸಿ ಕಟ್ಟಿದ ರೀತಿ, ದಿಟ್ಟಿಸಿ ತೂಗಿರಿ ಇತ್ಯಾದಿಗಳಲ್ಲಿಯ ಪ್ರಾಸಹವ್ಯಾಸ, ಆಧ್ಯಾತ್ಮವಿಚಾರದ ಆಡಂಬರ ಮೊದಲಾದುವು ಈ ಪದ್ಯದ ಜಾಣಪದತ್ವವನ್ನು ಎತ್ತಿ ತೋರಿಸುತ್ತವೆ.

ಇನ್ನು ಕೆಲವು ಸಲ ಜಾನಪದರ ಸಾಹಿತ್ಯ, ಜಾಣಪದರ ಕೈಗೆಸಿಕ್ಕರೆ ಅದು ದೇಶೀ ಶಬ್ದಗಳಿಗೆ ಬದಲು ಮಾರ್ಗಶಬ್ದಗಳನ್ನು ಪಡೆದುಕೊಳ್ಳುತ್ತದೆ; ಮಾರ್ಗ ತಪ್ಪಿದ ಮಾರ್ಗ, ದೆಸೆಗುಂದಿದ ದೇಶಿಗಳ ಮಿಶ್ರಣವಾಗುತ್ತದೆ. ಉದಾ :

ಬಸವಣನ ಹೇಣೂತಿ ಹಸಮಗಳು ನೀಲಮ್ಮ
ಬಸರಿದ್ದರ್ಹ್ಯಾಂಗ ನಡಿವಳು | ಗೋದಿಯ
ಸಸಿಯಾಗ ನವಲ ನಡದ್ಹಂಗ ||

೭ ಹೊನ್ನ ಬಿತ್ತೇವು ಹೊಲಕೆಲ್ಲ. ಪು. ೨೪೫.
೮ ಜನಪದ ಸಾಹಿತ್ಯದರ್ಶನ-ಭಾಗ ೧. ಪು. ೬೩ (ಅ.ಟಿ)

ಬಸವಣ್ಣನ್ಹೆಂಡತಿ ಶಶಿಮುಖಿ ನೀಲಮ್ಮ
ಬಸರಾದರ್ಹ್ಯಾಂಗ ನಡದಾಳ | ನೀಲಮ್ಮ
ಶಿಶುನಾಳದ ನವಿಲು ಕುಣಿದ್ಹಾಂಗ.

ಇಲ್ಲಿ ತಲೆದೋರಿದ ವ್ಯತ್ಯಾಸಗಳಿಗೆ ವಿವರಣೆ ಅನಗತ್ಯ.

ಒಟ್ಟಿನಲ್ಲಿ ಜನಾಂಗಿಕವಾಗಿ ಹೇಳುವುದಾದರೆ ಜಾನಪದರ ಮಧ್ಯ ಬಾಳುವ ಬ್ರಾಹ್ಮಣರಸಾಹಿತ್ಯ ಮತ್ತು ಬ್ರಾಹ್ಮಣರಂತೆ ಪ್ರತಿಷ್ಠೆಯ ಸೆಳವಿಗೆ ಸಿಕ್ಕವರ ಸಾಹಿತ್ಯವೆಲ್ಲ ಸಾಮಾನ್ಯವಾಗಿ 'ಜಾಣಪದಸಾಹಿತ್ಯ'ವಾಗಿರುತ್ತದೆ.

II

'ಜನಾಂಗನಿಷ್ಠ'ವಾಗಿ ಗುರುತಿಸುವಂತೆ 'ಸಾಹಿತ್ಯಪ್ರಕಾರನಿಷ್ಠ'ವಾಗಿಯೂ ಈ ಸಾಹಿತ್ಯವನ್ನು ಗುರುತಿಸಬಹುದು. ಸಾಹಿತ್ಯನಿರ್ಮಿತಿಯನ್ನು ಒಂದು ಹವ್ಯಾಸ ಇಲ್ಲವೆ ವೃತ್ತಿಯನ್ನಾಗಿಸಿಕೊಂಡವರು ಇಂಥ ಕೆಲವು ಸಾಹಿತ್ಯ ಪ್ರಕಾರಗಳನ್ನು ಜಾಣಪದಭೂಯಿಷ್ಠವಾಗಿ ಸೃಷ್ಟಿಸುತ್ತ ಬಂದಿರುತ್ತಾರೆ.

ಈ ದೃಷ್ಟಿಯಿಂದ ನೋಡಿದರೆ ಕನ್ನಡದಲ್ಲಿ ಜಾಣಪದಸಾಹಿತ್ಯದ ಬಹು ದೊಡ್ಡ ನಿಧಿಯೆನಿಸುವವು, ಭಜನೆ ಹಾಡುಗಳು. ತತ್ವ ಮತ್ತು ನೀತಿಬೋಧೆ ಪ್ರಧಾನವಾದ ಇವು ಈ ಕಡೆ ಶುದ್ಧ ಜಾನಪದವೂ ಅಲ್ಲ, ಆ ಕಡೆ ಶುದ್ಧ ಶಿಷ್ಟ ಪದವೂ ಅಲ್ಲ. ಹಳ್ಳಿಹಳ್ಳಿಗಳಲ್ಲಿ ಮುದ್ರಿಕೆ ಬದಲಿಸಿಕೊಳ್ಳುತ್ತ ಕರ್ತೃ ಸಂದೇಹದಿಂದ ಪ್ರಚಾರದಲ್ಲಿರುವ ಈ ಹಾಡುಗಳಲ್ಲಿ ಜನಪದಸಾಹಿತ್ಯದ ಮುಖ್ಯ ಲಕ್ಷಣವಾದ ಪಾಠವ್ಯತ್ಯಾಸ ತಕ್ಕ ಪ್ರಮಾಣದಲ್ಲಿ ನಿರಾತಂಕವಾಗಿ ನಡೆದಿರುತ್ತದೆ. ದಾಸರ ಕೀರ್ತನೆ, ಸರ್ಪಭೂಷಣ ಶಿವಯೋಗಿ, ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಕೂಡಲೂರ ಬಸವಲಿಂಗಶರಣರ ಹಾಡುಗಳ ಮಾದರಿಯಲ್ಲಿ, ಕೆಲವು ಸಲ ಸಿನಿಮಾ ಅಥವಾ ನಾಟಕ ಹಾಡುಗಳ ಧಾಟಿಯಲ್ಲಿ ಹುಟ್ಟುವ ಸಾಹಿತ್ಯವಿದು. ನಿದರ್ಶನಕ್ಕಾಗಿ ಒಂದು ಹಾಡನ್ನು ನೋಡಬಹುದು :

ಇಷ್ಟಲಿಂಗಯ್ಯ ಶ್ರೇಷ್ಠಲಿಂಗಯ್ಯ
ನಿಷ್ಠೆವಂತರ ಆತ್ಮ ನೀನೆ ಲಿಂಗಯ್ಯ ||ಪ||

ಅಂಗಯ್ಯ ಪೀಠದಿ ಹೊಳೆಯೊ ಲಿಂಗಯ್ಯ |
ಅಂಗಳ ಕೊನೆಯಲ್ಲಿ ಕಾಣು ಲಿಂಗಯ್ಯ |
ಗಂಗೆಯ ಮನೆಯಲ್ಲಿ ಸ್ನಾನವ ಗೈಯ್ಯುವ |
ಸಂಗಯ್ಯ ನನ್ನಾತ್ಮ ನೀನೆ ಲಿಂಗಯ್ಯ ||೧||

ನವಲಿಂಗಕಾಧಾರ ನೀನೆ ಲಿಂಗಯ್ಯ |
ನವಚಕ್ರಗಳಲಿ ನಲಿಯೊ ಲಿಂಗಯ್ಯ |

ನವಭಕ್ತಿ ನವಶಕ್ತಿ ನವಲಿಂಗದೊಳೆ
ನವಪ್ರವಣ ನನ್ನಾತ್ಮ ನೀನೆ ಲಿಂಗಯ್ಯ ||೨||

....

ಜಾಣಪದಸಾಹಿತ್ಯ ವರ್ಗಕ್ಕೆ ಜಹುವುಟ್ಟಿಗೆ ಸೇರುವ ಇನ್ನೊಂದು ಪ್ರಕಾರ ವೆಂದರೆ ಹವ್ಯಾಸಿ ಮತ್ತು ವೃತ್ತಿಗಾಯಕರಿಂದ ನಿರ್ಮಿತವಾಗುವ ಉತ್ತರ ಕರ್ನಾಟಕದ ಲಾವಣಿಸಾಹಿತ್ಯ. ಅತಿಯಾದ ಪ್ರಾಸಾಂತ್ಯಪ್ರಾಸ ಮೋಹ, ಒಂದು ನಿರ್ದಿಷ್ಟ ಚೌಕಟ್ಟು (Formula) ಇತ್ಯಾದಿಗಳಿಂದ ಕೂಡಿದ ಕೆಲವು ಶೃಂಗಾರ, ವೀರ ಮತ್ತು ತತ್ವಸಾರ ಲಾವಣಿಗಳು ಇವಕ್ಕೆ ಉದಾಹರಣೆ.

ರಂಭಿ ಎದಿವ್ಯಾಲ ತುಂಬಿಬಂದಂಥ ಕುಂಭಕುಚಗಳ ಕಂಡು
ಕುಂಭಸ್ಥಳಕೆ ಗಜ ಮಣ್ಣ ಒಗೆಯುವುದು |
ಹೊಳೆಯುವಂಥ ಕರಗಳ ಸರ್ಪ ನಿಂತು ನೋಡುವುದು
ನಾಚಿಕಿಂದ ನಲುಗಿ ಭೂಮಿಸೇರಿತು ಬಗಿದು. |[೯]

ಸ್ತ್ರೀವರ್ಣನೆಯ ಲಾವಣಿ ಭಾಗವಿದು. ಕುಂಭಕುಚ, ಕುಂಭಸ್ಥಳ, ಕರ ಮೊದ ಲಾದ ಶಬ್ದಗಳು, ರಚನೆಯಲ್ಲಿರುವ ಪಾಂಡಿತ್ಯಪ್ರದರ್ಶನ ಇದರ ಕರ್ತೃವಿನ 'ಜಾಣಪದತ್ವ'ವನ್ನು ಸೂಚಿಸುತ್ತವೆ.

ನಾದ ಬಿಂದು ಕಳೆ ಮೂರಕ ಆಧಾರ
ಪ್ರಕೃತಿ ಮಾಡಿಟ್ಟ ನಿರಂಜನಾ
ಅಂಥಾ ಪ್ರಕೃತಿಗೆ ಪ್ರಾಣ ಆಧಾರ
ಒಂದೊಂದು ಕೇಳ ಇದರ ಸಂಧಾನಾ ||[೧೦]

ವೀರಶೈವ ತತ್ವಪ್ರಧಾನವಾದ ಈ ಲಾವಣಿಯಲ್ಲಿ ಅನಕ್ಷರಸ್ಥ ಮನಸ್ಸಿಗಿಂತ ಅಕ್ಷರಸ್ಥ ಮನಸ್ಸಿನ ಮಿಡಿತವಿದೆ. ಇದನ್ನು ಅರ್ಥೈಸಿಕೊಳ್ಳುವುದು ವೀರಶೈವ ವಿದ್ವಾಂಸರಿಗೆ ಸಾಧ್ಯವೇ ಹೊರತು ಸಾಮಾನ್ಯರಿಗಲ್ಲ. ಒಟ್ಟಿನಲ್ಲಿ ಬಹುಪಾಲು ಲಾವಣಿ ಸಾಹಿತ್ಯದ ಹಿಂದೆ ಜಾನಪದದ ಮುಕ್ತರಚನೆಗೆ ದೂರವಾದ ಒಂದು 'ಸಕ್ರಮತೆ' ಕಂಡುಬರುತ್ತದೆ.

ಇದೇ ರೀತಿ ಪ್ರಾಚೀನ ಹಸ್ತಪ್ರತಿಗಳಲ್ಲಿ ದೊರೆಯುವ ಕರ್ತೃ ನಿರ್ದೇಶನ ವುಳ್ಳ ಚೌಪದನ ಮತ್ತು ದುಂದುಮೆಪದಗಳನ್ನೂ 'ಜಾಣಪದ' ವರ್ಗದಲ್ಲಿ ಪರಿಭಾವಿಸಬೇಕಾಗುತ್ತದೆ.

---

೯ ಕವಿ ಬಾಳಗೋಪಾಳನ ಲಾವಣಿಗಳು. ಪು. ೮೭.
೧೦ ಕವಿ ಬಾಳಗೋಪಾಳನ ಲಾವಣಿಗಳು. ಪು. ೧೧೦.

ಚೌಪದನ ಚೌಪದನವಿನಿತು ಕೊಂಡಾಡಿ
ಚೌತಿಗಣನಾಥನಾ ತಿಥಿಯೆಂದು ಮಾಡಿ
ಚೌದಳದಿ ಪೂಜಿಸುವ ಫಲಗಳನು ಬೇಡಿ
ಚೌಷಷ್ಟಿ ವಿದ್ಯೆಯನು ಗಣಪತಿಗೆ ಬೇಡಿ ||೧||[೧೧]

ಎಂಬ ಪ್ರಾರಂಭದ ಪದ್ಯವೇ ಇದರ ಜಾಣಪದತ್ವವನ್ನು ಸಾರುತ್ತದೆ.

ದುಂದುಮೆ ಕೇಳ್ರಿ ದುಂದುಮೆ ||ಪಲ್ಲ||
ಸಬ್ಬ ದೇಶದಿ ಕಾಣೆ ಇಂಥ ಮರ್ಕಟ
ಅಬ್ಬರಿಸುತ್ತ ಹಾರ‍್ಯಾಡುವವು | ತಮ್ಮ
ಹುಬ್ಬ ಹಾರಿಸಿ ಹಲ್ಲು ಕಿರಿಯುವವು | ಮತ್ತೆ
ತಬ್ಬುಬ್ಬಿ ಅಲ್ಲಲ್ಲೆ ಕೂಡುವವು | ಮೈಯ
ಉಬ್ಬುತ ಕೊಬ್ಬುತ ಹಬ್ಬುತಊರೊಳಗೆಲ್ಲ
ಹುಬ್ಬಳ್ಳಿಯೊಳು ಮಂಗ ಹುಡದಿಯಾಡಿದವು ||೧||[೧೨]

ಮೊದಲಾದ ದುಂದುಮೆ ಪದ್ಯಗಳ ಅತಿಯಾದ ಪ್ರಾಸ, ತಾಳಪ್ರಧಾನವಾದ ನಡಿಗೆಗಳನ್ನು ಗಮನಿಸಬೇಕು.

ವೈವಿಧ್ಯಪೂರ್ಣವಾದ ಜಾನಪದ 'ಬಯಲಾಟ' ಪ್ರಪಂಚದಲ್ಲಿ ಕಿಳ್ಳಿಕೇತರಾಟ, ದಾಸರಾಟಗಳಂಥವನ್ನು ಬಿಟ್ಟರೆ ಪ್ರಸಂಗ–ಯಕ್ಷಗಾನ, ಸಣ್ಣಾಟ–ದೊಡ್ಡಾಟಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ 'ಜಾಣಪದ'ದ ಸೋಂಕು ಕಂಡುಬರುತ್ತದೆ. ಇವುಗಳಲ್ಲಿ ಯಕ್ಷಗಾನದ ಜಾನಪದತ್ವವನ್ನು ಅನೇಕರು ಪ್ರಶ್ನಿಸಿದ್ದಾರೆ. "ಶ್ರೀ ರಾ. ಭ. ಹಾಸಣಗಿ ಅವರು ಯಕ್ಷಗಾನ 'ಆಟ'ಗಳನ್ನು ಯಕ್ಷಗಾನ 'ನಾಟಕ'ಗಳು ಎಂದು ಕರೆದು ಅವುಗಳ ಉಗಮಕ್ಕೆ ಸಂಸ್ಕೃತನಾಟಕಗಳೇ ಕಾರಣವೆಂದು ವಿವರಿಸಲು ಪ್ರಯತ್ನಿಸಿದರು. ಅದೇ ಬಗೆಯಲ್ಲಿ ಯಕ್ಷಗಾನಗೀತ, ನೃತ್ಯಗಳಂಥ ವಿಷಯಗಳು ಶಾಸ್ತ್ರಗ್ರಂಥಗಳಲ್ಲಿ ಉಕ್ತವಾಗಿರುವುದರಿಂದ ಶುದ್ಧ ಜಾನಪದವಾಗಲಾರದು" ಎಂಬ ಅಭಿಪ್ರಾಯವನ್ನು ಶ್ರೀ ಭೀಮರಾವ ಚಿಟಗುಪ್ಪಿ ಅವರು ವ್ಯಕ್ತಮಾಡಿರುವರು. ಶ್ರೀ ಚಂದ್ರಶೇಖರ ಕಂಬಾರರೂ ಯಕ್ಷಗಾನವನ್ನು ಕುರಿತು ಇದು ಶುದ್ಧವಾಗಿ ಅಭಿಜಾತ ನಾಟಕವೇ ಆಗಿದ್ದು ದೇವಾಲಯಗಳ ಸಂಬಂಧದಿಂದ ಸಾಮಾನ್ಯರ ಸಂಪರ್ಕ ಪಡೆದು ಮುಂದೊಂದು ದಿನ ಅರಮನೆಯ ಆಶ್ರಯ ತಪ್ಪಿ ಬಯಲಿಗೆ ಬಿದ್ದು ಬಯಲಾಟವಾಯ್ತು"[೧೩] ಎಂದು ಕಡ್ಡಿಮುರಿದಂತೆ ಸಾರಿದ್ದಾರೆ.

---

೧೧ ಜೀವನ ಜೋಕಾಲಿ–೧. ಚೌಪದನಗಳು. ಪು. ೪೭.
೧೨ ಜೀವನ ಜೋಕಾಲಿ–೮ ದುಂದುಮೆ ಪದ ಪು. ೧೪೧
೧೩ ಜಾನಪದ ಸಾಹಿತ್ಯದರ್ಶನ-೨ ಪು. ೧೭೯.

ಈ ಮೂರು ಅಭಿಪ್ರಾಯಗಳನ್ನು ಡಾ. ಕೆ. ಜಿ. ಶಾಸ್ತ್ರಿ ಅವರು ವಿರೋಧಿಸುತ್ತ "ಯಕ್ಷಗಾನಪ್ರದರ್ಶನದ ಅತ್ಯುತ್ತಮ ಭಾಗವೆನಿಸುವ ವೇಷಭೂಷಣಗಳ ವರ್ಣಮಯತೆ, ಪಾತ್ರಗಳ ಬಣ್ಣಗಾರಿಕೆಯ ವಿವರಪೂರ್ಣವಾದ ಯೋಜನೆ, ನೃತ್ಯಕ್ರಮದ ಚೈತನ್ಯಮಯತೆ, ಸಂಭಾಷಣೆಯ ಔಚಿತ್ಯಪೂರ್ಣತೆಗಳು ಜನಪದಕ್ಕೆ ಮೀರಿದ್ದೆಂದು ತೋರುವದು ನಿಜ. ಆದರೆ ಅದೇ ಕಾಲಕ್ಕೆ ಅದು ಉಳಿಸಿಕೊಂಡಿರುವ ಮೂಲಲಕ್ಷಣಗಳನ್ನು ಅಲಕ್ಷಿಸುವುದು ತಪ್ಪಾಗುತ್ತದೆ"[೧೪] ಎಂದು ಎರಡು ವಾಕ್ಯಗಳಿಂದ ಸಮರ್ಥಿಸಿಕೊಳ್ಳುವಲ್ಲಿ ಮೊದಲನೆಯ ವಾಕ್ಯದ ಮೂಲಕ ಇದು "ಜನಪದಕ್ಕೆ ಮೀರಿದ್ದು" ಎಂದು ಒಪ್ಪಿಕೊಂಡಿದ್ದಾರೆ. ಎರಡನೆಯ ವಾಕ್ಯಕ್ಕೆ ಈ ಲೇಖನದಲ್ಲಿಯೇ ಒಡ್ಡಿದ ಎಂಟೂ ಸಮರ್ಥನೆಗಳು ಸಮರ್ಪಕವಾಗಿಲ್ಲ. ಶ್ರೀ ಹಾಸಣಗಿ ಮೊದಲಾದವರು ಶಿಷ್ಟಮೂಲದಿಂದ ಇಳಿದು ಜಾನಪದಕ್ಕೆ ವಾಲಿತೆಂದರೆ ಡಾ. ಶಾಸ್ತ್ರಿಗಳು ಜಾನಪದಮೂಲದಿಂದ ಏರಿ ಶಿಷ್ಟಕ್ಕೆ ವಾಲಿತೆಂದು ಹೇಳುತ್ತಾರೆ. ಅಲ್ಲಿಂದ ಇಲ್ಲಿಗೆ ಬಂದಿತು, ಇಲ್ಲಿಂದ ಅಲ್ಲಿಗೆ ಹೋಯಿತು ಎನ್ನುವುದು ನಮಗೆ ಮುಖ್ಯವಲ್ಲ. ಸಧ್ಯ ಜಾನಪದರಿಂದ ಅಭಿನಯಿಸಲ್ಪಡುವ ಅದರ 'ಸ್ವರೂಪ' ಎಂತಹದು? ಎಂಬುದು ಮುಖ್ಯ. ಈ ವಿಷಯವಾಗಿ ಡಾ. ಶಾಸ್ತ್ರಿಗಳು ಹೇಳುವ "ಜಾನಪದಕ್ಕೆ ಮೀರಿದ್ದು" ಎಂಬ ಮಾತು ಅದರ ಜಾಣಪದತ್ವವನ್ನು ಸ್ಥಿರೀಕರಿಸುತ್ತದೆ. ಕಾರಣ ಯಕ್ಷಗಾನವು ಜಾನಪದ ಸಾಹಿತ್ಯಕ್ಕೆ ಇಳಿಯದ, ಶಿಷ್ಟಪದ ಸಾಹಿತ್ಯಕ್ಕೆ ಏರದ 'ಜಾಣಪದ ಸಾಹಿತ್ಯ' ಸೀಮೆಯಲ್ಲಿ ನಿಲ್ಲುವ ದೃಶ್ಯಪ್ರಕಾರವೆನಿಸಿಕೊಳ್ಳುತ್ತದೆ. ಮೇಲೆ ಹೇಳಿದ 'ಜಾಣಪದಸಾಹಿತ್ಯ'ದ ಸರ್ವಸೂತ್ರಗಳೂ ಈ ಪ್ರಕಾರಕ್ಕೆ ಅನ್ವಯಿಸುವವೆಂಬುದನ್ನು ಇಲ್ಲಿ ಗಮನಿಸಬೇಕು.

ಉತ್ತರಕರ್ನಾಟಕಕ್ಕೆ ಬಂದರೆ ಸಣ್ಣಾಟವರ್ಗಕ್ಕೆ ಸೇರುವ ಕುಲಗೋಡ ತಮ್ಮಣ್ಣನ ಶ್ರೀಕೃಷ್ಣಪಾರಿಜಾತ, ಶರಣರಾಟ ಮೊದಲಾದುವು ವಿದ್ವಾಂಸರುಗಳ ರಚನೆಗಳೇ ಆದುದರಿಂದ ಅವು ಜಾನಪದದ ಬಣ್ಣಹಚ್ಚಿಕೊಂಡ ಜಾಣಪದಗಳೇ ಆಗಿವೆ. ಈ ಸಣ್ಣಾಟಗಳು ಸಾಮಾಜಿಕವಾಗಿದ್ದಲ್ಲಿ ಮಾತ್ರ 'ಜಾನಪದ'ವಾಗಿ ತೋರುತ್ತವೆ. ಉದಾ : ಸಂಗ್ಯಾಬಾಳ್ಯಾ.

ದೊಡ್ಡಾಟಗಳ ವಸ್ತು ಸಾಮಾನ್ಯವಾಗಿ ಆರ್ಯಮೂಲ ಪೌರಾಣಿಕ ಮತ್ತು ಐತಿಹಾಸಿಕವಾದುದರಿಂದ ಅಲ್ಲಿಯ ಪ್ರತಿಷ್ಠಿತ ಪಾತ್ರಗಳ ನಡೆ-ನುಡಿಯ ಸಂದರ್ಭಗಳಲ್ಲಿ ರಂಗಭೂಮಿ ಜಾನಪದವನ್ನು ಬಿಟ್ಟು ಜಾಣಪದದತ್ತ ಮೇಲೇಳುತ್ತಿದ್ದರೂ ಪ್ರತಿಷ್ಠಿತವಲ್ಲದ ಸಂದರ್ಭ ಮತ್ತು ಹಾಡುಗಾರಿಕೆಗಳಲ್ಲಿ ಶುದ್ಧ ಜಾನಪದವನ್ನೇ ವ್ಯಕ್ತಪಡಿಸುತ್ತದೆ. ಉದಾ :

---

೧೪ ಜಾನಪದ ಸಾಹಿತ್ಯದರ್ಶನ-೨. ಪು. ೧೭೦.

ಕಟಗಿ ಚುಚ್ಚಿ ಹ್ವಾದರು ಬಾಯಾಗ |
ಕಬ್ಬಂತ ತಿಳದೆ ನಾ ಮನದಾಗ ||

ಇಂಥ ಹಾಡುಗಳಲ್ಲಿ ಹಸಿರುಮುರಿಯುವ ದೇಶಿಯ ಕಲ್ಪನೆ, ಗ್ರಾಮ್ಯಭಾಷೆ, ಅಂಶಲಯಗಳು ಗಮನಾರ್ಹವೆನಿಸಿವೆ. ಹೀಗೆ ದೃಶ್ಯಪ್ರಕಾರಗಳಲ್ಲಿಯೂ ಅಲ್ಲಲ್ಲಿ ಜಾಣಪದ ಪಾತ್ರವಹಿಸಿ ಪ್ರವೇಶಿಸಿದೆ.

ಜನಪದಸಾಹಿತ್ಯ ಲೆಕ್ಕಣಿಕೆಯ ತುದಿಯಲ್ಲಿ ಅರಳುವದಲ್ಲ; ನಾಲಿಗೆಯ ತುದಿಯಲ್ಲಿ ಚಿಗಿಯುವುದು. ಅದರ ನಿಜರೂಪದರ್ಶನವಾಗುವುದು ಲೇಖನ ರೂಪದಲ್ಲಲ್ಲ, ಮಾತುಗಾರಿಕೆಯಲ್ಲಿ ಮತ್ತು ಹಾಡುಗಾರಿಕೆಯಲ್ಲಿ. ಈ ದೃಷ್ಟಿ ಯಿಂದಲೂ ಜಾನಪದರು ಮತ್ತು ಜಾಣಪದರು ತಮ್ಮ ಸಾಹಿತ್ಯವನ್ನು ಭಿನ್ನರೂಪ ದಲ್ಲಿ ವ್ಯಕ್ತಪಡಿಸುತ್ತಾರೆ. ಜಾನಪದರ ಅಭಿವ್ಯಕ್ತಿ ಅಂಶಗಣ, ಎತ್ತರ ದನಿ, ಉಚ್ಚಾರ ಗ್ರಾಮ್ಯತೆ ಪ್ರಧಾನವಾದುದು. ಜಾಣಪದರ ಅಭಿವ್ಯಕ್ತಿ ಮಾತ್ರಾಗಣ, ಮೃದುಧ್ವನಿ, ಉಚ್ಚಾರಶುದ್ಧಿ ಪ್ರಧಾನವಾದುದು. ಒಬ್ಬರದು ಮುಕ್ತ, ಮುಗ್ಧ; ಇನ್ನೊಬ್ಬರದು ಬದ್ಧ, ಆಡಂಬರ.

ಒಟ್ಟಿನಲ್ಲಿ ಶಿಷ್ಟಪದಸಾಹಿತ್ಯ ಮತ್ತು ಜಾನಪದಸಾಹಿತ್ಯಗಳ ಮಧ್ಯದ ಈ ಜಾಣಪದಸಾಹಿತ್ಯ ರಾಶಿರಾಶಿಯಾಗಿ ಹುಟ್ಟುತ್ತಿದ್ದು, ಜಾನಪದವನ್ನು ಶಾಸ್ತ್ರ ವ್ಯವಸ್ಥೆಗೆ ಒಳಪಡಿಸಬೇಕಾಗಿರುವ ಇಂದಿನ ಕಾಲದಲ್ಲಿ ಅದನ್ನು ಪ್ರತ್ಯೇಕ ವಾಗಿಯೇ ಪರಿಗಣಿಸುವುದು ಸೂಕ್ತ; ಪ್ರತ್ಯೇಕ ಹೆಸರಿನಿಂದ ಕರೆಯುವುದು ಸಮಂಜಸ.

ಕನ್ನಡ ಸಾಹಿತ್ಯಚರಿತ್ರೆಯ ವಿಷಯವಸ್ತು

● ಬಸವರಾಜ ಮಲಶೆಟ್ಟಿ

ಕನ್ನಡ ಸಾಹಿತ್ಯಚರಿತ್ರೆಯ ಬರೆವಣಿಗೆ ಸುಮಾರು ಒಂದುನೂರುವರ್ಷಗಳ ಇತಿಹಾಸ ಪಡೆದಿದೆ. ಈ ಅವಧಿಯಲ್ಲಿ ಅನೇಕ ಸಾಹಿತ್ಯಚರಿತ್ರೆಗಳು ಹೊರಬಂದಿವೆಯಾದರೂ ಅವು ಒಂದೊಂದು ದೃಷ್ಟಿಯಿಂದ ಅಪರಿಪೂರ್ಣವಾಗಿವೆ. ಅವುಗಳಲ್ಲಿ ಕನ್ನಡಸಾಹಿತ್ಯಚರಿತ್ರೆಯ ವಿಷಯ ವಸ್ತುವಿನ ಬಗ್ಗೆ (Subject Matter) ಲೇಖಕರಿಗಿರುವ ಅಸ್ಪಷ್ಟ ವಿಚಾರ ಎದ್ದುಕಾಣುವ ಮುಖ್ಯ ಅಂಶವಾಗಿದೆ. ಇಲ್ಲಿಯವರೆಗೆ ಬೆಳೆದುಬಂದ ಈ ಅಸ್ಪಷ್ಟತೆಯು ನಮ್ಮ ಸಾಹಿತ್ಯಚರಿತ್ರೆಯ ಗುಣಮೌಲ್ಯವನ್ನು ಕೆಳಗಿಳಿಸಿದೆ. ಅದರ ಒಪ್ಪಂದ ಆಕೃತಿಯನ್ನು ವಿರೂಪಗೊಳಿಸಿವೆ. ಬೃಹತ್‌ಸಂಪುಟಗಳಲ್ಲಿ ಕನ್ನಡಸಾಹಿತ್ಯಚರಿತ್ರೆ ರೂಪುಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಈ ವಿಚಾರದ ಕಡೆಗೆ ಗಮನಹರಿಸಬೇಕಾಗಿದೆ.

ಪ್ರತಿಯೊಂದು ಜ್ಞಾನಶಾಖೆಯೂ ತನ್ನ ಅಧ್ಯಯನಪ್ರಪಂಚದ ಗಡಿರೇಖೆಗಳನ್ನು ಗುರುತಿಸಿಕೊಂಡಿರುತ್ತದೆ. ತಾನು ಗರ್ಭೀಕರಿಸಿಕೊಳ್ಳುವ ವಿಷಯಗಳು ಯಾವುವು, ಇನ್ನುಳಿದ ಶಾಖೆಗಳೊಂದಿಗೆ ಎಷ್ಟರಮಟ್ಟಿಗೆ ಸಂಬಂಧವನ್ನಿಟ್ಟುಕೊಳ್ಳಬೇಕು ಈ ಮುಂತಾದ ಅಂಶಗಳನ್ನು ಖಚಿತಪಡಿಸಿಕೊಳ್ಳುತ್ತದೆ. ಆಗ ಮಾತ್ರ ಅದಕ್ಕೆ ಸ್ಪಷ್ಟ ಆಕಾರ ಬರಲು ಸಾಧ್ಯ. ಆದ್ದರಿಂದ ಸಾಹಿತ್ಯಚರಿತ್ರೆಗೂ ಈ ಮಾತು ಅನ್ವಯಿಸಲೇಬೇಕಲ್ಲವೆ? ಅಂದಮೇಲೆ ಕನ್ನಡ ಸಾಹಿತ್ಯಚರಿತ್ರೆಯ ವಿಷಯ ವಸ್ತುವಿನ ಸ್ವರೂಪವೆಂಥದು, ಅದರ ಅಧ್ಯಯನವ್ಯಾಪ್ತಿ ಎಷ್ಟು ಮೊದಲಾದವುಗಳನ್ನು ಖಚಿತಪಡಿಸಿಕೊಳ್ಳಬೇಕಾಗಿದೆ.

ಈ ಚರ್ಚೆಗೆ ಇಳಿಯುವ ಮೊದಲು 'ಸಾಹಿತ್ಯ'ವೆಂದರೇನೆಂಬುದನ್ನು ಸ್ಥೂಲವಾಗಿ ತಿಳಿದುಕೊಳ್ಳುವುದಗತ್ಯ. "ಸಾಹಿತ್ಯವೆಂದರೆ ಅದರ ವಿಶಾಲವಾದ ಅರ್ಥದಲ್ಲಿ ಒಂದು ಭಾಷೆಯಲ್ಲಿ ಉತ್ಪನ್ನವಾಗಿರುವ ಗ್ರಂಥ ಸಮುದಾಯ. ಇದರಲ್ಲಿ ಸ್ಥೂಲವಾಗಿ ಎರಡು ಭಾಗಗಳನ್ನು ಮಾಡಬಹುದು. ಒಂದನೆಯದು

ಶಾಸ್ತ್ರ; ಜ್ಞಾನ ಪ್ರಸಾರವೇ ಇದರ ಮುಖ್ಯ ಉದ್ದೇಶ.....ಎರಡನೆಯದು ಕಾವ್ಯ; ಹೃದಯವಿಕಸನವೇ ಇದರ ಮುಖ್ಯ ಗುರಿ.........ಎರಡನೆಯ ವರ್ಗಕ್ಕೆ ಸೇರಿದ ಗ್ರಂಥಗಳನ್ನು ಮಾತ್ರ ಸಾಹಿತ್ಯ ಶಬ್ದದಿಂದ ನಿರ್ದೇಶಿಸುವ ವಾಡಿಕೆ ಇದೆ. ಪರಿಮಿತವಾದ ಅರ್ಥದಲ್ಲಿ ಸಾಹಿತ್ಯವೆಂದರೆ ರಸಪ್ರಧಾನವಾದ ಗ್ರಂಥಜಾತಿಯೆಂದು ಗ್ರಹಿಸಬೇಕು೧" ಸಾಹಿತ್ಯ ಚರಿತ್ರಕಾರನು ಎರಡನೆಯವರ್ಗದ ಸೃಜನಾತ್ಮಕ (Creative) ಬರವಣಿಗೆಯನ್ನು ಆಧರಿಸಿ ಚರಿತ್ರೆ ಬರೆಯಬೇಕು. ವಿಶಾಲಾರ್ಥದ ಗ್ರಂಥಸಮುದಾಯಕ್ಕೆ ತೆಕ್ಕೆಬೀಳುವುದಾಗಲೀ, ಮೊದಲಿನವರ್ಗದ ಶಾಸ್ತ್ರಗ್ರಂಥ ಗಳನ್ನು ಸಾಹಿತ್ಯದ ಮಟ್ಟಕ್ಕೇರಿಸುವುದಾಗಲೀ ತರವಲ್ಲ, ಅಂದಾಗ ಮಾತ್ರ 'ಸಾಹಿತ್ಯ' ತನ್ನ ಉಚಿತಸ್ವರೂಪವನ್ನು, ಪಾರಿಭಾಷಿಕಮಹತ್ವವನ್ನು ಉಳಿಸಿ ಕೊಳ್ಳುತ್ತದೆ. ಇದರಿಂದಾಗಿ 'ಸಾಹಿತ್ಯದ' ವ್ಯಾಪ್ತಿ ಪರಿಮಿತಗೊಂಡರೂ ಅದ ಕ್ಕೊಂದು ಸುಸಂಬದ್ಧ ಆಕಾರ ಬರುತ್ತದೆ. ಒಂದು ಭಾಷೆಯಲ್ಲಿರುವ ಗ್ರಂಥ ಸಮುದಾಯವನ್ನೆಲ್ಲ 'ಸಾಹಿತ್ಯ'ದ ಸೀಮೆಯಲ್ಲಿ ಸೇರಿಸಿದರೆ ನಿಜವಾದ 'ಸಾಹಿತ್ಯ'ದ ಅರ್ಥ ಸತ್ತಂತೆಯೇ. ಒಟ್ಟಾರೆ ಸಾಹಿತ್ಯವೆಂದರೆ ಸೃಜನಾತ್ಮಕ ಬರವಣಿಗೆ. ಅದರ ಬೆಳವಣಿಗೆಯ ಸ್ವರೂಪವನ್ನು ತಿಳಿಸುವುದೇ ಸಾಹಿತ್ಯಚರಿತ್ರೆ ಎಂಬ ಮಾತು ಸ್ಪಷ್ಟವಾದಂತಾಯಿತು.

ಈ ದೃಷ್ಟಿಯಿಂದ ಕನ್ನಡ ಸಾಹಿತ್ಯಚರಿತ್ರೆಗಳನ್ನು ನೋಡಿದಾಗ ಅವುಗಳಲ್ಲಿ ವಿಷಯವಸ್ತು 'ಸಾಹಿತ್ಯ'ದ ಗಡಿದಾಟಿ ಎಲ್ಲೆಲ್ಲಿಯೋ ಹರಿದಾಡಿದ್ದು ಕಂಡುಬರು ತ್ತದೆ. ಸೃಜನಾತ್ಮಕವಾದ ಸಾಹಿತ್ಯಪ್ರಕಾರಗಳಲ್ಲದೆ ಅನೇಕ ಶಾಸ್ತ್ರಗಳೂ ನಮ್ಮ ಸಾಹಿತ್ಯಚರಿತ್ರೆಯಲ್ಲಿ ಸೇರಿಕೊಂಡಿವೆ. ಬಹುಶಃ ಈ ದೋಷಪರಂಪರೆಗೆ ಬುನಾದಿ ಹಾಕಿದವರು ಕವಿಚರಿತಕಾರರು. ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯ ಸಂಪುಟಗಳಲ್ಲಿ ಕಾವ್ಯ ಮತ್ತು ಶಾಸ್ತ್ರಗಳ ಕರ್ತೃಗಳ ಚರಿತ್ರೆಯನ್ನು ಸಮಭಾವದಿಂದ ಪರಿಭಾವಿಸಿದ್ದಾರೆ. ಸೃಜನಾತ್ಮಕವರ್ಗದಲ್ಲಿ ಸೇರುವಂಥ ಕೃತಿರಚಿಸಿದವರಿಗೂ ಪದ್ಯರೂಪದಲ್ಲಿ ಶಾಸ್ತ್ರಗಳನ್ನು ಬರೆದವರಿಗೂ ಇಲ್ಲಿ ಭಿನ್ನತೆ ಯಿಲ್ಲ. ಕವಿಚರಿತಕಾರರು ಪದ್ಯರೂಪದಲ್ಲಿ ಏನೆಲ್ಲ ಗೀಚಿದವರನ್ನು ಕವಿಗಳೆಂದೇ ಭಾವಿಸಿದ್ದು ವಿಷಾದನೀಯ. ಕಾವ್ಯ ಬರೆದವನು ಮಾತ್ರಕವಿ, ಪದ್ಯಬರೆದವರೆಲ್ಲ ಕವಿಗಳಲ್ಲ ಎಂಬ ಮಾತನ್ನು ಅವರು ಮರೆತಿದ್ದಾರೆ. ಈ ಸಂದರ್ಭದಲ್ಲಿ ಪ್ರಾಚೀನ ಕರ್ನಾಟಕದ ಸಾಹಿತ್ಯಿಕ ಮನೋಭಾವವನ್ನು ಸ್ವಲ್ಪಗಮನಕ್ಕೆ ತಂದುಕೊಳ್ಳ ಬಹುದು. ಗದ್ಯಕ್ಕಿಂತ ಪದ್ಯವೇ ಅಂದಿನ ಪ್ರಧಾನ ಅಭಿವ್ಯಕ್ತಿ ಮಾಧ್ಯಮ ವಾಗಿತ್ತು. ಏನು ಬರೆದರೂ ಪದ್ಯದಲ್ಲಿಯೇ ಬರೆಯುತ್ತಿದ್ದರು. ಗದ್ಯಕ್ಕಿಂತ

೧. ಡಾ. ಡಿ. ಎಲ್. ಎನ್.—ಪೀಠಿಕೆಗಳು ಲೇಖನಗಳು—ಪುಟ ೯೯೨.

ಪದ್ಯದ ಬರವಣಿಗೆ ಅಂದಿನವರಿಗೆ ಸುಲಭ, ಸಹಜ, ಇಷ್ಟ ಆಗಿತ್ತು. ಇದೊಂದೇ ಕಾರಣದಿಂದ ಪದ್ಯರೂಪದಲ್ಲಿ ಬರೆಯಲ್ಪಟ್ಟದ್ದೆಲ್ಲ ಕಾವ್ಯವೆಂದರೆ ಆಭಾಸವಾಗುವದಲ್ಲವೇ? ಕವಿಚರಿತೆಯ ಸಂಪುಟಗಳಲ್ಲಿ ವೈದ್ಯಶಾಸ್ತ್ರ, ಸೂಪಶಾಸ್ತ್ರ, ವ್ಯಾಖ್ಯಾನ, ಟೀಕೆ, ಜ್ಯೋತಿಷ್ಯ, ಗಜಶಾಸ್ತ್ರ, ಕಾಮಶಾಸ್ತ್ರ, ಛಂದಸ್ಸು, ವಸ್ತುಕೋಶ, ನಾಮಾವಳಿ, ಧಾರ್ಮಿಕ ಪತ್ಯ, ವ್ಯಾಕರಣ, ಅಲಂಕಾರ, ನಿಘಂಟು, ಶಾಸನ – ಇವನ್ನೆಲ್ಲ ರಚಿಸಿದವರನ್ನು ಕವಿಗಳೆಂದೇ ತಿಳಿದು ಅವರ ಚರಿತ್ರೆ ನೀಡುವ ಪ್ರಯತ್ನ ಮಾಡಲಾಗಿದೆ. ಸೀಮಿತ ಅರ್ಥದ ಸಾಹಿತ್ಯಕ್ಕೂ ಮೇಲೆ ಉಲ್ಲೇಖಿಸಲಾದ ಶಾಸ್ತ್ರಗಳಿಗೂ ಎಲ್ಲಿಂದೆಲ್ಲಿಯ ಸಂಬಂಧ? ಪ್ರಾಚೀನಕರ್ನಾಟಕದ ಗ್ರಂಥಕರ್ತೃಗಳನ್ನೆಲ್ಲ (ಅವರು ಏನೇನೇ ಬರೆದಿರಲಿ) ಇಲ್ಲಿ ಹೆಸರಿಸಿರುವುದನ್ನು ನೋಡಿದರೆ ಈ ಸಂಪುಟಗಳಿಗೆ "ಕರ್ನಾಟಕ ಕವಿಚರಿತೆ" ಎಂಬ ಹೆಸರಿಗಿಂತ "ಕರ್ನಾಟಕದ ಬರಹಗಾರರ ಚರಿತೆ" ಎಂಬ ಹೆಸರು ಯೋಗ್ಯವಾಗುತ್ತದೆ.

ಕವಿಚರಿತೆಕಾರರ ಪ್ರಭಾವಮಾರ್ಗದಲ್ಲಿ ಹುಟ್ಟಿಕೊಂಡ ಸಾಹಿತ್ಯಚರಿತ್ರೆಗಳಲ್ಲಿ ವಿಷಯವಸ್ತುವನ್ನು ಇಡೀ ಗ್ರಂಥಸಮುದಾಯಕ್ಕೆ ಹಿಗ್ಗಿಸಲಾಯಿತು. ನಮ್ಮ ಸಾಹಿತ್ಯಚರಿತ್ರೆಯಲ್ಲಿ ಮಹಾಕವಿಗಳಿಂದ ಹಿಡಿದು ನಾಲ್ಕುಸಾಲಿನ ಶಾಸನ ಬರೆದವರವರೆಗೆ ಎಲ್ಲರೂ ಪಾಲು ಪಡೆದರು. ಇನ್ನು ಮುಂದಿನ ಸಾಹಿತ್ಯಚರಿತ್ರೆಗಳು ಇದೇ ಕ್ರಮವನ್ನನುಸರಿಸಿ ಸೃಷ್ಟಿಗೊಂಡರೆ ಅವುಗಳನ್ನು ಸಾಹಿತ್ಯಚರಿತ್ರೆಗಳೆಂದು ಹೇಳುವುದಾದರೂ ಹೇಗೆ? ಕನ್ನಡದ ಮಟ್ಟಿಗೆ ಮಾತ್ರ ಸಾಹಿತ್ಯದ ಅರ್ಥವನ್ನೇ ಬದಲಿಸಬೇಕಾದೀತೇನೋ? "ಪ್ರಾಚೀನ ಸಾಹಿತ್ಯವನ್ನು ಗಮನಿಸಿದರೆ ಶಾಸ್ತ್ರ ಸಾಹಿತ್ಯಕೃತಿಗಳ ಸಂಖ್ಯೆ ದೊಡ್ಡದಾಗಿರುವುದಿಲ್ಲ. ಅಲ್ಲದೆ ಸಾಹಿತ್ಯಚರಿತ್ರೆಗೆ ಸಂಬಂಧಿಸಿದ ಬಗೆಬಗೆಯ ಅಂಶಗಳನ್ನು ಒಳಗೊಂಡಿರುವ ಸಾಧ್ಯತೆಯೂ ಇದೆ. ಆಗ ಅವನ್ನು ವರ್ಜಿಸಲು ಬರುವದಿಲ್ಲ. ಸಾಹಿತ್ಯಕೃತಿಗಳು ಹೇರಳವಾಗಿರುವ ಆಧುನಿಕ ಕಾಲಕ್ಕೆ ಬಂದಾಗಲೂ ಭಾಷೆಯಲ್ಲಿನ ಚಟುವಟಿಕೆಗಳು ಅನೇಕ ಇಂಥ ಕೃತಿಗಳ ಮೂಲಕ ಶುದ್ಧಸಾಹಿತ್ಯದ ಮೇಲೆ ಪ್ರಭಾವವನ್ನು ಬೀರುತ್ತವೆ. ತತ್ತ್ವಶಾಸ್ತ್ರ, ಮನಶಾಸ್ತ್ರ, ಅರ್ಥಶ್ಯಾಸ್ತ್ರ, ವಿಜ್ಞಾನ ಮುಂತಾದ ಕ್ಷೇತ್ರಗಳ ಕೃತಿಗಳು ಕೋಲಾಹಲವನ್ನೇ ಉಂಟುಮಾಡಬಹುದು. ಆಗಲೂ ಶಾಸ್ತ್ರಗ್ರಂಥಗಳ ಪರಿಶೀಲನೆಯನ್ನು ಕೈಬಿಡಲಾಗುವದಿಲ್ಲ"[೨] ಎಂದು ಡಾ. ಹಾ. ಮಾ. ನಾಯಕರು ಅಭಿಪ್ರಾಯ ಪಡುವರು.

ಸಾಹಿತ್ಯದ ಮೇಲೆ ಶಾಸ್ತ್ರಗ್ರಂಥಗಳದ್ದು ಅಷ್ಟೇ ಏಕೆ ಮತ್ತೆ ಎಂಥೆಂಥದೋ ಪ್ರಭಾವಗಳಾಗುವದು ಸ್ಪಷ್ಟವಿದೆ. ಆ ಪ್ರಭಾವಗಳ ಹಿಂದಿನ ಶಕ್ತಿಯನ್ನು ಗುರುತಿಸಿ

೨. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯಚರಿತ್ರೆ. ಸಂ–೧, ಪುಟ-೨೦.

ವಿಶ್ಲೇಷಣೆಗೆ ಗುರಿಪಡಿಸಬೇಕಾದುದು ಸಾಹಿತ್ಯಚರಿತ್ರೆಯ ಆದ್ಯ ಕರ್ತವ್ಯಗಳಲ್ಲೊಂದು. ಆದರೆ ಹಾಗೆ ಪ್ರಭಾವ ಬೀರಿದ ಶಾಸ್ತ್ರಕೃತಿಗಳನ್ನೆಲ್ಲ ಸಾಹಿತ್ಯಚರಿತ್ರೆಯಲ್ಲಿ ತಂದು ನಿಲ್ಲಿಸಲಾಗದು. ಈ ಸಂದರ್ಭದಲ್ಲಿ ನಮ್ಮ ಪುರಾಣ ಕಾವ್ಯಗಳ ಕಡೆಗೆ ಗಮನಹರಿಸಬೇಕಾಗುತ್ತದೆ. ಅವು ಅಪ್ಪಟಶಾಸ್ತ್ರಗಳಲ್ಲ. ಮತ-ಶಾಸ್ತ್ರಗಳ ವಿಚಾರಗಳನ್ನು ಒಡಲೊಳಗಿಟ್ಟುಕೊಂಡಿರುವ ಧಾರ್ಮಿಕಕಾವ್ಯಗಳು. ಅವುಗಳಲ್ಲಿ ಕಾವ್ಯಾಂಶ ಮತ್ತು ಮತಾಂಶಗಳು ಸಮನ್ವಯವಾಗಿರುವುದರಿಂದ ಅವುಗಳಿಗೆ ಸಾಹಿತ್ಯಚರಿತ್ರೆಯಲ್ಲಿ ಸ್ಥಾನಕೊಡಲೇಬೇಕು. ಇದೇ ಮಾತು ಆಧುನಿಕ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಮನೋವಿಜ್ಞಾನದ ಪ್ರಭಾವ ಅನೇಕ ಕೃತಿಗಳಲ್ಲಿ ಒಡಮೂಡಿದೆ. ಹಾಗಂತ ಮನೋವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನೆಲ್ಲ ಸಾಹಿತ್ಯಚರಿತ್ರೆಯಲ್ಲಿ ಸೇರಿಸಬೇಕೇ? ಯಾವುದೇ ಶಾಸ್ತ್ರವು ಸಾಹಿತ್ಯದ ವೇಷದಲ್ಲಿ ಪ್ರಕಟವಾಗಿದ್ದರೆ ಅದು ಸಹಜವಾಗಿಯೇ ಸಾಹಿತ್ಯಚರಿತ್ರೆಯಲ್ಲಿ ಸ್ಥಾನ ಪಡೆಯುವದು. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಮನೋ ವೈಜ್ಞಾನಿಕ ಕಥೆ, ಕಾದಂಬರಿಗಳು. ಈ ವರ್ಗದ ಕೃತಿಗಳನ್ನು ವಿಮರ್ಶಿಸಿ ಬರೆಯಬೇಕಾದಾಗ ಮನೋವಿಜ್ಞಾನದ ಉಲ್ಲೇಖ ತಾನಾಗಿಯೇ ಬರುತ್ತವೆ. ಹಾಗೆಂದು ಮನೋವಿಜ್ಞಾನದ ಪಠ್ಯಪುಸ್ತಕಗಳನ್ನೆಲ್ಲ ಸಾಹಿತ್ಯಕೃತಿಗಳೆಂದು ಹೇಳಲಾದೀತೇ? ವೈಜ್ಞಾನಿಕ ಕಥೆ, ಕಾದಂಬರಿಗಳಿಗೆ ಇದೇ ಮಾತು ಅನ್ವಯಿಸುತ್ತದೆ. ಅಂಥ ಕೃತಿಗಳಲ್ಲಿ ಮೂಡಿರುವ ವೈಜ್ಞಾನಿಕ ತತ್ವ, ಅದರ ಪ್ರಭಾವ ಮುಂತಾದವುಗಳನ್ನು ಚರ್ಚಿಸಬಹುದಾಗಿದೆ. ಆದರೆ ವಿಜ್ಞಾನವನ್ನು ಬೋಧಿಸುವ ಗ್ರಂಥಗಳನ್ನೆಲ್ಲ ಅದೇ ಅಳತೆಗೋಲಿನಿಂದ ಅಳೆಯಲಿಕ್ಕಾದೀತೇ? ಹೀಗೆಯೇ ಐತಿಹಾಸಿಕ ಕಥೆ ಕಾದಂಬರಿಗಳು ಕೂಡ. ಇತಿಹಾಸ ಬೇರೆ, ಐತಿಹಾಸಿಕ ಕಾದಂಬರಿ ಬೇರೆ. ಇತಿಹಾಸ ಸಾಹಿತ್ಯರೂಪದಲ್ಲಿ ಹೊರಹೊಮ್ಮಿದಾಗ ಮಾತ್ರ ಕಾದಂಬರಿಯಾಗುತ್ತದೆ. ಇಲ್ಲವಾದಲ್ಲಿ ಬರೀ ಇತಿಹಾಸವಾಗಿಯೇ ಉಳಿಯುವದು. ಆದ್ದರಿಂದ ಇತಿಹಾಸದ ಪುಸ್ತಕಗಳೆಲ್ಲ ಸಾಹಿತ್ಯಕೃತಿಗಳಾಗಲಾರವು.

ನಮ್ಮ ಸಾಹಿತ್ಯಚರಿತ್ರೆಯನ್ನು ಈ ಅಸಂಗತಿಗಳಿಂದ ಮುಕ್ತಗೊಳಿಸಬೇಕಾಗಿದೆ. ಶಾಸ್ತ್ರಕೃತಿಗಳನ್ನು ಸ್ವತಂತ್ರವಾಗಿ ಅಭ್ಯಸಿಸಬೇಕು. ಅವುಗಳದೇ ಸ್ವಂತ ಚರಿತ್ರೆ ಬರೆಯಬೇಕು. ಸಾಹಿತ್ಯಚರಿತ್ರೆಯಲ್ಲಿ ಅವುಗಳಿಗೆ ನೀಡುವ ಮಿತಿ ಮೀರಿದ ಮಹತ್ವ ಅನರ್ಥಕಾರಿ. ಅಲ್ಲದೆ ಈ ವಿಷಯದಲ್ಲಿ ಇನ್ನೊಂದು ದೊಡ್ಡ ಆಭಾಸವಾಗುತ್ತದೆ. ಪ್ರಾಚೀನ ಸಾಹಿತ್ಯಚರಿತ್ರೆ ಬರೆಯುವಾಗ ಎತ್ತಿಕೊಂಡ ವಿಷಯಗಳನ್ನೆಲ್ಲ ಆಧುನಿಕ ಸಾಹಿತ್ಯಚರಿತ್ರೆ ಬರೆಯುವಾಗ ಎತ್ತಿಕೊಳ್ಳಲು ಸಾಧ್ಯವೇ? 'ಅಲ್ಪಸಂಖ್ಯಾ' ರಿಯಾಯಿತಿಯಂಥ ಶಾಸ್ತ್ರಗ್ರಂಥಗಳನ್ನು ಪ್ರಾಚೀನ ಸಾಹಿತ್ಯಚರಿತ್ರೆಯಲ್ಲಿ ಸೇರಿಸಿಕೊಂಡು ಬಹುಸಂಖ್ಯೆಯಲ್ಲಿರುವ ಅವುಗಳನ್ನು ಆಧುನಿಕ ಸಾಹಿತ್ಯಚರಿತ್ರೆಯಲ್ಲಿ ಕೈಬಿಡುವುದೇಕೆ? ಚರ್ವಿತಚರ್ವಣ

ವಾದ ಕಾಮಶಾಸ್ತ್ರವನ್ನು ಬರೆದ ಪ್ರಾಚೀನ ಕವಿಯೊಬ್ಬನಿಗೆ ಸಾಹಿತ್ಯಚರಿತ್ರೆಯಲ್ಲಿ ಜಾಗಾ ಸಿಗುವುದಾದರೆ ಇಂದಿನ ಹಳದಿಬ್ಯಾಗಡಿಯ 'ಕಾಮಕಲಾಪ'ಗಳಿಗೂ ಸ್ಥಾನ ಸಿಗಬಾರದೇಕೆ? ವ್ಯಾಖ್ಯಾನ, ಟೀಕೆ ಬರೆದವರೆಲ್ಲ ಕವಿಗಳಾಗಿ ಸಾಹಿತ್ಯಚರಿತ್ರೆಯಲ್ಲಿ ಹೆಸರಿಸಲ್ಪಡುವಾಗ ಇಂದು ಗೈಡ್ ಬರೆಯುವವರು ಏನು ಅನ್ಯಾಯ ಮಾಡಿದ್ದಾರೆ? ಈ ಇಬ್ಬಗೆಯ ದೃಷ್ಟಿಯೇಕೆ? ಒಂದು ಶಾಸ್ತ್ರದ ವಿಷಯವಸ್ತು ಕಾಲಮಾನವನ್ನನುಸರಿಸದೆ ಒಂದೇ ವಿಧವಾಗಿರಬೇಕು. ಈ ವಿಷಯವಸ್ತುವಿನ ಪರಿಮಿತಿಯನ್ನು ಇಂಥ ಕಾಲಕ್ಕೆ ಇಷ್ಟು, ಮತ್ತೊಂದು ಕಾಲಕ್ಕೆ ಇಂತಿಷ್ಟು ಎಂದು ಭಿನ್ನವಾಗಿ ಕಾಣುವ ಶಾಸ್ತ್ರವಾವುದೂ ಇಲ್ಲ. ಅಂಥ ಒಂದು ಹಾಸ್ಯಾಸ್ಪದ ಸಂಗತಿಯಿರುವುದಾದರೆ ಅದು ನಮ್ಮ ಕನ್ನಡ ಸಾಹಿತ್ಯಚರಿತ್ರೆ. ಇದು ಪ್ರಾಚೀನ ಗ್ರಂಥ ಸಮುದಾಯವನ್ನೆಲ್ಲ ತನ್ನ ಒಡಲೊಳಗಿಟ್ಟುಕೊಂಡುಬಂದಿರುವಂತೆ ಆಧುನಿಕ ಗ್ರಂಥರಾಶಿಯನ್ನೆಲ್ಲ ಸ್ವೀಕರಿಸುವುದೇ? ಆದ್ದರಿಂದ ಕನ್ನಡ ಸಾಹಿತ್ಯದ ವಿಷಯವಸ್ತು ಸೃಜನಾತ್ಮಕ ಶುದ್ಧ ಸಾಹಿತ್ಯಕ್ಕಷ್ಟೇ ಸೀಮಿತವಾಗಿ ತನ್ನ ಪರಿಶುದ್ಧತೆಯನ್ನು, ಗುಣಮೌಲ್ಯವನ್ನು ಕಾಪಾಡಿಕೊಳ್ಳಬೇಕಾಗಿದೆ. ವಿಷಯವಸ್ತುವಿನ ಅತಿವ್ಯಾಪ್ತಿ ದೋಷದ ಗ್ರಹಣದಿಂದ ಮುಕ್ತವಾಗಬೇಕಾಗಿದೆ.

"ಸಾಹಿತ್ಯವೆಂದರೆ ಕೇವಲ ಸೃಜನಾತ್ಮಕ ಕೃತಿಗಳು ಮಾತ್ರವಲ್ಲ. ಕರ್ನಾಟಕದ ಸಾವಿರವರ್ಷಗಳ ಸಮಷ್ಟಿಮನಸ್ಸು ಯಾವಯಾವ ಅಭಿವ್ಯಕ್ತಿ ಪ್ರಕಾರಗಳಲ್ಲಿ ತನ್ನನ್ನು ತಾನು ಪ್ರಕಟಪಡಿಸಿಕೊಂಡಿದೆಯೋ ಆ ಸಮಸ್ತ ವಾಙ್ಮಯದ ಪರಿಶೀಲನೆಯೂ ಈ ಸಮಗ್ರಕನ್ನಡಸಾಹಿತ್ಯಚರಿತ್ರೆಯ ತೆಕ್ಕೆಯೊಳಗೆ ಬರಬೇಕೆಂಬುದು ನಮ್ಮ ಆಶಯವಾಗಿದೆ.[೭]"– ಎಂದಿದ್ದಾರೆ ಡಾ. ಜಿ. ಎಸ್. ಶಿವರುದ್ರಪ್ಪನವರು. ಅವರ ಆಶಯದ ಮೇರೆಗೆ ಹೊರಬರುವ ಸಾಹಿತ್ಯಚರಿತ್ರೆಯಲ್ಲಿ ಇನ್ನುಳಿದ ವಿಷಯಗಳ ಅನವಶ್ಯಕ ದೀರ್ಘವಿವರಣೆಗಳ ಸಂತೆಯಲ್ಲಿ ನಿಜವಾದ ಸಾಹಿತ್ಯಚರಿತ್ರೆ ಗುಂಪಿನಲ್ಲಿ ಗೋವಿಂದ ಆಗಬಹುದಲ್ಲವೆ? ಸಾವಿರವರ್ಷದ ಸಮಸ್ತ ವಾಙ್ಮಯದ ಪರಿಶೀಲನೆ ನಡೆಸುವ ನೆಪಮಾತ್ರದ ಆ ಸಮಗ್ರಕನ್ನಡಸಾಹಿತ್ಯಚರಿತ್ರೆಗೆ "ಸಮಗ್ರಕರ್ನಾಟಕದ ವಾಙ್ಮಯ ಚರಿತ್ರೆ" ಎಂಬ ನಾಮಕರಣ ಸರಿಯಾಗುತ್ತದೆ.

೭. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ–ಮುನ್ನುಡಿ.v

ವಚನಗಳಲ್ಲಿ ಕಾವ್ಯತತ್ವ

● ಜಿ. ಎಸ್. ಶಿವರುದ್ರಪ್ಪ

ಶಿವಶರಣರ ವಚನಗಳನ್ನು ಒಂದು ವಿಶೇಷ ಸಾಹಿತ್ಯಪ್ರಕಾರವೆಂದು ಪರಿಗಣಿಸಿ, 'ಕನ್ನಡ ಸಾಹಿತ್ಯದಲ್ಲಿ ವಚನಗಳಸ್ಥಾನ' 'ಕನ್ನಡ ಸಾಹಿತ್ಯಕ್ಕೆ ವಚನಕಾರರ ಕೊಡುಗೆ'— ಹೀಗೆ ವಿಚಾರ ಮಾಡುವ ರೀತಿ ತೀರಾ ಇತ್ತೀಚಿನದು. ಇತ್ತೀಚಿನದು ಎಂದರೆ ಆಧುನಿಕ ವಿಮರ್ಶೆಗೆ ಸಂಬಂಧಪಟ್ಟದ್ದು. ಆಧುನಿಕ ಕಾಲದವರನ್ನು ಹೊರತುಪಡಿಸಿದರೆ, ಹಿಂದಿನವರು ಯಾರೂ, ಅಂದರೆ ಮುಖ್ಯವಾಗಿ ಕವಿಗಳು ವಚನಕಾರರನ್ನು 'ಕೃತಿಕಾರ'ರೆಂದೋ, 'ಕವಿ'ಗಳೆಂದೋ, ಕನ್ನಡ ಸಾಹಿತ್ಯಪರಂಪರೆಯ ಸಂದರ್ಭದಲ್ಲಿ ವಿನೂತನ ಅಭಿವ್ಯಕ್ತಿಗೆ ಕಾರಣರಾದವರೆಂದೋ ಸ್ಮರಿಸುವುದಿಲ್ಲ; ಅವರನ್ನು ಸ್ಮರಿಸುವುದು, ಅವರು ಮಹಾವ್ಯಕ್ತಿಗಳೆಂದೋ. ಕಾರಣಿಕರೆಂದೋ ಮಾತ್ರ. ವಚನಕಾರರ ವ್ಯಕ್ತಿತ್ವದ ಹಾಗೂ ರಚನೆಯ ಪ್ರಭಾವ ಮುಂದಿನ ಅನೇಕ ಕವಿಗಳ, ಅದರಲ್ಲೂ ವೀರಶೈವ ಕವಿಗಳ ಸಾಹಿತ್ಯಕ ಧೋರಣೆಯ ಮತ್ತು ರಚನೆಯ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಆಗಿದ್ದರೂ, ವಚನಕಾರರಲ್ಲಿ ಕೆಲವರನ್ನು ತಮ್ಮ ಕಾವ್ಯದ ನಾಯಕರನ್ನಾಗಿ ಮಾಡಿಕೊಂಡಂಥ ಕವಿಗಳು ಕೂಡಾ, ವಚನಕಾರರ ವ್ಯಕ್ತಿತ್ವದ ಮಹತ್ತಿಗೆ ಬೆಲೆ ಕೊಟ್ಟಂತೆ ತೋರುತ್ತದೆಯೆ ವಿನಾ, ಆಯಾ ವಚನಕಾರರಿಂದ ಸಾಹಿತ್ಯಕ್ಕೆ ಏನು ಲಾಭವಾಯಿತೆಂಬ 'ಕವಿಕಾವ್ಯಪರ'ವಾದ ಮಾತುಗಳನ್ನು ಹೇಳುವುದೇ ಇಲ್ಲ. ಹೀಗಾಗಿ 'ವಚನ'ಗಳನ್ನು ಸಾಹಿತ್ಯವೆಂದು ಪರಿಗಣಿಸುವ, ಚರ್ಚಿಸುವ, ಬೆಲೆಗಟ್ಟುವ ದೃಷ್ಟಿ ಬೆಳೆದದ್ದು ಆಧುನಿಕ ಕಾಲದಲ್ಲಿಯೇ.

ಕನ್ನಡ ಸಾಹಿತ್ಯಪರಂಪರೆಯ ಮೂಲಧೋರಣೆ ಕೂಡಾ ಈ ಪರಿಸ್ಥಿತಿಗೆ ಕಾರಣವಿರಬಹುದು: ಕಾವ್ಯ ಎನ್ನುವುದು ಮೂಲತಃ ಒಂದು ಸಾಹಿತ್ಯ ನಿರ್ಮಿತಿ ಎಂಬುದಕ್ಕಿಂತ ಅದೊಂದು ಧಾರ್ಮಿಕಕ್ರಿಯೆ (Ritual); ಧರ್ಮ ಪ್ರಸಾರದ, ಆತ್ಮೋದ್ಧಾರದ ಮಾರ್ಗ ಎಂಬಂಥ ಭಾವನೆಗಳೇ ರೂಢಮೂಲವಾಗಿತ್ತೆಂಬುದನ್ನು ಗಮನಿಸಬಹುದು. ಆದರೂ ತಾವು ಬರೆದದ್ದು, ಬರೆಯುತ್ತಿರು

ವುದು 'ಕಾವ್ಯ' ಅಲ್ಲ ಎಂದೇನೂ ಕನ್ನಡ ಕವಿಗಳು ಅಂದುಕೊಳ್ಳಲಿಲ್ಲ. ಆದುದರಿಂದ ಕಾವ್ಯರಚನೆಗೆ ಮುನ್ನ ಪೂರ್ವಕವಿಸ್ಮರಣೆ, ಕುಕವಿನಿಂದೆ, ಸ್ವಕಾವ್ಯದ ಅಗ್ಗಳಿಕೆ ಹಾಗೂ ವಸ್ತುರೀತಿ ಉದ್ದೇಶಗಳನ್ನು ಕುರಿತ ಒಂದು ರೀತಿಯ ಕಾವ್ಯಮೀಮಾಂಸೆಯ ಹಿನ್ನೆಲೆ ಇತ್ಯಾದಿಗಳನ್ನು ಪ್ರಸ್ತಾಪಿಸುವುದರ ಮೂಲಕ, ತಾವು ಒಂದು ಕಾವ್ಯಪರಂಪರೆಯಲ್ಲಿ ಅಥವಾ ಸಾಹಿತ್ಯಕ ಸಂದರ್ಭದಲ್ಲಿ ಬರೆಯುತ್ತಿದ್ದೇವೆ ಎಂಬ ಅರಿವನ್ನು ಪ್ರಕಟಿಸಿದ್ದಾರೆ. ಆದರೆ ವಚನಕಾರರು ಮಾತ್ರ ಇದಕ್ಕೆ ಹೊರತಾಗಿದ್ದಾರೆ. ಸಾಹಿತ್ಯಪರಂಪರೆ, ಸಾಹಿತ್ಯಾಭಿವ್ಯಕ್ತಿ, ಸಾಹಿತ್ಯದಲ್ಲಿ ಕ್ರಾಂತಿ ಇತ್ಯಾದಿಯಾದ ಕಲ್ಪನೆಗಳನ್ನೇ ತಲೆಗೆ ಹಚ್ಚಿಕೊಳ್ಳದೆ, ಅತ್ಯಂತ ತಟಸ್ಥರಾಗಿದ್ದುಕೊಂಡು, ಆದರೆ ತಮ್ಮ ಅನುಭವದ ಬಗೆಗೆ ಅತ್ಯಂತ ತಲ್ಲೀನತೆಯನ್ನು ಉಳಿಸಿಕೊಂಡು, ತಮ್ಮ ಕಾಲದ ಧಾರ್ಮಿಕ ಸಾಮಾಜಿಕ ಆಂದೋಲನದ ಕಾವಿಗೆ ತಮ್ಮನ್ನು ತಾವು ಸಂಪೂರ್ಣವಾಗಿ ಒಪ್ಪಿಸಿಕೊಂಡು ವಚನಗಳನ್ನು ಬರೆದರು. ಆದುದರಿಂದಲೇ ಈ ವಚನವಾಙ್ಮಯ ಕನ್ನಡಸಾಹಿತ್ಯದಲ್ಲಿಯ ಒಂದು ವ್ಯಕ್ತಿವಿಶಿಷ್ಟದ್ವೀಪಸಂಭವದಂತೆ ತೋರುತ್ತದೆ.

ಇನ್ನೊಂದು ಸೋಜಿಗದ ಸಂಗತಿ ಎಂದರೆ, ವಚನಕಾರರು ತಾವು ಯಾವ ಭಾಷೆಯಲ್ಲಿ ಬರೆದರೋ, ಆ ಭಾಷೆಯಲ್ಲಿ ಆಗಲೇ ನಡೆದ ಕೆಲಸವನ್ನು, ಅಂದರೆ ತಮಗೆ ಪೂರ್ವದ ಅಭಿವ್ಯಕ್ತಿಗಳನ್ನು, ಗಮನಿಸಲೇ ಇಲ್ಲವೆ— ಎಂಬುದು. ವಚನಕಾರರಲ್ಲಿ ಬಹುಮಂದಿ ಗಮನಿಸಿರಲಿಕ್ಕಿಲ್ಲ; ಆದರೆ ಕೆಲವರಾದರೂ ಗಮನಿಸಿದ್ದಿರಬಹುದು. ಆ ವೇಳೆಗೆ ನಯಸೇನಾದಿಗಳಿಂದ ಹದವಾದ 'ಗದ್ಯ'ವನ್ನು ಗಮನಿಸಿದ್ದಿರಬಹುದು; ಹಾಗೆ ಗಮನಿಸಿ, ದೇವರದಾಸಿಮಯ್ಯನಂಥ 'ಆದ್ಯ'ರು ಆಗಲೇ ಹಾಕಿಕೊಟ್ಟ ರೂಪದಿಂದ ಸ್ಫೂರ್ತಿಗೊಂಡು ಇನ್ನಷ್ಟು ಪ್ರಯೋಗಗಳನ್ನು ಮಾಡಿರಬಹುದು. ಇದೇನೆ ಇರಲಿ ವಚನಕಾರರು ತಾವೊಂದು ಅಪೂರ್ವಸಾಹಿತ್ಯಪ್ರಕಾರವನ್ನು ರೂಢಿಸುತ್ತಿದ್ದೇವೆ ಎಂಬ ಪ್ರಜ್ಞೆಯನ್ನು ಖಂಡಿತ ಹೊಂದಿರಲಿಲ್ಲ. ಹಾಗೆಂದ ಮಾತ್ರಕ್ಕೆ ಅವರಿಗೆ ಸಾಹಿತ್ಯದ ಬಗ್ಗೆ ಅಥವಾ ಕಾವ್ಯದ ಬಗ್ಗೆ ತಿರಸ್ಕಾರವಿತ್ತು ಎಂದು ಅರ್ಥವಲ್ಲ; ಅವರಿಗೆ ತಿರಸ್ಕಾರವಿದ್ದುದು ವೇದಶಾಸ್ತ್ರಪುರಾಣಾಗಮಗಳ ಬಗೆಗೆ ಮತ್ತು ಇತಿಹಾಸಕಾವ್ಯಗಳ ಬಗೆಗೆ— ಒಟ್ಟಿನಲ್ಲಿ ವೈದಿಕಪರಂಪರೆಯ ಬಗೆಗೆ. ಆದುದರಿಂದ ಅವರು ಎದ್ದು ಕಾಣುವ ರೀತಿಯಲ್ಲಿ ವೇದಶಾಸ್ತ್ರಪುರಾಣಾಗಮಗಳನ್ನು ನಿರಾಕರಿಸುತ್ತಾರೆ. ಹಾಗೆಯೇ ರಾಮಾಯಣ ಮಹಾಭಾರತಗಳನ್ನು, ಏನೇನೋ ಕಾರಣಗಳನ್ನು ಕೊಟ್ಟು ಕೆಲವು ವೇಳೆ ಅಪವ್ಯಾಖ್ಯಾನಗಳನ್ನು ಮಾಡಿ ತಿರಸ್ಕರಿಸುತ್ತಾರೆ. ಇದರಿಂದಾಗಿ, ವೀರಶೈವಕವಿಗಳಾರೂ ರಾಮಾಯಣ, ಮಹಾಭಾರತಗಳನ್ನು ಜೈನ, ವೈಷ್ಣವ

ಕವಿಗಳಂತೆ ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿ ಮಾಡಿಕೊಳ್ಳಲೇ ಇಲ್ಲ. ಹಾಗೆಯೇ ಶಿವಶರಣರು ತಮ್ಮ ವಚನಗಳಲ್ಲಿ ಸ್ಮರಿಸುವ ಪೂರ್ವಪರಂಪರೆ, ಕನ್ನಡದ ಅಥವಾ ಇತಿಹಾಸಕಾವ್ಯದ ಕವಿಗಳಿಗೆ ಸಂಬಂಧಪಟ್ಟುದಲ್ಲ; ಅವರು ಸ್ಮರಿಸುವುದು ಬಾಣ, ಹಲಾಯುಧ, ಉದ್ಭಟ ಮೊಲಾದ ಶಿವಕವಿಗಳನ್ನು; ಸಿಂಧುಬಲ್ಲಾಳ, ಜೀಲಾಳ, ನಂಬಿ, ದಾಸಮಯ್ಯ ಇತ್ಯಾದಿ ಶಿವಶರಣರನ್ನು.

ವಚನಕಾರರಲ್ಲಿ 'ಸಾಹಿತ್ಯ' ಎಂಬ ಮಾತೇನೋ ಬರುತ್ತದೆ. ಆದರೆ ಅದು, ವಾಙ್ಮಯ(Literature)ವೆಂಬ ವಿಶೇಷಾರ್ಥದಲ್ಲಿ, ಆಲಂಕಾರಿಕರು, ಕವಿಗಳು, ಸಹೃದಯರು ತಿಳಿದುಕೊಂಡ ಅರ್ಥದಲ್ಲಿ ಬಳಕೆಯಾಗಿಲ್ಲ. 'ಸಾಹಿತ್ಯ' ಎಂದರೆ ಹೊಂದಾಣಿಕೆ, ಸಂಯೋಗ, ಒಂದು ಮತ್ತೊಂದಕ್ಕೆ ಇರಬೇಕಾದ ಸಂಬಂಧ ಎಂಬ ವಾಚ್ಯಾರ್ಥದಲ್ಲೇ ಅವರಲ್ಲಿ ಬಳಕೆಯಾಗಿದೆ. 'ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ' (ವ. ೭೯೯)* ಎನ್ನುತ್ತಾರೆ ಬಸವಣ್ಣನವರು; 'ಅಂಗದ ಮೇಲೆ ಲಿಂಗಸಾಹಿತ್ಯವಾದರೇನು' (ವ. ೮೭೭) ಎನ್ನುತ್ತಾರೆ ಚೆನ್ನಬಸವಣ್ಣನವರು.[೧] ಎಂದರೆ ಇಲ್ಲೆಲ್ಲಾ 'ಸಾಹಿತ್ಯ' ಎಂದರೆ ಸಂಯೋಗ, ಸಂಘಟನೆ, ಎಂದೇ ಅರ್ಥ. ವಚನಕಾರರು 'ಸಾಹಿತ್ಯ' ಎಂಬ ಮಾತನ್ನು 'ಲಿಟರೇಚರ್' ಎಂಬ ವಿಶಾಲವಾದ ಅರ್ಥದಲ್ಲಿ ಎಲ್ಲಿಯೂ ಬಳಸಿದಂತೆ ನನಗೆ ಕಾಣಲಿಲ್ಲ. ಹಾಗೆಯೆ 'ಕಾವ್ಯ'ದ ಬಗೆಗೆ ಇವರಿಗೆ ಅನಾದರವಿಲ್ಲದಿದ್ದರೂ, ಆದರವೇನೂ ಇದ್ದಂತೆ ಕಾಣದು. ಅನೇಕ ನೀತಿಕಾರರಿಗಿದ್ದಂತೆ, ಮತ್ತು ಅನುಭಾವಿಗಳಿಗಿದ್ದಂತೆ ಕಾವ್ಯ ಕೂಡ ಒಂದು 'ಕಾಮ ಮೌಲ್ಯ' ವೆಂಬ ಭಾವನೆ ವಚನಕಾರರಿಗೂ ಇದ್ದಿರಬಹುದು. ವೇದಶಾಸ್ತ್ರಪುರಾಣಾಗಮಗಳಿಂದ ಹೇಗೋ ಹಾಗೆಯೆ, ಕಾವ್ಯಾದಿಗಳ ಅಭ್ಯಾಸ–ಅಧ್ಯಯನಗಳಿಂದಲೂ ಅಧ್ಯಾತ್ಮ ತಿಳಿಯದೆಂಬುದೇ ಅವರ ನಿಲುವು. 'ವಿದ್ಯೆ ಎಂದರೆ ರಾಮಾಯಣ ಮಹಾಭಾರತವಲ್ಲ' (ವ. ೧೦೩) ಎನ್ನುತ್ತಾನೆ ಸಿದ್ಧರಾಮ ತನ್ನ ಒಂದು ವಚನದಲ್ಲಿ. ಇದು ರಾಮಾಯಣ, ಮಹಾಭಾರತಗಳನ್ನು ಓದುವುದೇ ವಿದ್ಯೆ ಅಥವಾ ವಿದ್ಯಾವಂತನೆನ್ನಿಸಿಕೊಳ್ಳಬೇಕಾದರೆ ಈ ಮಹಾಕಾವ್ಯಗಳ ಅಧ್ಯಯನ ಅಗತ್ಯ— ಎಂಬ ರೂಢಮೂಲವಾದ ತಿಳಿವಳಿಕೆಯನ್ನು ವಿರೋಧಿಸುತ್ತದೆ. ಅಷ್ಟೇ ಅಲ್ಲ

---

* ಈ ಲೇಖನದಲ್ಲಿ ಉದ್ಧರಿಸಿರುವ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯವು ಸಂಪಾದಿಸಿ ಪ್ರಕಟಿಸಿರುವ ವಚನ ಸಂಪುಟಗಳಿಂದ ಆಯ್ದುಕೊಂಡವುಗಳು.

೧ ಚೆನ್ನಬಸವಣ್ಣನವರ ವಚನಗಳು: ಸಂ. ಡಾ. ಆರ್. ಸಿ. ಹಿರೇಮಠ: ಇದೇ ಉಕ್ತಿಗೆ ಇನ್ನಷ್ಟು ವಚನಗಳನ್ನು ನೋಡಿ: ವಚನ ೩೪೩, ೭೯೯. ೨೬೯, ೭೩೧, ೮೭೭.

'ಕವಿತ್ವಸಾಧಕರೆಲ್ಲರೂ ಕಳವಳಿಸಿಹೋದರು
ವಿದ್ಯಾಸಾಧಕರೆಲ್ಲರೂ ಬುದ್ಧಿಗೆಟ್ಟರು'
(ಚೆನ್ನ. ವ. ೫೧೮)

ಕಾವ್ಯರಚನೆಯಿಂದಾಗಲಿ, ಅವುಗಳಿಗೆ ಅಗತ್ಯವಾದ ವಿದ್ಯೆ(?)ಗಳಿಂದಾಗಲಿ, ಏನೂಪ್ರಯೋಜನವಿಲ್ಲ† ನಿಜವಾದ ಅನುಭಾವ ಸಾಧನೆಗೆ ಎಂದು ಈ ಅನುಭಾವಿಗಳು ಭಾವಿಸಿದರು. ಅವರಿಗೆ ಮುಖ್ಯವಾದದ್ದು ಅನುಭಾವ ಮತ್ತು ಅದನ್ನು ತಕ್ಕ ಮಾತುಗಳಲ್ಲಿ ಹಿಡಿದಿಡಬಲ್ಲ ಒಂದು ಅಭಿವ್ಯಕ್ತಿಪ್ರಕಾರ. ಈ ಅಭಿವ್ಯಕ್ತಿಗೆ ಅವರು ಸಾಹಿತ್ಯಸಂಬಂಧಿಯಾದ, ಹಾಗೂ ಪರಿಚಿತವಾದ 'ಗದ್ಯ' 'ಪದ್ಯ' ಇತ್ಯಾದಿ ಪದಗಳನ್ನು ಬಿಟ್ಟು 'ವಚನ' ಎಂಬ ವಿಶಿಷ್ಟವಾದ ಹೆಸರನ್ನು ಕೊಟ್ಟುಕೊಂಡರು. ಈ ವಚನರಚನೆಯು ಕ್ರಿಯೆಯೇ ಅವರಿಗೆ ತಮ್ಮೊಳಗನ್ನು ಶೋಧಿಸಿಕೊಳ್ಳುವ ಒಂದು ವಿಧಿ(ritual)ಯೂ ಆಗಿರಬಹುದು. ಆದುದರಿಂದಲೇ ವಚನರಚನೆಯು ಶ್ರೇಷ್ಠತೆಯನ್ನು ಅವರು ಎತ್ತಿಹಿಡಿದಂತೆ ತೋರುತ್ತದೆ. ಒಂದೆಡೆ ಸಿದ್ಧರಾಮನು ವಿವಿಧ ವಚನಕಾರರ ವಚನರಚನೆಗಳನ್ನು ಪ್ರಶಂಸಿಸುವ ಸಂದರ್ಭದಲ್ಲಿ

'ಇಂತಪ್ಪ ವಚನರಚನೆಯ ಬಿಟ್ಟು, ಹುಡಿಮಣ್ಣ ಹೊಯ್ಯದೆ ಮಾಣನೆ,
ಕುತ್ಸಿತ ಕಾವ್ಯಾಲಂಕಾರವ ನೋಡುವವರ ನೋಡಿ
ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನ' (ಸಿದ್ಧರಾ. ವ. ೧೦೭)

ಎನ್ನುತ್ತಾನೆ. ಇಂತಹ ಆತ್ಮಶೋಧನೆ ಹಾಗೂ ಸಾಧನೆಗೆ ಮಾಧ್ಯಮವಾಗುವ ವಚನರಚನೆಯನ್ನು ಬಿಟ್ಟು, ಕಣ್ಣೆದುರಿಗೆ ಆಗಲೇ ದೊಡ್ಡದೊಡ್ಡವರಿಂದ ರಚಿತವಾಗಿ ಮಾದರಿಯಾಗಿರುವ ವಚನಗಳನ್ನು ನೋಡದೆ, ತಮ್ಮತಮ್ಮ ರಚನೆಗಳಲ್ಲಿ 'ಕುತ್ಸಿತ ಕಾವ್ಯಲಂಕಾರವ ನೋಡುವವರ ನೋಡಿ' ಮಹಾದೇವನಾದ ಕಪಿಲಸಿದ್ಧಮಲ್ಲಿಕಾರ್ಜುನನು ಹುಡಿಮಣ್ಣ ಹೊಯ್ಯದೆ ಬಿಡುತ್ತಾನೆಯೇ— ಎಂಬುದು ಸಿದ್ಧರಾಮನ ಪ್ರಶ್ನೆ. ಸಿದ್ಧರಾಮನ ಈ ಉಕ್ತಿ ಒಂದೆರಡು ಮಹತ್ವದ ಸಂಗತಿಗಳನ್ನು ಹೇಳುತ್ತದೆ: ಮೊದಲನೆಯದಾಗಿ ಅಂದಿನ ಸಾಮಾಜಿಕ ಆಂದೋಲನದ ಹಿನ್ನೆಲೆಯಲ್ಲಿ, ಹೊಸಧಾರ್ಮಿಕ ಎಚ್ಚರದಲ್ಲಿ ತಮ್ಮ ಒಳಗು-ಹೊರಗನ್ನು ತೆರೆದಿಡಲು ತಾವೆಲ್ಲರೂ ವಚನಗಳನ್ನು ಬರೆಯುವುದು ಅಗತ್ಯ, ಅದೊಂದು ಶ್ರೇಷ್ಠವಾದ ಕರ್ತವ್ಯ ಕೂಡಾ— ಎಂಬ ಉದ್ದೇಶವನ್ನು ಸಾಮೂಹಿಕವಾಗಿ ವಚನಕಾರರು ಇರಿಸಿಕೊಂಡಿದ್ದರು ಎನ್ನುವುದು ಸ್ಪಷ್ಟವಾಗಿದೆ. ಆದುದ

† ವಸ್ತುಕ ವರ್ಣಕ ತ್ರಿಸ್ಥಾನದ ಮೇಲೆ ನುಡಿವ ನುಡಿಗಳು
ಇತ್ತಿತ್ತಲಲ್ಲದೆ, ಅತ್ತಲಾರುಬಲ್ಲರು?
(ಅಲ್ಲಮನ ವಚನಗಳು; ಸಂ. ಡಾ. ಎಲ್. ಬಸವರಾಜು ವ. ೩೧೪ ಪು. ೧೫೨)

ರಿಂದಲೇ ಅಷ್ಟೊಂದು ಸಂಖ್ಯೆಯ ವಚನಕಾರರು ಅಂದು ಕಾಣಿಸಿಕೊಳ್ಳುತ್ತಾರೆ. ಎರಡನೆಯದಾಗಿ ವಚನಗಳನ್ನು ಬರೆಯುವುದಕ್ಕೆ ಮುಖ್ಯವಾದದ್ದು ಸ್ವಾನುಭವ ಮತ್ತು ಆಗಲೇ ಹಿರಿಯರಿಂದ ರಚಿತವಾದ ಮಾದರಿಗಳು. 'ಇಂತಪ್ಪ ವಚನ ರಚನೆ'ಯನ್ನು ಬಿಟ್ಟು, ಕ್ಷುಲ್ಲಕವಾದ ಕಾವ್ಯಾಲಂಕಾರಗಳ ಕಡೆ ಗಮನಕೊಡಬಾರದು, ಎಂದರೆ 'ಸಾಹಿತ್ಯ'ದ ಆಕರ್ಷಣೆಯಿಂದ ಅಥವಾ 'ಸಾಹಿತ್ಯ'ವಾಗುವ 'ಅಪಾಯ'ದಿಂದ ಪಾರಾಗಬೇಕು ಅನ್ನುವುದು. ಈ ಮಾತಂತೂ ವಾಸ್ತವವಾಗಿ, ಸಾಹಿತ್ಯ ಅಥವಾ ಕಾವ್ಯವಿರೋಧಿಯಾದ ಒಂದು ನಿಲುವನ್ನೇ ಪ್ರತಿಪಾದಿಸುತ್ತದೆ! ವಚನ ರಚನೆ ಅನ್ನುವುದು ಕೇವಲ ಒಂದು ಬರೆಯುವ ಹವ್ಯಾಸವಲ್ಲ, ರಂಜಿಸುವ ತಂತ್ರವಲ್ಲ; ಅದಿರುವುದು ಅನುಭವದ ಶೋಧನೆಗೆ, ಅನುಭಾವದ ಸಾಧನೆಗೆ ಎಂಬ ಎಚ್ಚರಿಕೆಯನ್ನು ಅಂದಿನ ಹಿರಿಯರು ಎತ್ತಿಹೇಳಿದಂತೆ ತೋರುತ್ತದೆ. ಆದುದರಿಂದಲೇ ಈ ಬಗ್ಗೆ ತಮಗೆ ತಾವೇ ಎಚ್ಚರಿಕೆಯನ್ನು ಕೊಟ್ಟು ಕೊಂಡಿದ್ದಾರೆ—

> ವಚನಾನುಭವ ವಾಗ್ರಚನೆಯಲ್ಲ ಮನವೆ
> ವಚನಾನುಭವ ವಾಗ್ರಚನೆಯಲ್ಲ.
>
> (ಸಿದ್ಧರಾ. ವ. ೯೩೭)

*　　*　　*　　*　　*

ವಚನಗಳಲ್ಲಿ ಕಂಡುಬರುವ ಅನುಭವ ಕೇವಲ ವಾಗ್ರಚನೆಗೆ ನಿಲುಕುವಂಥದಲ್ಲ; ಅದರಾಚೆಯದು. ಉಳಿದ ಅನುಭವಗಳು ವಾಗ್ರಚನೆಗೆ ಸಿಕ್ಕಾವು. ಆದರೆ ಈ ಅನುಭವ 'ಅಂತರಂಗದ ರತ್ನ'; ಅತ್ಯಂತ ಅಮೂಲ್ಯವಾದದ್ದು, ಕೇವಲ ಆಂತರಿಕವಾದದ್ದು. ಆದುದರಿಂದ ಇಂಥ ಅನುಭವವನ್ನು ಹೇಳುವ ವಚನಗಳನ್ನು 'ವಾಗ್‌ರಚನೆ'ಯ ಪಂಕ್ತಿಗೆ ನಿಲ್ಲುವ ಸಾಹಿತ್ಯದೊಂದಿಗೆ ಸಮೀಕರಿಸಲು ಒಪ್ಪದೆ, ಅದಕ್ಕೂ ಮೀರಿದ ನೆಲೆಯಲ್ಲಿ ಪರಿಗಣಿಸತೊಡಗಿದರು. ಈ ಕಾರಣದಿಂದಲೇ ವಚನರಚನೆಗಳು ಆಗಲೇ ರೂಢಿಯಾದ, ಸಿದ್ಧಸಂಪ್ರದಾಯದ 'ವಾಗ್‌ರಚನೆ'ಗಳ ಮಾಧ್ಯಮದಲ್ಲಿ ಅಭಿವ್ಯಕ್ತವಾಗತಕ್ಕವುಗಳಲ್ಲ, ಅವುಗಳೇನಿದ್ದರೂ ಸಿದ್ಧಸಂಪ್ರದಾಯದ 'ವಾಗ್‌ರಚನೆ'ಗಳ ನಿರಾಕರಣದಿಂದ, ಒಳಗಿನ ಅನುಭವವು ಕೊಡುವಂಥ ಆಕಾರದಿಂದ ಮೂಡುತ್ತವೆ ಎಂಬುದನ್ನು

> ತಾಳ ಮಾನ ಸರಿಸವನರಿಯೆ
> ಓಜೆ ಬಜಾವಣೆಯ ಲೆಕ್ಕವನರಿಯೆ
> ಅಮೃತಗಣ ದೇವಗಣವನರಿಯೆ
> ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ
> ಆನು ಒಲಿದಂತೆ ಹಾಡುವೆ (ಬ.ವ. ೪೯೩)

ಎಂಬ ಈ ವಚನ ಸ್ಪಷ್ಟಪಡಿಸುತ್ತವೆ. ಈ ವಚನದಲ್ಲಿ ಬಸವಣ್ಣನವರು, ತಮಗೆ ಆಗಲೇ ಸಿದ್ಧವಾದ ವಾಗ್ರಚನೆಯ ವಿಧಾನಗಳು ತಿಳಿಯವು. ಈ ಕಾರಣದಿಂದ 'ಆನು ಒಲಿದಂತೆ ಹಾಡುವೆ' ಎನ್ನುತ್ತಾರೆ. ವಾಸ್ತವವಾಗಿ ಅದುವರೆಗಿನ ಕನ್ನಡಸಾಹಿತ್ಯದ ಹಿನ್ನೆಲೆಯಿಂದ ನೋಡಿದರೆ, ಇದು ಒಂದು ಹೊಸಪ್ರತಿಭಟನೆಯ ಮಾತಾಗಿ ತೋರುತ್ತದೆ. ಯಾಕೆಂದರೆ ಅದುವರೆಗೂ ಇದ್ದ ವಸ್ತುನಿಷ್ಠಕಾವ್ಯ(objective poetry)ಪರಂಪರೆಯಲ್ಲಿ ಬರೆಯುವ ವ್ಯಕ್ತಿ, ತನ್ನ ವ್ಯಕ್ತಿತ್ವವನ್ನು ರಾಜಾಸ್ಥಾನ ಇತ್ಯಾದಿಗಳಿಗೆ, ಕಾವ್ಯವಸ್ತುವಿನ ಆಯ್ಕೆಯನ್ನು ತನ್ನದಲ್ಲದ, ಆಗಲೇ ಸಿದ್ಧ ಪ್ರಸಿದ್ಧವಾದ ವಸ್ತುವಿಗೆ ಒಪ್ಪಿಸಿ ಕೊಂಡಂಥ ಪರಿಸರದಲ್ಲಿ, ಮೊಟ್ಟಮೊದಲಿಗೆ ಬಸವಣ್ಣನವರು ಸಿದ್ಧಪರಂಪರೆಯ ವಾಗ್‌ರಚನೆಗಳನ್ನು ನಿರಾಕರಿಸಿ 'ಆನು ಒಲಿದಂತೆ ಹಾಡುವೆ' ಎಂಬ ವ್ಯಕ್ತಿನಿಷ್ಠ, ಸ್ವತಂತ್ರಮನೋಧರ್ಮದ ನೆಲೆಗೆ ಅಭಿವ್ಯಕ್ತಿಯನ್ನು ತಂದದ್ದರ ಘೋಷಣೆ ಯಾಗಿ ಇದು ಅತ್ಯಂತ ಗಮನಾರ್ಹವಾಗಿದೆ. 'ಆನು ಒಲಿದಂತೆ ಹಾಡುವೆ' ಎಂಬ ಈ ಮಾತು ಮುಂದೆ ಹರಿಹರನಲ್ಲಿ ಒಂದು ಮೂಲಭೂತ ಸಾಹಿತ್ಯಕ ಧೋರಣೆಯಾಗಿ ಕನ್ನಡಕಾವ್ಯಸಂಪ್ರದಾಯದಲ್ಲೇ ಹೊಸಹಾದಿಯನ್ನು ತೆರೆಯಿತೆಂಬುದನ್ನು ನೆನೆದಾಗ, ಈ ಘೋಷಣೆ ಎಷ್ಟು ಮಹತ್ವದ್ದೆಂಬುದನ್ನು ಹೇಳಬೇಕಾಗಿಲ್ಲ.

ವಚನಕಾರರು ತಾವು ಬರೆದದ್ದು ಸಾಹಿತ್ಯ ಹೌದೊ ಅಲ್ಲವೊ ಎಂಬುದರ ಬಗ್ಗೆ ತಟಸ್ಥರಾಗಿದ್ದರೂ ಅವುಗಳನ್ನು ಇಂದು ನಾವು ಸಾಹಿತ್ಯವೆಂದೇ ಪರಿ ಗಣಿಸುವುದರಿಂದ, 'ಆನು ಒಲಿದಂತೆ ಹಾಡುವೆ' ಎಂದ ಬಸವಣ್ಣನವರ ಮಾತನ್ನು, ನಾವು ವಚನಕಾರರ 'ಕಾವ್ಯತತ್ವ' ಎಂದೇ ಭಾವಿಸುತ್ತೇವೆ. ವಚನ ಕಾರರು ತಾವೇನನ್ನು ಬರೆಯುತ್ತಿದ್ದೇವೆ ಅಂದುಕೊಂಡದ್ದು, ಮತ್ತು ಬರೆದದ್ದು ನಿಜವಾಗಿರುವಾಗ, ಈ ಬರೆವಣಿಗೆಯ ಹಿನ್ನೆಲೆಗೆ ಇರಬಹುದಾದ, ಆದರೆ ಅವರು ಬಹುಶಃ ಗಮನಿಸದಿದ್ದ ಕೆಲವು ಸಾಹಿತ್ಯಕಧೋರಣೆಗಳನ್ನು, ಅವರ 'ಕಾವ್ಯ ತತ್ವ' ಎಂದು ನೋಡುವುದು ತಪ್ಪೇನಲ್ಲ. ಹೀಗೆ ನೋಡುವಾಗ ನಾವು ಭಾವಿಸುವ ಅರ್ಥದಲ್ಲೇ, ಅವರ ಕೆಲವು ಮಾತುಗಳನ್ನು ಅವರು ಭಾವಿಸಿದ್ದರೆಂದು ನಾವೇನೂ ಸಾಧಿಸಲು ಹೋಗುವುದಿಲ್ಲ. ಈ ಪ್ರಯತ್ನದಲ್ಲಿ ವಚನಕಾರರ 'ಕಾವ್ಯ ತತ್ವ'ದ ಸಮರ್ಥನೆಗೆ ನಾವು ಅವರ ವಚನಗಳಿಂದ ಆಂಶಿಕವಾಗಿಯೋ ಇಡಿ ಯಾಗಿಯೋ ಮಾತುಗಳನ್ನು ಉದಾಹರಿಸುವಲ್ಲಿ ಅಥವಾ ಅರ್ಥ ಹಚ್ಚುವಲ್ಲಿ, ಆಯಾ ವಚನಗಳ ಸಂದರ್ಭದಲ್ಲಿ ಅವುಗಳಿಗಿರಬಹುದಾದ ಆಧ್ಯಾತ್ಮಿಕವೋ, ಇನ್ನಾವುದೋ ಮಹತ್ವವನ್ನು ಗಣನೆಗೆ ತೆಗೆದುಕೊಂಡಿಲ್ಲ. ಹಾಗೆ ಗಣನೆಗೆ ತೆಗೆದುಕೊಳ್ಳುವುದು ಪ್ರಸ್ತುತ ವಿಷಯ ಪ್ರತಿಪಾದನೆಗೆ ಹೊರತಾದುದು.

ಯಾವುದೇ ಸಾಹಿತಿ, ಒಂದು ಸಾಹಿತ್ಯಪರಂಪರೆಯಲ್ಲಿ ನಿಂತು ಬರೆಯುವ ವ್ಯಕ್ತಿಯಾಗಿರುತ್ತಾನೆ. ಅವನು ಕೃತಿರಚನೆಗೆ ತೊಡಗುವ ವೇಳೆಗೆ, ಅವನಿಗೆ ಹಿಂದೆ ಒಂದು ಸಾಹಿತ್ಯಪರಂಪರೆ ಇರುತ್ತದೆ; ಹಾಗೆಯೆ ಅವನ ಸುತ್ತ ಸಮಕಾಲೀನವಾದ ಸಾಹಿತ್ಯರಚನೆಯೂ ಇರುತ್ತದೆ. ಹೀಗೆ ವರ್ತಮಾನದ ಸಮಕಾಲೀನ ಸಾಹಿತ್ಯಪರಿಸರದಲ್ಲಿ ನಿಂತು, ತನಗೆ ಹಿನ್ನೆಲೆಯಾದ ಒಂದು ಪರಂಪರೆಯಲ್ಲಿ ತನ್ನ ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳಲು ಬಯಸುವ ಸಾಹಿತಿ, ಈ ಎರಡರ ಅರಿವನ್ನು ಹೊಂದಿರಬೇಕಾಗುತ್ತದೆ. ವಚನಕಾರರ ಒಂದು ವಚನ ಈ ಅಂಶವನ್ನು

‘ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ
ನಿಂದ ಹೆಜ್ಜೆಯನರಿಯಬಾರದು’

(ಅವ. ವ. ೨೩೬ ಪು. ೧೩೦)*

ಎಂದು ಹೇಳುತ್ತದೆ. ‘ಹಿಂದಣ ಹೆಜ್ಜೆ’ ಹಾಗೂ ‘ನಿಂದಹೆಜ್ಜೆ’ಗಳು, ಪರಂಪರೆ ಹಾಗೂ ಸಮಕಾಲೀನತೆಯನ್ನು ಸಂಕೇತಿಸುತ್ತವೆ. ತನ್ನ ಹಿಂದೆ, ನಡೆದವರ ಹೆಜ್ಜೆ ಗುರುತುಗಳ ಒಂದು ಪರಂಪರೆಯೇ ಇದೆ; ತನ್ನ ಎದುರು ‘ನಿಂದ ಹೆಜ್ಜೆ’ಯ ಗುರುತುಗಳಿವೆ. ಸೃಜನಶೀಲಸಾಹಿತಿ ಈ ಹೆಜ್ಜೆ ಗುರುತುಗಳ ನಡುವೆ ನಿಂತಿರುತ್ತಾನೆ. ಅವನು ಸಮಕಾಲೀನಸಾಹಿತ್ಯದ ಹೆಜ್ಜೆಗಳನ್ನರಿಯಬೇಕಾದರೆ, ತನಗಿಂತ ಹಿಂದಿನ ಹೆಜ್ಜೆ ಗುರುತುಗಳನ್ನು ಕಂಡವನಾಗಿರಬೇಕು. ಯಾಕೆಂದರೆ ಸಮಕಾಲೀನತೆ ಎಂಬುದು, ಪ್ರಾಚೀನತೆಯ ಬಗೆಗೆ ತೋರಿದ ಅರಿವು ಹಾಗೂ ಪ್ರತಿಕ್ರಿಯೆಯಾಗಿರುತ್ತವೆ. ಕವಿಗೆ ಪರಂಪರೆಯ ಅರಿವು ಬೇಕು; ಆದರೆ ಆತ ಅದರ ಹಿಡಿತದಿಂದ ಪಾರಾಗಿರಬೇಕು; ವರ್ತಮಾನದ ಸಮಕಾಲೀನ ನಿರ್ಮಿತಿಯ ಬಗೆಗೆ ಎಚ್ಚರಬೇಕು, ಆದರೆ ತಾನು ಮಾತ್ರ ಅದರ ಪ್ರಭಾವಗಳಿಂದ ಪಾರಾಗಿರಬೇಕು. ಒಟ್ಟಿನಲ್ಲಿ ಕವಿಗಾಗಲಿ, ವಿಮರ್ಶಕನಿಗಾಗಲಿ ಇದೊಂದು ಸೂತ್ರ: ವರ್ತಮಾನವನ್ನು ಅರಿಯಬೇಕಾದರೆ, ಅರಗಿಸಿಕೊಳ್ಳಬೇಕಾದರೆ, ಅಳೆದುನೋಡಬೇಕಾದರೆ ಅದರ ಪರಂಪರೆಯ ಅರಿವು ಅತ್ಯಂತ ಅಗತ್ಯ.

ಸಾಹಿತಿಗಿರಬೇಕಾದ ಸಾಂಸ್ಕೃತಿಕ ಜವಾಬ್ದಾರಿಯನ್ನು ಹೇಳಿದ ಮೇಲೆ, ಕಾವ್ಯಕ್ರಿಯೆಯ ಸ್ವರೂಪವನ್ನು ಬಸವಣ್ಣನವರ ಒಂದು ವಚನ ಬಹು ಸೊಗಸಾಗಿ ನಿರೂಪಿಸುತ್ತದೆ. ಆ ವಚನ ಹೀಗಿದೆ:

---

* ಅಲ್ಲಮನ ವಚನಗಳು: ಸಂ. ಡಾ. ಎಲ್. ಬಸವರಾಜು.

> 'ಬಯಲ ರೂಪಮಾಡಬಲ್ಲಾತನೆ ಶರಣನು
> ಆ ರೂಪಬಯಲ ಮಾಡಬಲ್ಲಾತನೇ ಲಿಂಗಾನುಭಾವಿ'
> (ಬ.ವ. ೯೨೨)

ಇಲ್ಲಿರುವುದು ಶರಣನಿಗೂ, ಲಿಂಗಾನುಭಾವಿಗೂ ಇರುವ ವ್ಯತ್ಯಾಸದ ವಿವರಣೆ. ನಮಗೆ ಪ್ರಕೃತವಾದದ್ದು, ಕಾವ್ಯನಿರ್ಮಿತಿಯ ಸ್ವರೂಪದ ಜತೆಗೆ, ಕವಿಗೂ ಮತ್ತು ಓದುಗನಿಗೂ ಇರುವ ವ್ಯತ್ಯಾಸ. ಈ ವಚನದ ಮಾತುಗಳನ್ನೇ ಕೊಂಚ ಪಲ್ಲಟಿಸಿಕೊಳ್ಳುವುದಾದರೆ 'ಬಯಲ ರೂಪಮಾಡಬಲ್ಲಾತನೇ ಕವಿ; ಆ ರೂಪ ಬಯಲ ಮಾಡಬಲ್ಲಾತನೇ ಕಾವ್ಯಾನುಭವಿ' ಎನ್ನಬಹುದಲ್ಲವೆ? ಕವಿಯ ಕಾವ್ಯ ರಚನೆಗೆ ಮೂಲವಾದ ಅನುಭವ ದ್ರವ್ಯವು ವಾಸ್ತವವಾಗಿ ನಿರಾಕಾರವಾದದ್ದು, ಅಸ್ಪಷ್ಟವಾದದ್ದು, ಅಖಚಿತವಾದದ್ದು— ಒಂದು ದೃಷ್ಟಿಯಲ್ಲಿ ಅದು 'ಬಯಲು.' ಇಂಥ 'ಬಯಲು' ಅನುಭವಕ್ಕೆ, ಸ್ಪಷ್ಟವಾದ, ಖಚಿತವಾದ ಒಂದು ರೂಪವನ್ನು ಕೊಡುವವನೆ— 'ರೂಪಮಾಡಬಲ್ಲಾತ'-ಕವಿ. ಕವಿಯ ಕೆಲಸವೇ ಇದು, ಆಕಾರವಿಲ್ಲದಕ್ಕೆ ಅಥವಾ ಅಕಾರವಲ್ಲದಕ್ಕೆ, ಒಂದು ಆಕಾರ(ರೂಪ)ವನ್ನು ಕೊಡುವುದು. ಆದರೆ ಈ 'ರೂಪ' ಇದೆಯಲ್ಲ, ಇದೇ ಸಹೃದಯನ ಪಾಲಿಗೆ 'ಕೃತಿ.' ಈ 'ರೂಪ'ದ ಮೂಲಕವೇ ಓದುಗನು ಮತ್ತೆ ಕವಿಯ ಮೂಲಾನುಭವಕ್ಕೆ, ಅಥವಾ ತತ್ಸಮೀಪದ ಅನುಭವಕ್ಕೆ ಹೋಗುವ ಕ್ರಿಯೆಯೇ ಕಾವ್ಯಾಸ್ವಾದವೆನ್ನಿಸಿಕೊಳ್ಳುತ್ತದೆ. ಯಾವ ಅನುಭವಕ್ಕೆ ಕವಿ 'ರೂಪ' ಕೊಟ್ಟನೋ, ಆ 'ರೂಪ'ದ ಮೂಲಕವೇ ಓದುಗನಿಗೆ ಕವಿಯ ಅನುಭವದೆಡೆಗೆ ಪ್ರವೇಶ. ಆದ್ದರಿಂದ 'ಆ ರೂಪ ಬಯಲಮಾಡಬಲ್ಲ' ಕ್ರಿಯೆಯೇ ಕಾವ್ಯಾಸ್ವಾದನಕ್ರಿಯೆ. ಒಂದು ಅವತರಣ, ಇನ್ನೊಂದು ಉತ್ತರಣ. ಅನುಭವದಿಂದ ಆಕಾರಕ್ಕೆ, ಆಕಾರದಿಂದ ಅನುಭವಕ್ಕೆ ಈ ಕಾವ್ಯಸಂವಾದ. ಯಾವುದನ್ನು ಆಕಾರ ಅಥವಾ ರೂಪ ಎನ್ನುತ್ತೇವೆಯೋ ಅದು ಸಾಹಿತ್ಯದಲ್ಲಿ ಶಬ್ದ; ಪದರೂಪದಲ್ಲಿರುವ ಶಬ್ದ; ನಾದರೂಪದಲ್ಲಿ ಕಿವಿಯ ಮೇಲೆ ಬೀಳುವ ಶಬ್ದ. ಈ 'ಶಬ್ದರೂಪ'ದ ಮೂಲಕ ನಾವು ತಲುಪುವ ಅನುಭವ ಇದರಾಚೆಯದು; ಅದೊಂದು ರೀತಿಯಲ್ಲಿ ನಿಶ್ಶಬ್ದ ಅಥವಾ ಮನೋಗೋಚರವಾಗುವ ಅನುಭವ. ಈ ಸಂಗತಿಯನ್ನು

> 'ಶಬ್ದದೊಳಗಣ ನಿಶ್ಶಬ್ದದಂತೆ
> ಗುಹೇಶ್ವರಾ ನಿಮ್ಮ ಶರಣ ಸಂಬಂಧ' (ಅಲ್ಲ.ವ. ೧. ಪು.೩೫)

ಎಂಬ ಅಲ್ಲಮನ ವಚನ ಅತ್ಯಂತ ಸೊಗಸಾಗಿ ಹೇಳುತ್ತದೆ. ದೈವೀ ಅನುಭವವನ್ನು ಹೇಳುವ ಅನುಭಾವಿಯ ಈ ಮಾತು ಕಾವ್ಯಾನುಭವದ ಸ್ವರೂಪವನ್ನು ತುಂಬ ಸೊಗಸಾಗಿ ಹೇಳುತ್ತದೆ. ಕಾವ್ಯಾನುಭವದ ನಿಲುವೂ ಇದೇ, ಶಬ್ದದೊಳಗಣ ನಿಶ್ಶಬ್ದದಂತೆ. ಆಕಾರದ ಮೂಲಕ ನಿರಾಕಾರಕ್ಕೆ ಶಬ್ದದ ಮೂಲಕ

ನಿಶ್ಶಬ್ದಕ್ಕೆ ಹೋಗುವ ಆಸ್ವಾದಕ್ರಿಯೆ ಇದು. ಅನುಕ್ತವಾದರೂ, ಅರಿವಿಗೆ ಬರುವ ಅರ್ಥರಮ್ಯತೆಯ ಅನುರಣನವನ್ನೇ ಆಲಂಕಾರಿಕರು 'ಧ್ವನಿ' ಎಂದು ವರ್ಣಿಸುತ್ತಾರೆ. ಈ ಅನುಭವವನ್ನು 'ಚಿತ್ತವಿಶ್ರಾಂತಿ' ಎಂದೂ 'ವಿಗಲಿತ ವೇದ್ಯಾಂತರ' ಎಂದೂ ಕರೆದಿದ್ದಾರೆ.

ಹೀಗೆ ಅನುಭವ ಅಭಿವ್ಯಕ್ತವಾಗಬೇಕಾದರೆ, ಆಸ್ವಾದ್ಯವಾಗಬೇಕಾದರೆ, ಅಭಿವ್ಯಕ್ತಿಯ ಮಾಧ್ಯಮವಾದ 'ವಾಗ್‌ರಚನೆ' ಬಹುಮುಖ್ಯವಾದದ್ದು. ತಕ್ಕ ಪದಗಳಲ್ಲಿ 'ನಿರಾಕಾರ'ವಾದ ಅನುಭವ 'ಆಕಾರ' ಪಡೆಯದೆ ಹೋದರೆ, ಅಲ್ಲಿ 'ರೂಪ ಬಯಲ'ಮಾಡುವ ಅಥವಾ 'ಶಬ್ದ' 'ನಿಶ್ಶಬ್ದ'ವಾಗುವ ಕ್ರಿಯೆಯೇ ಸಾಧ್ಯವಾಗುವುದಿಲ್ಲ. ಆದುದರಿಂದ ಸಾಹಿತ್ಯದಲ್ಲಿ ಬಹುಮುಖ್ಯವಾದದ್ದು 'ಬಯಲ ರೂಪಮಾಡಬಲ್ಲ' ಶೈಲಿ ಅಥವಾ ಅನುಭವ ಆಕಾರವನ್ನು ಪಡೆಯುವ ಕ್ರಿಯೆ. ಬಸವಣ್ಣನವರು 'ಶಬ್ದ'ದ ಬದಲು 'ನುಡಿ'ಎಂಬ ಮಾತನ್ನು ಬಳಸುತ್ತಾರೆ, ಅಭಿವ್ಯಕ್ತಿ ಎಂಬ ಅರ್ಥದಲ್ಲಿ 'ನುಡಿ' ಅಥವಾ ಅಭಿವ್ಯಕ್ತಿ (expression) ಹೇಗಿರಬೇಕೆಂಬುದನ್ನು ಕುರಿತು.

ನುಡಿದರೆ ಮುತ್ತಿನಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದಡೆ
ಕೂಡಲಸಂಗಮದೇವನೆಂತೊಲಿವನಯ್ಯಾ (ಬ.ವ. ೮೦೨)

ಎನ್ನುತ್ತಾರೆ. ವಾಸ್ತವವಾಗಿ ಅತ್ಯುತ್ತಮ ಶೈಲಿಯ ಲಕ್ಷಣ ಇದು: ಮೊದಲ ಪಂಕ್ತಿ, ನುಡಿದರೆ ಮುತ್ತಿನಹಾರದಂತಿರಬೇಕು ಎನ್ನುವುದು— ಶಬ್ದಗಳ ಜೋಡಣೆಯನ್ನು ಕುರಿತ ಮಾತು. ಅಭಿವ್ಯಕ್ತಿ ಎಂದರೆ, ಅನುಭವವು 'ನುಡಿ'ಗಳಲ್ಲಿ, ಶಬ್ದರೂಪದ ಪದಗಳಲ್ಲಿ ವಿನ್ಯಾಸಗೊಳ್ಳುವ ಕ್ರಮ. ಈ ಶಬ್ದಗಳ ಜೋಡಣೆಗೆ ಬಸವಣ್ಣನವರು ಕೊಡುವ ಉಪಮೆ 'ಮುತ್ತಿನಹಾರ'ದ್ದು. ಮುತ್ತಿನ ಹಾರದಲ್ಲಿ ಮುತ್ತುಗಳು ಒಂದೇಸಮವಾಗಿ, ನಿಬಿಡವಾಗಿ, ಏರುಪೇರಿಲ್ಲದೆ, ಮನೋಹರವಾಗಿ ಹೇಗೆ ಕೋದುಕೊಳ್ಳುತ್ತನೆಯೋ ಹಾಗೆ, ಪದಗಳೆಲ್ಲ ಭಾವದ ಸೂತ್ರದಲ್ಲಿ ಹೊಂದಿಕೊಂಡಿರಬೇಕು. ಕೋಲ್‌ರಿಜ್ ಹೇಳುವ 'ಅತ್ಯುತ್ತಮ ಪದಗಳು ಅತ್ಯುತ್ತಮ ರೀತಿಯಲ್ಲಿ' ('best words in the best order') ಎಂಬ ಮಾತನ್ನು ಇಲ್ಲಿ ನೆನೆಯಬಹುದು. ಅಭಿವ್ಯಕ್ತಿಯಲ್ಲಿನ ಶಬ್ದಸಂಯೋಜನೆ ಹಾರದೊಳಗಿನ ಮುತ್ತುಗಳಂತೆ ಅನುಕ್ರಮವಾಗಿ ಮನೋಹರವಾಗಿ ಇರಬೇಕು,

ಎನ್ನುವುದು ಮೊದಲ ಲಕ್ಷಣ. ಈ ವಚನದ ಎರಡನೆಯ ಪಂಕ್ತಿ ಕೊಡುವ ಚಿತ್ರವೇ ಬೇರೆ, ಅದೇ ಅಭಿಪ್ರಾಯದ ವ್ಯಾಖ್ಯಾನಕ್ಕೆ. 'ನುಡಿದರೆ, ಮಾಣಿಕ್ಯದ ದೀಪ್ತಿಯಂತಿರಬೇಕು.' ಮೊದಲ ಪಂಕ್ತಿ ಶಬ್ದಗಳ ಜೋಡಣೆಯ ಸೊಗಸನ್ನು ಹೇಳಿದರೆ, ಎರಡನೆಯ ಈ ಪಂಕ್ತಿ ಆ ಶಬ್ದಸಂಘಟನೆಯ ಮೂಲಕ ಅಭಿವ್ಯಕ್ತವಾಗುವ ಅರ್ಥವಂತಿಕೆಯನ್ನು ಹೇಳುತ್ತದೆ. ಮಾಣಿಕ್ಯಕ್ಕೆ ಒಂದು ಕಾಂತಿ ಅಥವಾ ದೀಪ್ತಿ ಇರಬೇಕು. ಮಾತುಗಳಿಂದ ಝಗ್ಗನೆ ಸ್ಫುರಿಸುವ 'ದೀಪ್ತಿ'ಯೇ ಅದರ ಅರ್ಥವಂತಿಕೆಗೆ ಸಾಕ್ಷಿ. ಪದಗಳ ಮೂಲಕ ಪ್ರಕಟವಾಗುವ ಅರ್ಥದ ಬೆಳಕು ಇದು. ಶಬ್ದಗಳ ಮೂಲಕ ದೀಪ್ತವಾಗುವ ರಮಣೀಯಾರ್ಥವೆ ಕಾವ್ಯದ ಸಾರ ಎನ್ನುತ್ತಾರೆ ಆಲಂಕಾರಿಕರು; ಅಷ್ಟೇ ಅಲ್ಲ ಶಬ್ದಗುಣಗಳನ್ನು ಹೇಳುವಾಗ 'ದೀಪ್ತಿ' ಎಂಬ ಮಾತನ್ನೇ ಬಳಸುತ್ತಾರೆ. ಸ್ವಾರಸ್ಯವೆಂದರೆ ಕಾವ್ಯದಿಂದ ಹೊರಡುವ ಅರ್ಥವನ್ನು 'Delight' ಎಂದು ಕರೆದಿದ್ದಾರೆ ಪಾಶ್ಚಾತ್ಯ ವಿಮರ್ಶಕರು.[೨] ಅಭಿವ್ಯಕ್ತಿಯಲ್ಲಿನ ಶಬ್ದಜೋಡಣೆ ಮುತ್ತಿನಹಾರದಂತೆ ಕೇವಲ ರಮಣೀಯವಾಗಿದ್ದರೆ ಸಾಲದು, ಅದು ಮಾಣಿಕ್ಯದ ದೀಪ್ತಿಯಂತೆ ಒಳಗಿನ ಅರ್ಥದ ಬೆಳಕನ್ನು ತುಳುಕಿಸುವಂತಿರಬೇಕು. ಇನ್ನು ಮೂರನೆಯ ಪಂಕ್ತಿ 'ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು' ಅನ್ನುವುದು ಮಾತಿಗಿರಬೇಕಾದ ಒಂದು ಮೊನಚನ್ನು, ಸ್ಪಷ್ಟತೆ (clarity) ಯನ್ನು ಸೂಚಿಸುತ್ತದೆ. ಅಭಿವ್ಯಕ್ತಿಗೆ ಒಂದು ಮೊನಚು ಹಾಗೂ ಅರ್ಥಸ್ಪಷ್ಟತೆಯಿಲ್ಲದಿದ್ದರೆ, ಅದರಿಂದ ಅನುಭವವೇ ಸಾಧ್ಯವಾಗುವುದಿಲ್ಲ. ಇನ್ನು ನಾಲ್ಕು ಮತ್ತು ಐದನೆಯ ಪಂಕ್ತಿಗಳು ವಚನಕಾರರ ವಾಗ್ರಚನೆಯ ಪರಮೋದ್ದೇಶವನ್ನು ಒತ್ತಿ ಹೇಳುತ್ತವೆ. 'ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು'-ಎಂಬ ಮಾತನ್ನು, 'ನುಡಿದರೆ ಸಹೃದಯ ಮೆಚ್ಚಿ ಅಹುದಹುದೆನಬೇಕು' ಎಂದು ತಿದ್ದಿಕೊಂಡರೆ ಕಾವ್ಯ ಮೀಮಾಂಸೆಯ ದೃಷ್ಟಿಯಿಂದ ಸರಿಹೋಗುತ್ತದೆ. ಕಾವ್ಯದ ಅಭಿವ್ಯಕ್ತಿ ಹೀಗೆ ಪರಿಪೂರ್ಣವಾಗಿದ್ದರೆ ಸಹೃದಯರು ಮೆಚ್ಚ ತಲೆದೂಗುವಂತಿರುತ್ತದೆ; ಮತ್ತು ಅದೇ ಅತ್ಯುತ್ತಮವಾದ ಶೈಲಿಯ ಲಕ್ಷಣ. ಆದರೆ ವಚನಕಾರರು ತಮ್ಮ ಉಕ್ತಿಗೆ 'ಲಿಂಗ ಮೆಚ್ಚಿ ಅಹುದಹುದೆನಬೇಕು'-ಎಂಬುದನ್ನು ಗುರಿಯಾಗಿರಿಸಿಕೊಂಡಿದ್ದಾರೆ. ಮಾತು ಹೇಗಿರಬೇಕು ಎಂದರೆ, ಸಾಕ್ಷಾತ್ ದೇವರೇ ಮೆಚ್ಚಿ ಹೌದೆನ್ನುವಂತಿರಬೇಕಂತೆ. ಅಷ್ಟೇ ಅಲ್ಲ ಯಾವ ಅಭಿಪ್ರಾಯ ಆಲೋಚನೆ-ಅನಿಸಿಕೆಗಳು ಹೀಗೆ ಮಾತಿನ ನೆಲೆಯಲ್ಲಿ ಮೂರ್ತಗೊಳ್ಳುತ್ತವೋ ಅವು ದೈನಂದಿನ

---

೨ "delight is the chief, if not the only end of poetry..." (Dryden) : I. A. Richards : Principles of Literary Criticism P. 68.

ವ್ಯವಹಾರದಲ್ಲಿ, ನಡವಳಿಕೆಗಳಲ್ಲಿ ಕಾಣಿಸಿಕೊಳ್ಳದಿದ್ದರೆ ಏನು ತಾನೇ ಪ್ರಯೋಜನ? ಅಂಥ ನಡವಳಿಕೆಯನ್ನು ದೇವರು ಹೇಗೆ ತಾನೆ ಮೆಚ್ಚುತ್ತಾನೆ? ಎಂಬ ಪ್ರಶ್ನೆಯ ಮೂಲಕ, ಬದುಕು–ಬರೆಹಗಳಿಗಿರಬೇಕಾದ ಸಂಬಂಧವನ್ನು ಸವಾಲಿನ ಧಾಟಿಯಲ್ಲಿ ನಮ್ಮೆದುರು ಮಂಡಿಸುತ್ತಾರೆ.

ಆದರೆ ಈ ಸವಾಲನ್ನೆದುರಿಸುವವರು ಎಷ್ಟುಮಂದಿ? ನುಡಿಗೂ, ಬದುಕಿನಲ್ಲಿ ಅದನ್ನು ಆಚರಿಸಿ ತೋರುವುದಕ್ಕೂ ಸಂಬಂಧವಿಲ್ಲದಿದ್ದಮೇಲೆ ಅಂಥ ನುಡಿಗಳಿಗೆ, ಬಾಯಿಮಾತಿನದೆ ಆಗಲಿ, ಬರೆಹದ್ದೆ ಆಗಲಿ, ಏನು ಬೆಲೆ ಎಂಬ ಪ್ರಶ್ನೆ ಎಲ್ಲಕಾಲದಲ್ಲೂ ಇದ್ದದ್ದೇ. ಆದರೆ ಬರೆವಣಿಗೆಯ ನೆಲೆಯಲ್ಲಿ ಭಾವಿಸುವ, ಬದುಕುವ ಸೃಜನಶೀಲವ್ಯಕ್ತಿತ್ವಕ್ಕೂ, ಮತ್ತು ದೈನಂದಿನ ಸರಳಸಾಧಾರಣನೆಲೆಯಲ್ಲಿ ತಾಕಲಾಡುವ ದುರ್ಬಲಮನುಷ್ಯನಿಗೂ ವ್ಯತ್ಯಾಸವಿದೆ. ಹಾಗೆ ಮಾತಿಗೂ ನಡತೆಗೂ ವ್ಯತ್ಯಾಸವಿಲ್ಲದಂತೆ ಬದುಕುವ 'ಕೂಡಲಸಂಗನಶರಣ'ರನ್ನು ಕುರಿತ ಈ ವಚನವೇ ವಿವಿಧಸ್ತರದ ವ್ಯಕ್ತಿತ್ವಗಳನ್ನು ವ್ಯಾಖ್ಯಾನಿಸುತ್ತದೆ:

ಕೆಱೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೊರಜೆ ಚಿಪ್ಪುಗಳ ಕಾಣಬಹುದು.
ವಾರಿಧಿ ಮೈದೆಗೆದಡೆ ರತ್ನಂಗಳ ಕಾಣಬಹುದು.
ನಮ್ಮ ಕೂಡಲಸಂಗನಶರಣರು ಮನದೆಱೆದು ಮಾತನಾಡಿದಡೆ
ಲಿಂಗವ ಕಾಣಬಹುದು. (ಬ. ವ. ವ. ೮೩೧)

"ಬಸವಣ್ಣನವರ ಈ ವಚನ ಕವಿ-ಕಾವ್ಯದ ಪರವಾಗಿ ಅಮೋಘವಾದ ಅರ್ಥವನ್ನು ಧ್ವನಿಸುತ್ತದೆ. ಕಾವ್ಯರಾಶಿಯನ್ನೆಲ್ಲ ನಾವು ಹೀಗೆ ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದೆಂದು ತೋರುತ್ತದೆ: ದೈನಂದಿನ ಸಾಧಾರಣ ವಾಸ್ತವ ವಿಷಯಗಳಷ್ಟರಲ್ಲೇ ರಮಿಸಿ ವಿರಮಿಸುವ, ಅಷ್ಟರಿಂದಲೇ ತೃಪ್ತಿ ಪಡೆಯುವ ಕವಿಗಣ ಎಲ್ಲ ಕಾಲದಲ್ಲೂ ಉಂಟು. ಅಂಥವರ ಸಾಹಿತ್ಯದ ಸ್ವರೂಪವನ್ನು ಮೊದಲ ರೂಪಕ ಸ್ಪಷ್ಟಪಡಿಸುತ್ತದೆ. ಅಂತೆಯೇ ಅಂಥ ಸಾಹಿತಿಗಳ ವ್ಯಕ್ತಿತ್ವವನ್ನು 'ಕೆರೆ' 'ಹಳ್ಳ' 'ಬಾವಿ' ಎನ್ನುವ ಪ್ರತಿಮೆಗಳು ಸೂಚಿಸುತ್ತವೆ. ಮತ್ತೆ ಕೆಲವರುಂಟು, 'ವಾರಿಧಿ' ಸದೃಶರಾದ ಮಹಾಕವಿಗಳು. ಅವರ ಕಾವ್ಯಗಳಲ್ಲಿ ಎಲ್ಲ ಕಾಲಕ್ಕೂ ಬೆಲೆಯುಳ್ಳ ಚಿರಂತನ ಭಾವರತ್ನಗಳಿವೆ. ಎರಡನೆಯ ರೂಪಕ ಅಂಥ ಮಹಾಕವಿಗಳ ವ್ಯಕ್ತಿತ್ವವನ್ನು ಅವರ ಕಾವ್ಯದ ಮಹತ್ವವನ್ನು ಸೂಚಿಸುತ್ತದೆ. ಮೂರನೆಯದಂತೂ ಇವೆರಡನ್ನು ಮೀರಿದ ಶರಣಸಾಹಿತ್ಯದ, ಅನುಭಾವಿಗಳ ಅಮೃತವಾಣಿಯ ಮಹಿಮೆಯನ್ನು ವಿವರಿಸುತ್ತದೆ."[೩] ಇಂಥ ಶರಣರ ಮಾತಿನಲ್ಲಿ ದೈವೀಪ್ರಕಾಶನವೇ ಹೊರಹೊಮ್ಮುತ್ತದೆಯಂತೆ. ಅಷ್ಟೇ ಅಲ್ಲ ಅಲ್ಲಿ "ಮಾತೆಂಬುದು ಜ್ಯೋತಿರ್ಲಿಂಗ."[೪]

೩ ಜಿ. ಎಸ್. ಶಿವರುದ್ರಪ್ಪ: ಪರಿಶೀಲನ. ಪು. ೨೫ (೧೯೬೭. ಮೊದಲಮುದ್ರಣ).
೪ ಅಲ್ಲಮನ ವಚನಗಳು: ಸಂ. ಡಾ. ಎಲ್. ಬಸವರಾಜು: ವ. ೪೭೯. ಪು. ೧೯೧.

ನಿಟ್ಟೂರಿನ ಅಶೋಕ ಶಿಲಾಶಾಸನಗಳು*

● ಎಸ್. ಶೆಟ್ಟರ್, ಎಸ್. ರಾಜಶೇಖರ

ತುಂಗಭದ್ರಾತೀರಪ್ರದೇಶದಲ್ಲಿರುವ ನಿಟ್ಟೂರು, ಬಳ್ಳಾರಿಜಿಲ್ಲೆಯ ಶಿರಗುಪ್ಪತಾಲೂಕಿನ ಒಂದು ಹಳ್ಳಿ. ಇದು ತೆಕ್ಕಲಕೋಟೆಯಿಂದ ಸು. ೬ ಕಿ. ಮೀ. ವಾಯುವ್ಯ ದಿಕ್ಕಿನಲ್ಲಿದೆ. ಈ ಗ್ರಾಮದಿಂದ ಸು. ೨ ಫರ್ಲಾಂಗ್ ದೂರದಲ್ಲಿ 'ಶುಕ್ರದಪ್ಪ' ಎಂಬ ಕಗ್ಗಲ್ಲಿನ ಚಿಕ್ಕಬೆಟ್ಟವಿದೆ. ಗುಡ್ಡದ ನೆರೆಯ ದೇವನಹಳ್ಳದ ಪಡದ ಮೇಲಿರುವ 'ಶುಕ್ರದಪ್ಪ' ಎಂಬ ಹೆಸರಿನ ದೇವರಿಂದಾಗಿ ದೊಡ್ಡ ಗುಂಡುಕಲ್ಲು ರೂಪದ ಆ ಗುಡ್ಡಕ್ಕೆ ಈ ಹೆಸರು ಬಂದಿದೆ. ಈ 'ಶುಕ್ರದಪ್ಪ' ದೇವರನ್ನು ಗ್ರಾಮದ ಜನ ನಿತ್ಯವೂ ಆರಾಧಿಸುವರಲ್ಲದೇ ಸುತ್ತಮುತ್ತಲಿನ ಪ್ರದೇಶದವರು ಇವನಿಗೆ ಪೂಜೆ ಸಲ್ಲಿಸಿದಮೇಲೆಯೇ ಪ್ರತಿವರ್ಷ ಬಿತ್ತನೆಯನ್ನು ಪ್ರಾರಂಭಿಸುತ್ತಾರೆ.

ಈ ಚಿಕ್ಕುಡ್ಡಪ್ಪ ('ಶುಕ್ರದಪ್ಪ') ಬೆಟ್ಟದ ಪಶ್ಚಿಮದ ಅಂಚಿನಲ್ಲಿ ಹಲವು ಬಂಡೆಗಳಿವೆ. ಇವುಗಳಲ್ಲಿ ಒಂದು, ಕುರುಬರ ಕಪ್ಪಲಿಗಾವೆಪ್ಪನ ಹೊಲದಲ್ಲಿವೆ. ಇನ್ನೊಂದು ಕುರುಬರ ನಂದೆಳ್ಳಿ ಸಣ್ಣವೀರಪ್ಪನ ಹೊಲದಲ್ಲಿದೆ. ಪರಸ್ಪರ ೫೦ ಅಡಿ ಅಂತರದಲ್ಲಿರುವ ಈ ಉಭಯ ಬಂಡೆಗಳ ಮೇಲೆ ಮೌರ್ಯ ಸಾಮ್ರಾಟ ಅಶೋಕನ ಶಾಸನಗಳನ್ನು ಕೆತ್ತಲಾಗಿದೆ.

ಸುಮಾರು ಒಂದು ವರ್ಷದ ಹಿಂದೆ ತಿಳಿದುಬಂದ "ನಿಟ್ಟೂರಿನ ಬಂಡೆಗಲ್ಲಿನ ಮೇಲೆ ಅಕ್ಷರಗಳಿವೆ" ಎಂಬ ಮಾಹಿತಿಯಿಂದ ಮತ್ತು ಈ ವರ್ಷದ ಆಗಸ್ಟ ಮೊದಲವಾರದಲ್ಲಿ ಬಳ್ಳಾರಿಯ ಸೀನಿಯರ್ ಜಿಯಾಲಾಜಿಸ್ಟ ಆಫೀಸಿನ ಜ್ಯೂನಿಯರ್ ಇಂಜಿನಿಯರ್ 'ಚೀನಿ-ಇಂಗ್ಲೀಷ ಲಿಪಿ'ಯ ಶಾಸನದ ಬಗ್ಗೆ ಬರೆದ ಪತ್ರದಿಂದ ಆಸಕ್ತಿವಹಿಸಿ (ಏಕೆಂದರೆ ಇಂಥ ಪತ್ರಗಳು ನಮಗೆ ಆಗಿಂದಾಗ್ಗೆ ಬರುತ್ತಿರುತ್ತವೆ) ಆಗಸ್ಟ ೧೯ರಂದು ನಿಟ್ಟೂರಿಗೆ ಹೊರಟು ದಿ. ೨೧ರಿಂದ ೨೫ರವರೆಗೂ ಸಂಶೋಧಿಸಿ, ಈ ಶಾಸನಗಳನ್ನು ಬೆಳಕಿಗೆ ತರಲಾಯಿತು. ದಿ. ೨೧ ರಿಂದ ೨೨ ರ ವರೆಗೆ ಈ ಶಾಸನಬಂಡೆಗಳನ್ನು ಸ್ವಚ್ಛಗೊಳಿಸಿ ಫೋಟೋ ತೆಗೆದುಕೊಳ್ಳಲಾಯಿತು. ದಿ. ೨೩ ರಂದು ಪಡಿಯಚ್ಚು ತೆಗೆದುಕೊಳ್ಳುವ ಪ್ರಯತ್ನ ಮಾಡಿ ವಿಫಲಗೊಂಡೆವು. ಗಾಳಿ ಹಾಗೂ ಮಳೆಯಿಂದ ಸಂರಕ್ಷಿಸ

ಕೊಳ್ಳಲು ಬಿದಿರು ಮಂಟಪಗಳನ್ನು ಹಾಕಿ, ೨೪ ರ ಬೆಳಗಿನಿಂದ ೨೫ ರ ಸಂಜೆಯ ವರೆಗೂ ಈ ಎರಡೂ ಶಾಸನಗಳ ಪ್ರತಿಗಳನ್ನು ಮಾಡಿಕೊಳ್ಳಲಾಯಿತು. ದಿ. ೨೪ ರಂದು ಈ ಶಾಸನಗಳ ಮಹತ್ವವನ್ನು ಪ್ರಚಾರಕ್ಕೆ ತಂದುದಲ್ಲದೇ, ಬಳ್ಳಾರಿ, ತೆಕ್ಕಲಕೋಟೆ ಹಾಗೂ ನಿಟ್ಟೂರಿನ ಹಲವು ಪ್ರತಿಷ್ಠಿತರನ್ನು ಬರಮಾಡಿಕೊಂಡು ಇವುಗಳ ಬಗ್ಗೆ ವಿವರವನ್ನು ಕೊಡಲಾಯಿತು. ಈ ಶಾಸನಗಳು ನಮ್ಮಿಂದ ಬೆಳಕಿಗೆ ಬಂದ ಸುದ್ದಿಯನ್ನು ಬಳ್ಳಾರಿಯ ಡೆಪ್ಯೂಟಿ ಕಮಿಶನರ್ ಅವರು ದಿನಾಂಕ ೨೪ ರಂದು ನಿಟ್ಟೂರಿಗೆ ಕರೆತಂದ ಪತ್ರಿಕಾ ವರದಿಗಾರರಿಗೆ ಬಿಡುಗಡೆ ಮಾಡಿದರು.

ಈ ಎರಡು ಶಾಸನಗಳೂ ಅಶೋಕನ ಲಘುಶಿಲಾಶಾಸನ ವರ್ಗಕ್ಕೆ ಸೇರುತ್ತವೆ. ಈ ವರೆಗೆ ಇಂಥ ೧೫ ಲಘು ಶಿಲಾಶಾಸನಗಳು (Minor Rock Edicts) ಸಹಸ್ರಾಮ್, ಅಹರೌರ, ರೂಪನಾಥ, ರಾಜುಲ ಮಂದಗಿರಿ, ಬಹಪುರ್-ನವದೆಹಲಿ, ಎರ್ರಗುಡಿ, ಗುಜರ್ರಾ, ಬೈರಾಟ, ಭೂಪಾಳ ಬಳಿಯ ಒಂದು ಸ್ಥಳ ಮತ್ತು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಜಟಿಂಗರಾಮೇಶ್ವರ, ಸಿದ್ದಾಪುರ, ಬ್ರಹ್ಮಗಿರಿ, ರಾಯಚೂರ ಜಿಲ್ಲೆಯ ಪಾಲ್ಕಿಗುಂಡು, ಗವಿಮಠ(ಕೊಪ್ಪಳ) ಹಾಗೂ ಮಸ್ಕಿಗಳಲ್ಲಿ ದೊರೆತಿವೆ. ಈಗ ದೊರೆತ ನಿಟ್ಟೂರಿನ ಎರಡು ಶಾಸನಗಳಿಂದಾಗಿ ಅಶೋಕನ ಲಘುಶಾಸನಗಳ ಒಟ್ಟು ಸಂಖ್ಯೆ ಭಾರತದಲ್ಲಿ ಹದಿನೈದರಿಂದ ಹದಿನೇಳಕ್ಕೆ, ಕರ್ನಾಟಕದಲ್ಲಿ ಆರರಿಂದ ಎಂಟಕ್ಕೆ ಏರಿದ್ದು ಅಶೋಕನ ಒಟ್ಟು ಶಿಲಾಶಾಸನಗಳಲ್ಲಿ ಸುಮಾರು ಅರ್ಧದಷ್ಟು ಶಾಸನಗಳನ್ನು ಪಡೆದ ಭಾಗ್ಯ ಇಂದು ಕರ್ನಾಟಕದ್ದಾಗಿದೆ.

ಚಿತ್ರದುರ್ಗ ಮತ್ತು ರಾಯಚೂರ ಜಿಲ್ಲೆಗಳಲ್ಲಿ ಅಶೋಕನ ಲಘುಶಿಲಾಶಾಸನಗಳು ದೊರಕಿದ್ದರೂ ಬಳ್ಳಾರಿ ಜಿಲ್ಲೆಯಲ್ಲಿ ಇವು ಲಭ್ಯವಾಗಿರಲಿಲ್ಲ. ಇದರಿಂದಾಗಿ ಬಳ್ಳಾರಿ ಜಿಲ್ಲೆಯಲ್ಲಿ ನವಶಿಲಾಯುಗದ ಕಾಲದಿಂದ ಶಾತವಾಹನ ಕಾಲದ ವರೆಗಿನ ಇತಿಹಾಸದ ಬಗ್ಗೆ ನಮಗೆ ವಿವರಗಳು ದೊರಕಿರಲಿಲ್ಲ. ನಿಟ್ಟೂರಿನ ಶಾಸನಗಳಿಂದಾಗಿ ಅಶೋಕನ ಸಾಮ್ರಾಜ್ಯದ ಮತ್ತೊಂದು ಗಡಿ ಭಾಗವನ್ನು ಗುರುತಿಸಲು ಸಾಧ್ಯವಾಗಿರುವುದಲ್ಲದೇ ಬಳ್ಳಾರಿ ಜಿಲ್ಲೆಯ ಲಿಖಿತ ಇತಿಹಾಸವನ್ನು ಕ್ರಿ. ಪೂ. ೩ನೆಯ ಶತಮಾನಕ್ಕೆ ಕೊಂಡೊಯ್ಯಲು ಸಾಧ್ಯವಾಗಿದೆ. ಇಲ್ಲಿಯ ವರೆಗೂ ಕರ್ನಾಟಕವಲ್ಲಿ ಅಶೋಕನ ಶಾಸನಗಳು ಕಗ್ಗಲ್ಲಿನ ಬೆಟ್ಟದ ಸಾಲಿನಲ್ಲಿಯೇ ದೊರೆತಿರುವುದರಿಂದ ಇದೇ ಸಾಲಿನಲ್ಲಿ ಮುಂದುವರಿದರೆ ಇನ್ನೂ ಅವನ ಶಾಸನಗಳು ದೊರೆಯಬಹುದೆಂಬ ಆಸೆಯನ್ನು ಮೂಡಿಸುತ್ತವೆ.

ಶಾಸನ : ನಿಟ್ಟೂರ – ೧

ಕುರುಬರ ಕಪ್ಪಲಿ ಗಾದೆಪ್ಪನ ಹೊಲದಲ್ಲಿರುವ ನಿಟ್ಟೂರ-೧ ಶಾಸನವನ್ನು ಟೋಪಿಯಾಕಾರದಲ್ಲಿರುವ ಬಂಡೆಗಲ್ಲಿನ ಉತ್ತರ ಮುಖದ ಮೇಲೆ

ಬರೆಯಲಾಗಿದೆ. ಬಂಡೆಯ ಸುತ್ತಳತೆ ೩೬', ಎತ್ತರ ೧೧ ½'. ಇದರ ಮೇಲೆ ಬರೆದ ಶಾಸನಪಾಠದ ಉದ್ದ ೧೯' ಅಗಲ ೪', ಅಕ್ಷರದ ಎತ್ತರ ಐದು ಇಂಚು. ಬಂಡೆಯ ಪೂರ್ವ ಭಾಗದಲ್ಲಿಯೂ ಒಂದೆರಡು ಅಕ್ಷರಗಳು ಕಂಡುಬರುವುದರಿಂದ ಈ ಶಾಸನದ ಆರಂಭ ಭಾಗವನ್ನು ಗುರುತಿಸುವುದು ತೊಂದರೆದಾಯಕವಾಗಿದೆ.

ಏಳು ಸಾಲುಗಳಲ್ಲಿರುವ ಈ ಶಾಸನದ ಹಲವು ಭಾಗಗಳು ಪ್ರಕೃತಿಯ ವಿಕೋಪದಿಂದಾಗಿ ನಶಿಸಿಹೋಗಿವೆ. ಬಹುಮಟ್ಟಿಗೆ ಬ್ರಹ್ಮಗಿರಿ ಲಘುಶಿಲಾಶಾಸನದ ಪಾಠವನ್ನು ಹೋಲುವ ಇದು 'ಯಥಾ ರಾಜಾ ಅಸೋಕೋ ಆಹಾ ತಥಾತಿ' ಎಂದು ಮುಕ್ತಾಯಗೊಳ್ಳುತ್ತಿದ್ದು, ಇಲ್ಲಿಯ 'ರಾಜಾ ಅಸೋಕ' ಎಂಬುದು ತುಂಬ ಗಮನಾರ್ಹವಾಗಿದೆ. ಉಪಲಬ್ಧವಿರುವ ಮೊದಲನೆಯ ಸಾಲು "ದೇವಾನಾಂ ಪಿಯೋ ಹೇವಂ ಆಹ" ಎಂದು ಪ್ರಾರಂಭವಾಗುವುದು. ೨೫೬ ದಿನಗಳನ್ನು ಧರ್ಮಪ್ರಸಾರದ ಯಾತ್ರೆಯಲ್ಲಿಯೇ ಕಳೆದ ಅಶೋಕ ಸಾಮ್ರಾಟನು, ತನ್ನ ಗಡಿನಾಡಿನ ಉನ್ನತ ಮತ್ತು ನಿಮ್ನವರ್ಗದ ಜನಾಂಗವೂ ಧರ್ಮಾಸಕ್ತರಾಗಬೇಕೆನ್ನುವ ಮೂಲೋಪದೇಶವನ್ನು ಈ ಶಾಸನದ ಮೂಲಕ ಸಾರಿರುವನು.

'ದೇವಾನಾಂ ಪಿಯ'ನು ವಿಶಿಷ್ಟ ಉತ್ಸುಕತೆಯಿಂದ, ಕಳೆದ ಒಂದೂವರೆ ವರ್ಷದ ಕಾಲಾವಧಿಯಲ್ಲಿ ಧರ್ಮೋಪದೇಶದಲ್ಲಿ ತಲ್ಲೀನನಾಗಿದ್ದನೆಂಬುದನ್ನೂ ಇದು ತಿಳಿಸುತ್ತದೆ.

ಶಾಸನ : ನಿಟ್ಟೂರ – ೨

ಕುರುಬರ ನಂದೆಳ್ಳಿ ಸಣ್ಣವೀರಪ್ಪನ ಹೊಲದ ಬಂಡೆಗಲ್ಲಿನ ಮೇಲೆ ಉತ್ತರ ಮುಖಿಯಾಗಿರುವ ನಿಟ್ಟೂರ-೨ ಶಾಸನದಲ್ಲಿ ಒಟ್ಟು ಐದು ಸಾಲುಗಳಿವೆ. ಸುಮಾರು ೧೫' ಎತ್ತರದ ಬಂಡೆಗಲ್ಲಿನ ಮೇಲೆ ಕೊರೆದಿರುವ ಈ ಶಾಸನಪಾಠದ ಉದ್ದ ೨೧' ಅಗಲ ೨½', ಅಕ್ಷರದ ಎತ್ತರ ಐದು ಇಂಚು. ಈ ಶಾಸನವೂ ಪ್ರಕೃತಿಯ ದೌರ್ಜನ್ಯಕ್ಕೊಳಗಾಗಿ ಅಲ್ಲಲ್ಲಿ ನಶಿಸಿಹೋಗಿದೆ. "ರಾಜಾ ಅಸೋಕೋ ಹೇವಂ ಆಹ"ಎಂದು ಪ್ರಾರಂಭವಾಗುವ ಇದರ ಪರಮೋದ್ದೇಶ, ಸಾಮಾಜಿಕ–ಧಾರ್ಮಿಕ ಮೌಲ್ಯಗಳ ಪ್ರಸಾರವಾಗಿದ್ದು ಮಾತಾ–ಪಿತಾ, ಗುರು, ಬ್ರಾಹ್ಮಣ ಮೊದಲಾದವರ ಸುಶ್ರೂಷೆಯನ್ನೊಳಗೊಂಡ 'ಪ್ರರಾಣ ಪಕಿತಿ'ಯನ್ನು ವ್ಯಕ್ತಪಡಿಸುತ್ತದೆ.

ಬಂಡೆಗಳ ಮೇಲಿರುವ ಈ ಎರಡು ಶಾಸನಗಳ ಪಾಠವನ್ನು ಸಾಧ್ಯವಾದಷ್ಟು ಇಲ್ಲಿ ಪ್ರಕಟಿಸಲಾಗಿದೆ. ಇದು ನಮ್ಮ ಮೊದಲ ವಾಚನದ ಫಲವಾದುದರಿಂದ ಈ ಪಾಠ ಇನ್ನೂ ಕೂಲಂಕಷ ಅಭ್ಯಾಸಕ್ಕೆ ಒಳಗಾಗಬೇಕಾಗಿದೆ. ಆದರೆ ವಿಶೇಷ

ಕುತೂಹಲವನ್ನು ಕೆರಳಿಸಿರುವ ಈ ಶಾಸನಗಳ ಪಾಠ ಆಸಕ್ತರಿಗೆ ಲಭ್ಯವಾಗಿ ಚರ್ಚೆಗೆ ಅನುಕೂಲವಾಗಲೆಂಬ ಬಯಕೆಯಿಂದ ಇಲ್ಲಿ ಪ್ರಕಟಿಸಲಾಗಿದೆ.

ನಿಟ್ಟೂರ – ೧ (ಕ್ರಿ. ಪೂ. ೩ನೆಯ ಶತಮಾನ)

(ಚಿಕ್ಕುಡ್ಡಪ್ಪ ಬೆಟ್ಟದ ಪಶ್ಚಿಮ ಅಂಚಿನಲ್ಲಿರುವ ಕುರುಬರ ಕಪ್ಪಲಿಗಾದೆಪ್ಪನ ಹೊಲದ ದಕ್ಷಿಣ ಮೇರೆಯಾಗಿರುವ ಬಂಡೆಗಲ್ಲಿನ ಮೇಲೆ ಬರೆದುದು).

ಬಂಡೆಗಲ್ಲಿನ ಪ್ರಮಾಣ : ಎತ್ತರ ಸು. ೧೧ ೪'. ಸುತ್ತಳತೆ ಸು. ೩೬'. ಶಾಸನ ಪ್ರಮಾಣ : ೧೯' × ೪'.

೧ . . . ದೇವಾನಾ ಪಿಯೋ ಹೇವಂ ಆಹ ಅಧಿಕಾನಿ ಅಢಾತಿಯಾನಿ ವಸಾನಿ
ಯಂ . .

೨ ಉಪಾಸಕೇ . ದಾ . . . . ಪಕಂತೇ ಹುಸಂ ಏಕ ಸಂವಛರಂ ಸಾತಿರೇಕೇ
ತು ಖೋ ಸಂವಛರೇಯಂ ಮಯಾ ಸಂಘೇ ಉ–

೩ ಪಯಿ . . . ಚ ಮೇ ಪ . ೦ . ಇಮಿನಾ ಚು ಕಾಲೇನಂ ಅಮಿಸ . ಮಾನಾ
ಮುನಿಸಾ ಜಂಬುದೀಪಸಿ ಮಿಸಾ ದೇವೇಹಿ

೪ ಪಕಮಸ ಹಿ ಇಯಂ ಫಲೇ ನೋ ಹಿ ಇಯಂ . . . ಪಕೇ ಪಾಪೋತವೇ
ಕಾಮಂ . . . ದಕೇನ ಪಿ ಪಕಮಿಂನೇನ ವಿಪುಲೇ ಸ್ವಗೇ


೫ ಸಕೆ ಆರಾ . ಯಾತವೇ . . . ತಾಯ ಇಯಂ . . . . . ಸಾವಾಪಿತ್ರೇ
ಯಥಾ ಕುದಕಾ ಚ ಮಹಾಪಾಚ ಇಮಂ ಪಕಮೇಯ್ವ ಅಂತ ಚ ಮೇ
ಜಾನೇ ಯಿತಿ

೬ ಚಿರಾಠಿತಿಕೇ ಚ ಇಯಂ ಪಕೇಮೇ ಪೋತಿ ಇಯಂ ಚ . . . . . ಚ
ವಢಿಸಿತಿ ಅವರಾಧಿಯಾ ದಿಯಂ . . ಸಿತಿ ಇಯಂ ಚ ಸಾವಾಪಿತ್ರೇಣೇ

೭ ಸಾವಾಪಿತ್ರೇ ವಥೇನ ೨೦೦೫೦೬ ಯಂ ಚ ವಾಪಾಪಿತ್ರೇತಿ ಯಥಾ ರಾಜಾ
ಅಸೋಕೋ ಆಹಾ ತಥಾತಿ



ನಿಟ್ಟೂರ I : ಲಘುಶಿಲಾಲಿಪಿ



ಸಿಟ್ಟೂರ II : ಲಘು ಶಿಲಾಲಿಪಿಯ ಒಂದು ಭಾಗ

ನಿಟ್ಟೂರ-೨ (ಕ್ರಿ. ಪೂ. ೩ನೆಯ ಶತಮಾನ)

(ಚಿಕ್ಕುಡ್ಡಪ್ಪ ಬೆಟ್ಟದ ಪಶ್ಚಿಮ ಅಂಚಿನಲ್ಲಿರುವ ಕುರುಬರ ನಂದೆಳ್ಳಿ ಸಣ್ಣವೀರಪ್ಪನ ಹೊಲದ ಪೂರ್ವ ಮೇರೆಯಾಗಿರುವ ಬಂಡೆಗಲ್ಲಿನ ಮೇಲೆ ಬರೆದುದು).

ಬಂಡೆಗಲ್ಲಿನ ಪ್ರಮಾಣ : ಸು. ೧೫' ಎತ್ತರ.
ಶಾಸನದ ಪ್ರಮಾಣ : ಸು. ೨೧' × ೨½'.

೧ ರಾಜಾ ಅಸೋಕೋ ಹೇವಂ ಆಹ ತು . ಆನಪಯುಥಿ . . . . . ನ ಪ .(?) ತೇ.ನ ಪವಜ ಜನಂ. ಮುಕಾನಿ ಚ ಮಾತಾಪಿತು ಸುಸೂಸುಸಿತವಿಯೋ . . ಹೇಮೇವಗರುಸು

೨ ಪ್ರಾಣೇಸು ಜಾ ದಯಿತವಿಯತಿ ಇಮೇ ಧಂಮ ಗುನಾ ಪವತಿತವಿ ಯಾ . . . . ಜನ ಆನಪಯುಫ ಸೇ ದಾನ ದೇವಾನ ಪಿಯುಸ ವಚನೇನ . , ಆನ . ಯಿತಿತತೇ ಹೇಮೇವ ಆಯು ಹಯು ಥ ಹೇ . . . . .

೩ ಬಮ್ಹನಾನಿ ಚ ಹಥಾರ್ಪಹಾನಿ ಚಕಾರನ ಕಾ ಪಿ ಚ ಯಾ ಗಾ . . . . ರಾಣಪಿಕತಿ . . . . ಯಾತ ಇ ಮ . ಸುಸೂಸಿತವಿಯೇತಿ ಇಯುಂ ಅಪಚಾಯಿ ಆ . . . ಚಾಲಿಯ ಪಾ (?) ಚಾಯಿ . . . . . .

೪ ತ ಪಿಯೇ ಚ ಸುಸೂಸಿತವಿಯೋ ಚ ಯಾಪಿ ಆಚಲಿ . . . ಯು . . ಥಾರಹಂ ಪವತಿತವಿಯ ತಿ ಯಾದಿ ಸೀ ಪೊರಾಣ ಪಕಿ . . . ಯುಂ . . .

೫ ಪಿಸಾತಿರೇಕೇ ಪು ವೇ ಯಾ ತಥಾಯ ವತಿತವಿಯಾ . . . . . .

* *

* ದಿನಾಂಕ ೧ ಸಪ್ಟಂಬರ್, ೧೯೭೭ ರಂದು ಈ ಲೇಖನ ಸಂಪಾದಕರ ಕೈಸೇರಿತು (ಸಂ).

* * ಈ ಶಾಸನಗಳನ್ನು ೬೫ ವರ್ಷಗಳಿಂದ ಕಾಣುತ್ತ ಬಂದಿರುವ ನಿಟ್ಟೂರಿನ ಶ್ರೀ ಸಣ್ಣನಗೌಡರ ಸ್ವಾಮ್ಯದಲ್ಲಿದ್ದ ಈ ಹೊಲವನ್ನು ಇತ್ತೀಚೆಗೆ ಕುರುಬರ ಕಪ್ಪಲಿ ಗಾದೆಪ್ಪನಿಗೆ ವಿಕ್ರಯ ಮಾಡಲಾಗಿದೆ. ನಿಟ್ಟೂರಿನ 'ಅಕ್ಷರ'ಗಳ ಬಗ್ಗೆ ಸುಮಾರು ಒಂದು ವರ್ಷದ ಹಿಂದೆ ಮಾಹಿತಿ ಕೊಟ್ಟ ತೆಕ್ಕಲಕೋಟೆಯ ಇಬ್ಬರು ತಳವಾರರಿಗೂ 'ಚೀನಿ ಮತ್ತು ಇಂಗ್ಲೀಷ ಲಿಪಿಯ ನ್ನೊಳಗೊಂಡ ಶಾಸನಗಳೆಂದು ಅಗಷ್ಟ ೬ ರಂದು ನಮಗೆ ಪತ್ರ ಬರೆದ ಬಳ್ಳಾರಿಯ ಶ್ರೀ ಸಿ. ವಿಶ್ವನಾಥ L.C.E., ಜೂನಿಯರ್ ಇಂಜಿನಿಯರ್ ಆಫ್ ಸೀನಿಯರ್ ಜಿಯಾಲಾಜಿಸ್ಟ ಆಫೀಸ, ಬಳ್ಳಾರಿ ಇವರಿಗೂ, ದಿ. ೨೧ ರಂದು ಈ ಸ್ಥಳಕ್ಕೆ ಕರೆದುಕೊಂಡು ಹೋಗಿ ಬಂಡೆಗಲ್ಲುಗಳನ್ನು ತೋರಿಸಿದ ಸಣ್ಣನಗೌಡರ ತಳವಾರ ನರಸಪ್ಪನಿಗೂ, ಎಲ್ಲ ಬಗೆಯ ಸಹಕಾರ ನೀಡಿದ ಶ್ರೀ ಸಣ್ಣನಗೌಡ ಮೊದಲಾದವರಿಗೂ ನಮ್ಮ ಕೃತಜ್ಞತೆಗಳು.

ಈ ಶಾಸನದ ಪ್ರತಿ ಮಾಡಿಕೊಳ್ಳುವಾಗ ಹಾಗೂ ಪಾಠಕ್ರಮವನ್ನು ಪರಿಶೀಲಿಸುವಾಗ ವಿಶೇಷ ಸಹಕಾರವಿತ್ತ, ಇತಿಹಾಸ ಮತ್ತು ಪ್ರಾಕ್ತನ ಶಾಖೆಯಲ್ಲಿ ಸಂಶೋಧಕರಾಗಿರುವ ಶ್ರೀ ಎಸ್. ಬಿ. ಹಿರೇಮಠ ಮತ್ತು ಶ್ರೀ ಎಚ್. ಬಿ. ಸುಂಕದ ಇವರಿಗೆ ನಮ್ಮ ಕೃತಜ್ಞತೆಗಳು.

ಶಾಸನ ಪದಸೂಚಿ

● ಚೆನ್ನಕ್ಕ ಯಲಿಗಾರ

ಕ್ರಿ. ಶ. ೧೯೬೪ ರಲ್ಲಿ ಭಾರತೀಯ ಪ್ರಾಕ್ತನಅಧ್ಯಯನವಿಭಾಗದವರು ದಕ್ಷಿಣಭಾರತದ ಶಾಸನಸಂಪುಟ ೧೫ ನ್ನು ಪ್ರಕಟಿಸಿದರು. ಕರ್ನಾಟಕದ ಬಹುಮೂಲ್ಯವಾದ ೭೭೧ ಶಾಸನಗಳನ್ನು ಬೆಳಕಿಗೆತಂದ ಬೃಹತ್ ಸಂಪುಟವಿದು. ಕದಂಬ, ಚಾಲುಕ್ಯ, ಕಲಚುರ್ಯ, ಯಾದವ, ಹೊಯ್ಸಳ, ಸಿಂದ, ವಿಜಯನಗರ, ಮುಸ್ಲಿಮ, ಮರಾಠಾ ಹಾಗೂ ಇಂಗ್ಲೀಷರ ಆಡಳಿತಕ್ಕೆ ಸಂಬಂಧಿಸಿದ ಈ ಶಾಸನ ಸಂಪುಟಕ್ಕೆ ಪದಸೂಚಿ ಇಲ್ಲದುದು ದೊಡ್ಡ ಕೊರತೆಯೆಂದು ಬೇರೆ ಹೇಳಬೇಕಿಲ್ಲ. ಇದರಿಂದ ಅಭ್ಯಾಸಿಗಳು ಒಂದೊಂದು ಪದಕ್ಕಾಗಿ ತಾಸುಗಟ್ಟಲೆ ವೇಳೆಯನ್ನು ಅಪವ್ಯಯಗೊಳಿಸಬೇಕಾಗುತ್ತಿದ್ದಿತು. ಈ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಪ್ರಸ್ತುತ ಶಾಸನ ಪದಸೂಚಿಯನ್ನು ಸಿದ್ಧಪಡಿಸಲಾಗಿದೆ.

ಈ ಸೂಚಿಯಲ್ಲಿ ಶಾಸನದ ಆರಂಭದ ಸ್ತುತಿಪದ್ಯ, ಕೊನೆಯ ಫಲಶ್ರುತಿ ವಾಕ್ಯಗಳನ್ನು ಸೇರಿಸಿಕೊಂಡಿಲ್ಲ. ಕೆಲವು ವಿಶಿಷ್ಟಬಿರುದುಗಳನ್ನು ಮಾತ್ರ ಇಟ್ಟುಕೊಳ್ಳಲಾಗಿದೆ. 'ಮಾಂಡಲಿಕ' ಎಂಬಲ್ಲಿ ಮಹಾಮಂಡಳೇಶ್ವರ, ಸಾಮಂತರನ್ನು; 'ಅಧಿಕಾರಿ' ಎಂಬಲ್ಲಿ ಮಂತ್ರಿ, ಸೇನಬೋವ ಆಡಳಿತಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು; 'ಪ್ರಾಂತ' ಎಂಬಲ್ಲಿ ಆಡಳಿತಕ್ಕೆ ಒಳಪಟ್ಟ ಸಣ್ಣ-ದೊಡ್ಡ ವಿಭಾಗಗಳನ್ನು ಸೇರಿಸಿಕೊಳ್ಳಲಾಗಿದೆ. ಇನ್ನುಳಿದ ಸಂಕೇತಾಕ್ಷರಗಳು ಹೀಗಿವೆ:

ಅ=ಅರಸು, ಅಗ್ರ=ಅಗ್ರಹಾರ, ಅಧಿ=ಅಧಿಕಾರಿ, ಅಳ=ಅಳತೆ, ಆ=ಆಚಾರ್ಯ, ಕ=ಕರ (ತೆರಿಗೆ), ಕಚಾ. ಅ=ಕಲ್ಯಾಣ ಚಾಲುಕ್ಯ ಅರಸು, ಕದ. ಅ=ಕದಂಬ ಅರಸು, ಕದ. ರಾ=ಕದಂಬ ರಾಣಿ, ಕಲ. ಅ=ಕಲಚೂರ್ಯ ಅರಸು, ಕಲ. ರಾ=ಕಲಚೂರ್ಯ ರಾಣಿ, ಕವಿ=ಕವಿ, ಗಾ=ಗಾವುಂಡ, ಗ್ರಾ=ಗ್ರಾಮ, ಚಾ. ಅ=ಚಾಲುಕ್ಯ ಅರಸು, ಚಾ. ರಾ=ಚಾಲುಕ್ಯ

ರಾಜಧಾನಿ, ಚಿ=ಚಿಹ್ನ, ದೇ=ದೇಶ, ದೇವ=ದೇವರು(ದೇವತೆ), ನ=ನದಿ, ನಾ=ನಾಣ್ಯ, ಪು. ಕ್ಷೇ=ಪುಣ್ಯಕ್ಷೇತ್ರ, ಪೌ. ವ್ಯ=ಪೌರಾಣಿಕವ್ಯಕ್ತಿ, ಪ್ರಾ=ಪ್ರಾಂತ, ಬ=ಬಸದಿ, ಬಿ=ಬಿರುದು, ವಿ. ಅ=ವಿಜಾಪುರದ ಅರಸು, ಮ. ಜ=ಮಹಾಜನರು, ಮರಾ. ಅ=ಮರಾಠಾ ಅರಸು, ಮಾ=ಮಾಂಡಲಿಕ, ಯಾ. ಅ=ಯಾದವ ಅರಸು, ಯಾ. ರಾ=ಯಾದವ ರಾಜಧಾನಿ, ರಾ=ರಾಜಧಾನಿ, ರಾ. ಅ=ರಾಷ್ಟ್ರಕೂಟ ಅರಸು, ರೂ=ರೂವಾರಿ, ಲಿಪಿ=ಲಿಪಿಕಾರ, ವಂ=ವಂಶ, ವಾ=ವಾದ್ಯ, ವಾರ=ವಾರ, ವಿ. ಅ=ವಿಜಯನಗರದ ಅರಸು, ವೃ=ವೃತ್ತಿ, ವೃ. ಸಂ=ವೃತ್ತಿಸಂಘ, ವ್ರತ=ವ್ರತ, ವೇ=ವೇದ, ವ್ಯ=ವ್ಯಕ್ತಿ, ವ್ಯಾ. ಕೇ=ವ್ಯಾಪಾರಿಕೇಂದ್ರ, ವ್ಯಾ. ಸಂ=ವ್ಯಾಪಾರಿಸಂಘ, ಸಿ. ಅ=ಸಿಂಘ ಅರಸು, ಸಿ.ರಾ=ಸಿಂಘರಾಣಿ, ಸಿ.ರೇ=ಸೀಮಾರೇಖೆ, ಸ್ತ್ರೀ=ಸ್ತ್ರೀ, ಹ=ಹಬ್ಬ, ಹೊ. ಅ=ಹೊಯ್ಸಳ ಅರಸು.*

ಇಷ್ಟು ಹಿನ್ನೆಲೆಯಲ್ಲಿ ಸಿದ್ಧಪಡಿಸಿದ ಸೂಚಿಯನ್ನು ಹೀಗೆ ಕೊಡಬಹುದು. ಇಲ್ಲಿ ಮೊದಲಿನ ಅಂಕಿ ಶಾಸನಕ್ರಮಾಂಕವನ್ನೂ ಮುಂದಿನ ಅಂಕಿ ಆ ಶಾಸನದ ಸಾಲನ್ನೂ ಸೂಚಿಸುತ್ತದೆ.

ಸ್ವರಗಳು

ಅಯಿಪ	ವ್ಯ.	೬೪೫:೨
ಅಂಗಿನಾಯಕ	ವ್ಯ.	೬೫೪:೨
ಅಂಬರಮಣಿ ಬಸವದಂಡನಾಥ	ಅಧಿ.	೨೧೬:೬೦
ಅಕಾಲವರ್ಸೋರ್ವೀಬ್ಬೀನಾಥ	ಬಿ.	೪೬:೬
ಅಕ್ಕಬೇಸ್ವರದೇವರು	ದೇವ.	೫೬೬:೨
ಅಕ್ಕಾದೇವಿ	ಸ್ತ್ರೀ.	೭೯:೨೭
ಅಕ್ಕಿಯರ ದೇಕಬೆ	ಸ್ತ್ರೀ.	೬೨೦:೬
ಅಗ್ನಿ	ಪೌ. ವ್ಯ.	೨೧೧:೧೩
ಅಘೋರಪಂಡಿತದೇವರು	ಅ.	೨೫:೯

* ಮಹತ್ವದ ಶಾಸನಗಳುಳ್ಳ ಈ ಸಂಪುಟವನ್ನು ಬೆಳಕಿಗೆ ತಂದ ಪ್ರಾಕ್ತನ ವಿಭಾಗದವರಿಗೆ, ಈ ಪದಸೂಚಿ ತಯಾರಿಕೆಗೆ ನನ್ನನ್ನು ಪ್ರೇರೇಪಿಸಿದ ಪೂಜ್ಯಗುರುಗಳಾದ ಡಾ. ಎಮ್. ಎಮ್. ಕಲಬುರ್ಗಿಯವರಿಗೆ, ದಕ್ಷಿಣ ಭಾರತದ ಶಾಸನಗಳು ಸಂಪುಟ ೯ ಭಾಗ-೧ ರ ಶಾಸನ ಪದಸೂಚಿಯನ್ನು ಸಿದ್ಧಪಡಿಸುವುದರ ಮೂಲಕ ಈ 'ಶಾಸನಪದಸೂಚಿ'ಗೆ ಮಾರ್ಗದರ್ಶನ ನೀಡಿದ ಡಾ. ಎಸ್. ರಾಜಶೇಖರ ಅವರಿಗೆ, ಇದನ್ನು ಸಿದ್ಧಪಡಿಸುವಲ್ಲಿ ನೆರವಾದ ಸಹೋದರರಾದ ಎಸ್. ವ್ಹಿ. ಜಮಾದಾರ ಮತ್ತು ಬಿ. ಆರ್. ಹಿರೇಮಠ ಅವರಿಗೆ ಕೃತಜ್ಞತೆಗಳು.

ಕಾಮುಚಮೂಪ	ಅಧಿ.	೫೭:೨೭
ಕಾಮುದೇವ	ಪೌ.ವ್ಯ.	೨೧೧:೧೪
ಕಾಮುವ್ವೆ	ಸ್ತ್ರೀ.	೩೫:೨೧
ಕಾಮೇಶ್ವರದೇವರು	ದೇವ.	೧೮೦:೧೪
ಕಾರಗನೂರು	ಗ್ರಾ.	೧೪೭:೨೦
ಕಾರಪುಂಣಮಿ	ಹಬ್ಬ.	೬೦:೭
ಕಾರೆಗನೂರು	ಗ್ರಾ.	೫೬:೨೮
ಕಾಲಡಿಯ ಬೋದರಸ	ವ್ಯ.	೨೨೧:೬
ಕಾಲಭೈರವದೇವರು	ಆ.	೩೨:೪೩; ೯೭:೪೦
ಕಾವಗಾವುಣ್ಡ	ಅಧಿ.	೩೬:೨೭; ೫೨:೧೨
ಕಾವಣಚಮೂಪ	ಅಧಿ.	೧೪೨:೫೨
ಕಾವಣದಂಡನಾಥವಿಭು	ಅಧಿ.	೫೯:೭
ಕಾವಣಯ್ಯ	ಅಧಿ.	೧೪೨:೪೯
ಕಾವದೇವಭಟ್ಟರು	ವ್ಯ.	೧೮೭:೩೪
ಕಾವಱಗೇರಿ	ಗ್ರಾ.	೧೨೯:೧೯
ಕಾಶ್ಮೀರದೇವರು	ಆ.	೯೭:೪೦
ಕಾಶ್ಯಪಗೋತ್ರ	ಗೋ.	೧೨೯:೧
ಕಾಳತ್ರಯ ದೇವರಾಸಿಯಾಚಾರ್ಯ	ಆ.	೨೨೭:೨೮
ಕಾಳರಾಸಿಪಂಡಿತ	ಆ.	೧೫೯:೧೬
ಕಾಳಲದೇವಿ	ಸ್ತ್ರೀ.	೫೭:೨೯
ಕಾಳವೆಲೋಕಣ	ವ್ಯ.	೨೩೨:೧೨
ಕಾಳವ್ವೆ	ಸ್ತ್ರೀ.	೫೯:೭
ಕಾಳಸೇನ	ವ್ಯ.	೯೬:೩೪
ಕಾಳಾಮುಖಮುನೀಶ್ವರ	ಆ.	೭೩:೧೫
ಕಾಳಿದಾಸ	ವ್ಯ.	೨೩೨:೩೩
ಕಾಳಿಮರಸ	ವ್ಯ.	೭೩:೫೮
ಕಾಳಿಯವ್ವೆ	ಸ್ತ್ರೀ.	೫೫:೧೪
ಕಾಳೆಯನಾಯಕ	ಅಧಿ.	೫೦:೨
ಕಿತ್ತೂರುಮೂವತ್ತು	ಪ್ರಾ.	೨೨೯:೩೩
ಕಿನ್ನರಿಗಲ್ಲಗುಡ್ಡ	ಗ್ರಾ.	೪೨:೪೧
ಕಿರಿಯನಾಯ್ಕರು	ವ್ಯ.	೬೯೧:೨೨
ಕಿರುದೇಱಿ	ತೆ.	೩೭:೧೭;೨೮:೧೧;೪೨:೩೨;೪೩:೧೯

(ಮುಂದುವರಿಯುವುದು)

ಒರೆಗಲ್ಲು

೧. ಲಕ್ಷ್ಮೇಶ್ವರದಲ್ಲಿ ದೊರೆತ ಸಪ್ತಮಾತೃಕೆಯರ ಅಪೂರ್ವ ಶಿಲಾಪಟ್ಟಿಕೆ :

ಐತಿಹಾಸಿಕ ಸ್ಥಳ ಲಕ್ಷ್ಮೇಶ್ವರ, ಧಾರವಾಡದಿಂದ ೬೫ ಕಿ. ಮೀ. ಹಾಗೂ ಗುಡಗೇರಿ ರೈಲುನಿಲ್ದಾಣದಿಂದ ೧೩ ಕಿ. ಮೀ. ದೂರದಲ್ಲಿದೆ.

ದಿನಾಂಕ ೨೪ ಮೇ ೧೯೭೬ರಂದು ಲಕ್ಷ್ಮೇಸ್ವರದ ಸರ್ವೆ ನಂ. ೧೧|೨ ಬಿ ಯಲ್ಲಿ ಸುಂದರವಾದ ಹಾಗೂ ಅಪೂರ್ವವಾದ ಸಪ್ತಮಾತೃಕೆಯ ಶಿಲಾ ಪಟ್ಟಿಕೆ ದೊರೆಯಿತು. ಅಲ್ಲಿ ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಾ ವಿಗ್ರಹಗಳು ಮಾತ್ರ ಇದ್ದು ಎಡ ಬಲಗಳಲ್ಲಿರಬೇಕಾದ ವೀರಭದ್ರ, ಮತ್ತು ಗಣೇಶ ವಿಗ್ರಹಗಳು ಇಲ್ಲದುದು ಅಪೂರ್ವವಾದುದು. ಈ ಸಪ್ತಮಾತೃಕೆಯರು ಪ್ರಲಂಬ ಪಾದದಲ್ಲಿ ಕುಳಿತಿದ್ದು ಬ್ರಾಹ್ಮಿ, ಕೌಮಾರಿ, ವಾರಾಹಿ, ಮತ್ತು ಇಂದ್ರಾಣಿಯರಿಗೆ ಎರಡು ಕೈಗಳಿವೆ. ಬ್ರಾಹ್ಮಿ ಅಕ್ಷಮಾಲೆ ಮತ್ತು ಆಜ್ಯಸ್ಥಾಲಿಯನ್ನು; ಮಾಹೇಶ್ವರಿ ಖಡ್ಗ, ಪರಶು, ಗುರಾಣಿ ಮತ್ತು ಪಾನಪಾತ್ರೆಯನ್ನು; ಕೌಮಾರಿ ಈಟಿ ಮತ್ತು ಹೂವನ್ನು: ವೈಷ್ಣವಿ ಗುರಾಣಿ, ಶಂಖ, ಪ್ರಯೋಗ ಚಕ್ರ ಮತ್ತು ಖಡ್ಗವನ್ನು; ವಾರಾಹಿ ಗದೆ ಮತ್ತು ಗುರಾಣಿಯನ್ನು; ಇಂದ್ರಾಣಿ ವಜ್ರಾಯುಧವನ್ನು; ಚಾಮುಂಡಾ ಖಡ್ಗ, ಮಾನವ ಶಿರಸ್ಸು, ತ್ರಿಶೂಲ ಮತ್ತು ಪಾತ್ರೆಯನ್ನು ಹೊಂದಿದ್ದಾರೆ. ಕೆಲವು ಮಾತೃಕೆಯರು ಅಂದರೆ ಬ್ರಾಹ್ಮಿ ಮತ್ತು ಕೌಮಾರಿ ಮಕರಕುಂಡಲವನ್ನೂ ಇನ್ನಿತರರು ಪತ್ರಕುಂಡಲವನ್ನೂ ಧರಿಸಿದ್ದಾರೆ. ಚಾಮುಂಡಾ ಯೌವನಭರಿತ ಳಾಗಿದ್ದಾಳೆ.

ಮಾಹೇಶ್ವರಿಯ ಪರಶು, ಇಂದ್ರಾಣಿಯ ವಜ್ರಾಯುಧ, ಚಾಮುಂಡಾ ಹಿಡಿ ದಿರುವ ಮಾನವನ ಶಿರಸ್ಸು ಗಮನಾರ್ಹವೆನಿಸಿವೆ.

ಈ ಪಟ್ಟಿಕೆ ಚಾಲುಕ್ಯ(ಪೂರ್ವ)ಶೈಲಿಗೆ ಸಂಬಂಧಿಸಿವೆ. ಈ ಪರಿಸರವಲ್ಲಿ ಈ ರೀತಿಯ ಚಾಲುಕ್ಯರ ಶಿಲ್ಪ ದೊರೆತಿರುವದು ಇದೇ ಮೊಟ್ಟಮೊದಲು.

—ಎಮ್. ಎಲ್. ಶಿವಶಂಕರ



ಸಪ್ತಮಾತೃಕೆಯರ ಅಪೂರ್ವ ಶಿಲಾಪಟ್ಟಿಕೆ: ಲಕ್ಷ್ಮೇಶ್ವರ

೨. ಕಲ್ಲುಮಠದ ಪ್ರಭುದೇವರ 'ಪ್ರಭುದೇವರ ಮಂತ್ರಗೋಪ್ಯ' ಟೀಕೆಯ ಒಂದು ಹಸ್ತಪ್ರತಿ :

ಮದ್ರಾಸ್‌ಸರ್ಕಾರದ ಪ್ರಾಚ್ಯಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕಸೂಚಿಯ[1] ಸಂಪುಟ ನಾಲ್ಕು, ಕ್ರಮಾಂಕ ೭೫೦ (ಪುಟ ೧೦೭೪-೧೦೭೯) ರಲ್ಲಿ 'ಪ್ರಭುದೇವರ ವಚನ' ಎಂಬ ಕೃತಿಯು ಉಲ್ಲೇಖವಿದೆ. ಕೃತಿ ಅಪೂರ್ಣವಾಗಿದ್ದು ಅದರ ಆದ್ಯಂತ್ಯಗಳಿಲ್ಲ. ಸೂಚಿಯ ಸಂಪಾದಕರು ಮೂಲಕೃತಿ ಹಾಗೂ ಟೀಕಾಕಾರರ ಬಗೆಗೆ ಏನನ್ನೂ ತಿಳಿಸಿಲ್ಲ.

ಮೇಲೆ ನಿರ್ದೇಶಿತವಾದ ಅಪೂರ್ಣಕೃತಿ ಪ್ರಭುದೇವ (೧೧೬೦) ರ ಮಂತ್ರಗೋಪ್ಯ ಹಾಗೂ ಕಲ್ಲುಮಠದ ಪ್ರಭುದೇವರ (೧೪೩೦) ಟೀಕೆ[2]ಗಳಿಗೆ ಸಂಬಂಧಿಸಿದೆ. ಹಸ್ತಪ್ರತಿಯ ಉಪಲಬ್ಧಭಾಗದಲ್ಲಿ ಕ್ರಮಾಂಕ ೮ ರಿಂದ ೧೩ ರ ವರೆಗಿನ ಭಾಗಗಳಿವೆ.

ಈ ಮೇಲಿನ ವಿವರಣೆಯಿಂದ ಸೂಚಿಯಲ್ಲಿನ ಕ್ರಮಾಂಕ ೭೫೦ರಲ್ಲಿನ 'ಪ್ರಭುದೇವರ ವಚನ' ಎಂಬ ಉಲ್ಲೇಖ 'ಪ್ರಭುದೇವರ ಮಂತ್ರಗೋಪ್ಯ'ವೆಂದೂ, ಕರ್ತೃ ಹಾಗೂ ಟೀಕಾಕಾರರು ಕ್ರಮವಾಗಿ ಪ್ರಭುದೇವ ಮತ್ತು ಕಲ್ಲುಮಠದ ಪ್ರಭುದೇವರೆಂದೂ ತಿದ್ದುಪಡಿಯಾಗಬೇಕಾಗಿದೆ.

೩. ಬಸವಲಿಂಗಾರಾಧ್ಯಕೃತ ಶಿವಯೋಗಾನಂದತ್ರಿವಿಧಿ : ಒಂದು ಟಿಪ್ಪಣಿ[3]

ಶಿವಯೋಗಾನಂದತ್ರಿವಿಧಿ ಕವಿಚರಿತೆಯ ಅನುಕ್ತಕೃತಿಗಳಲ್ಲೊಂದು. ಇದರಲ್ಲಿ ೩೧ ತ್ರಿವಿಧಿಗಳೂ ಅಂತ್ಯದಲ್ಲಿ ೨ ಕಂದಗಳೂ ಇವೆ. ಕೊನೆಯ ಕಂದದಲ್ಲಿ ಕೃತಿಕಾರ ತನ್ನ ಹೆಸರು ಬಸವಲಿಂಗಾರಾಧ್ಯನೆಂಬ ಅಂಶವನ್ನು ತಿಳಿಸಿದ್ದಾನೆ. ಶಿವಯೋಗ ನಿರೂಪಣೆ ಕೃತಿಯ ವಸ್ತು. ಕೃತಿಕಾರನ ಕಾಲನಿರ್ಣಯಕ್ಕೆ ಸಾಧಕವಾದ ಬಾಹ್ಯ ಹಾಗೂ ಆಂತರಿಕ ಅಂಶಗಳಾವವೂ ಕೃತಿಯಲ್ಲಿಲ್ಲ.

---

1 A Descriptive catalogue of the Kannada Manuscripts in the Government Oriental Manuscripts Library, Madras. Ed. Sankaran, Vol. IV, No. 750.

2 ಸಿದ್ಧರಾಮಸಾಹಿತ್ಯ ಸಂಗ್ರಹ. ಸಂ: ಚೆನ್ನಪ್ಪ ಉತ್ತಂಗಿ (೧೯೫೫) ಪುಟ. ೧೩೩-೧೬೧.

3 ಕನ್ನಡ ಅಧ್ಯಯನಕೇಂದ್ರದ (ಬೆಂಗಳೂರು ವಿಶ್ವವಿದ್ಯಾಲಯ) ಸಂಗ್ರಹ.

ಆದಿಭಾಗ :

ಅಂಗಕರಣಂಗಳೊಳು ಲಿಂಗಗಳ ಅಳವಡಿಸಿ
ಮಂಗಳಾತ್ಮಕನ ಮಾಡಿದ
ಮಂಗಳಾತ್ಮಕನ ಮಾಡಿದ ಶ್ರೀಗುರುವನು
ಹಿಂಗದೆ ಸ್ತುತಿಸಿ ಬದುಕುವೆ ||೧||

ಶತಯೇಕಸ್ಥಲದೊಳು ಸ್ಥಿತಿಗೊಳಿಸಿ ಭಕ್ತಿಯು
ಅತಿಶಯುವಹುದು ತಿಳಿವಡೆ
ಅತಿಶಯುವಹುದು ತಿಳಿವಡೆ ಶರಣರು
ಹರುಷದಿಂ ನೋಡಿ ತಿಳಿವುದು ||೨||

ಅಂತ್ಯಭಾಗ :

ಸ್ವಯುಚರಪರಮೂರಶಿವಯೋಗಸದನದಿ
ಶುದ್ಧಸಿದ್ಧಪ್ರಸಿದ್ಧ
ಶುದ್ಧಸಿದ್ಧಪ್ರಸಿದ್ಧದೊಳ್ಪಂಚಾಕ್ಷರಿಲಿಂಗವ
ಹೊದ್ದಿ ಸಮರಸದೊಳ್ಬೆರೆವುದು ||೧||

||ಕಂದ||

ಶಿವಯೋಗನಂದತಿವಿಧಿಯು
ಶಿವಶರಣರು ನೋಡಿ ತಿಳಿದು ಅರ್ಪಣಗೈವುದು
ಅರ್ಪಣದ ಮುಖವರಿದು ಶಿವ
ಗರ್ಪಿಸಿ ಸವಿದ ಪ್ರಸಾದಯಿದು ತತ್ವಾರ್ಥಂ ||

ಹರಗುರುವಾಖ್ಯಗಳಿಂದಂ
ವಿರಚಿಸಿದ ತ್ರಿವಿಧಿ ಬಸವಲಿಂಗಾರಾಧ್ಯಂ
ಅರಿವುಳ್ಳವರಿದು ಲಾಲಿಸಿ
ಗುರುಕೃಪೆಯೊಳನುಭವವಿಡಿದು ನಡೆಯಲು ಮೋಕ್ಷಂ ||

—ಎಸ್. ಶಿವಣ್ಣ

೪. ಬಂಧುವರ್ಮನ ಕಾಲ :

'ಹರಿವಂಶಾಭ್ಯುದಯ'ವೆಂಬ ಜೈನಪುರಾಣವನ್ನು ಸಂಪಾದಿಸಿರುವ ಬಿ. ಎಸ್. ಸಣ್ಣಯ್ಯನವರು, ಕವಿ ಬಂಧುವರ್ಮನ ಕಾಲವನ್ನು ಕುರಿತು "....ಹರಿವಂಶಾಭ್ಯುದಯದಲ್ಲಿ ಸು. ೧೧೪೦ ರಲ್ಲಿದ್ದ ಕರ್ಣಪಾರ್ಯನ ನೇಮಿನಾಥ ಪುರಾಣವನ್ನು ಅನುಸರಿಸಿರುವುದು ಕಂಡುಬಂದಿರುವುದರಿಂದ ಈ ಕಾಲಕ್ಕಿಂತ ಈಚೆಗಿದ್ದವನು ಎಂದು ಹೇಳಬಹುದಾಗಿದೆ. ಇದರಿಂದ ಈತನ ಕಾಲವನ್ನು ೧೧೪೦ ರಿಂದ ೧೨೩೫ ರ ಒಳಗೆ ಎಂದು ನಿರ್ಣಯಿಸಿ, ಕವಿಚರಿತೆಕಾರರು ಹೇಳಿರುವ ಸು. ೧೨೦೦ ಎಂಬುದನ್ನು ಅಂಗೀಕರಿಸಬಹುದಾಗಿದೆ"[೧] ಎಂದಿದ್ದಾರೆ. ಅಲ್ಲದೆ ಬಂಧುವರ್ಮನನ್ನು ಸ್ತುತಿಸಿರುವ ಕವಿಗಳಲ್ಲಿ ಮೊದಲನೆಯವನಾಗಿ ಕ್ರಿ.ಶ. ೧೨೩೫ ರಲ್ಲಿದ್ದ ಕಮಲಭವನ ಸ್ತುತಿಪದ್ಯ, ನಾಗರಾಜ ಹಾಗೂ ಮಂಗರಸರ ಸ್ತುತಿಪದ್ಯಗಳನ್ನು ನೀಡಿದ್ದಾರೆ[೨].

ಆದರೆ ಬ್ರಹ್ಮಶಿವನ ಸಮಯಪರೀಕ್ಷೆಯಲ್ಲಿ ಬಂಧುವರ್ಮನನ್ನು ಕುರಿತು ಮೂರು ಸ್ತುತಿಪದ್ಯಗಳು ಮೊದಲಿಗೆ ದೊರೆಯುತ್ತವೆ. ಅವು ಕ್ರಮವಾಗಿ ಹೀಗಿವೆ :[೩]

ನಯದಿಂದಂ ತಾಯುಂ ತಂ
ದೆಯುಮೊಳ್ಪನೆ ಶಿಕ್ಷಿಪಂತೆ ಮನುಜಾವಳಿಯಂ
ನಯದಿಂ ಸಂಬೋಧಿಸಿ ಮು
ಕ್ತಿಯೊಳೊಂದಿಪ ಪೆರ್ಮೆ **ಬಂಧುವರ್ಮಂಗೆ ನಿಜಂ** (೧–೨೯)

ರೋಗಂ ಸಮಸ್ತದುಃಖ
ಕ್ಕಾಗರಮದು ಕೇಳ **ಜೀವಸಂಬೋಧನೆಯಂ**
ಬೇಗಂ ಮಾಣ್ಗುಂ ದುಸ್ಸಹ
ರೋಗಂ ಸದ್ವೈದ್ಯನಿಂದಮುಪಸಮಿಸುವವೋಲ್ (೧–೩೦)

ಭವಜಳಧಿಯೊಳಗೆ ಮುಳ್ಕಾ
ಡುವ ಜೀವಾವಳಿಗೆ ಮುಕ್ತಿಯಂ ತಡೆಯದೆ ಪೊ
ರ್ದುವುದುಂ ಪೇಳ್ದುದಱಿಂ **ಬಂ
ಧುವರ್ಮನಂ** ಭುವನಬಂಧುವೆನ್ನದರೊಳರೇ (೧–೩೧)

---

೧ **ಹರಿವಂಶಾಭ್ಯುದಯಂ.** ಸಂ : ಬಿ. ಎಸ್. ಸಣ್ಣಯ್ಯ, ಪು. xiv, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪.

೨ ಅದೇ, ಪು. xiii-xiv.

೩ **ಸಮಯಪರೀಕ್ಷೆ.** ಸಂ : ಬಿ. ಎಸ್. ಕುಲಕರ್ಣಿ, ಅಧಿಕಾರ-೧, ಪದ್ಯ ೨೯, ೩೦, ೩೧ (ಪು. ೬), ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೫೮.

'ಜೀವಸಂಬೋಧನೆ'ಯನ್ನು ಭವಜಳಧಿಯಲ್ಲಿ ಮುಳುಗಿರುವ ಮನುಜಾವಳಿಯ ಮುಕ್ತಿಗೆ ಹೇತುವಾಗುವಂತೆ ತಿಳಿಯಪಡಿಸಿ ಭುವನಬಂಧುವೆನಿಸಿದ ಬಂಧುವರ್ಮನ ಪೆರ್ಮೆ ಈ ಪದ್ಯಗಳಲ್ಲಿ ಕೀರ್ತಿತವಾಗಿದೆ.

ಬ್ರಹ್ಮಶಿವನ ಕಾಲ ಸು. ೧೧೦೦[೪] ಎಂದು ಒಪ್ಪಿತವಿದೆ. ಕ್ರಿ. ಶ. ೧೦೪೦ರಲ್ಲಿದ್ದ ಜೇಡರದಾಸಿಮಯ್ಯನನ್ನು ಬ್ರಹ್ಮಶಿವನು ಉಲ್ಲೇಖಿಸಿದ್ದಾನೆ.[೫] ಆದರೆ ೧೨ ನೆಯ ಶತಮಾನದ ಯಾವೊಬ್ಬ ಶರಣನ ಉಲ್ಲೇಖವನ್ನೂ ಮಾಡುವುದಿಲ್ಲ. ಶರಣತತ್ವದ ಎಳೆಯಾಗಲೀ, ಶರಣರ ಬಗ್ಗೆ ವಿಡಂಬನೆಯ ಸುಳುಹಾಗಲೀ ಬ್ರಹ್ಮಶಿವನಲ್ಲಿ ದೊರೆಯುವುದಿಲ್ಲ.[೬] ಆದ್ದರಿಂದ ಬ್ರಹ್ಮಶಿವ ದಾಸಿಮಯ್ಯನಿಗೆ ಉತ್ತರದಲ್ಲಿ, ವಚನಕಾರರಿಗೆ ಪೂರ್ವದಲ್ಲಿ ಬಾಳಿದವನು. ಹಾಗಾಗಿ ಬ್ರಹ್ಮಶಿವನ ಕಾಲವಾದ ಸು. ೧೧೦೦ ಎಂಬ ಒಪ್ಪಿತ ಗಡುವನ್ನು ಸ್ವೀಕರಿಸುವುದಾದರೆ, ಬಂಧುವರ್ಮನ ಕಾಲವನ್ನು ಹಿಂದೆ ಸರಿಸಬೇಕಾಗುತ್ತದೆ. ಇಲ್ಲವೇ ಬಂಧುವರ್ಮ ಬ್ರಹ್ಮಶಿವನ ಸಮಕಾಲೀನನಾಗಿ ಬದುಕಿರಬೇಕು.[೭]

ಇದರಿಂದ ಈ ಕೆಳಗಿನ ಅಂಶಗಳು ಬೆಳಕಿಗೆ ಬರುತ್ತವೆ :

೧. ಬ್ರಹ್ಮಶಿವನ ಕಾಲ ಸು. ೧೧೦೦ ಎಂಬ ನಿರ್ಣಯ ಸರಿಯಿದ್ದರೆ, ಬಂಧುವರ್ಮನು ಕ್ರಿ. ಶ. ೧೧೦೦ ಕ್ಕಿಂತ ಹಿಂದೆ ಹೋಗುತ್ತಾನೆ. ಅಂದರೆ ಸುಮಾರು ೨೫ ವರ್ಷಗಳಾದರೂ ಹಿಂದೆ ಅನ್ನಬಹುದು.

೨. ಕರ್ಣಪಾರ್ಯನ ನೇಮಿನಾಥಪುರಾಣವನ್ನು ಬಂಧುವರ್ಮನು ತನ್ನ ಹರಿವಂಶಾಭ್ಯುದಯದಲ್ಲಿ ಅನುಸರಿಸಿರುವುದು ಅಸಹಜ. ಬಂಧುವರ್ಮನ ಪುರಾಣವನ್ನೇ ಕರ್ಣಪಾರ್ಯನು ತನ್ನ ನೇಮಿನಾಥಪುರಾಣದಲ್ಲಿ ಅನುಸರಿಸಿರುವುದು ಸಹಜ.

---

೪ ಕರ್ನಾಟಕ ಕವಿಚರಿತೆ, I (ದ್ವಿ. ಮು.), ಪು. ೧೩೨.

೫ ಸಮಯಪರೀಕ್ಷೆ, ಅಧಿಕಾರ ೯, ಪ. ೨೮, ಪು. ೧೯೮.

೬ ಸಮಯಪರೀಕ್ಷೆಯ ಹಲವು ಪದ್ಯಗಳು ವಚನಗಳಾಗಿರುವುದನ್ನು ಗುರುತಿಸಬಹುದು. ಇದು ಬ್ರಹ್ಮಶಿವನ ಪ್ರಭಾವ ವಚನಕಾರರ ಮೇಲೆ ಆದುದನ್ನು ಸೂಚಿಸುತ್ತದೆ. ಅದು ಬಿಟ್ಟು ಶರಣರ ವಚನಗಳ ಪ್ರಭಾವವೇ ಬ್ರಹ್ಮಶಿವನ ಮೇಲೆ ಆಗಿದ್ದರೆ, ಅವನ ಕಥೆಯೇ ಬೇರೆ ಆಗುತ್ತಿತ್ತು. ಈ ದಿಸೆಯಲ್ಲಿ ಆಂತರಿಕ ಕಾರಣಗಳ ಸೂಕ್ಷ್ಮ ಅಧ್ಯಯನ ಮತ್ತು ವಿವೇಚನೆಗಳಿಗೆ ಸಾಧ್ಯವಿದೆ.

೭ ಸಮಯಪರೀಕ್ಷೆ. ಪ್ರಸ್ತಾವನೆ: ಪು. xxx–xxxi.

ಕೊನೆಯದಾಗಿ, ಕನ್ನಡ ಕವಿಗಳ ಕಾಲನಿರ್ಣಯ ಇನ್ನೂ ತೊಡಕಿನ ಗಂಟಾಗಿಯೇ ಉಳಿದಿದೆ. ಈ ಗಂಟನ್ನು ಬಿಡಿಸಲು ಬೇಕಾಗುವ ಪೂರಕ ಸಾಮಗ್ರಿಯ ಕೊರತೆಯೂ, ಅಲಭ್ಯತೆಯೂ ಕಾರಣವಾಗಿದೆ ಎನ್ನದೆ ವಿಧಿಯಿಲ್ಲ.*

—ಎಸ್. ವಿ. ಶಿವಕುಮಾರ್

---

* ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರೂ, ಮುಖ್ಯಸ್ಥರೂ ಆದ ಡಾ. ಎಸ್. ಶೆಟ್ಟರ್ ಅವರು ಹಮ್ಮಿಕೊಂಡಿರುವ 'ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ ವಿವರಗಳು' ಎಂಬ ಯೋಜನೆ, ನನಗೆ ಕನ್ನಡ ಕಾವ್ಯಗಳನ್ನು ಅಭ್ಯಸಿಸುವ ಸದವಕಾಶ ವನ್ನು ಒದಗಿಸಿಕೊಟ್ಟಿದೆ. ಇದರ ಫಲವಾಗಿ ಈ ಟಿಪ್ಪಣಿ ಬಂದಿದೆ. ಅದಕ್ಕಾಗಿ ಡಾ. ಎಸ್ ಎಸ್. ಶೆಟ್ಟರ್ ಅವರಿಗೆ ನಾನು ಋಣಿಯಾಗಿರುವೆ.

ಗ್ರಂಥಾವಲೋಕನ

ನಿರಂಜನ :

ಸಂ. ಎ. ಎಸ್. ಹೂಗಾರ, ಎಚ್. ಪಿ. ಹುಲ್ಯಾಳ, ಪ್ರ : ಶ್ರೀ ನಿರಾಧಾರಜಗದ್ಗುರು ಪಟ್ಟಾಧಿಕಾರ ಮಹೋತ್ಸವ ಸಮಿತಿ. ಶ್ರೀ ನಿ.ಜ. ತೋಂಟದಾರ್ಯ ಸಂಸ್ಥಾನಮಠ, ಗದಗ-ಬೆಟಗೇರಿ. ಪುಟ : VI+೧೭೪. ಬೆಲೆ : ರೂ. ೫-೦೦.

ಕಲ್ಯಾಣಕ್ರಾಂತಿಯ ತರುವಾಯ ವೀರಶೈವಧರ್ಮದ ಹಿರಿಮೆ, ವಚನ ಸಾಹಿತ್ಯದ ಗರಿಮೆ ಮತ್ತೆ ಕಾಣಮೊರೆಯುವುದು ೧೫ನೆಯ ಶತಮಾನದಲ್ಲಿ. ಅದಕ್ಕೆ ಮುಖ್ಯಕಾರಣರು ತೋಂಟದ ಸಿದ್ಧಲಿಂಗಯತಿಗಳು. ವಚನಸಾಹಿತ್ಯದ ಮಹಿಮೆಯನ್ನು ಎತ್ತಿತೋರಿದ ಮಹಾಮಹಿಮಾನ್ವಿತರವರು. ಅವರು ಬೆಳಗಿದ ಜ್ಯೋತಿ ನಾಡಿನ ತುಂಬೆಲ್ಲ ಪ್ರಕಾಶಿಸಿತು. ಆ ತೇಜಃಪುಂಜ ಪ್ರಕಾಶದ ಕುರುಹಾಗಿ ಇಂದಿಗೂ ದೇದೀಪ್ಯಮಾನವಾಗಿ ಬೆಳಗುತ್ತಿದೆ ಡಂಬಳ-ಗದಗಿನ ಶ್ರೀ ತೋಂಟದಾರ್ಯಮಠ. ಆ ಪೀಠಪರಂಪರೆಯ ೭೪ ನೆಯ ಗುರುಗಳಾಗಿ ಶ್ರೀ ಮ. ನಿ. ಜ. ಸಿದ್ಧಲಿಂಗಮಹಾಸ್ವಾಮಿಗಳವರು ಗದಗಮಠದ ನಿರಂಜನ ಪಟ್ಟಾಧಿಕಾರ ವಹಿಸಿದ ಮಹೋತ್ಸವದ ಸವಿನೆನಪಿಗಾಗಿ ಹೊರತರಲಾದ ಕೃತಿ, ನಿರಂಜನ.

ತೋಂಟದಾರ್ಯರ ವ್ಯಕ್ತಿತ್ವವನ್ನೂ ಅವರ ಸಾಹಿತ್ಯದ ಮಹೋನ್ನತಿಯನ್ನೂ ಸಾರುವ ಹಲವುಹತ್ತು ಲೇಖನಗಳು ಇಲ್ಲಿವೆ. 'ತೊಳಗಿ ಬೆಳಗುವ ತೋಂಟದಾರ್ಯಮಠ' ಎಂಬ ಲೇಖನವು ತೋಂಟದಾರ್ಯರ ಜೀವನವನ್ನು, ಅವರ ಪೀಠಪರಂಪರೆಯನ್ನು, ಶ್ರೀಮಠದ ವೈಭವ, ವೈಶಿಷ್ಟ್ಯ, ಅಮೂಲ್ಯ ಸಂಪತ್ತನ್ನು ಅಲ್ಪದರಲ್ಲಿ ಅಂದವಾಗಿ ಪರಿಚಯಮಾಡಿಕೊಡುತ್ತಿದೆ. ಸಿದ್ಧಲಿಂಗ ಶ್ರೀಗಳವರ ವ್ಯಕ್ತಿತ್ವವನ್ನೂ ಅಲ್ಲಿ ನಿರೂಪಿಸಲಾಗಿದೆ. 'ರಾಜಶಿವಯೋಗಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು' ಎಂಬ ಲೇಖನ ತೋಂಟದಾರ್ಯರ ವ್ಯಕ್ತಿತ್ವ ನಿರೂಪಣೆಯೊಂದಿಗೆ ಅವರ ಷಟ್‌ಸ್ಥಲಜ್ಞಾನಸಾರಾಮೃತದ ಹಿರಿಮೆಯನ್ನೂ, ಅಲ್ಲಿ ಅವರು ನಿರೂಪಿಸಿರುವ ನೂತನಸ್ಥಲಕಟ್ಟುಗಳ ವಿವೇಚನೆಯನ್ನೂ, ತೋಂಟದಾರ್ಯರು ತೋರಿದ ರಾಜಶಿವಯೋಗದ ಮೇಲ್ಮೆಯನ್ನೂ ಎತ್ತಿ ಹೇಳುತ್ತಿವೆ. 'ಸಿದ್ಧೇಶ್ವರಪುರಾಣದಲ್ಲಿ ಚಿತ್ರಿತವಾದ ಶ್ರೀ ತೋಂಟದ ಸಿದ್ಧಲಿಂಗ ಯತಿಗಳ ಜೀವನ, ಸಾಧನೆ, ಬೋಧನೆ' ಎಂಬ ಲೇಖನ ಸಿದ್ಧಲಿಂಗಯತಿಗಳನ್ನು

ಕುರಿತು ಜನರಲ್ಲಿ ಬೇರುಬಿಟ್ಟಿರುವ ನಂಬಿಕೆಗಳನ್ನು ಸ್ವಾನುಭಾವದ ಒರೆಗೆ ತಿಕ್ಕಿ ವಿವೇಚಿಸಿದುದಾಗಿದೆ. ೧೨ ನೆಯ ಶತಮಾನದ ಶಿವಶರಣರ ತರುವಾಯ ವೀರಶೈವ ತತ್ತ್ವಜ್ಞಾನಕ್ಕೆ ಭದ್ರವಾದ ಬುನಾದಿ ಹಾಕಿ ಷಟ್‌ಸ್ಥಲಚಕ್ರವರ್ತಿ ಎಂಬ ಮನ್ನಣೆಗೆ ಪಾತ್ರರಾದವರು ತೋಂಟದ ಸಿದ್ಧಲಿಂಗಯತಿಗಳು. ವೀರಶೈವ ಧರ್ಮದ ಸಿದ್ಧಾಂತಗಳೆಲ್ಲ ಹೆಪ್ಪುಗಟ್ಟಿನಿಂತಿವೆ ತೋಂಟದಾರ್ಯರ ವಚನಗಳಲ್ಲಿ. ಅವನ್ನು ಆಧಾರಸಹಿತ ನಿರೂಪಿಸಿದ್ದಾರೆ ಶ್ರೀಮತಿ ನೀಲಗಂಗಾದೇವಿ ಚರಂತಿಮಠ ಅವರು.

ಶಿವಯೋಗವನ್ನು ರಾಜಶಿವಯೋಗವೆಂದು ಕರೆದರು ತೋಂಟದಸಿದ್ಧಲಿಂಗ ಶಿವಯೋಗಿಗಳು. ಅದರ ವೈಶಿಷ್ಟ್ಯವನ್ನೂ ಅದಕ್ಕೆ ತೋಂಟದಾರ್ಯರು ರೂಪಿಸಿ ಕೊಟ್ಟ ಸ್ವರೂಪವನ್ನೂ ಡಾ. ನಿಜಲಿಂಗಮ್ಮ ಕೊಪ್ಪಳ ಅವರು ವಿವೇಚಿಸಿದ್ದಾರೆ. ಆದರೆ ಅಲ್ಲಿ ರಾಜಶಿವಯೋಗದ ವ್ಯಾಖ್ಯಾನದಂತಿರುವ "ಯಮ, ನಿಯಮ, ಆಸನ, ಪ್ರಾಣಾಯಾಮ..." (೩೬೪) ಎಂಬ ವಚನದ ಉಲ್ಲೇಖವೇ ಇಲ್ಲದಿರು ವುದು ಆ ಲೇಖನದ ಕೊರತೆಯನ್ನು ಹೇಳುತ್ತಿದೆ. ತೋಂಟದ ಸಿದ್ಧಲಿಂಗರ ಜೀವನದ ಒಂದು ದರ್ಶನವನ್ನು ಕಾಣಹೊರಟಿರುವ ಪ್ರೊ. ಎಸ್. ಎಸ್. ಭೂಸನೂರಮಠರವರು ಜಾಳುಜಾಳಾಗಿ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಮಾನ್ಯರು ಅಲ್ಲಿ ಏನನ್ನು ಹೇಳಲು ಪ್ರಯತ್ನಿಸಿದ್ದಾರೆ ಎಂಬುದೇ ತಿಳಿಯುವುದಿಲ್ಲ.

ಡಾ. ಎಚ್. ಪಿ. ಮಲ್ಲೇದೇವರು ಅವರು ಶಿವಯೋಗಿಗಳ ಒಂದು ವಚನ ವನ್ನಾಯ್ದುಕೊಂಡು ಅದರಲ್ಲಿ ಹುದುಗಿರುವ ಭಾವವನ್ನು ಪಾಂಡಿತ್ಯ, ಪ್ರತಿಭೆಗಳ ಮೂಲಕ ವಿವೇಚಿಸಿದ್ದಾರೆ ವೀರಶೈವಸಿದ್ಧಾಂತದ ಪ್ರಕಾರ ಸೃಷ್ಟಿ, ಸ್ಥಿತಿ, ಸಂಹಾರವನ್ನು ನಿರೂಪಿಸುವ ವಚನ ಇದಾಗಿದೆ. ಇದೇ ಮಾದರಿಯಲ್ಲಿ ತೋಂಟ ದಾರ್ಯರ ಉಳಿದ ಎಲ್ಲ ವಚನಗಳನ್ನು ಹಿಂಜಿಹಿಂಜಿ ವಿವರಿಸಿದ್ದಾದರೆ, ವೀರಶೈವ ಸಿದ್ಧಾಂತಕ್ಕೆ ಆ ಶಿವಯೋಗಿಯ ಕೊಡುಗೆ ಎಂಥದು ಎಂಬುದು ವೇದ್ಯವಾಗು ತ್ತದೆ. 'ತೋಂಟದ ಸಿದ್ಧಲಿಂಗರ ವಚನಗಳಲ್ಲಿ ವೀರಶೈವಧರ್ಮ' ಎಂಬುದು ಒಂದು ಮಹಾಪ್ರಬಂಧದ ವಸ್ತುವಾಗಬಲ್ಲ ವಿಷಯವ್ಯಾಪ್ತಿಯುಳ್ಳುದು.

ಇಷ್ಟೆಲ್ಲ ತೋಂಟದಾರ್ಯರಿಗೆ ಸಂಬಂಧಿಸಿದ ವಿಷಯವಾದರೆ, ಗದುಗಿನ ತೋಂಟದಾರ್ಯಮಠವನ್ನು ಕುರಿತ ವಿವೇಚನೆಯೂ ಇಲ್ಲಿದೆ. ಅವುಗಳಲ್ಲಿ ಶ್ರೀಮಠದ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲುವ ಪ್ರೊ. ಜಿ. ಎಂ. ಉಮಾಪತಿಶಾಸ್ತ್ರಿಯವರ ಕಾಗದಪತ್ರಸಾಹಿತ್ಯ ಎಂಬ ಲೇಖನ ವೈಶಿಷ್ಟ್ಯಪೂರ್ಣ ವಾಗಿದೆ. ಶ್ರೀಮಠದ ಇತಿಹಾಸಕ್ಕೆ ಹಲವು ಆಧಾರಗಳನ್ನು ಒದಗಿಸುತ್ತದೆ. ಗದಗಿನ ಮಠದ ಪರಿಚಯವನ್ನು ಹ. ರಾ. ಕಿದಿಯೂರ ಅವರು ಮಾಡಿದ್ದಾರೆ. ಡಂಬಳ

ದಲ್ಲಿ ನೆಲೆಯೂರಿನಿಂತ ಅರ್ಧನಾರೀಶ್ವರ ಸ್ವಾಮಿಗಳನ್ನು ಕುರಿತ ಲೇಖನವೂ ಇಲ್ಲಿದೆ. ತೋಂಟದಾರ್ಯರ ಬರುವಿಕೆಯ ಕಣ್ಸನ್ನೆಯಂತೆ ಮೆರೆದ ನೂರೊಂದು ವಿರಕ್ತರನ್ನು ಕುರಿತೂ ಇಲ್ಲಿ ವಿವೇಚಿಸಲಾಗಿದೆ. ಶಿವಾನುಭಾವದ ವಿಶೇಷತೆಯನ್ನು ಸಾರುವ ಪ್ರೊ. ಎಸ್. ಎಸ್. ಮಾಳವಾಡರವರ ಲೇಖನ ಔಚಿತ್ಯಪೂರ್ಣವಾಗಿದೆ.

ತೋಂಟದಾರ್ಯರನ್ನು ಕುರಿತು ಜ. ಚ. ನಿ. ಗಂಗಪ್ಪ ವಾಲಿ ಮೊದಲಾದವರು ಬರೆದ ಪದ್ಯಗಳೂ ಇಲ್ಲಿವೆ.

ಆದರೆ ಬಹಳಷ್ಟು ಲೇಖನಗಳು ತೋಂಟದಾರ್ಯರ ವ್ಯಕ್ತಿತ್ವವನ್ನು ನಿರೂಪಿಸುವಲ್ಲಿಯೇ ತೃಪ್ತವಾಗಿರುವುದರಿಂದ ಪುನರುಕ್ತಿದೋಷ ಅಲ್ಲಲ್ಲಿ ಕಾಣ ದೊರೆಯುತ್ತದೆ. ಈ ರೀತಿಯ ಸಂಪುಟಗಳನ್ನು ಹೊರತರುವಾಗ ಲೇಖಕರಿಗೆ ನಿರ್ದಿಷ್ಟ ವಿಷಯಕೊಟ್ಟು ಬರೆಯಲು ಕೇಳಿದರೆ ಮೇಲಿನ ದೋಷ ನಿವಾರಿಸ ಬಹುದು. ಷಟ್ಸ್ಥಲಜ್ಞಾನಸಾರಾಮೃತದ ವಚನಗಳ ಸೊಗಸನ್ನು ಭೂಸರಡ್ಡಿ ಯವರು ವಿವೇಚಿಸಲು ಪ್ರಯತ್ನಿಸಿರುವುದಾದರೂ ಅಂಗೈಯಲ್ಲಿ ಆಗಸವನ್ನು ಹಿಡಿದಿಟ್ಟಂತಾಗಿದೆ. ಅದನ್ನು ವಿವಿಧ ದೃಷ್ಟಿಯಿಂದ ಬೇರೆಬೇರೆ ಲೇಖಕರು ಅವಲೋಕಿಸಿದ್ದರೆ ಈ ಗ್ರಂಥವೊಂದು ಸಿದ್ಧಲಿಂಗರ ವ್ಯಕ್ತಿತ್ವ, ಸಾಹಿತ್ಯಕ್ಕೆ ಕೈಪಿಡಿಯಾಗಬಹುದಿತ್ತು. ಸಿದ್ಧಲಿಂಗರ ನಿಸರ್ಗಪ್ರಿಯತೆ, ಸಮಾಜವಿಡಂಬನೆ, ಕಾವ್ಯಚೆಲುವು, ದೃಷ್ಟಾಂತ ಮೊದಲಾದವು ಇನ್ನೂ ವಿವೇಚಿಸಬೇಕಾದ ವಿಷಯ ಗಳು.

ನೂರುಶತಕ :

ಸಂ. ಶಾಂತರಸ. ಪ್ರ : ಸತ್ಯಸ್ನೇಹ ಪ್ರಕಾಶನ, ರಾಯಚೂರು. ಪುಟ: XVIII + ೪೨ + ೧೪೨. ಬೆಲೆ : ರೂ. ೮-೦೦.

'ಶತಕ' ಎಂದರೆ ನೂರು. ನೂರು ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚು ಇದ್ದು ಭಕ್ತಿ, ಜ್ಞಾನ, ವೈರಾಗ್ಯ, ತತ್ತ್ವ, ನೀತಿ, ಶೃಂಗಾರ ಭಾವಗಳನ್ನು ಅಭಿವ್ಯಕ್ತಗೊಳಿಸುವ ಪದ್ಯಗಳ ಗುಚ್ಛ 'ಶತಕ'. ಈ ಸಾಹಿತ್ಯಪ್ರಕಾರಕ್ಕೂ ಸಂಸ್ಕೃತವೇ ಪ್ರೇರಕ.

ಕನ್ನಡದಲ್ಲಿ ಶತಕಸಾಹಿತ್ಯ ಮೊದಲು ಕಾಣಿಸಿದುದು ನಾಗವರ್ಮಾಚಾರ್ಯ ನಿಂದ. ಈ ಶತಕಸಾಹಿತ್ಯ ಸಾಹಿತ್ಯಪ್ರಪಂಚದಲ್ಲಿ ದಾಂಗುಡಿಯಿಟ್ಟುದು ಹರಿ ಹರನಲ್ಲಿ. ಅವನ ಪಂಪಾಶತಕ, ರಕ್ಷಾಶತಕಗಳು ಶತಕಸಾಹಿತ್ಯದ ಪರಮ ಸಿದ್ಧಿಯ ಪತಾಕೆಗಳು. ಆ ತರುವಾಯ ಸುಮಾರು ೧೫೦ ಶತಕಗ್ರಂಥಗಳು ಕನ್ನಡದಲ್ಲಿ ಬಂದಿವೆ. ಅವುಗಳಲ್ಲಿ ಮುಗ್ಗೆಯ ಮಾಯಿದೇವ, ರತ್ನಾಕರ

ವರ್ಣಿಯ ಕೃತಿಗಳನ್ನು ಬಿಟ್ಟರೆ ಹೆಸರಿಸಬೇಕಾದವು 'ಸಂಗಪಿಭು'ವಿನ ಮೂರು ಶತಕಗಳು.

೧೯ನೆಯ ಶತಮಾನದಲ್ಲಿ ಚಂಪೂರೂಪದಲ್ಲಿ ಶತಕಗಳನ್ನು ಬರೆದ ಸಂಗಪಿಭು ರಾಯಚೂರು ಜಿಲ್ಲೆಯ ಗಣೇಕಲ್ಲಿನ ಚಿಕ್ಕಸಂಸ್ಥಾನಿಕ. 'ಲಕ್ಷ್ಮೀಶ ನನಗೆ ತಮ್ಮ, ಪಡಕ್ಷರಿ ಅಣ್ಣ' ಎಂದು ಹೇಳಿಕೊಳ್ಳುತ್ತಿದ್ದ ಈತನು ಅಸಮಾನ್ಯ ಪಂಡಿತನೂ, ಅಸಾಧಾರಣ ಪ್ರತಿಭಾವಂತನೂ, ಸಕಲಶಾಸ್ತ್ರಕೋವಿದನೂ, ಶೂರನೂ ಆಗಿದ್ದನು. ಆ ಗುಣಗಳ ಮಧುರಫಲವೆನ್ನುವಂತೆ ಈತನಿಂದ 'ಕುಮಾರವಿಜಯ' ಎಂಬ ಕಾವ್ಯವೂ, ಬಸವಶತಕ, ಭುವನೈಕನಾಯಕೀಶತಕ, ಪಂಪಾಶತಕ ಎಂಬ ಶತಕಗಳೂ ಮೂಡಿಬಂದಿವೆ. ಈತನ 'ಕುಮಾರವಿಜಯ' ಕಾಳಿದಾಸನ 'ಕುಮಾರಸಂಭವ' ಕಾವ್ಯದಿಂದ ಪ್ರಭಾವ ಹೊಂದಿ, ಸ್ವತಂತ್ರ ಕಾವ್ಯಸೌಂದರ್ಯ ವನ್ನೊಳಗೊಂಡ ಕೃತಿ.

ಇವುಗಳಲ್ಲಿ 'ಬಸವಶತಕ'ವು ಬಸವೇಶ್ವರನ ಚರಿತ್ರೆಯನ್ನೂ, ಪವಾಡ ಗಳನ್ನೂ ನಿರೂಪಿಸುವುದಾಗಿದೆ. ಅಲ್ಲಿ ನೀತಿ, ಸಮಕಾಲೀನಸ್ಥಿತಿ ಹಿತಮಿತ ವಾಗಿ ಸಮ್ಮಿಲನಗೊಂಡು ಬಂದಿವೆ. ಕವಿಯು ತನ್ನ ಜೀವನದಲ್ಲಿ ಪಟ್ಟ ಯಾತನೆ, ಅನುಭವಿಸಿದ ಕಷ್ಟ ಮೊದಲಾದವುಗಳೂ ಇಲ್ಲಿ ಎಡೆಪಡೆದಿವೆ. ಕವಿಯು ಈ ಕಾವ್ಯವನ್ನು ಬರೆಯಲು ಒದಗಿದ ಪ್ರಸಂಗವನ್ನು, ಅಲ್ಲಿಯ ಜನರ ನಾಲಗೆಯ ಮೇಲೆ ನಲಿಯುತ್ತಿರುವ ಐತಿಹ್ಯವೊಂದರಿಂದ ಸೊಗಸಾಗಿ ವಿವರಿಸಿದ್ದಾರೆ ಸಂಪಾದಕರು.

ಭುವನೈಕನಾಯಕೀ ಶತಕವು ಪಾರ್ವತಿಯನ್ನು ಅನನ್ಯಭಕ್ತಿಯಿಂದ ಸ್ತುತಿ ಸಿದ ಕಾವ್ಯವಾಗಿದೆ. ಅಲ್ಲಿ ನೀತಿ ನವುರಾಗಿ ಹರಡಿಕೊಂಡಿದೆ; ಭಕ್ತಿ ಮೃದು ವಾಗಿ ಮೈಚಾಚಿದೆ. ಪಾರ್ವತಿಯ ವರ್ಣನೆಯಲ್ಲಿ ಸಾಮಾನ್ಯ-ಅಸಾಮಾನ್ಯ ಸ್ತ್ರೀಯರ ಗುಣಸ್ವಭಾವಗಳನ್ನು ಸಮ್ಮಿಲನಮಾಡಿರುವಲ್ಲಿ ಕವಿಯ ಪ್ರತಿಭೆ ಎದ್ದು ತೋರಿದೆ.

ಪಂಪಾಶತಕವು ಪಂಪಾಪುರಾಧೀಶ್ವರನಲ್ಲಿ ಮೊರೆಹೊಕ್ಕು ಬರೆಯಲಾದ ಕೃತಿ. ಇದು ಕವಿಯ 'ಆರ್ತತೆಗೆ, ಮೊರೆಗೆ ನಾಲಗೆಯಾಗಿದೆ' ಎಂದು ಸಂಪಾ ದಕರು ಹೇಳಿರುವ ಮಾತು ಅರ್ಥವತ್ತಾಗಿದೆ. ಕಾಮ, ಕ್ರೋಧ, ಲೋಭ ಮೊದಲಾದ ಅರಿಷಡ್ವರ್ಗಗಳಿಂದ ತಪ್ತನಾಗಿರುವ ಕವಿ ಅವುಗಳಿಂದ ಬಿಡುಗಡೆ ಯಾಗಲು ಬಯಸಿ ಬರೆದವುಗಳಾಗಿವೆ ಈ ಪದ್ಯಸಾಲುಗಳು. ಇಲ್ಲಿ ಶಿವನನ್ನು ಕುರಿತು ಅತ್ಯಂತ ದೈನ್ಯತೆಯಿಂದ ಪ್ರಾರ್ಥಿಸಿರುವ ಪದ್ಯಗಳು, ದಿನನಿತ್ಯದ ಪೂಜಾವಸರದ ಸ್ತೋತ್ರಪದ್ಯಗಳಾಗುವುದರಲ್ಲಿ ಸಂದೇಹವಿಲ್ಲ.

ಹೀಗೆ ಮಾನವನ ಆರ್ತಭಾವನೆಯ ಪ್ರತಿನಿಧಿಯಂತಿರುವ ಈ ಶತಕಗಳನ್ನು ಶಾಂತರಸರವರು ಒಳ್ಳೆಯ ನಿಷ್ಠೆಯಿಂದ ಸಂಪಾದನೆ ಮಾಡಿದ್ದಾರೆ. ಈ ಗ್ರಂಥಕ್ಕೆ ಅವರು ಬರೆದಿರುವ ಸು. ೪೨ ಪುಟಗಳ ಪ್ರಸ್ತಾವನೆ ಅವರ ಸಂಪಾದನಶಾಸ್ತ್ರದ ಪರಿಣತಿಯನ್ನೂ ಕವಿಯ ಕಾವ್ಯದ ಬಗೆಗಿನ ಆಳವಾದ ಅಭ್ಯಾಸವನ್ನೂ ಎತ್ತಿಹೇಳುತ್ತಿದೆ. ಕವಿಯ ಜೀವನ ಚಿತ್ರಣಕ್ಕೆ ಬೇಕಾದ ಆಂತರಿಕ ಆಧಾರಗಳನ್ನೂ, ಐತಿಹ್ಯಗಳನ್ನೂ, ಜನವದಂತಿಗಳನ್ನೂ ಸಂಗ್ರಹಿಸಿ ಅದನ್ನು ಸಮಗ್ರವಾಗಿ ಕೊಡಲು ಪ್ರಯತ್ನಿಸಿದ್ದಾರೆ. ಕವಿಯ ಪಾಂಡಿತ್ಯ, ಪ್ರತಿಭೆಗಳನ್ನು ಕುರಿತು ಆಡಿರುವ ತೂಕಬದ್ಧ ಮಾತುಗಳು ಸಂಗವಿಭುವಿನ ಕಾವ್ಯದ ಹಿರಿಮೆಯನ್ನು ಸಾರುತ್ತಿವೆ.

ಒಂದೊಂದು ಶತಕವನ್ನು ವಿಮರ್ಶೆಗೆ ಆಯ್ದುಕೊಂಡು ಅಲ್ಲಿ ವ್ಯಕ್ತವಾಗಿರುವ ಕವಿಯ ಮೊರೆಯನ್ನೂ, ಚಾರಿತ್ರಿಕ ಅಂಶಗಳನ್ನೂ ಸೊಗಸಾಗಿ ವಿವೇಚಿಸಲಾಗಿದೆ. ಅಲ್ಲಿ ಮುದುಗಟ್ಟಿನಿಂತಿರುವ ಕಾವ್ಯಸೊಗಸನ್ನೂ ತೆರೆದು ತೋರಿಸಲಾಗಿದೆ. ವ್ಯಷ್ಟಿಯಲ್ಲಿ ಕವಿಯ ಮೊರೆ, ಸಮಷ್ಟಿಯಲ್ಲಿ ಇಡೀ ಮಾನವಕುಲದ ಮೊರೆಯಾಗಿರುವ ಭಾಗಗಳನ್ನು ವಿಶ್ಲೇಷಿಸಲಾಗಿದೆ. ಕೊನೆಯಲ್ಲಿ ಕವಿಯ ಇಡೀ ವ್ಯಕ್ತಿತ್ವವನ್ನು ಭಾಷೆ, ಶೈಲಿ, ಛಂದಸ್ಸುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿವೇಚಿಸಲಾಗಿದೆ, ಕವಿಯ ಹೆಚ್ಚಳವನ್ನು ಕುರಿತೂ ಹೇಳಲಾಗಿದೆ.

ಮುದ್ರಣ ಅಂದವಾಗಿದೆ. ಮುಖಪುಟ ಸೊಗಸಾಗಿದೆ. ಸಂಗವಿಭುವಿನ ವ್ಯಕ್ತಿತ್ವ ನಿರೂಪಿಸುವ ಒಂದು ಸುಂದರ ಛಾಯಾಚಿತ್ರವೂ ಇಲ್ಲಿದೆ. ಇವೆಲ್ಲವುಗಳಿಂದ ಇದೊಂದು ಸಂಗ್ರಹಯೋಗ್ಯವಾದ ಕೃತಿಯಾಗಿದೆಯೆಂದು ಹೇಳಬಹುದು.

—ಬಿ. ವ್ಹಿ. ಶಿರೂರ

ಹತ್ತರ ಕೂಡ ಹನ್ನೊಂದು :

ಶಿವಶರಣ ಜಾವಳಿ. ಪ್ರ : ವಿಚಾರ ಭಾರತಿ ಅಧ್ಯಯನ ವೇದಿಕೆ, ಕಲಬುರ್ಗಿ, ೧೯೭೫. ಪುಟ : ೫೧+೭+೭. ಬೆಲೆ : ರೂ. ೪-೦೦.

ತನ್ನ ಹೃದ್ಯಶೈಲಿಯಿಂದ ಮನಸೆಳೆಯುವ ಶಿವಶರಣ ಜಾವಳಿ ಅವರ ಈ ಎರಡನೆಯ ಕವನಸಂಕಲನ, ನಮ್ಮ ಈಚಿನ ಬರಹಕ್ಕೆ ಸೇರುವ ಹೊಸ ರಕ್ತ; ಹೊಸಜೀವ. ಎಂಥ ಸಂಕೀರ್ಣ ಭಾವ-ವಿಚಾರವನ್ನೂ ಸಂಕೀರ್ಣಭಾಷೆಯಲ್ಲಿ ಒಡ್ಡಗೊಳಿಸದೆ, ಎದುರಾ ಎದುರು ಭೆಟ್ಟಿಯಾದಾಗ ಆಡುವಂತಹ ಆಪ್ತ

ಮಾತಿನಂತೆ ಬಿಚ್ಚುತ್ತ ಸಾಗುವ ಜಾವಳಿ ಅವರ ಈ ಪದ್ಯ ಖಂಡಗಳನ್ನು ಲಕ್ಷಿಸಬೇಕು :

ಬಿಳಿಯ ಹಾಳೆಯ ಮೇಲೆ
ನಿಬ್ಬ ಮೂಡುತ್ತ ಹೋದಂತೆ
ಹಿಂದೆ ಎಳೆದಾಡುತ್ತ ಬರುತ್ತದೆ
ಕಪ್ಪಿಟ್ಟ ಕವಿಯ ಹೆಣ.

ಹಾಗೂ

ಸತ್ತ ಪ್ರಾಣಿಗಳ ಅಂಗಾಂಗಗಳನೆಲ್ಲ
ಎಳೆದೆಳೆದು ಕಿತ್ತು ತಿಂದು ಮಲಗಿದ ನಾಯಿ
ಕನಸಿನಲಿ ತತ್ವಜ್ಞಾನಿಯಾಗಿ ಬಿಟ್ಟಿತ್ತು.

ಹಾಗೂ

ಜಟಾಲಂಕಾರಕ್ಕೆ
ಹೂವೇನು ಕರುಳೇನು?
ಎಲ್ಲ ಒಂದೇ ಅವಳಿಗೆ.
ಒಮ್ಮೆ ಶಿವೆ ಒಮ್ಮೆ ರುದ್ರೆ
ಅವಳು 'ಪುರುಷ'ದ ಛಾಯೆ.

ಹಾಗೂ

'ಬಿಕೋ' ಎಂದು ಅನಾಥವಾಗಿ
ಬಿದ್ದಿಕೊಂಡಿರುವ ದೇಶ ಇವನದಾದರೂ
ಕಾಣದ ಪ್ರಾಯ.
ಬಿಸಿತಲೆಯಲ್ಲಿ ಪ್ರವೇಶ ಸಿಗದೆ
ಬರುವ ಭವಿಷ್ಯವೆಲ್ಲ ತಣ್ಣಗೆ.

ಇಲ್ಲೆಲ್ಲ ವ್ಯಕ್ತವಾಗುವ ಭಾವ, ಕಲ್ಪನೆ, ಹೊಸದು; ಅದಕ್ಕೆ ತಕ್ಕುದಾದ ಅಭಿವ್ಯಕ್ತಿಯೂ ಹೊಸದು.

ತೀವ್ರವಾಗಿ ಮನಸ್ಸನ್ನು ಚುಚ್ಚುವ ವಿಡಂಬನೆಯು ನೆರಳಿನಲ್ಲಿಯೇ ವಿಷಾದವನ್ನೂ ದಟ್ಟವಾಗಿ ಚಾಚುವ ಕಲೆಯು ಜಾವಳಿಯವರ ಬರೆಹದ ವೈಶಿಷ್ಟ್ಯ. ವೈಯಕ್ತಿಕವಲ್ಲದೆ, ಸಾಮಾಜಿಕ, ರಾಜಕೀಯ ಕಾಳಜಿಗಳೆಲ್ಲಕ್ಕೂ ಈ ಕವಿ ತನ್ನನ್ನು ಒಪ್ಪಿಸಿಕೊಳ್ಳುವವರಿಂದ ಇವರ ಪದ್ಯಕ್ಕೆ ವಸ್ತುವಿನ ಆಯ್ಕೆಯ ದೃಷ್ಟಿಯಿಂದ ಪ್ರಬುದ್ಧತೆ, ವೈಶಾಲ್ಯ ಪ್ರಾಪ್ತವಾಗಿದೆ. ಹೀಗೆ ತನ್ನ ಅಭಿವ್ಯಕ್ತಿಯ ಭೂಮಿಕೆಯನ್ನು ಹರವಾಗಿಸಿಕೊಂಡಾಗಲೂ ಕವಿ, ಜಾಪಾಳವಾಗದೆ ಯಾರದೋ ಧಾಟಿ–

ಧೋರಣೆಯ ಪ್ರತಿಧ್ವನಿ(echo) ಆಗದೆ, ಸ್ವಂತಿಕೆಯನ್ನೂ ಸೃಜನಶೀಲತೆಯನ್ನೂ ತೋರುತ್ತಾನೆ. ಆದುದರಿಂದ ಕವಿಯ ಬೆಳವಣಿಗೆಯ ಬಗೆಗೆ ತುಸು ಕುತೂಹಲ, ಆಸೆ ಮೂಡುತ್ತದೆ. ವಚನಸಾಹಿತ್ಯದ ರೂಪಾಂಶ, ಆಪ್ತಶೈಲಿ ಇವರ ಮೇಲೆ ಗಾಢ ಪರಿಣಾಮ ಬೀರಿದ್ದು ಮೇಲ್ನೋಟಕ್ಕೇ ಗೋಚರವಾಗುವ ಸಂಗತಿ. ಆದರೆ ಅಂಧಾನುಕರಣೆಯ ಯಾವ ದೋಷವೂ ಕಣ್ಣಿಗೆ ಹೊಡೆಯುವದಿಲ್ಲ: ವಚನಗಳ ಒಳ್ಳೆಯ ಗುಣವನ್ನು ಅನುಕರಿಸಿಯೂ ಜಾವಳಿಯವರು ಸ್ವಯಂಪೂರ್ಣವಾದ, ತಾಜಾತನದ ತಮ್ಮ ಸ್ವಭಾವವನ್ನು ಪ್ರಕಟಿಸಿರುವುದರಿಂದ.

ಜಾವಳಿಯವರ ಕವಿತೆಗಳಿಗೆ ದಕ್ಕಿದ ವಿಚಾರ, ಅನಿಸಿಕೆ, ಅನುಭವಗಳೆಲ್ಲ ಆಳವಾದ ನೆಲೆಯನ್ನಾಗಲಿ, ಅತ್ಯುನ್ನತವಾದ ಗುರಿಯನ್ನಾಗಲಿ ತಲುಪುವಂಥವಲ್ಲ. ಏನಿದ್ದರೂ ಇವರ ಕವಿತೆಯ ವಸ್ತು ಹೆಚ್ಚಾಗಿ ಸೆಲಕ್ಕಂಟಿದ, ವ್ಯಕ್ತಿಯ ಮೈ-ಮನಗಳನ್ನು ಕಾಡುವ, ಕೆದರುವ ಅಂಶವನ್ನೇ ಒಳಗೊಳ್ಳುತ್ತದೆ. ವಸ್ತುವಿನ ಆಯ್ಕೆಯಲ್ಲಿ ಈ ಮಿತಿ ಇರುವದರಿಂದ ಒಮ್ಮೊಮ್ಮೆ ಕವಿ ತೀರ ಸರಳನಾಗಿ ಬಿಡುವುದೂ ಉಂಟು. ಉದಾ: 'ಪಯಣ', 'ನಾನೇ ಕಟ್ಟಿಕೊಂಡ ನನ್ನ ಮನೆ' ಕವಿತೆಗಳ ಕೊನೆಯ ಸಾಲುಗಳು; 'ಅಜ್ಜ ನೆಟ್ಟಿರುವ ಆಲದ ಮರ'ದ ಎಲ್ಲಾ ಸಾಲುಗಳು ಪೂರ್ವಸಿದ್ಧ ವಿಚಾರಕ್ಕೆ ಕವಿ ಹಠಾತ್ತನೆ ಬರೆದ ಶರಾ (ರಿಮಾರ್ಕ್) ವಾಕ್ಯದಂತಿವೆ. ಅಂದರೆ ಕವಿತೆಯಾಗಿ ಇವು ಭಾವಾಭಿನಯಿಸುವುದಿಲ್ಲ. ಕೆಲವು ಸಲ ಇವರ ಕವಿತೆಯಲ್ಲಿ ಭಾಷಣದ ಧಾಟಿಯೂ ನುಸುಳಿಬಿಡುತ್ತದೆ. ಉದಾ: 'ಕಾಳರಾತ್ರಿ' ಕವನದ ಎರಡನೆಯ ಭಾಗ.

ಜಾವಳಿಯವರ ಕಲ್ಪನಾಶಕ್ತಿ, ವಿಡಂಬನೆಯ ಹೊಸತನ ಕಾಣಸಿಗುವುದು 'ನಮ್ಮ ಭಾವೈಕ್ಯತೆಯ ಕಥೆ', 'ಕಾಲದಿಂದ ಕಾಲಕ್ಕೆ', 'ಸಮಾಜಕ್ಕೆ' ಇತ್ಯಾದಿ ಪದ್ಯಗಳಲ್ಲಿ. ಈ ಕವಿಗೆ ಓಣ ಆತ್ಮಪ್ರತ್ಯಯವಿಲ್ಲ; ಬದಲು, ಆತ್ಮಶೋಧನೆಯ ಆರೋಗ್ಯಪೂರ್ಣ ಗುಣವಿದೆ. ಅದು 'ಹತ್ತರ ಕೂಡ ಹನ್ನೊಂದು' ಪದ್ಯದಲ್ಲಿ ಪ್ರಾಂಜಲವಾಗಿ ಪ್ರಕಟಗೊಂಡಿದೆ:

'ಇದು ಕಾಲಮಾನದ ಪ್ರವಾಹ
ಎದುರು ಈಸಬಲ್ಲವರಾರು?
ಈಸಿ ಜೈಸಬಲ್ಲವರಾರು?
ಅದಕೆಂದೇ:
ಕೈಕಾಲುಗಳ ಸಡಿಲುಬಿಟ್ಟು
ತೇಲಿ ನಡೆದಿದ್ದೇನೆ ನಾನೂ ಹರಿಗುಂಟ.
... ...
ನೀರು ಗುಟುಕರಿಸುತ್ತ
ಹಾಗೆಯೇ ಉರುಳುತ್ತಲೇ ಇದ್ದೇನೆ.'

'ಗುಂಪಿನಲ್ಲಿ ತಾನೂ ಗೋವಿಂದನಾಗದೆ ನಿರ್ವಾಹವಿಲ್ಲ' ಎಂಬ ಸರಳಸತ್ಯದೊಂದಿಗೆ 'ಕಾಂಪ್ರಮೈಸ್' ಮಾಡಿಕೊಳ್ಳುವ ಜಾವಳಿಯವರ ಒಲವು, ಇವರು ಈತನಕ ಸಾಧಿಸಿರುವ ಇವರ ಸ್ವಂತಿಕೆಯನ್ನೇ ಎಲ್ಲಿ ಸ್ವಾಹಾಮಾಡೀತೋ ಎಂಬ ಲವಲೇಶ ಅನುಮಾನ ಕಾಡುತ್ತದೆ. ಇಂಥ ಅನುಮಾನವನ್ನು ನಿರಾಕರಿಸುವ, ಒಂದು ಬಗೆಯ ವಿದ್ರೋಹದ ಧ್ವನಿಯೂ ಇವರ ಗಂಟಲಿನಿಂದ ಹೊರಬರುತ್ತದೆ.

'ಇಂಥ ಸೂ ... ಮಕ್ಕಳ ಎದುರು
ಬಟ್ಟೆಕಳಚಿ ನಿಲ್ಲಬೇಕೆನಿಸುತ್ತದೆ;
ಅವರು ಅದಕ್ಕೇ ಮಣಿಯುತ್ತಾರೆ'

ಎಂಬುದನ್ನು ಗಮನಿಸಿದಾಗ ಜಾವಳಿಯವರ ಪಕ್ಕಾನಿಷ್ಠುರತೆ, ಪ್ರಾಮಾಣಿಕ ವಿದ್ರೋಹ- ಮೇಲಿನ ಅನುಮಾನಕ್ಕೆ ಪರಿಹಾರ ನೀಡುತ್ತದೆ.

ಶಿವಶರಣ ಜಾವಳಿಯವರ ಕಾವ್ಯಕ್ಕೆ ಸಾಮಾಜಿಕ ಮುಖವಿರುವುದು ಇನ್ನೊಂದು ಸಮಾಧಾನದ ಅಂಶ. 'ವೈಕುಂಠ-ಕೈಲಾಸ'; 'ಸ್ಥಳಪುರಾಣ'-ಕವಿತೆಗಳಲ್ಲಿಯ ಮೊನಚು; 'ಇವನಾರವ', 'ನನ್ನ ಕಾಲದ ಕರ್ಮಕಥೆ'ಯಲ್ಲಿಯ ಜಿಗುಪ್ಸೆ, ನಿಂದೆಯ ಭಾವಗಳು ತೀವ್ರವಾಗಿ ತಟ್ಟುತ್ತವೆ.

ಜಾವಳಿಯವರ ಕಾವ್ಯ ಅತ್ಯಂತ ಗಾಢವಾಗಿ, ಆಪ್ತವಾಗಿ ನಮ್ಮನ್ನು ತಟ್ಟುವುದು ಚಿಕ್ಕಚಿಕ್ಕ ಪದ್ಯಗಳ ರಚನೆಯಿಂದ. ಅಲ್ಪದರಲ್ಲಿ ಅಮಿತವಾದ ವಿಚಾರವನ್ನೋ ಲಹರಿಯನ್ನೋ ಧ್ವನಿಪೂರ್ಣವಾಗಿ ಹೊಳೆಯಿಸುವ ಈ 'ಮಿನಿ' ಪದ್ಯಗಳಲ್ಲಿ ಕವಿಯ ನಿಜವಾದ ಸೃಜನಶಕ್ತಿಯ ಆವಿಷ್ಕಾರವಿದೆ. ದೊಡ್ಡ ಪದ್ಯಗಳ ನಿರ್ವಹಣೆ ಒಂದು ತಾಂತ್ರಿಕ ಹಾಗೂ ವಿಚಾರ ಬೆಳವಣಿಗೆಯ ಪ್ರಶ್ನೆಯಾಗಿ ಕಾಡಿದಾಗ ಆ ಕವಿತೆಗಳ ಇಡೀ ಚೌಕಟ್ಟು, ಒಟ್ಟಂದ-ಅಲ್ಲಲ್ಲಿ ಕೆಡುವುದುಂಟು. ನಿರ್ವಹಣೆಯಲ್ಲಿ ಈ ದೌರ್ಬಲ್ಯವನ್ನು ಚಿಕ್ಕಪದ್ಯಗಳು ಸಂಪೂರ್ಣವಾಗಿ ಮರೆಮಾಡುತ್ತವಲ್ಲದೆ, ತಮ್ಮ ಸ್ವಭಾವಸಹಜ ಅರ್ಥಪೂರ್ಣಕ್ರಿಯೆಯಿಂದ ಆಪ್ಯಾಯಮಾನವಾಗಿ ಪರಿಣಮಿಸುತ್ತವೆ.

'ಚಿತ್ತಿಲು ತೋಟ', 'ನಾಯಿ', 'ನಗರದ ಹಾಲು', 'ವಿರಹ', 'ನಲ್ಲನ ವಿಳಾಸ', 'ಕುತುಬ್‌ಮೀನಾರಿನ ಕೆಳಗೆ', 'ಹುಚ್ಚು'-ಈ ಒಂದೊಂದು ಪದ್ಯವೂ ಕಣ್ಣೆದುರು ಮೂಡಿಸುವ ಒಂದೊಂದು ಸಂದರ್ಭವಶಾತ್ ಸುಂದರಚಿತ್ರ; ಆ ಚಿತ್ರದ ಒಂದೊಂದು ರೇಖೆಯಲ್ಲಿ ಸುಳುಹುತೋರುವ ವ್ಯಂಗ್ಯ, ವಿಡಂಬನೆ ಹೊಳೆಯಿಸುವ ಧ್ವನ್ಯರ್ಥಗಳು-ನಿಜವಾದ ಕಾವ್ಯದ ಓದಿನಿಂದ ನಾವು ಅಪೇಕ್ಷಿ

ಸುವ ಆನಂದ, ಉದ್ರೇಕ, ಉಲ್ಲಾಸದ ಅನುಭವ ನೀಡುವುದರ ಜೊತೆಗೆ ರೋಮಾಂಚನವನ್ನೂ ಉಂಟುಮಾಡುತ್ತವೆ.

ಶಿವಶರಣ ಜಾವಳಿಯವರ ಪದ್ಯರಚನೆಯಲ್ಲಿ ಪಾಂಡಿತ್ಯದ ಡೊಂಬರಾಟವಿಲ್ಲ; ಭಾವುಕತೆಯ ಒಣ ಆವೇಶವಿಲ್ಲ; ಇರುವುದು ಸೂಕ್ಷ್ಮವಾದ ಅವಲೋಕನ ಶಕ್ತಿ ಮತ್ತು ಅದು ಸದಾ ಹೊರಹೊಮ್ಮಿಸುವ ಲವಲವಿಕೆಯ ಸುಂದರ ಅಭಿವ್ಯಕ್ತಿ.

—ಎಸ್. ಜಿ. ಬಿದರಕುಂದಿ

ರತ್ನಾಕರ ಶತಕ :

ಸಂ. ಕೇ. ಶಾಂತರ್ರೈ ಮತ್ತು ಬಿ. ದೇವಕುಮಾರ ಜೈನ. ಪ್ರ : ಶ್ರೀಮತಿ ಕೆ. ಗುಣವತಿ ಅಮ್ಮ. ವಿಜಯ ಮಹಲ್, ಮೂಡುಬಿದರೆ (ದ.ಕ.), ೧೯೭೮. ಪುಟ: ೪೩ + ೮. ಬೆಲೆ: ಸದುಪಯೋಗ.

ಕನ್ನಡ ಸಾಹಿತ್ಯದಲ್ಲಿ ರತ್ನಾಕರವರ್ಣಿಯದು ದೊಡ್ಡ ಹೆಸರು. ಕನ್ನಡ ಸಾಂಗತ್ಯವನ್ನು ಮಹಾಕಾವ್ಯದ ಮಾಧ್ಯಮವಾಗಿ ಬಳಸಿ ಅದಕ್ಕೆ ಗೌರವ ದೊರಕಿಸಿದ ಕೀರ್ತಿ ಅವನದು. ಅವನ ಶತಕಗಳು ವೈರಾಗ್ಯ, ನೀತಿ ಮತ್ತು ಆತ್ಮವಿಚಾರಗಳ ಖಣಿಗಳಾಗಿವೆ. ನೀತಿ, ಆತ್ಮ ತತ್ತ್ವಗಳಂತಹ ಗಂಭೀರ ವಿಚಾರಗಳನ್ನು ಉಚಿತ ದೃಷ್ಟಾಂತಗಳಿಂದ ಆಕರ್ಷಕವಾಗುವಂತೆ ತಿಳಿಸಿದ್ದಾನೆ. ಆದರೂ ಈ ಶತಕಗಳು ಜನಸಾಮಾನ್ಯರಿಗೆ ಅರ್ಥವಾಗುವುದು ಕಷ್ಟಕರ. ಆದುದರಿಂದ ಮಹಾಕವಿಯ ವಿಚಾರಧಾರೆ ಜನಸಾಮಾನ್ಯರಿಗೂ ಮುಟ್ಟುವಂತೆ ಶತಕಗಳ ಅರ್ಥವಿವರಣೆಯನ್ನು ತಿಳಿಯಾದ ಭಾಷೆಯಲ್ಲಿ ಕೊಡಲು ಸಂಪಾದಕದ್ವಯರು ಪ್ರಯತ್ನಿಸಿದ್ದಾರೆ. ನೇರವಾದ, ಆಡಂಬರವಿಲ್ಲದ ಭಾಷೆಯ ವಿವರಣೆಯಿಂದ ಶತಕಗಳ ಅರ್ಥ ಸ್ಪಷ್ಟವಾಗುವುದು. ಮಹಾಕವಿಯ ಆಶಯವನ್ನು ಅರ್ಥಮಾಡಿಕೊಳ್ಳಲು ಕಷ್ಟಪಡುವ ಜನರಿಗೆ ಇದೊಂದು ಒಳ್ಳೆಯ ಮಾರ್ಗದರ್ಶಿ ಕೃತಿ. ಮೂಲಶತಕವನ್ನು ಕೊಟ್ಟು ಅರ್ಥವನ್ನು ವಿವರಿಸಿರುವುದರಿಂದ ಇದರ ಉಪಯುಕ್ತತೆ ಇನ್ನೂ ಹೆಚ್ಚಾಗಿದೆ. ಶತಕಗಳ ಅಕಾರಾದಿ, ಪದಕೋಶಗಳನ್ನು ಸೇರಿಸಿದ್ದರೆ ಸಂಪಾದನೆ ಸತ್ವಪೂರ್ಣವೆನಿಸುತ್ತಿತ್ತು. ಆದರೂ ಸಂಪಾದಕರ ಪರಿಶ್ರಮ ಇಲ್ಲಿ ಫಲಿಸಿದೆ.

ಸ್ವಾಧ್ಯಾಯ ಹಾಗೂ ಆತ್ಮಕಲ್ಯಾಣಕ್ಕೆ ಉಪಯುಕ್ತವಾದ ಈ ಕೃತಿಯನ್ನು ಶಾಸ್ತ್ರದಾನಕ್ಕಾಗಿ ಪ್ರಕಟಿಸಿದ ಕೆ. ಜಯರಾಜ ಬಲ್ಲಾಳ್ ಅವರೂ ಅಭಿನಂದನಾರ್ಹರು.

—ಎಸ್. ಪಿ. ಪಾಟೀಲ

ಸಂಪಾದಕೀಯ

ನೂತನ ಕುಲಾಧಿಪತಿಗಳಿಗೆ ಸ್ವಾಗತ

ಸುಪ್ರತಿಷ್ಠ ರಾಜ್ಯಪಾಲರನ್ನು ಬರಮಾಡಿಕೊಳ್ಳುವ ವಿಷಯದಲ್ಲಿ ಕರ್ನಾಟಕ ರಾಜ್ಯ ಭಾಗ್ಯಶಾಲಿಯೆಂದೇ ಹೇಳಬೇಕು. ಈ ಘನತೆಗೆ ತಕ್ಕ ಉತ್ತರಾಧಿಕಾರಿಗಳಾಗಿ ಇಂದು ಸನ್ಮಾನ್ಯ ಶ್ರೀ ಗೋವಿಂದ ನಾರಾಯಣ ಅವರು ನಮ್ಮ ರಾಜ್ಯದ ರಾಜ್ಯಪಾಲರಾಗಿ ಆಗಮಿಸಿರುವರು. ರಾಷ್ಟ್ರಮಟ್ಟದಲ್ಲಿ ಅನೇಕ ಹೊಣೆಗಳನ್ನು ನಿರ್ವಹಿಸಿದ, ರಾಷ್ಟ್ರಕ್ಷೇಮದ ಚಿಂತನೆಯಲ್ಲಿಯೇ ಮಾಗಿದ ವ್ಯಕ್ತಿತ್ವವುಳ್ಳ ಶ್ರೀಯುತರಿಗೆ ಸ್ವಾಗತವನ್ನು ಕೋರುತ್ತ ಕರ್ನಾಟಕ ಭಾರತಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ವಿ. ಕೃ. ಗೋಕಾಕ ಅವರಿಗೆ ಅಭಿನಂದನೆ

ಪದ್ಮಶ್ರೀ ವಿ. ಕೃ. ಗೋಕಾಕ ಅವರು ನಮ್ಮ ರಾಜ್ಯದ, ನಮ್ಮ ರಾಷ್ಟ್ರದ ಉದ್ದಾಮ ವಿದ್ವಾಂಸರಲ್ಲಿ ಒಬ್ಬರು. ಕವಿಯಾಗಿ, ವಿಮರ್ಶಕರಾಗಿ, ಕಾದಂಬರಿಕಾರರಾಗಿ, ಸಂಸ್ಥೆಗಳ ಸಂಚಾಲಕರಾಗಿ, ಸದಸ್ಯರಾಗಿ ನಿರ್ವಹಿಸಿದ ಪಾತ್ರ, ಗಳಿಸಿದ ಕೀರ್ತಿಗಳ ಮೂಲಕ ಕರ್ನಾಟಕಕ್ಕೆ ರಾಷ್ಟ್ರಮಟ್ಟದ ಕೀರ್ತಿಯನ್ನು ತಂದ ಅಗ್ರಗಣ್ಯರು. ಈ ಸಾಧನೆಗೆ ಯೋಗ್ಯ ಪುರಸ್ಕಾರವೆಂಬಂತೆ ದಿವ್ಯಸಂಸ್ಥೆಯಾದ (ಭಾರತೀಯ ಜ್ಞಾನಪೀಠ)ಕ್ಕೆ ಶ್ರೀಯುತರು ಅಧ್ಯಕ್ಷರಾದುದು ಕನ್ನಡನಾಡಿಗೆ ಸಂದ ಗೌರವ. ಈ ಸಂದರ್ಭದಲ್ಲಿ ಅಭಿವಂದನೆಗಳನ್ನು ಸಲ್ಲಿಸುತ್ತ ಡಾ. ಗೋಕಾಕ ಅವರಿಗೆ ಇಂತಹ ನೂರುನೂರು ಗೌರವಗಳು ಪ್ರಾಪ್ತವಾಗಲಿ ಎಂದು ಕರ್ನಾಟಕ ಭಾರತಿ ಹಾರೈಸುತ್ತದೆ.

● ●

ಸಾದರ ಸ್ವೀಕಾರ

೧. **ಬಿಸಿಬಿಸಿ ಸುದ್ದಿ** (ಕವನ ಸಂಕಲನ) :
ವ್ಹಿ. ಎಸ್. ಕಾಶೆಟ್ಟಿ. ಪ್ರ : ಶ್ರೀ ಪ್ರಕಾಶನ, ರಾಜೇಂದ್ರನಗರ, ಹಾವೇರಿ, ೧೯೭೭. ಪುಟ ೩೪. ಬೆಲೆ : ರೂ. ೨-೫೦.

೨. **ಪರದೇಶಿ ಹಾಡುಗಳು** (ಕವನ ಸಂಕಲನ) :
ಸಿದ್ಧಲಿಂಗ ಪಟ್ಟಣಶೆಟ್ಟಿ. ಪ್ರ : ನಿರ್ವಾಣ ಪ್ರಕಾಶನ, ಶ್ರೀದೇವಿನಗರ, ಧಾರವಾಡ, ೧೯೭೫. ಪುಟ : ೫೮. ಬೆಲೆ : ರೂ. ೫-೦೦, ೧೦-೦೦.

೩. **ಆಧೇ ಅಧೂರೇ** (ಅನುವಾದ) :
ಸಿದ್ಧಲಿಂಗ ಪಟ್ಟಣಶೆಟ್ಟಿ. ಪ್ರ : ನಿರ್ವಾಣ ಪ್ರಕಾಶನ, ಶ್ರೀದೇವಿನಗರ, ಧಾರವಾಡ, ೧೯೭೬. ಪುಟ : ೧೨೪. ಬೆಲೆ : ರೂ: ೬-೦೦, ೧೨-೦೦.

೪. **ಕವಲು** (ಕಥಾಸಂಕಲನ) :
ವೀಣಾ ಯಲಬುರ್ಗಿ. ಪ್ರ : ನಿರ್ವಾಣ ಪ್ರಕಾಶನ, ಶ್ರೀದೇವಿನಗರ, ಧಾರವಾಡ, ೧೯೭[illegible] ಪುಟ : ೧೧೬. ಬೆಲೆ : ೫-೦೦, ೮-೦೦.

೫. **ಬಾ ಪರೀಕ್ಷೆಗೆ** (ಕವನ ಸಂಕಲನ) :
ಮಾಲತಿ ಪಟ್ಟಣಶೆಟ್ಟಿ. ಪ್ರ : ನಿರ್ವಾಣ ಪ್ರಕಾಶನ, ಶ್ರೀದೇವಿನಗರ, ಧಾರವಾಡ, ೧೯೭೬. ಪುಟ : ೪೮. ಬೆಲೆ : ರೂ. ೩-೦೦, ೬-೦೦.

೬. **ಗುಬ್ಬಕ್ಕಾ ಬಾಗಿಲ ತಗಿಯೋ** (ಕವನ ಸಂಕಲನ) :
ಎಲ್. ವ್ಹಿ. ಪಾಟೀಲ. ಪ್ರ : ಲೋಕವಿದ್ಯಾ ಪ್ರಕಾಶನ. ಸಂಕೇಶ್ವರ, ೧೯೭೭. ಪುಟ : x + ೪೬. ಬೆಲೆ : ರೂ. ೫-೦೦.

೭. **ಬಯಲ ಹಂಬಲ** (ವಚನ ಸಂಗ್ರಹ) :
ಬಿ. ಎ. ಪಾಟೀಲ. ಪ್ರ : ಸಿದ್ಧವಾಗೀಶ ಪ್ರಕಾಶನ, ಕಲ್ಬುರ್ಗಿ, ೧೯೭೭. ಪುಟ : xviii + ೧೩೨. ಬೆಲೆ : ರೂ. ೬-೭೫.

೮. **ರಾಕ್ಷಸ** (ಕಥಾಸಂಕಲನ) :
ಶಾಂತಿನಾಥ ದೇಸಾಯಿ. ಪ್ರ : ನಿರ್ವಾಣ ಪ್ರಕಾಶನ, ಶ್ರೀದೇವಿನಗರ, ಧಾರವಾಡ, ೧೯೭೭. ಪುಟ : ೧೭೨. ಬೆಲೆ : ರೂ. ೮-೦೦.

೯. **ಜೂಲಿಯುಸ್ ಸೀಜರ (ಅನುವಾದ) :**
ತೇಜಸ್ವಿನಿ ನಿರಂಜನ. ಪ್ರ : ಕಥಾಸಾಹಿತ್ಯ ಪ್ರಕಾಶನ, ಜಯನಗರ, ಬೆಂಗಳೂರು, ೧೯೭೭. ಪುಟ : ೧೮೫. ಬೆಲೆ : ರೂ. ೯-೦೦, ೧೫-೦೦.

೧೦. **ಬೆಳ್ಳ (ಕಾದಂಬರಿ) :**
ಚೆನ್ನಣ್ಣ ವಾಲೀಕಾರ. ಪ್ರ : ಸುಮನಸ ವಿಚಾರ ವೇದಿಕೆ, ಚೊಕ್ಕಾಡಿ, ದಕ್ಷಿಣ ಕನ್ನಡ, ೧೯೭೫. ಪುಟ : v + ೭೮. ಬೆಲೆ : ರೂ. ೫-೦೦.

೧೧. **ಮಹಾತಪಸ್ವಿ (ಜೀವನ ಚರಿತ್ರೆ) :**
ಎಸ್.ಎಸ್. ಭೂಸರಡ್ಡಿ. ಪ್ರ: ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಧರ್ಮಪ್ರಚಾರ ಮಂಡಲ, ಇಲಕಲ್ಲ, ೧೯೭೭. ಪುಟ : xxx + ೧೦೪. ಬೆಲೆ : ರೂ. ೬-೦೦.

೧೨. **ಹಿತ್ತಲಬಾಗಿಲ ಸನ್ನೆ (ಕವನ ಸಂಕಲನ) :**
ಎಸ್. ವಿ. ಶಿವಕುಮಾರ್. ಪ್ರ : ನವೀನ ಪ್ರಕಾಶನ, ಶೇಷಾದ್ರಿಪುರಂ, ಬೆಂಗಳೂರು, ೧೯೭೭. ಪುಟ: ೪೦. ಬೆಲೆ : ರೂ. ೩-೦೦.

೧೩. **ಗುಂಪು (ಕಥಾಸಂಕಲನ) :**
ಸಂ : ಹಿ. ಮ. ಬಸವಯ್ಯ. ಪ್ರ : ಸುವರ್ಣ ಪ್ರಕಾಶನ, ಜಯನಗರ, ಬೆಂಗಳೂರು ೧೯೭೭. ಪುಟ : ೧೮೪. ಬೆಲೆ : ರೂ. ೮-೦೦.

೧೪. **ಯಕ್ಷಗಾನ – ಸಂಗೀತ :**
ಎಂ. ರಾಜಗೋಪಾಲಾಚಾರ್ಯ. ಪ್ರ : ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ. ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು, ಉಡುಪಿ, ೧೯೭೩. ಪುಟ : vii + ೨೧೨ + iv. ಬೆಲೆ : ರೂ. ೫-೦೦.

೧೫. **ಅರ್ಥಶಾಸ್ತ್ರಜ್ಞರು :**
ವಸಂತ ಗುಮಾಸ್ತೆ. ಪ್ರ : ಶ್ರೀ ದ್ವೈಪಾಯನ ಟ್ರಸ್ಟ್, ವಿಲೆಪಾರ್ಲೆ ಈಸ್ಟ್, ಮುಂಬಯಿ, ೧೯೭೬. ಪುಟ : viii + ೧೫೨. ಬೆಲೆ: ರೂ. ೧೦-೦೦.

೧೬. **ಫೋಕ್‌ಲೋರ್ ಫೋಕ್‌ಲೋರ್ :**
ಧವಳಶ್ರೀ. ಪ್ರ : ಉಜ್ವಲ ಪ್ರಾಂಜಲ ಪ್ರಕಾಶನ, ಮಂಡ್ಯ, ೧೯೭೬. ಪುಟ : ೬೬. ಬೆಲೆ : ರೂ. ೬-೦೦.

೧೭. **ಕನ್ನಡ ಶಾಯಿರಿಗಳು :**
ಇಟಗಿ ಈರಣ್ಣ. ಪ್ರ : ಪೃಥ್ವಿಪ್ರಕಾಶನ, ಸರಸ್ವತಿಪುರಂ, ಮೈಸೂರು, ೧೯೭೭. ಪುಟ: ೧೯೧. ಬೆಲೆ: ರೂ. ೪-೫೦, ೭-೫೦.

೧೮. **ಓದುತ್ತಿದ್ದೇನೆ** (ಕವನ ಸಂಕಲನ) :
ಹ. ನಂ. ವಿಜಯಕುಮಾರ್. ಪ್ರ : ಶ್ರೀ ಬಸವೇಶ್ವರ ಗ್ರಂಥಮಾಲೆ, ಹಳೆವೂರು, ಕುಣಿಗಲ್ ತಾಲೂಕು, ತುಮಕೂರು, ೧೯೭೭. ಪುಟ : viii + ೬೪. ಬೆಲೆ : ರೂ. ೪-೦೦.

೧೯ **ಮಾತುಗಳಪ್ಪರು** (ಕವನಸಂಕಲನ) :
ಸುಧಾ ತೇಲ್ಕರ್, ಮಹಿಮ, ಎಸ್. ವಿ. ಶಿವಕುಮಾರ್, ವಿ. ಮಾ. ಜಗದೀಶ, ಲಿಂಗದೇವರು ಹಳೆಮನೆ. ಪ್ರ: ಕಾವ್ಯಶ್ರೀ ಪ್ರಕಾಶನ, ಹಿತ್ತಲ, ಶಿವಮೊಗ್ಗ-೫೭೭೨೧೪: ೧೯೭೭. ಪುಟ : ೧೨ + ೫೨. ಬೆಲೆ : ರೂ. ೪-೫೦, ೭-೦೦.

೨೦. **ಪವಾಡಗಳು** (ಒಂದು ಸಮಗ್ರ ವಿವೇಚನೆ) :
ಎ. ಆರ್. ಕೋಳಿ. ಪ್ರ : ಎ. ಆರ್. ಕೋಳಿ, ಬಸವೇಶ್ವರ ಆರ್ಟ್ಸ ಕಾಲೇಜು, ಬಾಗಲಕೋಟೆ, ೧೯೭೭. ಪುಟ : viii + ೬೯ + viii. ಬೆಲೆ : ರೂ. ೪-೦೦.

ಪತ್ರಿಕೆಗಳು

ಕನ್ನಡ ನುಡಿ
ಸಾಹಿತ್ಯ ಪರಿಷತ್ಪತ್ರಿಕೆ
ಜೀವನ ವಿಕಾಸ
ಪಂಚಾಚಾರ ಪ್ರಕಾಶ
ಪರಂಜ್ಯೋತಿ
ಕೃಷಿವಿಜ್ಞಾನ
ರಾಷ್ಟ್ರೋತ್ಥಾನ ವಾರ್ತಾ
ಮತ್ಸ್ಯಲೋಕ
ಹೇಮಕೂಟ
ವಿಶ್ವಕಲ್ಯಾಣ
ಕಾಲ

ಈ ಸಂಚಿಕೆಯ ಲೇಖಕರು

೧ ಶ್ರೀ ಮಳಲಿ ವಸಂತಕುಮಾರ್ :
೨೨, ಅಧ್ಯಾಪಕರ ನಿವಾಸ, ಮಾನಸಗಂಗೋತ್ರಿ, ಮೈಸೂರು-೬.

೨ ಡಾ. ಆರ್. ಎನ್. ಗುರವ :
ಕೊಪ್ಪದ ಕೆರೆ, ಧಾರವಾಡ.

೩ ಡಾ. ಕೆ. ಜಿ. ಗುರುಮೂರ್ತಿ :
ರೀಡರ್, ಮಾನವಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೪ ಶ್ರೀ ಹರಿನಾರಾಯಣ ಮಾಡಾವು :
ಅಧ್ಯಾಪಕರು, ಸೇಂಟ್‌ಫಿಲೋಮಿನಾ ಕಾಲೇಜು, ದರ್ಬೆ-೫೭೪೨೦೫, ಪುತ್ತೂರು, ದ. ಕ. ಜಿಲ್ಲೆ.

೫ ಶ್ರೀ ವಸಂತ ಕುಷ್ಟಗಿ :
ಕನ್ನಡ ಅಧ್ಯಾಪಕರು, ಎಸ್. ಎಸ್. ಎಮ್. ಕಾಲೇಜು, ಶಹಬಾದ-೫೮೫೨೨೮, ಕಲ್ಬುರ್ಗಿ ಜಿಲ್ಲೆ.

೬ ಶ್ರೀ ಜೆ. ರಾಮಸ್ವಾಮಿ :
ಅಧ್ಯಾಪಕರು, ಭಾಷಾವಿಜ್ಞಾನ ಪ್ರೌಢಸಂಶೋಧನಕೇಂದ್ರ, ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈ ನಗರ, ತಮಿಳುನಾಡು.

೭ ಡಾ. ಎಂ. ಎಸ್. ಸುಂಕಾಪುರ :
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ.

೮ ಶ್ರೀ ಪಿ. ಶ್ರೀಕೃಷ್ಣಭಟ್ :
ಕನ್ನಡ ಅಧ್ಯಾಪಕರು, ಸರಕಾರಿ ಕಾಲೇಜು, ಕಾಸರಗೋಡು ಅಂಚೆ: ವಿದ್ಯಾನಗರ-೬೭೦೧೨೩.

೯ ಶ್ರೀ ಎಸ್. ಉಮಾಪತಿ :
ಅಧ್ಯಾಪಕರು, ಎ. ಆರ್. ಜಿ. ಕಾಲೇಜು, ದಾವಣಗೆರೆ.

೧೦ ಶ್ರೀ ಯಮ್. ಎಸ್. ಎಸ್. ಆರಾಧ್ಯ :
ಊರಗಡೂರ ಅಂಚೆ, ನಿದಿಗೆ ಹೋಬಳಿ-೫೭೭೨೨೨, ಶಿವಮೊಗ್ಗ ಜಿಲ್ಲೆ.

೧೧ ಶ್ರೀ ಟಿ. ಎಂ. ರಮೇಶ್ :
ಕುಪ್ಪಳ್ಳಿ, ಬಂಕನಾಳ ಅಂಚೆ, ಸಿರ್ಸಿ, ಉ. ಕ. ಜಿಲ್ಲೆ.

೧೨ ಶ್ರೀ ಎಸ್. ಎಸ್. ಹಿರೇಮಠ :
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ.

೧೩ ಡಾ. ಎಂ. ಚಿದಾನಂದಮೂರ್ತಿ :
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂ. ವಿ. ವಿ ಬೆಂಗಳೂರು.

೧೪ ಶ್ರೀಮತಿ ಎಚ್. ಎಂ. ಬೀಳಗಿ :
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೧೫ ಡಾ. ಎಂ. ಎಸ್. ಲಠ್ಠೆ :
ಅಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲ್ಬುರ್ಗಿ.

೧೬ ಡಾ. ಎಂ. ಎಂ. ಕಲಬುರ್ಗಿ :
ರೀಡರ್, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೭ ಶ್ರೀ ಬಸವರಾಜ ಮಲಶೆಟ್ಟಿ :
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ.

೧೮ ಡಾ. ಜಿ. ಎಸ್. ಶಿವರುದ್ರಪ್ಪ :
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ಅಧ್ಯಯನ ಕೇಂದ್ರ, ಬೆಂ. ವಿ. ವಿ. ಬೆಂಗಳೂರು.

೧೯ ಡಾ. ಎಸ್. ಶೆಟ್ಟರ್ :
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು. ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೨೦ ಡಾ. ಎಸ್. ರಾಜಶೇಖರ :
ಅಧ್ಯಾಪಕರು, ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೨೧ ಕು. ಚೆನ್ನಕ್ಕ ಯಲಿಗಾರ :
ಕನ್ನಡ ಅಧ್ಯಾಪಕರು, ಮೃತ್ಯುಂಜಯ ಕಾಮರ್ಸ ಕಾಲೇಜು, ಧಾರವಾಡ.

೨೨ ಶ್ರೀ ಎಂ. ಎಲ್. ಶಿವಶಂಕರ :
ನೋಂದಣಿಅಧಿಕಾರಿಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯನಿರ್ದೇಶನಾಲಯ, ಧಾರವಾಡ.

೨೩ ಶ್ರೀ ಎಸ್. ಶಿವಣ್ಣ :
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಕೇಂದ್ರ, ಬೆಂ. ವಿ. ವಿ. ಬೆಂಗಳೂರು.

೨೪ ಶ್ರೀ ಎಸ್. ವಿ. ಶಿವಕುಮಾರ್ :
ಕನ್ನಡ ಅಧ್ಯಾಪಕರು, ಜಗದ್ಗುರು ರೇಣುಕಾಚಾರ್ಯ ಕಾಲೇಜು, ಬೆಂಗಳೂರು-೯.

೨೫ ಡಾ. ಬಿ. ವ್ಹಿ. ಶಿರೂರ :
ಪ್ರಾಚಾರ್ಯರು, ಅನ್ನದಾನೇಶ್ವರ ಕಾಲೇಜು, ನರೇಗಲ್ಲ.

೨೬ ಶ್ರೀ ಎಸ್. ಜಿ. ಬಿದರಕುಂದಿ :
ಕನ್ನಡ ಅಧ್ಯಾಪಕರು, ಕಾಮರ್ಸ್ ಕಾಲೇಜು, ಗದಗ.

೨೭ ಶ್ರೀ ಎಸ್. ಪಿ. ಪಾಟೀಲ :
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.